ಸಂಪುಟ ೬
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ
೧೯೭೪

ಧಾರವಾಡ
ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　೨. ರಾಜ್ಯೋದಯ ಸಂಚಿಕೆ

೩. ಸಂಕ್ರಮಣ ಸಂಚಿಕೆ　೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪–೦೦ ಮಾತ್ರ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003 ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೬ ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೬, ಸಂಚಿಕೆ : ೪

ಎಪ್ರಿಲ್ ೧೯೭೪

ಅಕ್ಷಯತೃತೀಯಾ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩


ಮುದ್ರಕರು :

ಶ್ರೀ ಎಂ. ಎಚ್. ಬೆಳಗಾಂವಕರ

ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

ಪರಿವಿಡಿ

ಜ್ಞಾನಪೀಠ ಪ್ರಶಸ್ತಿ ವಿಜೇತರಾದ



ವರಕವಿ ದ. ರಾ. ಬೇಂದ್ರೆಯವರು

ಉಪ್ಪರಿಗೆ

ಶ್ರೀಚೆನ್ನ

ತಿಪ್ಪೆಯ ಮೇಲೇ ಕಟ್ಟಿದ
ಉಪ್ಪರಿಗೆ ಮನೆಯಲ್ಲಿದ್ದೇನೆ.
ವಿನಾಯಕ ಪೂಜೆ ಮಾಡಿ
ಗಟ್ಟಿ ಹತ್ತುವವರೆಗೆ ತೋಡಿ ಅಡಿಗ-
ಲ್ಲು ಹಾಕಿದ ಮೇಲೆ ಪುಡಿಗಲ್ಲು ಮಣ್ಣು.
ಕೆಸರು ಮೆತ್ತನೆಯಲ್ಲಿ ಹರಳುಗಲ್ಲು
ಕಟ್ಟಿ ಎಬ್ಬಿಸಿದೊಂದು ಮೊದಲ ಹಂತ
ಪಶ್ಚಿಮದಿಕ್ಕಿಗೆ ತೆರೆದಿಟ್ಟ ಕಿಡಕಿ
ಉತ್ತರಮುಖಿಯಾದ ಮುಂಚೀಬಾಗಿಲು
ಹಿತ್ತಿಲಕೆ ಇಂಬಿಲ್ಲ ಇಕ್ಕಟ್ಟು ಜಾಗ
ಅದಕೆಂದೇ ಮೇಲೆ ಅಂತಸ್ತೊಂದು
ಮನೆಯ ಮುಂದಿನ ಪೌಳಿ, ಗೇಟು ಸೊನ್ನೆ.
ಸುತ್ತಿ ಸುಳಿಯುವ ಗಾಳಿ ಮತ್ತೆ ಬರುವುದು—
ಕೂಡ ದಿಕ್ಕುದಿಕ್ಕಿಗೆ ಅಡರಿ ಗೋಡೆ ಎಡವಿ
ಪಶ್ಚಿಮದ ಕಿಡಕಿಯೆಡೆಗೇ ಬಿಡುಗಡೆ ಬಯಸಿ.

ಓವನಿಗೆ

ಎಂ. ವ್ಹಿ. ಸೀತಾರಾಮಯ್ಯ

'ಓವನಿಗೆ' ಎಂಬ ಸಾಹಿತ್ಯಪ್ರಕಾರವನ್ನು ಕುರಿತು ಬೇರೆಬೇರೆ ವಿದ್ವಾಂಸರಿಂದ ತಕ್ಕಮಟ್ಟಿನ ವಿವೇಚನೆ ನಡೆದಿದೆ. ಆದರೂ ಅದರ ಸರಿಯಾದ ಅರ್ಥದ ಬಗೆಗೆ ಸಂದೇಹ ಉಳಿದಿದೆಯೆಂದು ನನಗೆ ತೋರಿಬಂದದ್ದರಿಂದ, ವಿಚಾರ ವಿಮರ್ಶೆಯನ್ನು ಸ್ವಲ್ಪಮಟ್ಟಿಗೆ ಮುಂದುವರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಮಾತಿನ ಅರ್ಥನಿಷ್ಕರ್ಷೆಗೆ ಮೊದಲು ಪ್ರಯತ್ನಪಟ್ಟವರು ಡಾ. ರಂ. ಶ್ರೀ. ಮುಗಳಿ.[೧] ಈಚೆಗೆ ಓವನಿಗೆಯ ಅರ್ಥನಿರ್ವಚನದ ಕಡೆಗೆ ಗಮನಹರಿಸಿದವರು ಡಾ. ಎಂ. ಎಂ. ಕಲಬುರ್ಗಿ.[೨] ಡಿ. ಎಲ್. ನರಸಿಂಹಾಚಾರ್, ಪ್ರ. ಗೋ. ಕುಲಕರ್ಣಿ, ಡಾ. ಎಂ. ಚಿದಾನಂದಮೂರ್ತಿ,[೩] ಇವರು ತಮ್ಮತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಈ ಮಾತು ಮೊದಲು ಕಣ್ಣಿಗೆಬೀಳುವುದು ಗಂಗರಸ ಸೈಗೊಟ್ಟ ಶಿವಮಾರನನ್ನು (ಕ್ರಿ. ಶ. ಸು. ೮೦೦) ಹೊಗಳುವ ಒಂದು ಶಾಸನದ(ಸು. ೧೦೭೭)ಪದ್ಯದಲ್ಲಿ. ಓದುಗರ ಸೌಕರ್ಯಕ್ಕಾಗಿ ಅದನ್ನು ಇಲ್ಲಿ ಮತ್ತೆ ಉದ್ಧರಿಸಿದೆ :

> ಏವೇೞ್ವುದೊ ಶಿವಮಾರ ಮು
> ಹೀವಳಯಾಧಿಪನ ಸುಭಗ ಕವಿತಾಗುಣಮಂ
> ಭೂವಳಯದೊಳ್ ಗಜಾಷ್ಟಕ
> ಮೋವನಿಗೆಯುಮೊನಕೆವಾಡುಮಾದುದೆ ಪೇೞ್ಗುಂ ॥

---

೧. ಕನ್ನಡ ಸಾಹಿತ್ಯ ಚರಿತ್ರೆ (೧೯೫೩), ಪು. ೨೮. —ಡಾ. ಮುಗಳಿಯವರ ಪ್ರಕಾರ ಓವನಿಗೆ = ಬೀಸುವ ಹಾಡು, ಒನಕೆವಾಡು = ಕುಟ್ಟುವ ಹಾಡು. ಇವರು ಈಚೆಗೆ ಬರೆದಿರುವ 'ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು' (೧೯೭೩) ಎಂಬ ಗ್ರಂಥದಲ್ಲಿಯೂ ಇದರ ಪ್ರಸ್ತಾಪ ಮಾಡಿದ್ದಾರೆ; ಓವನಿಗೆ = ಬೀಸುವ, ಕುಟ್ಟುವ ಹಾಡು ಎಂಬ ತಮ್ಮ ಮೊದಲಿನ ಮಾತನ್ನೇ ಮತ್ತೆ ಹೇಳಿದ್ದಾರೆ. "ಗಜಾಷ್ಟಕವು ಮೂಲತಃ ಯಾವ ಛಂದಸ್ಸಿನಲ್ಲಿತ್ತು.... ಅದು ಜನಪದ ಸಾಹಿತ್ಯದ ಓವನಿಗೆ— ಒನಕೆವಾಡು ಆಗಬೇಕಾದ ಆವಶ್ಯಕತೆಯೇನಿತ್ತು ? ಈ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವು ಸಿಕ್ಕಿಲ್ಲ" ಎಂದಿದ್ದಾರೆ. (ಪು. ೪–೫).

೨. 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' (೧೯೭೩) (ಪು. ೧೬೮–೧೭೦) ಮತ್ತು 'ಓವನಿಗೆ' (ಒರೆಗಲ್ಲು—ಕರ್ನಾಟಕ ಭಾರತಿ, ೬–೧–೧೯೭೩).

೩. 'ಒನಕೆವಾಡು'— ಒಂದು ವಿವೇಚನೆ (ಸಂಶೋಧನ ತರಂಗ—೨, ೧೯೭೦ ; ಪು. ೧೩೮).

ಮೇಲಿನ ಪದ್ಯದ 'ಓವನಿಗೆಯುಂ ಒನಕೆವಾಡುಂ' ಎಂಬ ಸಮುಚ್ಚಯಯುಕ್ತ ಪ್ರಯೋಗದಿಂದ ಎರಡೂ ಭಿನ್ನ ಸಾಹಿತ್ಯಪ್ರಕಾರಗಳು ಎಂಬುದು ಸ್ಪಷ್ಟ. ಆದ್ದರಿಂದ, 'ಮಾನಸೋಲ್ಲಾಸ'ದ ಶ್ಲೋಕದ (೫೫೩ : 'ಮಹಾರಾಷ್ಟ್ರೇಷು ಯೋಷಿದ್ಭಿರೋವೀ ಗೇಯಾತು **ಕಂಡನೇ'**) ಆಧಾರದ ಮೇಲೆ 'ಓವೀ' ಶಬ್ದಕ್ಕೆ ಸಾಧಿಸಿದ 'ಕುಟ್ಟುವ ಹಾಡು' ಎಂಬ ಅರ್ಥವನ್ನು 'ಓವನಿಗೆ'ಗೂ ಅನ್ವಯಿಸುವುದು ಸಯುಕ್ತಿಕವಾಗದು.

ಪ್ರ. ಗೋ. ಕುಲಕರ್ಣಿಯವರು 'ಕಂಡನ'ಕ್ಕೆ 'ಕೇರು' ಎಂಬ ಅರ್ಥವನ್ನೊ ಹೇಳಿ. 'ಓವೀ' ಪದಕ್ಕೂ ಆ ಅರ್ಥವನ್ನು ಕಲ್ಪಿಸಿದ್ದಾರೆ. (ಕನ್ನಡ ಭಾಷೆಯ ಚರಿತ್ರೆ, ಪು. ೮೨–೮೩). 'ಕಂಡನ' ಶಬ್ದಕ್ಕೆ ಈ ಅರ್ಥ ನಮಗೆ ಗೋಚರವಾಗಿಲ್ಲ. ಅದು ಹಾಗಿರಲಿ, ಅವರ ವಾದ ಹೀಗಿದೆ: ಕೇಶಿರಾಜ 'ಒನೆ ಶೂರ್ಪಕರಣೇ' ಎಂದಿದ್ದಾನೆ: ಓವನೆ>ಒನೆ ಎಂದಾಗುವುದರಿಂದ, ಓವೀ ಎಂದರೆ 'ಕೇರುವ ಹಾಡು'. ಇದನ್ನು ಉಲ್ಲೇಖಿಸಿ. ಡಾ. ಕಲಬುರ್ಗಿಯವರು "ಓವನಿಗೆ ಎಂದರೆ ಕುಟ್ಟುವ ಹಾಡು, ಬೀಸುವ ಹಾಡು, ಕೇರುವ ಹಾಡು ಎಂದು ಈವರೆಗೆ ಅರ್ಥಮಾಡಲಾಗಿದೆ" ಎಂಬ ನೆಲೆಗೆ ತಲಪಿದ್ದಾರೆ.[೪] ಕುಟ್ಟುವಾಗ ಮತ್ತು ಕೇರುವಾಗ ಹಾಡುವ ಹಾಡು ಒಂದೇ ಆದ ಪಕ್ಷದಲ್ಲಿ, ಓವಿ ಮತ್ತು ಒನಕೆವಾಡು ಒಂದೇ ಜಾತಿಯ ಹಾಡಾಗಬೇಕಾಗುತ್ತದೆ. ಆದರೆ. ಶಾಸನ ಪದ್ಯದಿಂದ (ಓವನಿಗೆ ಮತ್ತು ಒನಕೆವಾಡು) ಎರಡೂ ಭಿನ್ನ ಪ್ರಕಾರಗಳು ಎಂದು ವ್ಯಕ್ತಪಡುವ ಅಂಶವನ್ನು ಈ ಮೊದಲೇ ಸೂಚಿಸಿದೆ. ಕುಲಕರ್ಣಿಯವರು ಹೇಳುವ ಓವನೆ>ಒನೆ ಎಂಬ ಶಬ್ದ–ನಿಷ್ಪತ್ತಿಯನ್ನು ಒಪ್ಪಿಕೊಳ್ಳುವುದು ಕಷ್ಟ.[೫]

"ಬೀಸುವಾಗ 'ಓವಿ' ನೆನಪಾಗುತ್ತದೆ" ಎಂಬ ಮರಾಠಿ ಗಾದೆಯನ್ನು ಅವಲಂಬಿಸಿ ಡಂ. ಮುಗಳಿಯವರು ಓವಿ, ಓವನಿಗ ಎಂದರೆ 'ಬೀಸುವ ಹಾಡು' ಎಂಬ ಎರಡನಯ ಅರ್ಥವನ್ನು ಸೂಚಿಸಿದ್ದಾರೆ. "ಒವೀ, ಓವನಿಗೆ ಇವು ಬೀಸುವಾಗ ಕುಟ್ಟುವಾಗ ಹೊರಡುವ ಸಹಜ ಉದ್ಗಾರಗಳಿಂದ ಹುಟ್ಟಿದ ಶಬ್ದಗಳೆಂದು ತೋರುತ್ತದೆ." ಎಂಬುದು ಅವರ (ಪರಿಶೀಲನಾರ್ಹ) ಊಹೆ. ಬೀಸುವಾಗ 'ಓವೀ' ನೆನಪಿಗೆ ಬರುತ್ತದೆ ಎಂಬ ಮರಾಠಿ ಗಾದೆಯಲ್ಲಿ—'ಬೀಸುವಾಗ ನೆನಪಿಗೆ ಬರುತ್ತದೆಯಷ್ಟೆ'

೪. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ. ಪು. ೧೭೦.

೫. ಒನಕೆ = ಉಲಕ್ಕೈ (ತಮಿಳು). ಉಲಕ್ಕ (ಮಲೆಯಾಳ), ಒಳಕೆ (ಕೊಡಗು), ಒಲೆ>ಒನೆ— ಕ. ಸಾ. ಪರಿಷತ್ತಿನ ಕನ್ನಡ ನಿಘಂಟು. ಇತರ ದ್ರಾವಿಡ ಭಾಷೆಗಳ ಶಬ್ದರೂಪಗಳನ್ನು ಗಮನಿಸಿದರೆ, 'ಒನಕೆ'ಯ ಮೂಲರೂಪ 'ಒಲಕೆ' ಇದ್ದಿರಬೇಕೆನ್ನಿಸುತ್ತದೆ. ಹೀಗೆ ಒನೆಗೂ ಒನಕೆಗೂ ಸಂಬಂಧ ಏರ್ಪಡುತ್ತದೆ. ಒನಕೆಯಿಂದ ಧಾನ್ಯವನ್ನು ಕುಟ್ಟುವುದು, ಕಂಡನೆ; ಕಾಳನ್ನು ಹೊಟ್ಟಿನಿಂದ ಬೇರ್ಪಡಿಸುವ ಕ್ರಿಯೆ. ಕಾಳುಗಳಿಂದ ಕಸಕಡ್ಡಿ ಕಲ್ಲುಮಣ್ಣುಗಳನ್ನು ಮೊರದಿಂದ ಬೇರ್ಪಡಿಸುವುದು ಒನೆಯುವುದು. (ಮೊರದಿಂದ) ಕೇರುವುದೇ ಬೇರೆ. ಒನೆಯುವುದೇ ಬೇರೆ.

ಬೀಸುವ ಹಾಡೇ ಅಲ್ಲ'— ಎಂಬ ಅರ್ಥ ಧ್ವನಿತವಾಗುತ್ತದೆ. 'ಓವಿ'ಯನ್ನು ಬೀಸುವ ಹಾಡಾಗಿಯೂ ಮಹಾರಾಷ್ಟ್ರದಲ್ಲಿ ಬಳಸಿಕೊಳ್ಳುತ್ತಿದ್ದಿರಬಹುದು — 'ಗಜಾಷ್ಟಕ' ಓವನಿಗೆಯೂ ಒನಕೆವಾಡೂ ಆಗಿದ್ದಂತೆ.

'ಓವನಿಗೆ' ಒನಕೆವಾಡಿನಂತೆ ಜನಪ್ರಿಯವಾಗಿದ್ದ, 'ಸುಭಗ ಕವಿತಾಗುಣ' ದಿಂದಲೂ ಕೂಡಿದ್ದ, ಒಂದು ಜಾನಪದ ಗೀತಪ್ರಕಾರ ಎಂಬಲ್ಲಿ ಸಂದೇಹವಿಲ್ಲ. ಆದರೆ, 'ಓವನಿಗೆ'ಯ ವಿಶಿಷ್ಟವಾದ ಅರ್ಥವೇನು ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಡಾ. ಕಲಬುರ್ಗಿಯವರು ಓವನಿಗೆ ಪದಪ್ರಯೋಗದ ಇನ್ನೊಂದು ಉದಾಹರಣೆಯನ್ನು ನಮ್ಮ ಗಮನಕ್ಕೆ ತಂದು ಉಪಕರಿಸಿದ್ದಾರೆ. ಅದು ಆಚಣ್ಣನ (ಸು. ೧೨೦೦) ವರ್ಧಮಾನ ಪುರಾಣದ ಪದ್ಯ·

ಆಡುವ ಮುಗ್ಧ ಬಾಳಕಿಯರುಂ ನುಡಿಜಾಣೆಯರಾದರೀಗಳಿಂ
ಪೋಡದ ನಿನ್ನ ಮಾತುಗಳನಾಡಿಯೆ; ಕೇಳಿಸಲಾವ ಮೆಯ್ಯೊಳಂ
ಹಾಡುವರಾದ[ರೋ]ವನಿಗೆ ಪಾಡುವರುಂ ನೃಪ ನಿನ್ನ ಗೀತಮುಂ
ಹಾಡಿಯೆ; ಖೇಚರಾತ್ಮಜೆಗೆ ಭಾವಿಪೊಡಿಂತುಟೆ ಮೆಯ್ಮೆ ಬೇಟದಾ ॥
[ಚೌಕ ಕಂಸದೊಳಗಿನ ಪಾಠ ಕಲಬುರ್ಗಿಯವರು ಊಹಿಸಿದ್ದು]

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನಲ್ಲಿ ಮೇಲ್ಕಂಡ ಶಾಸನಪದ್ಯ ಹಾಗೂ ವರ್ಧಮಾನ ಪುರಾಣದ ಪದ್ಯ— ಇವೆರಡರ ಶಬ್ದಪ್ರಯೋಗದ ಆಧಾರದ ಮೇಲೆ ಓವನಿಗೆ "ಒಂದು ಜಾತಿಯ ಹಾಡುಗಬ್ಬ" ಎಂದು ಸಾಮಾನ್ಯತರದ ಅರ್ಥವನ್ನು ಕೊಟ್ಟಿದ್ದಾರೆ. ಬೀಸುವ ಇಲ್ಲವೆ ಕುಟ್ಟುವ ಹಾಡು ಎಂದು ವಿಶ್ಲೇಷಿಸಿ ಹೇಳಿಲ್ಲ, ಇದು ಗಮನಾರ್ಹ.

ಶಬ್ದದ ರೂಪನಿಷ್ಪತ್ತಿ ಎಷ್ಟೋ ವೇಳೆ ಅರ್ಥನಿರ್ಣಯಕ್ಕೆ ಸಹಾಯಕ. ಓವನಿಗೆಯ ರೂಪನಿಷ್ಪತ್ತಿಯನ್ನು ಹಿಡಿದು ಡಾ. ಕಲಬುರ್ಗಿಯವರು ಅರ್ಥನಿಷ್ಕರ್ಷೆ ಮಾಡ ಹೊರಟಿರುವುದು ಶ್ಲಾಘ್ಯವಾಗಿದೆ, ಓವನಿಗೆಯ ಪ್ರಾಚೀನರೂಪ 'ಓವಣಿಗೆ' ಇರಬಹುದೆಂದು ಹೇಳಿ, ಎರಡು ಊಹೆಗಳನ್ನು ಅವರು ಮುಂದಿಟ್ಟಿದ್ದಾರೆ: (೧) ಓ (= ಪ್ರೀತಿ) + ಅಣಿಗೆ; (೨) ಓವು (= ಪಾಲನೆ) + ಅಣಿಗೆ. "ಅಣಿಗೆ ಎಂಬ ಪದವನ್ನು ಡಿ.ಎಲ್.ಎನ್ ಅವರು ಸಂಸ್ಕೃತದ ಪಟಿಕಾ (= ಬಟ್ಟೆ)ದಿಂದ ಸಾಧಿಸಿದ್ದಾರೆ" ಎಂದು ತಿಳಿಸಿ, "ಓವಣಿಗೆ ಎಂದರೆ ಪಾಲನೆಯ ಬಟ್ಟೆ ಎಂದರೆ ಜೋಳಿಗೆ (ಜೋವಳಿಗೆ> ಓವಳಿಗೆ> ಓವಣಿಗೆ> ಓವನಿಗೆ) ತೊಟ್ಟಿಲು ಎಂದು ಹೇಳಬಹುದೇನೋ........ ಅದಕ್ಕಾಗಿ ಓವನಿಗೆ ಎಂದರೆ ಜೋಗುಳ ಹಾಡು ಎಂದು ಹೇಳಬಹುದೇನೋ" ಎಂದು ಊಹಿಸಿದ್ದಾರೆ.[೬] ತಮ್ಮ ಈಚಿನ ಲೇಖನದಲ್ಲಿ (ಒರೆಗಲ್ಲು ವಿಭಾಗ, ಕ. ಭಾರತಿ. ೬–೧) ಅವರು ಈ ಊಹೆಯ ಕಡೆಗೆ (ಅಡಿಟಿಪ್ಪಣಿಯಲ್ಲಿ) ಗಮನಸೆಳೆದಿದ್ದಾರೆಯೆ ಹೊರತು,

೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪು. ೧೭೨, ಅಡಿಟಿಪ್ಪಣಿ. ೫೧.

ಅದನ್ನು ಸ್ಥಾಪಿಸುವ ಪ್ರಯತ್ನಮಾಡಿಲ್ಲ. ಇದನ್ನವರು ಕೈಬಿಟ್ಟಿದ್ದಾರೆ ಎಂದು ಭಾವಿಸಬಹುದು. ನಮಗೂ ಈ ಊಹೆ ಸಂಗತವಾಗಿ ಕಾಣುವುದಿಲ್ಲ. ಕಾರಣ, (೧) ಪಟಿಕಾ> ಅಣಿಗೆ ಎಂಬ ಅಪಭ್ರಂಶರೂಪವನ್ನು ಸಾಧಿಸುವುದು ಕಷ್ಟ. (ಪಟಿಕಾ>ಪಳಿಗೆ >ಹಳಿಗೆ[೭]>ಅಳಿಗೆ>ಅಣಿಗೆ ಎಂದು ಸಾಧಿಸಬೇಕಾಗುತ್ತದೆ. ಇದು ಸಾಧುವಲ್ಲ ಎಂದೇ ನಮ್ಮ ಅಭಿಪ್ರಾಯ.) ಅಲ್ಲದೆ, ಬಟ್ಟೆ ಎಂಬ ಅರ್ಥದಲ್ಲಿ ಪಟ, ಪಟೀ (ಇವು ಕೂಡ ಬಹುಶಃ ಸಮಸ್ತಪದಗಳಲ್ಲಿ ಮಾತ್ರ) ಇವು ಹೆಚ್ಚು ರೂಢಿಯೇ ಹೊರತು, ಪಟಿಕಾ ಅಲ್ಲ. [ಉದಾ. ಕಾಂಡಪಟ, ಧ್ವಜಪಟ; ಭೂಪಟ; ದುಪ್ಪಟ, ದುಪ್ಪಟಿ, ದುಪಟಿ; ಕಪ್ಪಟ, ಕಪಟ, ಕಪ್ಪಡ<ಸಂ. ಕರ್ಪಟ; ಕಪ್ಪಡಿ(ಟಿ)<ಸಂ. ಕರ್ಪಟಿ(ನ್)]. (೨) 'ಅಣಿಗೆ'ಗಿಂತ 'ಅಳಿಗೆ' ಪ್ರಾಚೀನ ಎನ್ನಬೇಕಾಗುತ್ತದೆ. (೩) 'ಜೋವಳಿಗೆ'> 'ಜೋಳಿಗೆ' ಎಂದಾಗದು. ಜೋಳಿಗೆ<ಝೌಲಿಕಾ ಎಂದು ಕಿಟೆಲ್ ನಿಘಂಟು ತಿಳಿಸುತ್ತದೆ. ದೋಲಿಕಾ>ಜೋಳಿಗೆ ಇದ್ದರೂ ಇರಬಹುದು. ಹೇಗೂ, ಜೋವಳಿಗೆ> ಓವನಿಗೆ ಸಿದ್ಧಿಸುವುದಿಲ್ಲವೆಂದೇ ಹೇಳಬೇಕು.

ವರ್ಧಮಾನ ಪುರಾಣದ ಪದ್ಯದ ಅರ್ಥವನ್ನೂ ಸಂದರ್ಭವನ್ನೂ ಗಮನಿಸಿದರೆ, 'ಓವನಿಗೆ' ಶೃಂಗಾರಪರವಾದ ಹಾಡಿರಬಹುದೇ ಎಂಬ ಊಹೆಗೆ ಅವಕಾಶವಿದೆ. ನಮ್ಮ ಜನಪದ ಸಾಹಿತ್ಯದಲ್ಲಿ ಶೃಂಗಾರಪರವಾದ ರಚನೆಗಳಿಗೆ ಕೊರತೆಯೇನೂ ಇಲ್ಲ. ನೇಮಿಚಂದ್ರನ ಲೀಲಾವತಿಯಲ್ಲಿ ವೇಶ್ಯೆಯರು ಒನಕೆವಾಡಾಗಿ ಹಾಡಿದ ತ್ರಿಪದಿಗಳಲ್ಲಿ ಸೂಳೆಸಿದ್ಧಾಂತ ನಿರೂಪಿತವಾಗಿದೆ. ಸೋಮೇಶ್ವರನ ಮಾನಸೋಲ್ಲಾಸದ ಶ್ಲೋಕಗಳನ್ನು[೮] ಒಟ್ಟಿಗೆ ಓದಿಕೊಂಡು ತಾತ್ಪರ್ಯವನ್ನು ಗ್ರಹಿಸಿದರೆ–ಉವಿ, ಓವಿ, ಓವಿಕಾ, ಇವು ಬಹುಶಃ ಒಂದೇ ಜಾತಿಯ ಪ್ರಬಂಧವೆಂದೂ, ಮಹಾರಾಷ್ಟ್ರದ ಸ್ತ್ರೀಯರು ಓವಿಯನ್ನು ಕಂಡನದಲ್ಲಿ ಹಾಡುತ್ತಿದ್ದರೆಂದೂ, ಈ ಹಾಡು ತ್ರಿಪದಿಯಲ್ಲಿ ಇದ್ದಿರಬಹುದೆಂದೂ ಹೇಳಬಹುದು. ತ್ರಿಪದಿಯ ವಿನಿಯೋಗವನ್ನು ಹೇಳುವಾಗ ಅದನ್ನು ಕಂಡನದಲ್ಲೂ ಶೃಂಗಾರ ವಿಪ್ರಲಂಭಗಳ ವರ್ಣನೆಯಲ್ಲೂ ಬಳಸತಕ್ಕದ್ದೆಂಬ ನಿರ್ದೇಶನವಿದೆ,

---

೭. 'ಧ್ವಜ' ಎನ್ನುವ ಅರ್ಥದಲ್ಲಿ 'ಪಳವಿಗೆ' [<ಸೆಟವಿಗೆ; ಸಟಯಿಗೆ, ಮುಂ.< ಸಂ. ಪಟಾಕೆ (<ಪಟಿಕಾ ?)] ಶಬ್ದವಿದೆ. ('ಹಾವಿನ ಪಳವಿಗೆಯ ರಾಯ'— ಕುಮಾರವ್ಯಾಸ ಭಾರತ).

೮. ಉವಿಶಬ್ದೇನ ಸಾಚಾಂತೇ ಕಾರ್ಯಾಸ್ಯಾದೋವಿಕಾ ಬುಧೈಃ
ಗೋತ್ರಕೇಂ ಗೋಲಿ ನಿಪ್ಪಂಪಿ ಅಜಲುವಲುತೋ ಮರ್ಝುಪದಿಹೇ ಕನ್ಹೋಸಾ ಚಲೂಲಾದಿ
(ಉ)ವಿ ಏ॥

"ಸಂಭೋಗ, ವಿಪ್ರಲಂಭ ಶೃಂಗಾರಗಳಲ್ಲಿ, ಹೃದಯಸ್ಥಿತ ಪ್ರಿಯನನ್ನು ಉದ್ದೇಶಿಸಿ ಈ ವೃತ್ತದ ಮೂಲಕ ಭಾವಪ್ರದರ್ಶನ ಮಾಡಬೇಕು. ಇಷ್ಟತಾಲದಿಂದ ಹಾಡತಕ್ಕದ್ದು: ಅನುಪ್ರಾಸವುಳ್ಳ ಸಾದಸ್ಸ್ಯಂಗಳು; ಇದನ್ನು ಓವಿಕಾ ಎಂದು ಹೇಳುತ್ತಾರೆ. ಮರಾಠಿ ಸಾಹಿತ್ಯದಲ್ಲಿ ತುಂಬ ಪ್ರಚುರವಾಗಿರುವ ಓವೀ ಎಂಬ ಪದ್ಯಕ್ಕೂ ಇದಕ್ಕೂ ಸಂಬಂಧವಿರಬಹುದು." (ಡಿ.ಎಲ್.ಎನ್.)

(ಮುಂದಿನ ಪುಟಕ್ಕೆ)

ಮರಾಠಿಯ ಓವಿಗೂ ಕನ್ನಡದ ಓವನಿಗೆಗೂ ನಂಟುಗೂಡಿಸುವುದು ಸಾಧ್ಯವಾದರೆ ಓವನಿಗೆ ತ್ರಿಪದೀ ಛಂದಸ್ಸಿನ ಶೃಂಗಾರಪರವಾದ ಗೇಯ ಪ್ರಬಂಧಪ್ರಕಾರ ಎಂದು ಹೇಳಬಹುದು. ಈ ಸಂದರ್ಭದಲ್ಲಿ, ಓ (=ಪ್ರೀತಿ)+ಅನಿ(ಣಿ)ಗೆ ಎಂಬ ರೂಪನಿಷ್ಪತ್ತಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇದು ವರ್ಧಮಾನ ಪುರಾಣದ ಪದ್ಯದ ಓವನಿಗೆ ಪದಪ್ರಯೋಗಕ್ಕೆ ಅನ್ವಯಿಸಬಹುದಾದ ಅರ್ಥನಿರ್ವಚನ. 'ನೃಪನ ಗೀತವನ್ನು ಹಾಡಿಯೇ ಓವನಿಗೆ ಹಾಡುವವರೂ ಕೂಡ ಹಾಡುವವರಾದರು' (=ಗಾನ ನಿಪುಣ

(ಹಿಂದಿನ ಪುಟದಿಂದ ಬಂದುದು)

ತ್ರಿಪದೀ ಷಟ್ಪದಿ ಚೈವ ಧವಲೋ ಮಂಗಲಸ್ತಥಾ
ಉವೀ ಚ ಚರ್ಚರೀ ಚರ್ಯಾ ರಾಹಡೀ ದಂತಿಕಾ ತಥಾ ॥ ೫೪೯

ಏತೇ ಸೂಡೇಷುತೋ ಗೇಯಾಃ ಪ್ರಬಂಧಾ ಲೌಕಿಕಾಮತಾಃ
ವಿಪ್ರಕೀರ್ಣಾಃ ಪ್ರಗಾತವ್ಯಾ ವ್ಯಾಪಾರೇಷು ಪೃಥಕ್ ಪೃಥಕ್ ॥ ೫೫೦

ತ್ರಿಪದೀ ಕಂಡನೇ ಚೈವ ಶೃಂಗಾರೇ ವಿಪ್ರಲಂಭಕೇ
ಪ್ರಾಯಃಶಾಸ್ತ್ರಿಭಿರೇವೈಷಾ ಗೇಯಾ ನಾನಾರ್ಥ ಭೂಷಿತಾ ॥ ೫೫೧

× × ×

ಮಹಾರಾಷ್ಟ್ರೇಷು ಯೋಷಿದ್ಭಿರೋವೀ ಗೇಯಾತು ಕಂಡನೇ
ಹೋಲಾಕೇಚಚ್ಚರೀ ಗೇಯಾ ರಾಹಡೀ ವೀರ ವರ್ಣನೇ ॥ ೫೫೩

"ತ್ರಿಪದಿಯನ್ನು, ಧಾನ್ಯವನ್ನು ಒರಳಲ್ಲಿ ಹಾಕಿ ಕುಟ್ಟುವಾಗಲೂ (=ಕಂಡನ) ಶೃಂಗಾರ ವಿಪ್ರಲಂಭಗಳನ್ನು ವರ್ಣಿಸುವಾಗಲೂ ಹಾಡಬೇಕು....ಮಹಾರಾಷ್ಟ್ರದ ಸ್ತ್ರೀಯರು ವಿಶೇಷವಾಗಿ ಓವಿಯನ್ನು ಉಪಯೋಗಿಸುತ್ತಾರೆ." (ಡಿ. ಎಲ್. ಎನ್.)–'ಮಾನಸೋಲ್ಲಾಸ'ದಲ್ಲಿ ಛಂದಸ್ಸು (ಪ್ರ. ಕ. ೪೫–೨).

ಓವೀ–ಓವನಿಗೆ ಬಗೆಗೆ ಡಾ. ಆರ್. ಶ್ರೀ. ಮುಗಳಿಯವರು ಈಚೆಗೆ ತಮ್ಮ ಅಭಿಪ್ರಾಯವನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ. ಮಾನಸೋಲ್ಲಾಸದಲ್ಲಿ ಉಕ್ತವಾದ 'ಓವೀ' ಎಂಬುದು ಪ್ರಾಚೀನ ಮರಾಠಿ ಸಾಹಿತ್ಯದಲ್ಲಿ ಬಹಳ ಪ್ರಚುರವಾದ ಛಂದೋರೂಪ. ಅದು ತ್ರಿಪದಿಗಿಂತ ಭಿನ್ನವಾದುದು. ತ್ರಿಪದಿಗೆ ಮೂಲವೆನ್ನಬಹುದಾದ ಏಳೆಗೆ ಹತ್ತಿರವಾದುದು. ಮಾನಸೋಲ್ಲಾಸದಲ್ಲಿ 'ಉವಿ, ಓವಿಕಾ' ಎಂದೂ ಅದಕ್ಕೆ ಪರ್ಯಾಯ ನಾಮಗಳಿವೆ. 'ಬೀಸುವಾಗ ಓವಿಯ ನೆನಪಾಗುತ್ತದೆ.' ಎಂದು ಮರಾಠಿ ಗಾದೆಗಳಲ್ಲಿ ಮಾತಿದೆ. ಇದರಿಂದ 'ಓವೀ' ಇದು ಮೂಲತಃ ಬೀಸುವಾಗ ಬಳಸುವ ಹಾಡಿನ ಛಂದಸ್ಸಾಗಿರಬೇಕು. ಆಮೇಲೆ ಮಹಾರಾಷ್ಟ್ರದಲ್ಲಿ ಕುಟ್ಟುವ ಹಾಡಿಗೂ ಅದು ಅನ್ವಯಿಸಿರಬೇಕು. ಅಂದರೆ ಮರಾಠಿಯ 'ಓವೀ' ಕನ್ನಡದ 'ಓವನಿಗೆ' ಇವೆರಡೂ ಮೂಲತಃ 'ಬೀಸುವ ಹಾಡು' ಎಂಬರ್ಥವುಳ್ಳ ಪದಗಳೆಂದು ನಮಗೆ ತೋರುತ್ತದೆ. 'ಮಾನಸೋಲ್ಲಾಸ'ದ ಜಾಡನ್ನು ಹಿಡಿದು ನಾವು 'ಓವನಿಗೆ' ಎಂಬುದಕ್ಕೆ ಬರೀ 'ಒನಕೆವಾಡು' ಎಂಬ ಅರ್ಥವನ್ನು ಕಲ್ಪಿಸಿದರೆ ಶಿವಮಾರನ ಗಜಾಷ್ಟಕದ ಸಂದರ್ಭದಲ್ಲಿ 'ಓವನಿಗೆಯುಂ ಒನಕೆವಾಡುಂ' ಎಂಬುದು ಅನಾವಶ್ಯಕ ದ್ವಿರುಕ್ತಿಯಾಗುತ್ತದೆ." (ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಪು. ೪–೫; ಅಡಿಟಿಪ್ಪಣಿ ೫).

ರಾದರು) ಎಂಬಲ್ಲಿ, 'ಓವನಿಗೆ ಹಾಡುವವರು' = 'ಓವನಿಗೆ' ಎಂಬ (ಜಾನಪದ) ಗೀತವನ್ನು ಹಾಡುವ ಸಾಮಾನ್ಯಜನ' ಎಂಬ ಅರ್ಥ ಹೊರಡುತ್ತದೆ. ನೃಪಸಂಬಂಧವಾದ ಪ್ರಣಯಗೀತ ಅವರಿಗೆ, ಪ್ರಿಯವಾಗಬೇಕಿದ್ದರೆ, ಅವರು ಸಾಮಾನ್ಯವಾಗಿ ಹಾಡುತ್ತಿದ್ದ 'ಓವನಿಗೆ'ಯೂ ಶೃಂಗಾರಪರ ಎಂದು ಊಹಿಸಿದರೆ ತಪ್ಪಾಗದು. ಆದರೆ ಈ ಪ್ರಕರಣ ಬಲದಿಂದ, 'ಓವನಿಗೆ' ಬೀಸುವಾಗ ಹಾಡುವ ಹಾಡು ಎಂಬ ಹೆಚ್ಚಿನ ಊಹೆ ಮಾಡಲು ಆಧಾರವಿಲ್ಲ.

ಶಾಸನದ ಪದ್ಯದ 'ಓವನಿಗೆ' ಒನಕೆವಾಡಲ್ಲ ಎಂಬುದು ಖಚಿತ. ಒನಕೆವಾಡಿನ ಸಾಮೀಪ್ಯದಿಂದ ಬೀಸುವ ಹಾಡು ಎಂದು ಅರ್ಥವಾದೀತು. ಆದರೆ ಇಲ್ಲಿ ಶೃಂಗಾರಪರವಾದ ಅರ್ಥಕಲ್ಪನೆಗೆ ಅವಕಾಶವಿಲ್ಲ. 'ಗಜಾಷ್ಟಕ' ಓವನಿಗೆಯೂ ಆಯಿತು; ಓವನಿಗೆ ಹಾಡುವವರು, ಒನಕೆವಾಡು ಹೇಳುವವರು–ಇಬ್ಬರಿಗೂ ಮೆಚ್ಚಿಗೆಯಾಗಿ, ಓವನಿಗೆಯಾಗಿ ಒನಕೆವಾಡಾಗಿ ಬಳಕೆಗೆ ಬಂದಿತು. ಎಂದಮೇಲೆ, ಓವನಿಗೆ ಶೃಂಗಾರವೊಂದೇ ವಸ್ತುವಲ್ಲ ಎಂದಾಗುತ್ತದೆ. 'ಓವನಿಗೆ' ಶಬ್ದಕ್ಕೆ ಊಹಾಬಲದಿಂದ ಬೀಸುವ ಹಾಡು ಎಂದು ಅರ್ಥಮಾಡುವುದಕ್ಕಿಂತ ಶಬ್ದದ ರೂಪನಿಷ್ಪತ್ತಿಯ ಆಧಾರದ ಮೇಲೆ ಅರ್ಥವಿಸುವುದು ಹೆಚ್ಚು ಸಮಂಜಸವಾದೀತು. ಆ ಸಾಧ್ಯತೆಯನ್ನು ಪರಿಶೀಲಿಸಬೇಕು.

ಹೇಮಚಂದ್ರನು 'ದೇಶೀನಾಮಮಾಲಾ'ದಲ್ಲಿ 'ಓಮ'ಪದಕ್ಕೆ 'ಗಜಾದೇರ್ಬಂಧನಾರ್ಥಂ ಖಾತಮ್ (A pit for Catching e!ephants etc)ಎಂದು ಅರ್ಥ ಕೊಟ್ಟಿದ್ದಾನೆ. (Desinama mala of Hemachandra, p.68. i–149; ibid ;glossary p.18) 'ಗಜಶಾಸ್ತ್ರ' ಗ್ರಂಥ ಒಳಗೊಂಡ 'ಗಜಾಷ್ಟಕ'ವನ್ನು ಆನೆ ಹಿಡಿಯುವವರು (ಆನೆಗಳನ್ನು ಆಕರ್ಷಿಸಲು?) ಹಾಡುತ್ತಿದ್ದರು, ಎಂಬ ಸಂದರ್ಭಕ್ಕೆ ಒಪ್ಪುವ ವಿವರಣೆ ಸಮಂಜಸವಾಗಿ ಕಾಣುತ್ತದೆ, 'ಗಜಾಷ್ಟಕ' ಯಾವ ಉದ್ದೇಶಕ್ಕೆ ರಚಿತವಾಗಿದ್ದಿತೋ ಅದಕ್ಕಲ್ಲದೆ ಒನಕೆವಾಡಾಗಿಯೂ ಬಳಕೆಗೆ ಬಂದಿತು ಎನ್ನುವುದರಲ್ಲಿ ಆ ಅಷ್ಟಕದ ಹೆಚ್ಚುಗಾರಿಕೆಯನ್ನೇ ಹೊಗಳಿದ ಹಾಗಾಯಿತು. ಅಂತೂ, ಒಂದು ಕವಿಕೃತಿ (ಅಥವಾ ಅದರ ಭಾಗ) ಜನಪದ ಸಾಹಿತ್ಯದಲ್ಲಿ ಸೇರಿಹೋಯಿತು, ಜನಪ್ರಿಯವಾಯಿತು, ಎನ್ನುವುದು ಇಲ್ಲಿಗೆ ಪ್ರಕೃತ, 'ಓವ' (>ಓಮ) ಆನೆಯನ್ನು ಆಕರ್ಷಿಸಿ, ಕೆಡಹಿ, ಕಟ್ಟಿಹಾಕುವ 'ಸಾಧನ' (=ಅಣಿಗೆ). [ಹೋಲಿಸಿ: ಬೀಸಣಿಗೆ, ಬಾಚಣಿಗೆ (=ಹಣಿಗೆ < ಅಣಿಗೆ), ಸೀರಣಿಗೆ. ಕೊಲ್ಲಣಿಗೆ, ಮೆರವಣಿಗೆ, ಇತ್ಯಾದಿ]. ಓವಣಿಗೆ > ಓವನಿಗೆ (ಓವ+ಅಣಿಗೆ ಅಥವಾ ಅನಿಗೆ).[೯]

---

೯. ಬೀಸಣಿಗೆ, ಬಿಜ್ಜಣಿಗೆ–ಇವು ಸಮಾನಾರ್ಥಕಗಳು. ಆದರೆ, ಬಿಜ್ಜಣಿಗೆ ವ್ಯಜನದ ತದ್ಭವ ಎಂಬ ಗ್ರಹಿಕೆಯಿದೆ. ಬೀಸಣಿಗೆಯಂತೂ ದೇಶ್ಯ ಬೀಸಣಿಗೆ < ಬಿಜ್ಜಣಿಗೆ ಆಗಿರಬಹುದೆ? ತಮಿಳು ವಿಜ (ಜಿ)ಱಿ, ಮಲೆಯಾಳ. ವೀಶೇಱಿ. ಇಲ್ಲಿ ಅಱಿಯನ್ನು ಒಂದು 'ಆಕೃತಿಮಾ' (Morpheme) ಆಗಿ ಗ್ರಹಿಸಿದರೆ, 'ಅಱಿ–ಅೞಿ–ಅಣಿ+ಗೆ' ರೂಪ ಸಿದ್ಧಿಸುವ ಸಾಧ್ಯತೆ ಇರುವ ಹಾಗಿದೆ. ಭಾಷಾವಿಜ್ಞಾನಿಗಳು ಪರಿಶೀಲಿಸಬೇಕು.

ಣ > ನ, ನ < ಣ–ಈ ವರ್ಣ ವ್ಯತ್ಯಯಗಳು ಸಾಮಾನ್ಯ [ಉದಾ. ಹಣುವು > ಆಣುವ. ತಣಿ > ತನಿ, ಹನಿಸು > ಹಣಿಸು, ಖನಿ > ಖಣಿ; ಕಣ್ಣು–ಕನ್ನು (ತೆಲಗು); ಇತ್ಯಾದಿ].

ಶಿವಮಾರನಿಗೂ (ಸು. ೮೦೦), ಮಾನಸೋಲ್ಲಾಸ (ಸು. ೧೧೪೦) ಮತ್ತು ವರ್ಧಮಾನ ಪುರಾಣ (ಸು. ೧೨೦೦)ಗಳಿಗೂ ೩–೪ ಶತಮಾನಗಳ ಕಾಲದ ಅಂತರವಿದೆ. ಈ ದೀರ್ಘಾವಧಿಯಲ್ಲಿ ಓವನಿಗೆ ಎಂಬ ಹೆಸರು ಉಳಿದುಕೊಂಡು ಬಂದರೂ ಅದರ ವಸ್ತು, ಉದ್ದೇಶ, ಹಾಡುವ ಸಂದರ್ಭ ಇವುಗಳಲ್ಲಿ ಕಾಲಕಾಲಕ್ಕೆ ವ್ಯತ್ಯಾಸವಾಗುತ್ತ ಬಂದಿದ್ದರೆ ಆಶ್ಚರ್ಯವೇನಿಲ್ಲ. ವಸ್ತುಕ–ವರ್ಣಕಗಳ ಚರಿತ್ರೆಯಿಂದ ಇದಕ್ಕೆ ಸಮರ್ಥನೆ ದೊರೆಯುತ್ತದೆ. ಶಿವಮಾರನ ಗಜಾಷ್ಟಕ ಆನೆ ಹಿಡಿಯುವವರ 'ಓವನಿಗೆ'ಯಾಗಿಯೂ ಧಾನ್ಯ ಕುಟ್ಟುವವರ 'ಓನಕೆವಾಡಾ'ಗಿಯೂ ಬಳಕೆಗೆ ಬರಬೇಕಾಗಿದ್ದರೆ, ಸಂಸ್ಕೃತ ಭಾಷೆ. ಛಂದಸ್ಸುಗಳಲ್ಲಿ ರಚಿತವಾಗಿದ್ದಿರಲು ಸಾಧ್ಯವಿಲ್ಲ. ಕನ್ನಡ ಜಾನಪದ ಸಾಹಿತ್ಯಕ್ಕೆ ಸೇರಿ ಹೋದ 'ಓವನಿಗೆ' ಎಂಬ ಗೀತಪ್ರಕಾರ ಕನ್ನಡ ಎಂಬುದರಲ್ಲಿ ಸಂದೇಹವಿರದು; ಛಂದಸ್ಸು ಮೂಲತಃ ಬಳಕೆ ತಪ್ಪಿದ ಗೀತಿಕೆ ಆಗಿರಬಹುದು; ಏಳೆ ಅಥವಾ ತ್ರಿಪದಿ ಆಗಿರ ಬಹುದು; ಕಾಲಕ್ರಮದಲ್ಲಿ ತ್ರಿಪದಿಯೊಂದರಲ್ಲಿಯೇ ಬೆಳೆದುಬಂದಿರಬಹುದು; ಓವ ನಿಗೆ ಹಾಡಿನ ಮಟ್ಟು ಬರುಬರುತ್ತ ಶೃಂಗಾರವಿಷಯಕ್ಕೆ ವಿನಿಯೋಗವಾಗುತ್ತಿದ್ದಿತೆಂದು ಕಾಣುತ್ತದೆ. ವರ್ಧಮಾನ ಪುರಾಣದ ಕಾಲಕ್ಕೆ ಓವನಿಗೆ, ಕರ್ಣಾಟಕಸಂಗೀತ ಪದ್ಧತಿ ಯಲ್ಲಿ ಪ್ರಾಚುರ್ಯಕ್ಕೆ ಬಂದ ಜಾವಡಿ(ಳಿ)ಯಂತೆ, ಶೃಂಗಾರಪ್ರಧಾನವಾದ ಗೇಯಪ್ರಕಾರ ವಾಗಿ ವಿಕಾಸಹೊಂದಿದಂತೆ ಕಾಣುತ್ತದೆ. ಶಾಬ್ದಿಕವಾಗಿ ಓವನಿಗೆಗೂ ಜಾವಳಿಗೆಗೂ ಸಂಬಂಧ ಕಲ್ಪಿಸಹೋಗುವುದು ಸಾಹಸ ಎಂದು ತೋರುತ್ತದೆ.[೧೦]

ಇಲ್ಲಿ ಯಾವುದೇ ತೀರ್ಮಾನಕ್ಕೆ ಬಂದಿದ್ದೇನೆ ಎಂದು ತಿಳಿಯಬಾರದು. ಜಿಜ್ಞಾಸು ಗಳಿಗೆ ಒಂದಿಷ್ಟು ಸಾಮಗ್ರಿ ಒದಗಿಸಿದ್ದೇನೆ. ●

೧೦. ಓವನಿಗೆ < ಓವಣಿ(+ ಗೆ) > ಓವಳಿ > ಯೋ(ಯಾ)ವಳಿ > ಜಾವಳಿ(ಽ)–ಆಗಿರಬಹುದೇ? ವಿಚಾರ ಮಾಡಬೇಕು. ಓ > ಯೋ ಸಂಭವ ಕಡಮೆ, ಆದರೂ ಕಿಟೆಲ್ ನಿಘಂಟುವಿನಲ್ಲಿ ಒಂದು ನಿದ-ರ್ಶನ ಉಂಟು. ಒಟು (= ಏಟು, ಸಂಖ್ಯೆ) ಮರಾಠಿಯಲ್ಲಿ 'ಯೋಟು' ಎಂದು ಉಚ್ಚಾರಣೆ ಯಂತೆ (ಪ್ರ. ೩೨೯) ಇವರ ಆಧಾರ ಹಿಡಿದು ನಿರ್ಣಯಮಾಡುವುದು ಕಷ್ಟ. ಸಂಗೀತ ಪ್ರಪಂಚದಲ್ಲಿ 'ಜಾವಳಿ'ಯ ಶಬ್ದಾರ್ಥವನ್ನು ನಿರ್ಣಯಿಸುವುದು ಈವರೆಗೂ ಸಾಧ್ಯವಾಗಿಲ್ಲ.

ಪಂಪನಲ್ಲಿ ಸತ್ಯವತಿಯ ಪ್ರಸಂಗ

ಎಂ. ಜಿ. ಈಶ್ವರ್

ತನ್ನ ವಿಕ್ರಮಾರ್ಜುನ ವಿಜಯಕ್ಕೆ ಮಹಾಭಾರತವನ್ನೇ ಆಕರವಾಗಿ ತೆಗೆದು ಕೊಂಡಿದ್ದರೂ 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಸಮಸ್ತ ಭಾರತ ಮನಪೂರ್ವಮಾಗಿ' ಹೇಳಬಲ್ಲೆ ಎನ್ನುವ ಕೆಚ್ಚು ಪಂಪನಿಗಿದೆ. ಜೊತೆಗೆ 'ವ್ಯಾಸ ಮುನೀಂದ್ರರುಂದ್ರ ವಚನಾಮೃತ ವಾರ್ಧಿಯನೀಸುವೆಂ, ಕವಿವ್ಯಾಸನೆನೆಂಬ ಗರ್ವ-ಮೆನಗಿಲ್ಲ' ಎಂಬ ಪ್ರಾಮಾಣಿಕತೆಯೂ ಇದೆ.

ಈ ಕೆಚ್ಚು ಮತ್ತು ಪ್ರಾಮಾಣಿಕತೆಗಳನ್ನವಲಂಬಿಸಿ ಮೂಲವನ್ನು ಎದುರಿಗಿಟ್ಟು ಕೊಂಡು ಕನ್ನಡದಲ್ಲಿ ಕಾವ್ಯವನ್ನು ಹೊಸೆಯುತ್ತ ಹೋದಾಗ ಕವಿಯ ಖಾಸಗಿ ತನವೇನು, ಅಲ್ಲಲ್ಲಿ ಕಂಡುಬರುವ ಚಾಕಚಕ್ಯತೆಯೇನು, ಎಲ್ಲೆಲ್ಲಿ ಆತನ ಅಪೂರ್ವ ಪ್ರತಿಭೆ ಮಿಂಚಿದೆ, ಸಂಸ್ಕೃತದ ಸೊಬಗು ಕನ್ನಡದಲ್ಲಿ ಎಷ್ಟರಮಟ್ಟಿಗೆ ಉಜ್ವಲವಾಗಿ ಭಾಷೆಯಲ್ಲಿ ಅಭಿವ್ಯಕ್ತವಾಗಿದೆ ಎನ್ನುವುದನ್ನು ಪಂಪನನ್ನು ಆದಿ ಕವಿ ಎಂದು ಎಲ್ಲ ಅರ್ಥದಲ್ಲೂ ಕರೆದಿರುವ ಕನ್ನಡಿಗ ಗಮನಿಸಬೇಕಾಗುತ್ತದೆ. ಯಾವ ಯಶಸ್ವಿ ಕವಿಯೇ ಆಗಲಿ ತನ್ನ ಕಾವ್ಯಕ್ಕೆ ಮೂಲವೊಂದನ್ನು ಇಟ್ಟುಕೊಂಡಿದ್ದರೂ ತನ್ನ ಮನೋ ಭಾವಕ್ಕೆ ಅನುಗುಣವಾಗಿ ಅದರಲ್ಲಿ ಹಲವು ಮಾರ್ಪಾಡುಗಳನ್ನು ಮಾಡಬಲ್ಲ ಸ್ವತಂತ್ರತೆಯನ್ನು ಪಡೆದುಕೊಂಡಿರುತ್ತಾನೆ. ಇದಕ್ಕೆ ಕವಿಯ ಮನೋಭಾವ ಮಾತ್ರ ವಲ್ಲದೆ ಆತನು ಬದುಕಿದ ಪರಿಸರವೂ, ಕಾಲವೂ ಕಾರಣವಾಗುತ್ತದೆ. ಈ ಮಾತಿಗೆ ಪಂಪನೇನೂ ಹೊರತಾಗುವುದಿಲ್ಲ. ಆತ ಮಹಾಭಾತದ ಸಮುದ್ರದಲ್ಲಿ ಈಸಾಡಿರ ಬಹುದು, ವ್ಯಾಸನನ್ನು ಸಂಪೂರ್ಣವಾಗಿ ಜೀರ್ಣಿಸಿಕೊಂಡಿರಬಹುದು, ಹಾಗೆಂದು ಅವನು ಹೇಳಿದ್ದೆಲ್ಲವನ್ನೂ ಪಂಪ ಯಥಾವತ್ತಾಗಿ ಸ್ವೀಕರಿಸಿ ಕನ್ನಡಿಸಿಲ್ಲ. ಕೆಲವು ಪಾತ್ರಗಳ ಬದಲಾವಣೆ, ಪ್ರಸಂಗಗಳ ಅಥವಾ ಸನ್ನಿವೇಶಗಳ ನಿರೂಪಣೆ, ಮಧ್ಯೆಮಧ್ಯೆ ತನ್ನದೇ ಆದ ವಿಮರ್ಶೆ ಇತ್ಯಾದಿಗಳು ನಮ್ಮ ಗಮನ ಸೆಳೆಯುತ್ತವೆ. ಆತನೇ ಹೇಳುವಂತೆ ಕಾವ್ಯದಲ್ಲಿ ಹೊಸ ಬಗೆ, ಮೃದುವಾದ ಬಂಧ, ದೇಸಿಯ ಬಳಕೆ, ಪರಂಪ ರಾನುಗತವಾಗಿ ಬಂದ ನಿರೂಪಣೆಯ ಮಾರ್ಗವನ್ನೆ ಬಳಸುವುದು; ಇವೆಲ್ಲ ಸುಗ್ಗಿಯಲ್ಲಿ ಎಳಮಾವು, ಕೆಂದಳಿರು, ಹೂವು, ತುಂಬಿ, ಕೋಗಿಲೆ ಶೋಭಿಸುವಂತೆ ಶೋಭಿಸು ತ್ತವೆಯಂತೆ. ಸದ್ಯದಲ್ಲಿ ಮಹಾಭಾರತದಲ್ಲಿ ಬಂದಿರುವ ಸತ್ಯವತಿಯ ಪ್ರಸಂಗವನ್ನೂ,

ಆ ಪ್ರಸಂಗ ಪಂಪನಲ್ಲಿ ಹೇಗೆ ನಿರೂಪಣೆಯಾಗಿದೆ ಎಂಬುದನ್ನೂ ಸ್ಥೂಲವಾಗಿ ನೋಡ ಬಹುದು.

ಮೂಲ ಮಹಾಭಾರತದಲ್ಲಿ ಶಂತನು ಮಹಾರಾಜನು ಒಮ್ಮೆ ಬೇಟೆಗೆ ಹೋಗಿ ಅಲೆಯುತ್ತಿರುವಾಗ ಯಾವುದೋ ಒಂದು ಸುವಾಸನೆಯಿಂದ ಆಕರ್ಷಿತನಾಗಿ ಒಂದು ನದಿಯ ಹತ್ತಿರಕ್ಕೆ ಬರುತ್ತಾನೆ. ಅಲ್ಲಿ ದಾಶರಾಜನ ಮಗಳಾದ ಸತ್ಯವತಿಯು ದೋಣಿಯನ್ನು ನಡೆಯಿಸುತ್ತಿರುತ್ತಾಳೆ. ಶಂತನು ಅವಳಲ್ಲಿ ಅನುರಕ್ತನಾಗಿ ದಾಶ-ರಾಜನ ಹತ್ತಿರಕ್ಕೆ ಬಂದು ಅವಳನ್ನು ತನಗೆ ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಆಗ ದಾಶರಾಜನು ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪಟ್ಟಕಟ್ಟುವುದಾಗಿ ವಚನಕೊಟ್ಟರೆ ಮಗಳನ್ನು ಕೊಡುವುದಾಗಿ ಉತ್ತರಿಸುತ್ತಾನೆ. ಅದಕ್ಕೆ ಶಂತನು ತನ್ನ ಹಿರಿಯ ಮಗನಾದ ದೇವವ್ರತನ (ಅರ್ಥಾತ್ ಭೀಷ್ಮನ) ಕಲ್ಯಾಣವನ್ನು ನೆನೆದು ಅರಮನೆಗೆ ಬಂದು ಮನ್ಮಥನ ಬಾಣಗಳಿಂದ ಬೇಯುತ್ತಿರುತ್ತಾನೆ. ದಿನೇ ದಿನೇ ಕಳೆಗುಂದುತ್ತಿರುವ ತನ್ನ ತಂದೆಯ ಮುಖವನ್ನು ಕಂಡು ದೇವವ್ರತನು ಅದಕ್ಕೆ ಕಾರಣವೇನೆಂದು ಕೇಳಲು ಶಂತನು ತನಗೆ ಮದುವೆಯಾಗಲು ಇರುವ ಇಚ್ಛೆಯನ್ನು ಪರೋಕ್ಷವಾಗಿ 'ಒಬ್ಬ ಮಗ ಮಗನಲ್ಲ...' ಇತ್ಯಾದಿಯಾಗಿ ತಿಳಿಸುತ್ತಾನೆ. ಅನಂತರ ಪೂರ್ಣ ವಿಷಯವನ್ನು ಮಂತ್ರಿಗಳಿಂದ ತಿಳಿದುಕೊಂಡು. ದಾಶರಾಜನಲ್ಲಿ ಪ್ರತಿಜ್ಞೆಮಾಡಿ ಸತ್ಯವತಿಯನ್ನು ತನ್ನ ತಂದೆಗೆ ಮದುವೆಮಾಡಿಸಿ ದೇವವ್ರತನು ಭೀಷ್ಮನಾಗುತ್ತಾನೆ.

ಸತ್ಯವತಿಯ ಹೊಟ್ಟೆಯಲ್ಲಿ ಹುಟ್ಟಿದ ಚಿತ್ರಾಂಗದ ವಿಚಿತ್ರವೀರ್ಯರು ರಾಜ್ಯವಾಳಿ ಸಂತತಿಯಿಲ್ಲದೆ ಮರಣಹೊಂದುತ್ತಾರೆ. ಆಗ ಸತ್ಯವತಿಯು ಸುಂದರಿಯರಾದ ತಮ್ಮನ ಹೆಂಡಂದಿರಲ್ಲಿ ಮಕ್ಕಳನ್ನು ಪಡೆದು ರಾಜನಾಗಿ ವಂಶವನ್ನು ಉದ್ಧಾರಮಾಡು ಎಂದು ಭೀಷ್ಮನನ್ನು ಕೇಳಿಕೊಳ್ಳುತ್ತಾಳೆ. ಆದರೆ ಅದಕ್ಕೆ ಭೀಷ್ಮನು ಒಪ್ಪದಿರಲು ತಾನು ಹಿಂದೆ, ಶಂತನುವನ್ನು ಮದುವೆ ಆಗುವುದಕ್ಕೆ ಮುಂಚೆ ಪರಾಶರ ಮುನಿಯನ್ನು ದೋಣಿಯಲ್ಲಿ ಕೂಡಿದ್ದನ್ನು ತಿಳಿಸಿ ಅವರಿಂದ ಕೃಷ್ಣದ್ವೈಪಾಯನನ್ನು (ವೇದವ್ಯಾಸರು) ಪಡೆದು ಪುನಃ ಕನ್ಯತ್ವದ ವರ ಪಡೆದದ್ದನ್ನು ತಿಳಿಸುತ್ತಾಳೆ. ವೇದವ್ಯಾಸರ ಕೃಪೆಯಿಂದ ಅಂಬಿಕೆಯಲ್ಲಿ ಧೃತರಾಷ್ಟ್ರನನ್ನು ಅಂಬಾಲಿಕೆಯಲ್ಲಿ ಪಾಂಡುರಾಜನನ್ನೂ, ಅಂಬಿಕೆಯ ಬದಲು ಹೋಗಿದ್ದ ದಾಸಿಯಲ್ಲಿ ವಿದುರನನ್ನು ಪಡೆದರೆಂದು ವ್ಯಕ್ತವಾಗುತ್ತದೆ. ಹಾಗೂ ಸತ್ಯವತಿ ತನಗೆ ವಯಸ್ಸಾಗಲು ಸೊಸೆಯಂದಿರ ಸಂಗಡ ವನವಾಸಕ್ಕೆ ಹೋದಳೆಂದು ಅದರಲ್ಲಿ ಉಕ್ತವಾಗಿದೆ.*

ಸಂಗ್ರಹನಿಪುಣ ಪಂಪನಲ್ಲಿ ಈ ಎಲ್ಲ ಅಂಶಗಳು ಬಂದಿದ್ದರೂ ಸಹ ಕೆಲವೆಡೆ ಗಮನಾರ್ಹವಾದ ಬದಲಾವಣೆಯ ಜೊತೆಗೆ, ಸೃಜಿಸುವ ರೀತಿಯಲ್ಲೂ ಅಪೂರ್ವ ತೇಜಸ್ಸು ಬಂದಿದೆ. ಅಲ್ಲದೆ ಪಂಪನಲ್ಲಿ ಸತ್ಯವತಿ ಹೇಗೆ ಹುಟ್ಟಿದಳು ಎನ್ನುವ ಉಪಕಥೆ

---

* ವಚನ ಭಾರತ–ಎ. ಆರ್. ಕೃಷ್ಣಶಾಸ್ತ್ರಿ.

ವಸುವಿನ ಕತೆಯೂ ಬಂದು ಸೇರಿಕೊಂಡಂತಿದೆ. ಅನಂತರ ಒಂದನೆಯದಾಗಿ ಶಂತನು ಸತ್ಯವತಿಯನ್ನು ಮದುವೆಯಾಗಲು ನೇರವಾಗಿ ಅವಳನ್ನೇ ಕೇಳುತ್ತಾನೆ. ಎರಡನೆಯದಾಗಿ ಶಂತನು ವಿರಹದ ವೇದನೆಯಲ್ಲಿ ಬೇಯುತ್ತಿರುವಾಗ ಭೀಷ್ಮನು ಕಾರಣವನ್ನು ಶಂತನುವಿನಲ್ಲಿ ನೇರವಾಗಿ ತಿಳಿಯಲು ಹೋಗದೆ ಮಂತ್ರಿಗಳಿಂದ ತಿಳಿದುಕೊಳ್ಳುವನು. ಮೊದಲನೆಯ ಬದಲಾವಣೆಯನ್ನು ಪಂಪನು ತನ್ನ ಕಾಲದ ಪ್ರಜ್ಞೆಯಿಂದ ಬದಲಾಯಿಸಿರಬಹುದು ಹಾಗೂ ಕಾಡಿನ ಮಧ್ಯೆ ಓರ್ವಳೇ ಓಡು ನಡೆಯಿಸುತ್ತಿರುವ ಯುವತಿಯು ಸ್ವತಂತ್ರತೆಯುಳ್ಳವಳು ಎಂದು ಅನಿಸಿರಬೇಕು ಎಂದೆನ್ನಿಸಿದರೆ; ಎರಡನೆಯದಕ್ಕೆ ವಿರಹವೇದನೆಯ ವಿಷಯವನ್ನು ಮಗನೇ ತಂದೆಯನ್ನು ನೇರವಾಗಿ ಕೇಳುವುದು ಅಷ್ಟು ಚಂದವಲ್ಲ ಎಂದು ಅನಿಸಿರಬೇಕು ಎನಿಸುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಈ ಎಲ್ಲ ಸನ್ನಿವೇಶಗಳನ್ನೂ ಪಂಪನು ಭಾಷೆಯಲ್ಲಿ ಎಷ್ಟರಮಟ್ಟಿಗೆ ವ್ಯಕ್ತಪಡಿಸಿದ್ದಾನೆ ಎನ್ನುವುದು ಬಹಳ ಮುಖ್ಯ. ಏಕೆಂದರೆ ನಮಗೆ ಯಾವತ್ತೂ ಎದುರಿಗೆ ನಿಲ್ಲುವ ಸಾಕ್ಷಿಯೆಂದರೆ ಭಾಷೆಯ ಸಂವಹನ ಕ್ರಿಯೆ.

ಭೀಷ್ಮನು ಗಂಗೆಯಲ್ಲಿ ಹುಟ್ಟಿ ಯೌವನಾವಸ್ಥೆಗೆ ಬಂದು ರಾಜ್ಯದಲ್ಲಿ ಸುಖಿಸುತ್ತಿರುವಾಗ, ಥುತ್ತನೆ ಸತ್ಯವತಿಯ ಪ್ರಸಂಗ ಪಂಪನಲ್ಲಿ ಎದುರಾಗುತ್ತದೆ. ಗಂಗಾದೇಶದ ಉಪರಿಚರವಸು ಎಂಬ ಅರಸನು ಮುಕ್ತವತಿ ಎನ್ನುವ ತೊರೆಯ ಹತ್ತಿರ ವಿಶ್ರಮಿಸಿಕೊಳ್ಳುತ್ತಿದ್ದಾಗ 'ಕೋಳಾಹಳ' ಎಂಬ ಪರ್ವತಕ್ಕೆ ಹುಟ್ಟಿದ ಕನ್ಯೆ ಗಿರಿಜೆಯನ್ನು ಕಾಣುತ್ತಾನೆ. ಕಂಡು ಕಣ್ಬೇಟಂಗೊಂಡು ಅವಳನ್ನು ಮದುವೆಯೂ ಆಗುತ್ತಾನೆ. ಒಂದು ದಿವಸ ಉಪರಿಚರವಸುವು ಇಂದ್ರನ ಓಲಗಕ್ಕೆ ಬಂದಾಗ, ಗಿರಿಜೆಯು ಋತುಕಾಲಪ್ರಾಪ್ತೆಯಾಗಿದ್ದುದರಿಂದ ಅವಳನ್ನು ಕೂಡಲು ಆಗದೆ ನೆನೆದು ವೀರ್ಯಸ್ಖಲನವಾಗಲು, ಆ ವೀರ್ಯವನ್ನು ಒಂದು ಕದಳಿಪತ್ರದಲ್ಲಿ ಸಂಗ್ರಹಿಸಿ ತಾನು ಸಾಕಿದಂತಹ ಗಿಳಿಯ ಸಂಗಡ ಓಪಳೆಲ್ಲಿಗೆ ಕಳುಹಿಸಿಕೊಡುತ್ತಾನೆ. ಮಾರ್ಗ ಮಧ್ಯದಲ್ಲಿ ಗಿಳಿಯನ್ನು ಒಂದು ಗಿಡುಗವು ಬೆನ್ನಟ್ಟುತ್ತದೆ. ಯಮುನಾ ನದಿಯನ್ನು ದಾಟುವಾಗ ಉಗಿಬಗಿ ಮಾಡಿ ವೀರ್ಯದ ಎಲೆಯನ್ನು ನೀರಿನಲ್ಲಿ ಹಾಕಿ ತಪ್ಪಿಸಿಕೊಂಡುಬಿಡುತ್ತದೆ. ನೀರಿನಲ್ಲಿದ್ದ ಒಂದು ಬಾಳೆಮೀನು ವೀರ್ಯಸಹಿತದ ಎಲೆಯನ್ನು ನುಂಗಿದ ನಂತರ ಒಬ್ಬ ಬೆಸ್ತನಿಗೆ ಸಿಕ್ಕು. ಅವನು ಅದನ್ನು ತನ್ನ ಒಡೆಯನಾದ ದಾಶರಾಜನಿಗೆ ಕೊಟ್ಟಾಗ, ಆತನು ಅದನ್ನು ಕೊಯ್ಸಿಸಿದಾಗ ಅದರೊಳಗೆ ಒಂದು ಗಂಡು ಒಂದು ಹೆಣ್ಣು ಕೂಸು ಇರುವುದು ಕಂಡುಬರುತ್ತದೆ. ಅದರೊಳಗಣ ಹೆಣ್ಣುಕೂಸೇ ಪ್ರಸ್ತುತದ ಸತ್ಯವತಿ.

ಹಾಗಾದರೆ ಮಹಾಭಾರತದಲ್ಲಿ ಇಲ್ಲದೇ ಇರುವ ಸತ್ಯವತಿಯ ಈ ಜನನ ರಹಸ್ಯದಿಂದ ಪಂಪ ಏನನ್ನು ಸಾಧಿಸಿದ ಎನ್ನುವ ಪ್ರಶ್ನೆ ಉದ್ಭವಿಸದೇ ಇರದು. ಯಾವುದೇ ಕವಿಯಾಗಲಿ ಯಾವುದೇ ಸನ್ನಿವೇಶವನ್ನು ಅರ್ಥಬದ್ಧವಾಗಿ ಔಚಿತ್ಯಪೂರ್ಣವಾಗಿ ತರಬೇಕಾಗುತ್ತದೆ. ಆಕಸ್ಮಾತ್ ಅದು ಕಾವ್ಯದ ಚೌಕಟ್ಟಿನಲ್ಲಿ ಅರ್ಥ

ಪೂರ್ಣವಾಗಿ ಬರದೆ ಇದ್ದರೆ, ಕವಿಯು ಕೇವಲ ಕಾವ್ಯವನ್ನು ವಿಸ್ತರಿಸುವುದಕ್ಕೊ ಅಥವಾ ಎಲ್ಲೊ ಕೇಳಿದ, ಓದಿದ ಕತೆಯನ್ನು ಒಂದುಕಡೆ ಹಿಡಿದಿಡಬೇಕು ಎನ್ನುವ ಚಟದಿಂದ ಹೀಗೆ ಮಾಡಿರಬೇಕು ಎಂದು ಅನಿಸದೆ ಇರಲಾರದು. ಆದರೆ ಹಾಗೆ ಯಾವ ಶ್ರೇಷ್ಠ ಕವಿಯೂ ಮಾಡಲಾರ, ಅಂತೆಯೇ ಪಂಪ ಅಲ್ಲದೆ ಟಿ. ಎಸ್. ವೆಂಕಣ್ಣಯ್ಯನವರು ಅನ್ನುವ 'ಪಂಪನಿಗೆ ನಾಲಗೆ ಇಲ್ಲ, ಕುಮಾರವ್ಯಾಸನಿಗೆ ಕಡಿವಾಣವಿಲ್ಲ' ಎನ್ನುವುದನ್ನು ಒಪ್ಪಿಕೊಳ್ಳುವುದಾದರೆ ಪಂಪ ಇದನ್ನು ಅನಾವಶ್ಯಕವಾಗಿ ಸೇರಿಸಲಾರ· ಸತ್ಯವತಿಯ ಜನನ ರಹಸ್ಯ ಮುಂದಿನ ಮಹಾಭಾರತದ ಧ್ವನಿಪೂರ್ವಕ ಮಾತು ಎಂದೆನಿಸಿದರೆ ಆಶ್ಚರ್ಯವೇನಿಲ್ಲ.

ಋತುಕಾಲಪ್ರಾಪ್ತೆಯಾಗಿದ್ದ ಗಿರಿಜೆಯನ್ನು ಸಂಧಿಸಲು ಆಗದೆ ಉಪರಿಚರವಸುವಿಗೆ ವೀರ್ಯಸ್ಖಲನವಾದದ್ದು ಸಹಜ ಸ್ವಭಾವ. ವೀರ್ಯಹೋಗಿ ಮುಟ್ಟಬೇಕಾಗಿದ್ದ ಸ್ಥಳವನ್ನು ಮುಟ್ಟದೆ ಮಾರ್ಗಮಧ್ಯದಲ್ಲಿ ಅಡ್ಡಿಯುಂಟಾಗುತ್ತದೆ. ಒಂದೊಮ್ಮೆ ಮುಟ್ಟಿದ್ದರೆ ಗಿರಿಜೆ ಅದನ್ನು ಏನು ಮಾಡುತ್ತಿದ್ದಳೋ ಅದು ನಮಗೆ ಅಪ್ರಸ್ತುತ. ಅದು ಬಾಳೆಯ ಮೀನಿನ ಒಳಗಡೆ ಶೇಖರಣೆಯಾಗಿ ಗಂಡು ಮತ್ತು ಹೆಣ್ಣು ಕೂಸುಗಳೆರಡು ಹುಟ್ಟುತ್ತವೆ. ಅಂದರೆ ನಿರ್ದಿಷ್ಟವಾದ ನೇರ ಸಂಪರ್ಕವಿಲ್ಲದೆ ಸ್ವಲ್ಪ ಅಡ್ಡದಾರಿಯ ಸಂಪರ್ಕದಿಂದ ಸತ್ಯವತಿ ಹುಟ್ಟುತ್ತಾಳೆ. ಮುಂದಿನ ಮಹಾಭಾರತವೂ ಅಷ್ಟೇ ತಾನೆ ! ಶಂತನು ಕಾಡಿನಲ್ಲಿ ಅಲೆಯುತ್ತಿದ್ದಾಗ ಗಂಗೆ ಹಾಜರಾಗುತ್ತಾಳೆ. ಪಂಥ ಹಾಕಿ ಶಂತನುವನ್ನು ಮದುವೆಯಾಗಿ ಏಳು ಮಕ್ಕಳನ್ನು ಸಾಯಿಸಿ ಎಂಟನೆಯ ಮಗ ಭೀಷ್ಮನಿಗೆ ಶಂತನು ಪ್ರಶ್ನಿಸಿದ ತಕ್ಷಣವೇ ತನ್ನ ಸಂಬಂಧ ಹರಿಯಿತೆಂದು ಹೊರಟು ಹೋಗುತ್ತಾಳೆ. ಅನಂತರ ಸತ್ಯವತಿ ಈಕೆ ಅನಿರ್ದಿಷ್ಟ ಸಂಪರ್ಕದ, ಗಂಡಸಿನ ವೀರ್ಯವೊಂದೇ ಮೀನಿನಲ್ಲಿ ಸಂಗತಗೊಂಡು ಮನುಷ್ಯಳಾದವಳು. ಮದುವೆಯಾಗುವುದಕ್ಕಿಂತ ಮುಂಚೆಯೇ ಪರಾಶರ ಮುನಿಯಿಂದ ವೇದವ್ಯಾಸರನ್ನು ಪಡೆದು ಪುನಃ ಕನ್ಯತ್ವ ಪಡೆದವಳು. ಶಂತನುವನ್ನು ಮದುವೆಯಾದ ನಂತರ ಚಿತ್ರಾಂಗದ ವಿಚಿತ್ರವೀರ್ಯರನ್ನು ಪಡೆವರೆ ಅವರು ಸಂತತಿಯಿಲ್ಲದೆ ಮರಣಹೊಂದುತ್ತಾರೆ. ವೇದವ್ಯಾಸರ ಕೃಪೆಯಿಂದ ಅಂಬಿಕೆ ಅಂಬಾಲಿಕೆಯರಲ್ಲಿ ಧೃತರಾಷ್ಟ್ರ, ಪಾಂಡುರಾಜ ಹುಟ್ಟುತ್ತಾರೆ. ಪಾಂಡುರಾಜನಿಗೆ ಮಕ್ಕಳಾಗುವುದಕ್ಕಿಂತ ಮುಂಚೆಯೇ ಸ್ತ್ರೀಯರ ಸಂಗದಿಂದ ಮರಣ ಎನ್ನುವ ಶಾಪ ಬರುತ್ತದೆ. ಕುಂತಿಯು ತಾನು ಕನ್ಯೆಯಾಗಿದ್ದಾಗ ಪಡೆದ ವರಗಳ ಸಹಾಯದಿಂದ ಪಾಂಡವರೈವರನ್ನು ಪಡೆಯುತ್ತಾಳೆ. ಗಾಂಧಾರಿಗಾದರೋ ಕುಂತಿಗೆ ಮೊದಲು ಮಕ್ಕಳಾದರಲ್ಲಾ ತನಗೆ ಬೇಗ ಆಗಲಿಲ್ಲ ಎಂದು ಹೊಟ್ಟೆಯನ್ನು ಹೊಸೆಯುವುದರಿಂದ ಮಾಂಸದ ಮುದ್ದೆಯೊಂದು ಹೊರಬಂದು ಅಪ್ರಾಪ್ತ ಕಾಲ ಆ ಕೋಶಕ್ಕೆ ಆಗಿದ್ದುದರಿಂದ. ವ್ಯಾಸರ ಬುದ್ಧಿವಂತಿಕೆಯಿಂದ ಘಟಗಳಲ್ಲಿ ಪ್ರಾಪ್ತಕಾಲವಾಗುವವರೆಗೆ ಇದ್ದು ಕೌರವರು ಹುಟ್ಟುತ್ತಾರೆ. ಹೀಗೆ ಮಹಾಭಾರತದ ಪ್ರಮುಖ ವ್ಯಕ್ತಿಗಳ ಜನನವೆಲ್ಲ ಅಪ್ರಾಪ್ತಕಾಲದ ಪರದಿಂದಲೋ. ನಿರ್ದಿಷ್ಟ ವ್ಯಕ್ತಿಗಳ ಸಂಪರ್ಕದ ಅಭಾವದಿಂದಲೊ

ಆಗಿರುವುದು ಕಂಡುಬರುತ್ತದೆ. ಇವೆಲ್ಲದಕ್ಕೂ ಹಿನ್ನೆಲೆಯಾಗಿ ಸತ್ಯವತಿಯ ಜನನ ಪ್ರಸಂಗ ಪಂಪನಲ್ಲಿ ಚಿತ್ರಿತವಾಗಿದೆ. ಅವಳ ಜನನದ ಛಾಯೆಯೇ ಮುಂದೂ ಮುಂದು ವರಿಯುತ್ತದೆ, ವಾಂಶಿಕ ಗುಣವಂತೆ. ಒಟ್ಟಿನಲ್ಲಿ ಮುಂದಿನವರೆಲ್ಲರ ಹುಟ್ಟಿನ ವಿಸಂಗತಿಗೆ ಸತ್ಯವತಿಯೇ ಕಾರಣ. ಏಕೆಂದರೆ ಪಾಂಡವರ ಕೌರವರ ಮೂಲ ಅಜ್ಜಿ ಸತ್ಯವತಿ ತಾನೇ?

ಇನ್ನು ಪಂಪನ ಪ್ರಸಂಗಕ್ಕೆ ಬರೋಣ. ದಾಶರಾಜನ ಆಶ್ರಯದಲ್ಲಿ ಗಂಡುಹೆಣ್ಣು ಕೂಸುಗಳೆರಡೂ ಮತ್ಸ್ಯಗಂಧ, ಮತ್ಸ್ಯಗಂಧಿ ಎಂಬ ಹೆಸರಿನಿಂದ ಬೆಳೆಯುತ್ತವೆ. ಮತ್ಸ್ಯಗಂಧಿಯು ಯಮುನಾ ನದಿಯಲ್ಲಿ ತನ್ನ ತಂದೆಯಿಟ್ಟಿದ್ದ ದೋಣಿಯನ್ನು ನಡಪುತ್ತಿದ್ದಾಗ ಅಲ್ಲಿಗೆ ಒಮ್ಮೆ ಬ್ರಹ್ಮನ ಮೊಮ್ಮಗನಾದ ವೃದ್ಧ ಪರಾಶರ ಮುನಿಗಳು ಬರುತ್ತಾರೆ. ಇಲ್ಲಿ ಪಂಪನು 'ವೃದ್ಧ' ಎನ್ನುವ ಶಬ್ದವನ್ನು ಬಳಸಿರುವುದನ್ನು ಗಮನಿಸ ಬೇಕು. ನದಿಯನ್ನು ದಾಟಿಸು ಎಂದು ಮುನಿಗಳು ಆ ಮತ್ಸ್ಯಗಂಧಿಯನ್ನು ಕೇಳುತ್ತಾರೆ. ಅವರ ಮನದಿಂಗಿತವನ್ನು ಅರ್ಥಮಾಡಿಕೊಂಡ ಮತ್ಸ್ಯಗಂಧಿಯು ಸಾವಿರ ಜನರು ಏರಿದಲ್ಲದೆ ದೋಣಿಯು ಮುಂದೆ ಹೋಗದು ಎನ್ನುತ್ತಾಳೆ. ಆಗ ಪರಾಶರ ಮುನಿಗಳು 'ಅನಿಬರ ಬಿಣ್ಪು' ತಾನೇ ಆಗುತ್ತೇನೆಂದು ಹೇಳುವುದನ್ನು ನೋಡಿದರೆ ನಾಗಚಂದ್ರನು ಹೇಳುವ 'ಎನ್ನರುಮಂ ಮತಿಗಿಡಿಪುದು ಚೋದ್ಯಮಲ್ತು ಮದನೋನ್ಮಾದಂ' ಎನ್ನುವ ಮಾತು ನೆನಪಿಗೆ ಬಾರದೇ ಇರದು. ಮತ್ಸ್ಯಗಂಧಿಯನ್ನು ವೃದ್ಧ ಪರಾಶರ ಮುನಿಗಳು ಅಟ್ಟಿಕರ್ತು ನೋಡುವುದಕ್ಕೆ ಕಾರಣವಿಲ್ಲಪೇಯಿಲ್ಲ. ಆಕೆ ಮತ್ಸ್ಯಗಂಧಿಯಾಗಿ ದ್ದಿರಬಹುದು, ಮೀನಿನಲ್ಲಿ ಜನಿಸಿದವಳು ಎನ್ನುವುದರಿಂದ. ಆದರೆ ಮೀನಿನಲ್ಲಿ ಶೇಖರವಾದ ವೀರ್ಯವು ಮಾತ್ರ 'ಉಪರಿಚರವಸು'ವೆಂಬ ಮಹಾರಾಜನದು ಎಂಬುದನ್ನು ನಾವು ಇಲ್ಲಿ ಮರೆಯುವಂತಿಲ್ಲ. ಅಂತೆಯೆ ಪಂಪ ಆಕೆಯನ್ನು 'ದಿವ್ಯ ಕನ್ಯೆ' ಎಂದು ಪ್ರಶಸ್ತಿ ಸುತ್ತಾನೆ. ಅಥವಾ ಕಾಡಿನಲ್ಲಿ ಅಲೆದುಬಂದಿದ್ದ ಪರಾಶರ ಮುನಿಗಳಿಗೆ ಕಂಡ ಏಕೈಕ ಕನ್ಯೆ ಮತ್ಸ್ಯಗಂಧಿಯೇ ದಿವ್ಯಕನ್ಯೆಯಾಗಿ ಕಂಡಳೋ ಏನೊ !

ದೋಣಿಯು ಈ ಕಡೆಯ ನದಿಯ ತೀರವನ್ನು ಬಿಟ್ಟು ಆ ಕಡೆಯ ತೀರದ ಕಡೆಗೆ ಸಾಗಲು ಉಜ್ಜುಗಿಸುತ್ತದೆ. ದಿವ್ಯಕನ್ಯೆಯನ್ನು ಕಂಡು ಮನದೊಳ್ ಸೋಲ್ತು ವೃದ್ಧ ಮುನೀಂದ್ರರು ಅವಳ ಸಂಗವನ್ನು ಬಯಸಿ ಮೈಯೊಳಗಣ ದುರ್ಗಂಧವು ಹೋಗುವಂತೆ ಮಾಡಿ ಯೋಜನ ಗಂಧಿತ್ವವನ್ನು ದಯಪಾಲಿಸುತ್ತಾರೆ. ನೋಟದ ಕೂಟ ಮೈಗೆ ಸಂಚರಿಸಿದಾಗ ದೋಣಿಯ ಸುತ್ತ ಮಂಜನ್ನು ಕಾಂಡಪಟದಂತೆ ಆವರಿಸುವಂತೆ ಮಾಡಿ ಅವಳನ್ನು ಕೂಡುತ್ತಾರೆ. ಆಗ ದಿವ್ಯಸ್ವರೂಪನಾದ, ಜ್ಞಾನ ಸ್ವರೂಪನಾದ ವ್ಯಾಸ ಹುಟ್ಟುತ್ತಾನೆ. ಹೀಗೆ ಕನ್ಯೆಯನ್ನು ಕೂಡಿ, ವ್ಯಾಸನು ಆವಿರ್ಭವಿ ಸುವಂತೆ ಮಾಡಿ, ಪುನಃ ಆಕೆಗೆ (ಮುಂದಿನ ಜೀವನ ಸುಗಮವಾಗಲಿ ಎಂದೋ ಏನೊ) ಕನ್ಯತ್ವವನ್ನು ಕೊಟ್ಟು ವ್ಯಾಸನ ಸಂಗಡ ಪರಾಶರ ಮುನಿಗಳು ಮುಂದುವರಿಯುತ್ತಾರೆ. ಆಗ ಪಂಪನು 'ದಿವ್ಯಮುನಿಗಳ್ಗೇಗೆಯ್ದೊಡಂ ತೀರದೇ' ಎಂದು ಉದ್ಗರಿಸುವಲ್ಲಿ ಆತನ ಮನೋಜ್ಞತೆ ಅರಿವಾಗುವುದರಲ್ಲಿ ಸಂದೇಹವೇ ಇಲ್ಲ.

ಮುಂದೆ ಶಂತನು ಅವಳನ್ನು ಕಂಡದ್ದು. ಕಂಡು ಪ್ರೀತಿಸಿದ್ದು. ಹೂವನ್ನು ಕಂಡ ದುಂಬಿಯಂತೆ ಅವಳಿಗೆ ಸೋತಿದ್ದು. ಅವಳನ್ನು ತನ್ನ ಸಂಗಡ ಬರಲು ಕೇಳಿದ್ದು. ಅವಳು ನಾಚಿ ಅವಕ್ಕೆ ಉತ್ತರಕೊಟ್ಟದ್ದು: ಪ್ರತಿಯೊಂದನ್ನು ಒಂದೇ ಒಂದು ವೃತ್ತದಲ್ಲಿ ಪಂಪನು ನಾಟಕೀಯತೆ. ಭಾವಾಭಿನಯ. ಸಂಭಾಷಣೆ. ಮಾರ್ಮಿಕತೆ ಆಗ ತಾನೇ ಪ್ರೀತಿಸಿದ ಪ್ರೇಮಿಗಳಿಬ್ಬರ ಮನದ ತೊಳಲಾಟದ ಕ್ರಿಯಾತ್ಮಕ ಬೆಳವಣಿಗೆ. ಹೋಲಿಕೆ ಇತ್ಯಾದಿಗಳನ್ನು ಅಡಕಮಾಡಿ ತುಂಬಿಟ್ಟಿರುವುದನ್ನು ನೋಡಿದರೆ ನಾವು ಅವನ ತ್ರಿವಿಕ್ರಮ ಪ್ರತಿಭೆಗೆ ಬೆರಗಾಗುತ್ತೇವೆ:

"ಮೃಗಯಾವ್ಯಾಜದಿನೊರ್ಮೆ ಶಂತನು ತೊೞಲ್ತರ್ಪಂ ಪಳಂಚಿಲ್ದು ತ
ನ್ಮೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು ಕಂಡೊಲ್ದು ನ
ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀಂ ಬಾ ಪೋಪಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೆ।"

ಗಂಗೆಯನ್ನು ಕಳೆದುಕೊಂಡ ಅನಂತರದಲ್ಲಿ ಶಂತನು ಒಂದು ಸಾರಿ ಮೃಗಗಳ ಬೇಟೆಗೆ ಬಂದಿರುತ್ತಾನೆ. ಬೇಟೆಗೆ ಬಂದವನು ಬೇಟವನ್ನು ನಡೆಯಿಸುತ್ತಾನೆ. ಮೃಗಗಳ ಬೇಟೆಗಳ ಅಲೆದಾಟದಲ್ಲಿದ್ದವನು ಮೃಗಶಾಬಾಕ್ಷಿಯ ಬೇಟೆಗೆ ತೊಡಗುತ್ತಾನೆ. ಚತುರ ಬೇಟೆಗಾರರುಗಳು ಕಾಡಿನಲ್ಲಿ ಅಲೆಯುತ್ತಿರುವಾಗ ಪ್ರಾಣಿಗಳು ಇಂತಹ ಕಡೆಯಲ್ಲೇ ಇವೆ ಎಂದು ವಾಸನೆಯಿಂದಲೇ ಗ್ರಹಿಸಿ ಹೇಳಿಬಿಡುವರಂತೆ. ಅಂತೆಯೇ ಇಲ್ಲಿಯೂ ಸಹ ಶಂತನು 'ಮೃಗಶಾಬಾಕ್ಷಿಯ ಕಂಪು ತಟ್ಟಿ. ಮಧುಪಂಬೋಲ್ ಸೋಲ್ತು' ಅವಳತ್ತ ಬರುತ್ತಾನೆ. ಯೋಜನಗಂಧಿತ್ವವುಳ್ಳ ಸತ್ಯವತಿಯನ್ನು ಕಂಡ ಕೂಡಲೆ ಒಲಿಯುತ್ತಾನೆ. (ಪರಾಶರ ಮುನಿಯೂ ಅಷ್ಟೇ ತಾನೆ?) ಒಲಿದ ಶಂತನುಗೆ ಅವಳನ್ನು ಅಲ್ಲಿಯೇ ವಶೀಕರಿಸಿಕೊಳ್ಳುವ ಪರಾಶರಮುನಿಯಂತಹ ತೇಜಸ್ಸು ಇಲ್ಲ. ಆದ್ದರಿಂದ ಅವಳ ಸೆರಗನ್ನು 'ನಲ್ಮೆಗೆ ದಿಬ್ಯಂಬಿಡಿವಂತೆವೋಲ್' ಹಿಡಿಯುತ್ತಾನೆ. ಅವನದು ಕೇವಲ ಕಾಮುಕದೃಷ್ಟಿಯಲ್ಲ ಎನ್ನುವುದು ಪಂಪನ ಈ ಒಂದು ವಿಶಿಷ್ಟ ಹೋಲಿಕೆಯಿಂದಲೇ ವೇದ್ಯವಾಗುತ್ತದೆ. ಏಕೆಂದರೆ ಗಂಗೆಯನ್ನು ಕಳೆದುಕೊಂಡ ಶಂತನುವಿನ ಮನ ಬರಿದಾಗಿ ಬೋಳಾಗಿದೆ. ಸತ್ಯವತಿ ಅದನ್ನು ತುಂಬಿ ಚಿಗುರಿಸಲಿ ಎನ್ನುವುದು ಶಂತನುವಿನ ಆಶಯ. ಅಂತೆಯೇ ಅವಳ ಸೆರಗನ್ನು ಹಿಡಿದು ಪ್ರೇಮ ನೋಟದಿಂದ ಆರ್ತನಾಗಿ 'ನೀಂ ಬಾ ಪೋಪಮ್' ಎನ್ನುತ್ತಾನೆ. ಅವನ ಮಾತೇ ಅವನಿಗೆ ಅವಳ ಮೇಲೆ ಇರುವ ಪ್ರೇಮ ನಿರ್ಭರದ ಬಾಹ್ಯರೂಪವಾಗುತ್ತದೆ.

ಅವನ ಈ ತತ್‌ಕ್ಷಣದ ಮಾತಿಗೆ ಸತ್ಯವತಿ ಏನು ಹೇಳಬೇಕು? ಅವನು ಯಾರು ಎನ್ನುವುದು ತಿಳಿದಿಲ್ಲ. ಎಲ್ಲಿದ್ದಾನೆ ಏನು ಮಾಡುತ್ತಿದ್ದಾನೆ ಎನ್ನುವುದೂ ಗೊತ್ತಿಲ್ಲ. ಕಂಡ ತಕ್ಷಣ ದಿಢೀರಾಗಿ ಬಾ ಹೋಗೋಣ ಎಂದರೆ ಅದೇನು ಬಾಲಿಶವಾಗಿ ಹೋಯಿತೆ? ಅಲ್ಲದೆ ಸೆರಗನ್ನು ಬೇರೆ ಹಿಡಿದೇ ಬಿಟ್ಟಿದ್ದಾನೆ. ಆಗ ಸತ್ಯವತಿಯು ಮೆಲ್ಲಗೆ 'ತತ್ಕನ್ಯಕೆ ನಾಣ್ಚು'ತ್ತಾಳೆ. ಇಲ್ಲಿ ತತ್ಕನ್ಯಕೆ ಎನ್ನುವ ಶಬ್ದದ ಮೇಲೆ ಒತ್ತು ಬೀಳದೇ ಇರದು.

ಯಾವ ಹೆಂಗಸೇ ಆಗಲಿ, ಗಂಡಸು ಹೊಸಬನಾಗಿದ್ದು ತನ್ನನ್ನು ದುರುಗುಟ್ಟಿ ನೋಡಿದರೋ, ಪ್ರೇಮವ್ಯವಹಾರದ ಮಾತನಾಡಿದರೋ, ಅದರಲ್ಲೂ ಈ ನಮ್ಮ ಶಂತನುವಿನಂತೆ ಸೆರಗನ್ನು ಹಿಡಿದರೆ ನಾಚುವುದು ಸ್ವಭಾವಗುಣ. ಹಾಗೆ ನಾಚಿದರೆ ಅವಳ ಸೌಂದರ್ಯಕ್ಕೆ ಇನ್ನೂ ಶೋಭೆಯು ಒದಗಬಹುದು. ಆದರೆ ಪ್ರಸ್ತುತದಲ್ಲಿ ಸತ್ಯವತಿಯು "ತತ್ಕನ್ಯಕೆ" ನಾಣ್ಚಿದಳಂತೆ. ಇಲ್ಲಿ ಪಂಪ ಬೇಕೆಂತಲೆ ಈ ಶಬ್ದ ಬಳಸಿರುವಂತೆ ತೋರುತ್ತದೆ. ಅವಳಲ್ಲಿ ಹಾಲಿ ಇರುವ ಕನ್ಯೆತನವು ಪರಾಶರ ಮುನಿಗಳಿಂದ ಲಭ್ಯವಾದದ್ದು. ಶಂತನು ಅವಳನ್ನು ಮುಟ್ಟಿದಾಗ ರೋಮಾಂಚನವಾಗಿರಬಹುದು. ಆದರೆ ಆ ರೋಮಾಂಚನ ಜೀವನದಲ್ಲಿ ಅವಳಿಗೆ ಮೊದಲನೆಯದಲ್ಲ. ಆ ಅನುಭವ ಅವರಿಗೆ ಆಗಲೆ ವೃದ್ಧ ಪರಾಶರ ಮುನಿಗಳಿಂದ ದೊರೆತು ಮಗನೊಬ್ಬ ಬೇರೆ ಉದಯಿಸಿದ್ದಾನೆ. ಅಂತಹವಳಿಗೆ ಹೀಗಾದದ್ದು ಒಂದು ರೀತಿಯ ಕೃತಕತೆ ಎಂದು ಪಂಪನಿಗೆ ಅನಿಸಿರಬಹುದು. ಅಥವಾ ಈ ತೆರನಾದ ವ್ಯವಹಾರಗಳ ಬಗ್ಗೆ ಪಂಪ ಪರೋಕ್ಷವಾಗಿ ಏನನ್ನೋ ಸೂಚಿಸಬಯಸುತ್ತಿರಬಹುದು. ಜೊತೆಗೆ ತತ್ಕನ್ಯಕೆ ಎಂದಾಕ್ಷಣ ಅವಳ ಹಿಂದಿನ ಪರಾಶರರ ಭೇಟಿಯೂ ನಮಗೆ ನಮ್ಮ ಸ್ಮೃತಿಪಟಲದಲ್ಲಿ ಧುತ್ತನೆ ಎದುರಿಗೆ ಬಂದುನಿಲ್ಲುತ್ತದೆ.

ವ್ಯಾಸರ ಮಹಾಭಾರತದಲ್ಲಿ ಇಲ್ಲದಿರುವ ಒಂದು ಸೊಗಸು ಪಂಪನ ಈ ಸನ್ನಿವೇಶದಲ್ಲಿದೆ. ಮೂಲದಲ್ಲಿ ಕಂಡುಹಿಡಿದ ಶಂತನು ಅವಳ ತಂದೆ ದಾಶರಾಜನಲ್ಲಿಗೆ ಹೋಗಿ ಅವಳನ್ನು ಬೇಡುತ್ತಾನೆ. ಇದು ವ್ಯಾಸಕವಿಯ ಕಾಲದ ಪ್ರತಿಬಿಂಬ. ಈ ನೀತಿ ಪಂಪನ ಕಾಲಕ್ಕೆ ಸ್ವಲ್ಪ ಬದಲಾವಣೆಹೊಂದಿತ್ತೆಂದು ತೋರುತ್ತದೆ. ಸೆರಗನ್ನು ಹಿಡಿದು ಹೋಗೋಣ ಬಾ ಎಂದು ಕರೆಯುವ ಗಾಂಧರ್ವ ಮನೋಭಾವ ಪಂಪನ ಶಂತನುವಿನಲ್ಲಿದೆ. ಆದರೆ ಸತ್ಯವತಿಯು ಸಂಪ್ರದಾಯ ನಿಷ್ಠೆ. ಕರೆದ ತಕ್ಷಣ ಹೋಗುವುದೂ ಸಭ್ಯರ ಲಕ್ಷಣವಲ್ಲ. ಸಾಕಿದ ತಂದೆಯೊಬ್ಬನಿದ್ದಾನೆ ಎನ್ನುವ ಅರಿವು ಅವಳಲ್ಲಿದೆ. ಅದಕ್ಕೋಸ್ಕರ 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೆ' ಎಂದು ಹೇಳಿ ಜಾರಿಕೊಳ್ಳುತ್ತಾಳೆ. ಈ ಈರ್ವರ ಸಂಭಾಷಣೆಯಲ್ಲಿ ನಮ್ಮ ಪಟಲದಲ್ಲಿ ನೆನಪಿಗೆಬರುವ ಇನ್ನೊಂದು ಜೋಡಿಯೆಂದರೆ ಕಾಳಿದಾಸ ನಿರ್ಮಿತ ದುಷ್ಯಂತ–ಶಕುಂತಲೆ ಇವರ ಜೋಡಿ.

ಪರಾಶರ-ಸತ್ಯವತಿ; ಶಂತನು–ಸತ್ಯವತಿ, ಈ ಎರಡು ಭೇಟಿಯ ಪ್ರಸಂಗದಲ್ಲೂ ಎದ್ದುಕಾಣುವ ವ್ಯತ್ಯಾಸವಿದೆ. ಮೊದಲನೆಯದರಲ್ಲಿ ಪರಾಶರ ಮುನಿಗಳಿಗೆ ಸತ್ಯವತಿಯ ಪ್ರತಿಕ್ರಿಯೆ ಏನೂ ಇಲ್ಲ ಪಂಪನಲ್ಲಿ. ಆದರೆ ಮಹಾಭಾರತದಲ್ಲಿ ಭೀಷ್ಮನಿಗೆ ತನ್ನ ಹಿಂದಿನ ಪ್ರಸಂಗವನ್ನು ವರ್ಣಿಸುವಾಗ ಪರಾಶರ ಮುನಿಗಳ ತೇಜಸ್ಸಿಗೆ, ವರದ ಲೋಭನೆಗೆ, ಶಾಪದ ಹೆದರಿಕೆಗೆ ಒಳಗಾದೆ ಎನ್ನುವ ಮಾತು ಬಹುಯುಕ್ತವಾಗಿದೆ. ಪಂಪನಲ್ಲಿ ಇದೆಲ್ಲ ಇಲ್ಲವೇ ಇಲ್ಲ. ಎಲ್ಲದನ್ನು ನೀವೇ ಊಹಿಸಿಕೊಳ್ಳಬೇಕು ಎಂದು ಸಹೃದಯರ ಪಾಲಿಗೆ ಬಿಟ್ಟು ಕೈಕೊಡವಿಕೊಂಡಿದ್ದಾನೆ. ಹೇಳುವುದಕ್ಕಿಂತ ಹೇಳದೇ ಇರುವುದೇ ಕಾವ್ಯದ ಅನೇಕಾರ್ಥಗಳಿಗೆ, ಧ್ವನಿ ಪರಂಪರೆಗೆ ಕಾರಣವಾಗುತ್ತದೆ. ಎಲ್ಲ

ದನ್ನೂ ಕವಿಯೇ ಹೇಳಿಬಿಟ್ಟರೆ ಸಹೃದಯರ ಆಲೋಚನೆಗೆ ಆಹಾರವೇ ಉಳಿಯು ವುದಿಲ್ಲ. ಅದೆಲ್ಲಕ್ಕಿಂತ ಮಿಗಿಲಾಗಿ ಪಂಪನು ಮಹಾಭಾರತವನ್ನು ಬರೆಯುತ್ತಿರುವುದು ಭಾರತವನ್ನು ಅರಿತಿರುವ ಕನ್ನಡಿಗರಿಗೆ.

ಪರಾಶರ ಮುನಿಯ ಎದುರು ಸತ್ಯವತಿ ಮೌನಿ. ಏಕೆಂದರೆ ತಾನು 'ಮತ್ಸ್ಯ-ಗಂಧಿ'. ಮುನಿಗಳು ಸಾವಿರ ಜನರ ಭಾರವನ್ನು ತಾವೇ ಆಗಿ ದೋಣಿಯ ಮೇಲೆ ಏರಿ, ವಿಸ್ಮಯಕ್ಕೆ ಕಾರಣರಾಗಿ ಅವಳ ಮೌನಕ್ಕೆ ಇನ್ನಷ್ಟು ಬೆಸುಗೆ ಹಾಕಿದ್ದಾರೆ. ಅವರ ತೇಜಸ್ಸು ಅವಳನ್ನು ಮುಗ್ಧಳನ್ನಾಗಿ ಮಾಡಿ, ವಿರೋಧರಹಿತಳನ್ನಾಗಿ ಮಾಡುತ್ತದೆ. ಆಗ ಅವರು ಅವಳನ್ನು ಕೂಡುತ್ತಾರೆ. ಆದರೆ ಎರಡನೆಯ ಭೇಟಿಯಲ್ಲಿ ಶಂತನು ಪರಾಶರ ಮುನಿಗಳಂತೆ ದಿವ್ಯತೇಜಸ್ಸುಳ್ಳವನಲ್ಲ, ರಾಜಗಾಂಭೀರ್ಯವುಳ್ಳವ ನಾಗಿದ್ದು ಏನೋ ಒಂದು ರೀತಿಯ ಮಾನುಷವಾದ ಆಕರ್ಷಣೆ ಉಳ್ಳವನು. ಅವನು ಒಲಿದರೆ ಇವಳೂ ಒಲಿಯುತ್ತಾಳೆ. ಸೆರಗು ಹಿಡಿದಾಗ ನಾಚಿಕೆಯ ಪ್ರತಿಕ್ರಿಯೆ ತೋರಿಸಿ ಆತನ ಪ್ರೇಮಕ್ಕೆ ನೀರೆರೆಯುತ್ತಾಳೆ. ಆದರೆ ಹಿಂದಿನಂತೆ ಮೌನಿಯಲ್ಲ. ನಿಷ್ಕ್ರಿಯಳಲ್ಲ. ಮಾತಿಗೆ ಮಾತು ಕೊಡುವವಳು. ಕೇಳಿದ ತಕ್ಷಣ ಓಡಿಹೋಗುವ ಮನಸ್ಸು ಮಾಡದೆ 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೆ' ಎನ್ನುವ ಸಂಯಮ ಗುಣವುಳ್ಳವಳು.

ಹೀಗೆ ಉತ್ತರವನ್ನು ಪಡೆದುಕೊಂಡ ಶಂತನು ಮೂಲದಂತೆ ತಾನು ನೇರವಾಗಿ ದಾಶರಾಜನಲ್ಲಿಗೆ ಹೋಗುವುದಿಲ್ಲ. ಪಂಪನ ಶಂತನು ತಾನೇ ನೇರವಾಗಿ ಹೆಣ್ಣು ಕೇಳ ಹೋಗುವುದು ಹೊಲ್ಲ ಎಂದುಕೊಂಡನೇನೋ, ಪಟ್ಟಣಕ್ಕೆ ಮರಳಿ ಕ್ರಮದಂತೆ ಕೂಸನ್ನು ಕೇಳಲು ತನ್ನ ಪೆರ್ಗಡೆಗಳನ್ನು ಅಟ್ಟುತ್ತಾನೆ. ವಿಷಯ ತಿಳಿದ ದಾಶರಾಜನು ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪಟ್ಟಕಟ್ಟುವುದಾದರೆ ಮಗಳನ್ನು ಕೊಡಲು ಒಪ್ಪುತ್ತಾನೆ. ಆಗ ಶಂತನು ತೆಪ್ಪಗಾಗುತ್ತಾನೆ. ಆದರೆ ಅವಳನ್ನು ಮನದಲ್ಲೇ ನೆನೆದು ನೆನೆದು ಕೊರಗಿ ಕರಗುತ್ತಾನೆ, ಅಕಸ್ಮಾತ್ ಮದುವೆಯಾದರೂ 'ಶಂತನು ಮಹಾ-ರಾಜನು ತನ್ನದೊಂದು ಸವಿಗೆ ಸೋಲಕ್ಕೆ ಭೀಷ್ಮನಿಗೆ ಅನ್ಯಾಯ ಮಾಡಿದ' ಎಂಬ ಅಪಖ್ಯಾತಿ ಬರುವುದಲ್ಲಾ ಎಂದು ಚಿಂತಿಸುತ್ತಾನೆ. ಸ್ವಲ್ಪ ದಿನಗಳಲ್ಲಿಯೇ ತನ್ನ ತಂದೆಯು ಕರಗುತ್ತಿರುವುದನ್ನು ಕಂಡು ಗಾಂಗೇಯನು ವೃತ್ತಾಂತವನ್ನೆಲ್ಲ ಅರಿತು ದಾಶ ರಾಜನ ಮುಂದೆ ಪ್ರತಿಜ್ಞೆಮಾಡಿ ಸತ್ಯವತಿಯನ್ನು ತಂದು ಶಂತನುವಿಗೆ ಮದುವೆ ಮಾಡಿಸುತ್ತಾನೆ.

ಶಂತನು ಸತ್ಯವತಿಯರ ಅನ್ಯೋನ್ಯಾಸಕ್ತಿಯಿಂದ ಬೇಟದ ಕಂದಲ್ಗಳಂತೆ ಚಿತ್ರಾಂಗದ ವಿಚಿತ್ರವೀರ್ಯರು ಹುಟ್ಟುತ್ತಾರೆ. ಕಾಲ ಕೂಡಿಬಂದು ಶಂತ ಪರಲೋಕ ಪ್ರಾಪ್ತನಾಗುತ್ತಾನೆ. ಚಿತ್ರಾಂಗದ ರಾಜನಾಗಿ ಗಂಧರ್ವನ ಸಂಗಡ ದ್ವಂದ್ವಯುದ್ಧಮಾಡಿ ಮರಣಹೊಂದಿದ ಮೇಲೆ ವಿಚಿತ್ರವೀರ್ಯನು ರಾಜನಾಗುತ್ತಾನೆ. ಭೀಷ್ಮನು ಗೆದ್ದುತಂದ ಅಂಬಿಕೆ ಅಂಬಾಲಿಕೆಯರನ್ನು ಮದುವೆಯಾಗಿ ಸಂತತಿರಹಿತನಾಗಿ

ಮರಣ ಹೊಂದುತ್ತಾನೆ. ಆಗ ಸತ್ಯವತಿಗೆ ವಂಶೋದ್ಧಾರದ ಪಿಡುಗು ತಲೆಯಲ್ಲಿ ಹೋಗುತ್ತದೆ. ಭೀಷ್ಮನನ್ನು ಕರೆದು ಮಗನೆ ಎಂದು ಸಂಬೋಧಿಸಿ 'ಮುನ್ನಿನ ಒರಟುತನ ಬೇಡ, ಧರಾಭಾರವನ್ನು ಕೈಕೊಳ್ಳು' ಎಂದು ಕೇಳಿಕೊಳ್ಳುತ್ತಾಳೆ. ಅಂದರೆ ಅರ್ಥ ರಾಜನಾಗಿ ಮದುವೆಯಾಗಿ ಮಕ್ಕಳನ್ನು ಪಡೆದು ವಂಶೋದ್ಧಾರವಾಡು ಎಂದು.

ಪ್ರಾಚೀನರಲ್ಲಿ ನಿಯೋಗ ಪದ್ಧತಿ ಎನ್ನುವುದು ಒಂದು ಇತ್ತೆಂಬುದು ಭಾರತೀಯ ತತ್ವಶಾಸ್ತ್ರದಿಂದ ವೇದ್ಯವಾಗುತ್ತದೆ. ಯಾವುದಾದರೂ ದಂಪತಿಗಳಲ್ಲಿ [ಇದು ಮೇಲು ವರ್ಗಕ್ಕೆ ಮಾತ್ರ ಸೀಮಿತವಾಗಿತ್ತೆಂದು ತೋರುತ್ತದೆ] ಮಕ್ಕಳು ಆಗದೆ ಗಂಡನು ಸತ್ತು ಹೋದರೆ ಆತನ ಅಣ್ಣನೋ ತಮ್ಮನೋ ಅವನ ಹೆಂಡತಿಯಲ್ಲಿ ಮಗುವನ್ನು ವಂಶೋದ್ಧಾರಕ್ಕೋಸ್ಕರ ಪಡೆಯಬಹುದಾಗಿತ್ತು. ಇಲ್ಲಿ ಸತ್ಯವತಿಯು ಭೀಷ್ಮನನ್ನು ಬೇಡಿಕೊಳ್ಳುವುದು ಆ ತೆರನಾದ ಪದ್ಧತಿಯನ್ನೇ ಅಥವಾ ವೇದವ್ಯಾಸರು ಸತ್ಯವತಿಯ ಮಗನಾದುದರಿಂದ ತಮ್ಮನ ಹೆಂಡತಿಯಿಂದ ಮಕ್ಕಳನ್ನು ಪಡೆಯುವುದೂ ಸಹ ನಿಯೋಗಪದ್ಧತಿ ಎನಿಸಿಕೊಳ್ಳುತ್ತದೆ.

ಸತ್ಯವತಿ ಹಾಗೂ ಭೀಷ್ಮರ ಆಲೋಚನೆಯಿಂದ, ಸ್ಮರಣೆಯಿಂದ ಕೃಷ್ಣ ದ್ವೈಪಾಯನರು ಬಂದು, ಸತ್ಯವತಿಯ ಒತ್ತಾಯಕ್ಕೆ ಮಣಿದು ಅಂಬಿಕೆ, ಅಂಬಾಲಿಕೆ ಹಾಗೂ ಸೇವಕಿಯಲ್ಲಿ ಕ್ರಮವಾಗಿ ಧೃತರಾಷ್ಟ್ರ, ಪಾಂಡುರಾಜ ಹಾಗೂ ವಿದುರನನ್ನು ಕರುಣಿಸಿ ಹೊರಟುಹೋಗುತ್ತಾರೆ. ಈ ಸನ್ನಿವೇಶದಲ್ಲಿಯೂ ಕಂಡುಬರುವುದು ಸತ್ಯವತಿಯ ಅವಸರ. ಮುನಿಗಳ ತಪಸ್ಸಿನ ಉಗ್ರರೂಪವನ್ನು ಸೊಸೆಯಂದಿರು ತಾಳಲಾರರು ಎಂದು ತಾನು ಅರಿತುಕೊಳ್ಳುವುದಿರಲಿ, ಸ್ವತಃ ಮುನಿಗಳೇ ಹೇಳಿದರೂ ಅವಳು ಅದನ್ನು ಮನಗಾಣದೆ ಒತ್ತಾಯದಿಂದ ಸೊಸೆಯಂದಿರನ್ನೂ ಮುನಿಗಳನ್ನೂ ಪ್ರೇರೇಪಿಸುತ್ತಾಳೆ. ತತ್ಫಲವಾಗಿ ಹುಟ್ಟುಕುರುಡ, ಬಿಳಿಚಿದವನು, ಬುದ್ಧಿವಂತನಾದರೂ ಸೇವಕಿಯ ಮಗನೆಂಬ ಪಾತ್ರಕ್ಕೆ ಕಾರಣನಾದವನು ಹುಟ್ಟುತ್ತಾನೆ. ಬಲುಬೇಗ ಮೊಮ್ಮಕ್ಕಳನ್ನು ಕಂಡು ಎತ್ತಿ ಮುದ್ದಾಡಬೇಕು ಎನ್ನುವ ಒತ್ತಾಸೆಯೇ ಸತ್ಯವತಿಯ ಈ ನಡತೆಗೆ ಕಾರಣವಾಯಿತೋ ಏನೋ. ಕೊನೆಯಲ್ಲಿ ಮಹಾಭಾರತದಲ್ಲಿ ತನ್ನ ಸೊಸೆಯಂದಿರ ಸಂಗಡ ತಪಸ್ಸಿಗೆ ಹೊರಟುಹೋದಳು, ಎಂದು ಉಕ್ತವಾಗಿದ್ದರೆ ಪಂಪನಲ್ಲಿ ಅವಳ ಬಗ್ಗೆ ಮುಂದೆ ಏನೂ ಬರುವುದೇ ಇಲ್ಲ. ಕಾಲಪ್ರಾಪ್ತವಾದಾಗ ಅವಳು ಮರಣಹೊಂದಿದಳು ಎಂದು ಸಹೃದಯರು ಅರಿತುಕೊಳ್ಳಲಿ ಎಂದು ಪಂಪ ಬಿಟ್ಟಿರಬೇಕು, ಬಿಟ್ಟಿದ್ದರಿಂದ ನಷ್ಟವೇನೂ ಆಗಿಲ್ಲ ಎನಿಸುತ್ತದೆ.

ಮಹಾಭಾರತವು ಗಾತ್ರದಲ್ಲಿ ಹಾಗೂ ಸತ್ವದಲ್ಲಿ ವಿಶಾಲವಾದ ಹಾಗೂ ವಿಸ್ತಾರವಾದ ಕೃತಿ. ಅಲ್ಲಿ ಕವಿಯು ಪಾತ್ರಗಳನ್ನು ಸಮುಚಿತ್ತದಿಂದ ಸುಮ್ಮನೆ ಮುಂದುವರಿಸುತ್ತಾ ಹೋಗುತ್ತಾನೆ. ಎಲ್ಲ ಪಾತ್ರಗಳ ಮೇಲೂ ಸೂಕ್ತ ಗಮನಕೊಡುವುದು ಸಾಧ್ಯವೂ ಇಲ್ಲ ಸಾಧುವೂ ಅಲ್ಲ. ಇಂತಹ ವಿಸ್ತಾರ ಕೃತಿಯನ್ನು ಸಂಗ್ರಹವಾಗಿ

ಕನ್ನಡಿಸ ಹೊರಟಾಗ ಯಾವುದೇ ಕವಿಯಾಗಲಿ ಚಿಕ್ಕಚಿಕ್ಕ ಪಾತ್ರಗಳನ್ನು ಚೊಕ್ಕವಾಗಿ ಶೋಭಿಸುವಂತೆ ಕಂಡಿರಿಸಬೇಕಾದದ್ದು ಆತನ ಕರ್ತವ್ಯ. ಆಗ ಆತ ಮೂಲದಲ್ಲಿ ಇಲ್ಲದ ಕೆಲವು ಕೋರಾ ಭಾವನೆಗಳನ್ನು ಕಂಡು ಭಾಷೆಯಲ್ಲಿ ಆಕರ್ಷಕವಾಗಿರುವಂತೆ ಕಾಣಿಸಬೇಕು. ಹಾಗೆ ಕಾಣಿಸುವಾಗ ಮಾತ್ರ ಮಹಾಭಾರತವೆಂಬ ದೊಡ್ಡ ತೆರೆಯ ಮೇಲೆಯೇ ತನ್ನತನವನ್ನು ಉಳಿಸಿಕೊಂಡು ವಿಶಿಷ್ಟತೆಯನ್ನು ಗುರುತಿಸಿಕೊಳ್ಳಬಲ್ಲ ಕವಿಯಾಗುತ್ತಾನೆ; ಅಪೂರ್ವವಾದ ಗಟ್ಟಿಮಾಲಾಗಿ ಸಾರ್ವಕಾಲಿವೆಂದನಿಸಿಕೊಳ್ಳುತ್ತಾನೆ. ಇಲ್ಲವಾದರೆ ಹತ್ತರೊಳಗೊಬ್ಬ ಎಂದು ಗಣನೆಗೆ ಸಿಕ್ಕದೆ ಹೋಗಿಬಿಡಬಹುದು. ಆದರೆ ಪಂಪ ಈ ಪ್ರಸಂಗದಲ್ಲಿ ಮೂಲವನ್ನೇ ಅನುಕರಿಸಿದ್ದರೂ ಖಾಸಗಿತನದ ಮುದ್ರೆಯನ್ನೊತ್ತಿ ವಿಶಿಷ್ಟತೆಯ ಚಲಾವಣೆಯನ್ನು ಕೊಟ್ಟು ಅಜರಾಮರತೆಯ ಸಾರ್ವಕಾಲಿಕತೆಯನ್ನು ಪಡೆದುಕೊಂಡಿದ್ದಾನೆ.

ಕೆಳದಿ ಇತಿಹಾಸದಲ್ಲಿ ಶರಜಾ ಮನೆತನ

ಕೆಳದಿ ಗುಂಡಾಜೋಯಿಸ್

ಕೆಳದಿ ಇತಿಹಾಸ ಕಥನದಲ್ಲಿ ಷರಜಾ, ಶರಜಾ, ಅಥವಾ ಸರ್ಜಾ ಎಂಬ ಹೆಸರಿನ ಹಲವು ಉಪನಾಮಗಳ ಉಲ್ಲೇಖಗಳು ದೊರಕುತ್ತವೆ. ಇವು ಬಿರುದೋ ಅಥವಾ ಮನೆತನದ ಸಂಕೇತವೋ ಎಂಬುದಾಗಿ ಸಂಶಯಕ್ಕೆ ಎಡೆಗೊಟ್ಟು ಭಿನ್ನಾಭಿಪ್ರಾಯವನ್ನುಂಟು ಮಾಡಿವೆ. ಕೆಳದಿನೃಪವಿಜಯಂದಲ್ಲಿನ ಅನೇಕ ಐತಿಹಾಸಿಕ ಸಂಗತಿಗಳು ಈ ಮನೆತನದ ಬಗ್ಗೆ ವಿಪುಲವಾಗಿ ಅಸ್ಪಷ್ಟವಾಗಿದ್ದರೂ ವಿಭಿನ್ನ ಮಾಹಿತಿಗಳನ್ನು ನಿರೂಪಿಸುತ್ತವೆ.

ಕೆಳದಿ ಇತಿಹಾಸದಲ್ಲಿ ಕಂಡುಬರುವಂತೆ ರಾಜ್ಯದಲ್ಲಿ ಗಲಭೆಗಳು, ಆಕ್ರಮಣಗಳು ಮತ್ತು ದಂಡಯಾತ್ರೆಗಳು ಸಂಭವಿಸಿದಾಗ, ಅರಸನು ತನ್ನ ರಾಜಕೀಯ ಚಾತುರ್ಯಗಳಿಂದ ಗೌರವಯುತವಾಗಿ ಸಂಧಿಮಾಡಿಕೊಳ್ಳಲು ಹಲವಾರು ನಿಯೋಗಿಗಳನ್ನು ಕಳಿಸಿರುವ ಸಂದರ್ಭಗಳು ಅಲ್ಲಲ್ಲಿಯೇ ಉಪಲಬ್ಧವಾಗಿವೆ. ಇಂತಹ ನಿಯೋಗಗಳಲ್ಲಿ ಪ್ರಮುಖರಾದವರು ತಮ್ಮ ವಾಕ್ಚಾತುರ್ಯಗಳಿಂದಲೂ, ರಾಜಕೀಯ ಚಾಣಾಕ್ಷತೆಗಳಿಂದಲೂ ರಾಜ್ಯಕ್ಕೆ ಒದಗಿದ್ದ ದುರ್ದೆಸೆಯನ್ನು ತಪ್ಪಿಸಿ ತಮ್ಮ ಸೇವೆಯನ್ನು ನಿಷ್ಠೆಯಿಂದ ಸಲ್ಲಿಸಿದ್ದಾರೆ. ಕೆಳದಿನೃಪವಿಜಯದಲ್ಲಿ ಲಿಂಗಣ್ಣ ಕವಿಯ ಉಲ್ಲೇಖವು ಹೀಗೆ ಹೇಳುತ್ತದೆ :[೧]

"...ಇಂತು ಸೋದೆ ಬಿಳಿಗಿಯವರ್ಪಾತು ಶಾಹನಂ ಕಿಮಿಗೆಡಿಸಿ ಹೇರಳವಾದ ತುರುಷ್ಕ ಸೈನ್ಯವನೊಡಗೊಂಡು ಬರಲುದ್ಯುಕ್ತರಾಗಿರ್ಪರೆಂಬ ವಾರ್ತೆಯಂ ವೀರಭದ್ರ ನಾಯಕಂ ಕೇಳ್ದು ರಾಯಸದ ಶಂಕರನಾರಣಯ್ಯನೆಂಬ ನಿಯೋಗಿಯಂ ವಿಜಾಪುರಕ್ಕೆ ಕಳುಹಿ ಮುರಾರಿಪಂತನೆಂಬ ಮಂತ್ರಿಯ ಮುಖದಿಂ ಪಾತುಶಾಹಂಗೆ ತಮ್ಮ ಸಂಸ್ಥಾನದ ಸಕಲ ಪೂರ್ವೋತ್ತರ ವೃತ್ತಾಂತಂಗಳಂ ತಿಳುಪಲ್ಕೇಳ್ದು ಪರಮ ಪರಿತೋಷಂಬಿಟ್ಟು ಸೈನ್ಯಮಂ ಕೆರಳ್ಚುವ ಬುದ್ಧಿಯಂ ಮಾಣ್ದು ಸೋದೆ ಬಿಳಿಗಿಯವರ್ಕಹಕಿಗಳ್ತಮ್ಮ ಪರಿಸ್ತರಣಂಗಳ್ಪೋದ ಸಂಕಟಕ್ಕೋಸುಗಂದು ಬೋರ್ಧೆಯಂ ಬೋಧಿ-

---

೧. ದಿ. ೧೬–೧೦–೧೯೭೩ ರಂದು ವಿದ್ವಾನ್ ಸುರತ್ಕಲ್ ವೆಂಕಟರಾಯಾಚಾರ್ಯರು ಕೆಳದಿ ಮ್ಯೂಜಿಯಂಗೆ ಭೇಟಿ ನೀಡಿದಾಗ ಶರಜಾ ಮನೆತನದ ಬಗ್ಗೆ ತಾವು ಸಂಪಾದಿಸಿದ ಶರಜಾ ನಾಗಮಂತ್ರೀಶ ವಿರಚಿತ ಶುಕಸಪ್ತತಿ ಗ್ರಂಥದಲ್ಲಿ ಅಳವಡಿಸಲು ವಿಚಾರಪ್ರಚೋದನೆಯನ್ನುಂಟುಮಾಡಿದ ರಿಂದ ಈ ಲೇಖನ ಬರೆಯಲು ಕಾರಣವಾಯಿತು.

ಸುತಿರ್ಪರಿಕ್ಕೇರಿಯ ದೊರೆತನಕ್ಕೆ ವೀರಭದ್ರನಾಯಕನೆ ಸಲ್ವನೆಂಬುದಂ ದೃಢಮಾಗಿ ನಿರ್ಧರಿಸಿ ರಾಯಸದ ಶಂಕರ ನಾರಾಯಣಯ್ಯಂಗೆ ಶರಜಾರಾಯನೆಂದು ಪೆಸರಿತ್ತು ಚಿತಮಾದುಡುಗೊರೆ ವೀಳ್ಯಂಗಳನಿತ್ತು..."

(ಕೆ. ನೃ. ವಿ. ೯೭)

ಕ್ರಿ.ಶ. ೧೬೨೯ ರಿಂದ ೧೬೪೪ ರ ವರೆಗೆ ಆಳಿದ ವೀರಭದ್ರನಾಯಕನ ಕಾಲದಲ್ಲಿ ಇಕ್ಕೇರಿಯು ವಿಜಾಪುರದ ನವಾಬನ ಸೈನ್ಯವನ್ನು ಎದುರಿಸುವ ಸನ್ನಿವೇಶ ಒದಗಿತು. ಅರಮನೆಯ ಅಂತಃಕಲಹಗಳಿಂದಲೂ ರಾಜ್ಯದಲ್ಲಿ ಹದಗೆಟ್ಟಿರುವ ವಾತಾವರಣಗಳಿಂ-ದಲೂ ಕಲುಷಿತಗೊಂಡಿದ್ದ ವೀರಭದ್ರನಾಯಕನಿಗೆ ಅನ್ಯಮಾರ್ಗವೇ ಗೋಚರಿಸದೆ ಸಾಮೋಪಾಯಗಳಿಂದ ನವಾಬನ ಸೈನ್ಯವನ್ನು ಹಿಂತಿರುಗಿಸಲು ಆಲೋಚಿಸಿ ಶಂಕರ-ನಾರಾಯಣನೆಂಬ ನಿಯೋಗಿಯನ್ನು ವಿಜಾಪುರಕ್ಕೆ ಕಳುಹಿಸಿದನು. ಈ ನಿಯೋಗಿಯು ತನ್ನ ವಕೀಲಿ ಸಾಮರ್ಥ್ಯದ ಚಾತುರ್ಯದಿಂದ ವಿಜಾಪುರದ ಮುಖ್ಯಮಂತ್ರಿ ಮುರಾರಿ ಪಂತನ ಮೂಲಕವಾಗಿ ಸಂಧಾನವನ್ನು ಕೈಗೊಂಡು ನವಾಬನಿಗೆ ಉಂಟಾದ ಸಂದೇಹ ಗಳೆಲ್ಲವನ್ನೂ ನಿವಾರಿಸಿ, ಇಕ್ಕೇರಿ ಅರಸನಲ್ಲಿ ಆತನಿಗೆ ವಿಶ್ವಾಸಹುಟ್ಟುವಂತೆ ಮಾಡಿ ದನು. ಇದರಿಂದ ಸಂತೋಷಗೊಂಡ ನವಾಬನು ಶಂಕರನಾರಾಯಣಯ್ಯಂಗೆ ಶರಜಾ-ರಾಯ[೧] ಎಂದು ಹೆಸರಿಟ್ಟು ಉಚಿತ ಉಡುಗೊರೆಗಳನ್ನಿತ್ತು ಸನ್ಮಾನಿಸಿದನು. ಅದೇ ವೀರಭದ್ರನಾಯಕನ ಕಾಲದಲ್ಲಿ ಲಿಂಗಣ್ಣ ಕವಿಯೇ ಉಲ್ಲೇಖಿಸಿರುವಂತೆ–

"ಮುಸ್ತಾಫಖಾನನ ಕೂಡ ಪರಿಮಿತ ಸೈನ್ಯಮಂ ಕೂಡಿಸಿ ತೆರಳ್ಚಲವಂ ಪಡೆವೆರ-ಸೆಳ್ತಂದು ಕಳವೂರ ಬಯಲ್ಗೈತಂದು ನಿಲಲ್ ಬಳಿಕ್ಕಂ ನಿಯೋಗಿ **ಶರಜಾರಾಯನಂ** ಪ್ರಯಾಣವನೋಡರ್ಚಿಸಿ ಕಳುಹಿ ಶಿವಪ್ಪನಾಯಕನ ಮುಖದಿಂ ಸಮರ ಸಂಧಾ-ವನೊಡರ್ಚಿಸಿ ಪಾತುಶಾಹನಂ ಪಿಂದೆಗೆಸಿ ರಾಜ್ಯಂಗೈಯುತ್ತು...."

(ಕೆ. ನೃ. ವಿ. ೧೩೩)

ಇದು ನಿಯೋಗಿ ಶರಜಾರಾಯನನ್ನು ಕಳುಹಿಸಿ ಶಿವಪ್ಪನಾಯಕನ ಮುಖದಿಂದ ಸಮರಸಂಧಾನವನ್ನು ವೀರಭದ್ರನಾಯಕನು ಏರ್ಪಡಿಸಿದುದನ್ನು ಕುರಿತು ನಿರೂಪಿಸ-ಲ್ಪಟ್ಟಿದೆ.

ವೀರಭದ್ರನಾಯಕನ ಕಾಲದಲ್ಲಿ ಬದುಕುಮಾಡಿದ ಶರಜಾ ವೆಂಕಟಪಯ್ಯನು ಯಾರು ಎಂಬುದಂ ಮತ್ತು ಈತನ ಸಂಗತಿಯ ವಿವರಗಳು ಪ್ರಸ್ತಾಪಿಸಲ್ಪಟ್ಟಿರುವುದಿಲ್ಲ.

ಕ್ರಿ. ಶ. ೧೬೪೬ ರಿಂದ ೧೬೬೧ ರ ವರೆಗೆ ಆಳಿದ ಶಿವಪ್ಪನಾಯಕನ ಕಾಲದಲ್ಲಿ ಸರಜಾ ಶಂಕರನಾರಾಯಣಯ್ಯ, ಶರಜಾರಾಯ ಮತ್ತು ಶರಜಾ ವೆಂಕಟಪಯ್ಯ ಎಂಬು ದಾಗಿ ಮೂವರ ಹೆಸರುಗಳು ಕಾಣಸಿಗುತ್ತವೆ.

---

೧. ಇ. ಸಂ. ಚರಿತ್ರೆಯಲ್ಲಿ ಶಂಕರನಾರಣಯ್ಯನಿಗೆ 'ಷರಜಾ' ಎಂಬ ಬಿರುದನ್ನೂ ಬಿಲ್ಲತ್ತನ್ನೂ ಕೊಟ್ಟು ಎಂದಿದೆ. ಡಾ. ಸ್ವಾಮಿನಾಥನ್‌ರವರ 'Nayakas of Ikkeri' ಯಲ್ಲಿ ವಿಜಾಪುರದ ಸುಲ್ತಾನನು 'ಸರಜಾರಾಜ' ಎಂಬ ಬಿರುದನ್ನಿತ್ತನೆಂದು ಹೇಳಿದೆ. ಪುಟ. 72.

ಕ್ರಿ.ಶ. ೧೬೬೪ ರಿಂದ ೧೬೭೨ ರ ವರೆಗೆ ಆಳಿದ ಹಿರಿಯ ಸೋಮಶೇಖರನಾಯ-ಕನ ಕಾಲದಲ್ಲಿ ಬದುಕುಮಾಡಿದವರಲ್ಲಿ ಶರಜಾ ಶಂಕರನಾರಾಯಣಯ್ಯನೂ ಕಂಡು ಬರುತ್ತಾನೆ.[೩] ಷರಜಾ ಶಂಕರನಾರಾಯಣಯ್ಯನನ್ನು ಜರಿಮಲೆಯ ಪಾಳೆಯಗಾರ-ನನ್ನು ಸೋಲಿಸಲು ಆತನ ಮುಂದಾಳತ್ವದಲ್ಲಿ ಚೆನ್ನಮ್ಮಾಜಿಯು ಕಳುಹಿಸಿರುವುದು ಇಕ್ಕೇರಿ ಸಂಸ್ಥಾನದ ಚರಿತ್ರೆಯಿಂದ ಕಂಡುಬರುತ್ತ .[೪]

ಕ್ರಿ.ಶ ೧೬೭೨ ರಿಂದ ೧೬೯೭ ರ ವರೆಗೆ ಆಳಿದ ಚೆನ್ನಮ್ಮಾಜಿಯ ಕಾಲದಲ್ಲಿ ಶರಜಾ ನಾಗಪ್ಪಯ್ಯ, ಶರಜಾ ಶಂಕರನಾರಣಯ್ಯ, ಶರಜಾ ತಿರುಮಲಯ್ಯ, ಶರಜಾ-ರಾಯನ ಮಗ ತಿರುಮಲಯ್ಯ ಎಂಬುದಾಗಿ ನಾಲ್ವರು ಹೆಸರುಗಳು ಕಂಡುಬರುತ್ತವೆ.[೫] ಚೆನ್ನಮ್ಮಾಜಿಯು ಮಹಾರಾಷ್ಟ್ರದ ರಾಜಾರಾಮನನ್ನು ರಕ್ಷಿಸಲು ದಿಲ್ಲಿಯ ಔರಂಗಜೇಬನ ಕಡೆಯಿಂದ ಬಂದ ಸೇನಾಪತಿ ರಣಮಸ್ತಖಾನ ಮತ್ತು ಅಬ್ದುಲ್ಲಾಖಾನ ಮೊದಲಾದ ಮೊಗಲ್ ವಜೀರರಿಗೆ ಗೌರವಯುತವಾಗಿ ಕಾಗದ ಬರೆಯಿಸಿ ರಾಜಾರಾಮನು ಬಿಟ್ಟು ಹೋದ ವಸ್ತ್ರಭೂಷಣ, ಕುದುರೆ ಮೊದಲಾದುವು ನಮ್ಮಲ್ಲಿವೆ ತೆಗೆದುಕೊಳ್ಳಬಹುದು ಎಂಬುದಾಗಿ ತಿಳಿಸಿ, ಅದನ್ನು ರಾಜಾರಾಮನ ವಸ್ತ್ರಭೂಷಣಾದಿಗಳನ್ನೂ ಸಂಸ್ಥಾನದ ವಜೀರರಾದ ರುಪ್ಪಾಜಿ ಭೌಸಲೆ, ಸಂತಾಜಿ ಜಿಗದಾಬ, ಮಾನೋಜಿ ಮೋರಾ, **ಷರಜಾ ರಾವ್** ಎಂಬ ಈ ನಾಲ್ವರ ಮೂಲಕ ಔರಂಗಜೇಬನ ಸನಿಹಕ್ಕೆ ನಿಯೋಗ ಕಳುಹಿಸಿ-ರುವುದು ಕಂಡುಬರುತ್ತದೆ.[೬] ಮಗುದೊಂವೆಡೆಯಲ್ಲಿ—

"ಜರಿಮಲೆಯರಸನ ಪ್ರತಾಪಾತಿಶಯಮಂ ಕೇಳ್ದು ಸಬ್ಬನೀಸ ಶರಜಾ ಶಂಕರ ನಾರಾಯಣಯ್ಯನಂ ಕರೆಳ್ಚಿ ಕಳುಹಿ..........." (ಕೆ.ನೃ.ವಿ. ೧೩೫)

ಇಲ್ಲಿ ಸಬ್ಬನೀಸ ಮತ್ತು ಶರಜಾ ಶಂಕರನಾರಾಯಣಯ್ಯ ಎಂಬುದಾಗಿ ಇಬ್ಬರು ದೊರಕುತ್ತಾರೆ.

ಕ್ರಿ. ಶ. ೧೬೯೭ ರಿಂದ ೧೭೧೪ ರ ವರೆಗೆ ಆಳಿದ ಹಿರಿಯ ಬಸಪ್ಪನಾಯಕನ ಕಾಲದಲ್ಲಿ ಶರಜಾ ಹೂವಯ್ಯ, ಶರಜಾ ತಿರುಮಲಯ್ಯ, ಶರಜಾ ವೆಂಕಟಯ್ಯ, ಶರಜಾ ನಾಗಪ್ಪಯ್ಯ ಈ ನಾಲ್ವರು ಕಾಣಸಿಗುತ್ತಾರೆ.[೭]

ಕ್ರಿ. ಶ. ೧೬೯೭ ರಿಂದ ೧೭೧೪ ರ ವರೆಗೆ ಆಳಿದ ಹಿರಿಯ ಬಸಪ್ಪನಾಯಕನ ಕಾಲದಲ್ಲಿ ಲಿಂಗಣ್ಣನೇ ನಿರೂಪಿಸಿದಂತೆ—

---

೩. ಕೆ.ನೃ.ವಿ. ೧೩೦

೪. ಇ. ಸಂ. ಚ. p 113.

೫. ಕೆ.ನೃ.ವಿ. ೧೩೦

೬. ಇ.ಸಂ.ಚ. (op. cit. p. 116)

೭. ಕೆ.ನೃ.ವಿ. ೧೭೭

I. “ಅಂದೆಂತೆಂದೊಡಾ ಬಸವಪ್ಪನಾಯಕಂ ತಮ್ಮ ತಂದೆ ಮರಿಯಪ್ಪ ಸೆಟ್ಟರ್, ಪೋನಪ್ಪಸೆಟ್ಟರ ಪುತ್ರ ನಿರ್ವಾಣಯ್ಯನವರ್, ತದನುಜ ಗುರುಪಪ್ಪನವರ್, ಪ್ರಧಾನಿ ಗುರುಬಸವಪ್ಪದೇವರ್, ಗರಜಿನ ಶಾಂತಪ್ಪೊಡೆಯರ್, ಸಬ್ಬನಿಸ ಕೊಳಿವಾಡದ ಬೊಮ್ಮರಸಯ್ಯ, **ಶರಜಾ ಹೂವಯ್ಯ,** ಚಿಟನಿಸ ಭೈರಯ್ಯ,ಗಾಜನೂರ ಯಲ್ಲಪ್ಪಯ್ಯ, ಆ ಲಕ್ಷ್ಮಯ್ಯ, ಹೊನ್ನಾಳಿ ಸುಬ್ಬಯ್ಯ, ಪಟ್ಟಿಯ ಸೇನಬೋವ ರಂಗಪ್ಪಯ್ಯ, ಕೋಳಾಲದ ವೆಂಕಟೇಶಯ್ಯ, ನಲ್ಲೂರ ಲಕ್ಷ್ಮೀಪತಯ್ಯ, ಆ ವೆಂಕಪ್ಪಯ್ಯ, ರಾಯಸದ ಅಶ್ವತ್ಥಯ್ಯ, **ಶರಜಾ ನರಸಪ್ಪಯ್ಯ,**[೮] ಚನ್ನಪ್ಪಯ್ಯ, ಆ ನಾಗಪ್ಪಯ್ಯ, ವೆಂಕಟಯ್ಯ, ಚಿಕ್ಕತಿಮ್ಮಯ್ಯನ ಕೂಸಪ್ಪಯ್ಯ ಮುಂತಾದ ಮಂತ್ರಿ ಸಾಮಾಜಿಕ ನಿಯೋಗಿ ಗುರಿಕಾರ–ಜನವೆರ್ಗರಸು....”

(ಕೆ.ನೃ.ವಿ. ೧೭೧)

II. “ಉಭಯ ಸಂಸ್ಥಾನಗಳೂವಂನ್ಯೋನ್ಯ ವಿರೋಧಂ ಪುಟ್ಟಿ ವರ್ತಿಸದಂತು ನಿಯೋಗಿ **ಶರಜಾ ನಾಗಪ್ಪಯ್ಯನ** ಮುಖದೊಳ್ಕ್ರಿಯಾಪೂರ್ವಕವಾಗಿ ಭಾಷಾ ಪತ್ರಿಕಯಂ ರಚಿಯಿಸಿ ನಿರ್ವೈರವಂ ನಿರ್ಮಿಸಿದನಂತುಮಲ್ಲದೆಯುಂ..........”

ಹೀಗೆ ಹಿರಿಯ ಬಸಪ್ಪನಾಯಕನ ಕಾಲದಲ್ಲಿ **ಶರಜಾ ತಿರುಮಲಯ್ಯ, ಶರಜಾ ವೆಂಕಟಯ್ಯ** ಇವರು ಬದುಕುಮಾಡಿದವರ ಸಾಲಿನಲ್ಲೂ ಉಳಿದವರು ಮೇಲ್ಕಂ–ಡಂತೆಯೂ ಕಾಣಸಿಗುತ್ತಾರೆ.[೯] II ನೇ ಕಲಂನಲ್ಲಿ ಕಾಣುವಂತೆ “ಭಾಷಾಪತ್ರಿಕೆಯಂ ರಚಿಯಿಸಿ” ಎಂಬುದು ಗಮನಾರ್ಹವಾಗಿಯೂ ಕುತೂಹಲಕರವಾಗಿಯೂ ಇದೆ.

ಕ್ರಿ. ಶ. ೧೭೧೫ ರಿಂದ ೧೭೪೦ ರ ವರೆಗೆ ಆಳಿದ ಇಮ್ಮಡಿ (೨ ನೇ) ಸೋಮ–ಶೇಖರನಾಯಕನ ಕಾಲದಲ್ಲಿ—

“ತರೀಕೆರೆಯ ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದ ಕಾಪಿನಾಯಕ, ಬುಳ್ಳನಾಯಕ, ಕೆಂಗಾನಾಯಕ, ರಡ್ಡಿ ಹನುಮಪ್ಪನಾಯಕ, ಕುಂಟ ಹನುಮಪ್ಪನಾಯಕ, ಇಮ್ಮಡಿ ಹನುಮಪ್ಪನಾಯಕ, ನಿಚ್ಚಮದುವಣಿಗ ಹನುಮಪ್ಪನಾಯಕ, **ಶರಜಾ ಹನುಮಪ್ಪ ನಾಯಕ**...........” (ಕೆ.ನೃ.ವಿ. ೪೪)

ಶೃಂಗಪುರ ಸ್ವಾಮಿಗಳು
ಶೃಂಗಮಠಕ್ಕಧಿಕವಾದ ಋಣವಾಗಿರೆ ಕ
ತ್ಸಂಗತಿಯಂ ಕೇಳ್ದಲ್ಲಿಗೆ
ಪಿಂಗದೆ ಶರಜಾಖ್ಯ ವೆಂಕಟಯ್ಯನನೊಲಿವಿಂ ॥ ೪೫ ॥

---

೮. ಇದು ಬದುಕುಮಾಡಿದವರ ಸಾಲಿನಲ್ಲಿ ‘ಆ ನರಸಪ್ಪಯ್ಯ’ ಎಂದಿದೆ.

೯(a) ಕೆ.ನೃ.ವಿ. ೧೭೭

೯(b) Ultimately, hospilities ended with conclusion of an advantages peace by Basavappa Nayaka with Mysore through Niyogi Saraja Naga–ppaya by means of a deed of assurance in about 1700.N. I. P, 127.

ಇಲ್ಲಿ 'ಶರಜಾ' ಎಂಬ ಉಪನಾಮವು ತರೀಕೆರೆಯ ಹನುಮಪ್ಪ ನಾಯಕನಿಗೆ ಉಪಲಬ್ಧವಾಗಿದೆ, ಹಾಗೂ ೪೫ ನೆಯ ಪದ್ಯದಲ್ಲಿ ಕಾಣುವ ಶರಜಾಖ್ಯ ವೆಂಕಟಯ್ಯನು ಬಮಕುಮಾಡಿದವರ ಸಾಲಿನಲ್ಲಿ ಕಂಡುಬರುವುದಿಲ್ಲ.

ಮಾನ್ಯ ವಿದ್ವಾನ್ ಸುರತ್ಕಲ್ ವೆಂಕಟರಾಯಾಚಾರ್ಯರು ವ್ಯಕ್ತಪಡಿಸಿರುವಂತೆ ಒಬ್ಬ ರಾಜನ ಆಳ್ವಿಕೆಯಲ್ಲಿ ಹಲವರಿಗೆ ಈ ಉಪಾಧಿಯಿರುವುದೂ ಹಾಗೂ ಹಲವರ ವಂಶಗಳು ಏಕ ಮತ್ತು ವಿಭಿನ್ನವಿರುವುದೂ ಪ್ರಾಯಶಃ ವಿಂಗಡಿಸಲು ಅವಕಾಶ ವನ್ನೀಯುತ್ತವೆ. ಕೆಳದಿ ಇತಿಹಾಸ ಕಥನದ ಸಂಗತಿಯಲ್ಲಿ ಕಂಡುಬರುವ ಹಲವು ಶರಜಾ ಎಂಬ ಹೆಸರಿನವರನ್ನು ಆಯಾ ಅರಸರು ಮತ್ತು ಕಾಲಾನುಗುಣವಾಗಿ ಅನುಬಂಧದಲ್ಲಿ ಕಂಡಂತೆ ವಿಂಗಡಿಸಬಹುದಾಗಿದೆ. ಇಲ್ಲಿ ಕಾಣುವ ಕಾಲಕವರ್ಷಾದಿ ಗಳಿಂದ ಶರಜಾ ಮನೆತನದ ಹಲವರು ವಿಭಿನ್ನ ಅರಸರ ಕಾಲಗಳಲ್ಲಿ ಜೀವಿಸಿರು ವುದನ್ನೂ ಗಮನಿಸಬಹುದಾಗಿದೆ.

ಈಚೆಗೆ ಶರಜಾ ನಾಗಮಂತ್ರೀಶ ವಿರಚಿತ "ಶುಕಸಪ್ತತಿ" ಕಾವ್ಯದ ತಾಳೇಗರಿಯ ಪ್ರತಿಗಳು ದೊರಕಿದ ಮೇಲೆ ಈ ಮನೆತನವನ್ನು ಕುರಿತು ಲೇಖನಗಳೂ ಹಾಗೂ ತರ್ಕವಿತರ್ಕಗಳೂ ಎದ್ದಿವೆ.[೧೦] 'ಶರಜಾ' ಎಂಬ ಪದದ ಅರ್ಥವ್ಯಾಪ್ತಿಯ ಜಿಜ್ಞಾಸೆ ಯುಂಟಾಗಿ ಇದು ಪರ್ಷಿಯನ್‌ದಲ್ಲಿ ಭಯಂಕರ ಪ್ರಾಣಿ ಅಥವಾ ಸಿಂಹ ಎಂಬು-ದಾಗಿಯೂ[೧೧] ಐತಿಹಾಸಿಕ ಅರ್ಥವ್ಯಾಪ್ತಿಯಲ್ಲಿ 'ಸರದಾರ'ನೆಂಬುದಾಗಿಯೂ[೧೨] ಹಲವು ಆಧಾರಾಂಶಗಳಿಂದ ವಿದ್ವಾಂಸರು ಸಿದ್ಧಮಾಡಿದ್ದಾರೆ. 'ಶರಜಾ' ಮನೆತನ ದವನಾದ ನಾಗಮಂತ್ರೀಶನ ಮನೆದೇವರು ಶಂಕರನಾರಾಯಣನೆಂದೂ ಉಲ್ಲೇಖಿಸ ಲ್ಪಟ್ಟಿದೆ, ಕೊಲ್ಲೂರು ಶ್ರೀ ಮೂಕಾಂಬೆಯನ್ನೂ ಇವನು ಸ್ಮರಿಸಿರುವುದು ಕಂಡು ಬರುತ್ತದೆ.

ಕೆಳದಿ ಇತಿಹಾಸ ಕಥನದಲ್ಲಿ ಕಂಡುಬರುವ ಅರಸರ ಅನೇಕ ಸಮಕಾಲೀನ ರಾಯಭಾರಿಗಳು, ನಿಯೋಗಿಗಳು ಹಲವಾರು ವಿಧಗಳಲ್ಲಿ ರಾಜ್ಯಕ್ಕೆ ಸೇವೆಯನ್ನ ಸಗಿದ್ದಾರೆ. ಅವರಲ್ಲಿ ವಿಠುಲ ಸಿನಾಯಿ (Vithula Sinay), ರಾಮ ಪೈ, ರಾಮಪ್ಪ, ನಾರಾಯಣ ಪ್ರಭು, ದಾಮರಸ ಪ್ರಭು, ಮಲ್ಲಪ್ಪ ಮಾಳೆ (Mallappa Maloe), ದೇವರಸ ಶೆಣ್ಯೆ[೧೩], ಪುರುಷೋತ್ತಮಯ್ಯ ಹಾಗೂ ಕೆಳದಿನೃಪವಿಜಯದಲ್ಲಿ ಕಂಡು

೧೦(a) ಕರ್ನಾಟಕ ಭಾರತಿ, ಸಂಪುಟ ೧, ಸಂ. ೧, ಕರ್ನಾಟಕ ವಿಶ್ವವಿದ್ಯಾಲಯ. ಪು. ೧೨೬.
(b) " " ೨ " ೧. " ಪು. ೧೮೭
(c) " " ೩ ೨ " ಪು. ೧೫
(d) ನವಯುಗ (ಧರ್ಮಸ್ಥಳ ಧರ್ಮ–ಸಾಹಿತ್ಯ ಸಮ್ಮೇಳನ ಪುರವಣಿ ೧೯೭೩) ಪು. ೧೨.
೧೧ ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ. (ಡಾ. ಸಾ. ಶಿ. ಮ.) ಪು. ೨೨.
೧೨ ನವಯುಗ (op. cit. ಪುಟಗಳು ೧೨)
೧೩. ಕೆಳದಿ ಅರಸರು ಹಾಗೂ ಪೋರ್ತುಗೀಜರು (ಡಾ. ಬಿ. ಕೆ. ಶಾಸ್ತ್ರೀ, ಗೋವಾ) ಪು. 74.

ಬರುವ ಹಲವಾರು ಪ್ರಮುಖರೂ ಖ್ಯಾತನಾಮರಾಗಿದ್ದಾರೆ, ಇವರಲ್ಲಿ ಅನೇಕರು ರಾಜನೀತಿತಜ್ಞರೂ ಭಾರತೀಯ ಸಂಸ್ಕೃತಿಯ ಹಿತಚಿಂತಕರೂ ಆಗಿದ್ದು, ಸೇವೆ ಸಲ್ಲಿಸಿ ತಮ್ಮ ರಾಜಕೀಯ ಚಾಣಾಕ್ಷತೆಗೆ ಉದಾತ್ತ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ, ಹೀಗೆಯೇ ಇತರ ಪ್ರಾಂತ್ಯದ ಮರ್ತಿನ್ಸ್ (Merthinsh), ಪೇರು–ಪಿಂತುದೇ ಮೋಲ್ಲು ಮುಂತಾದವರು ಮಧ್ಯಸ್ಥಿಕೆ ಅಥವಾ ರಾಯಭಾರಿಗಳಾಗಿದ್ದುದು ಇತಿಹಾಸದಲ್ಲಿ ಕಂಡುಬರುತ್ತದೆ. ರಾಜ್ಯದ ಹಿತಚಿಂತನೆಯನ್ನೇ ಧ್ಯೇಯೋದ್ದೇಶವನ್ನಾಗಿಟ್ಟುಕೊಂಡ ಇಂತಹ ಹಲವರ ಚಟುವಟಿಕೆಗಳು ವಿಶಿಷ್ಟರೀತಿಯಲ್ಲಿ ಕಾರ್ಯವನ್ನು ಸಾಧಿಸಿಕೊಟ್ಟಿವೆ. ಕೆಳದಿ ಇತಿಹಾಸದಲ್ಲಿ ಇಂತಹ ಸಾಧನೆಗಳ ಮಾಲೆಯಲ್ಲಿ 'ಶರಜಾ' ಮನೆತನವೂ ಒಂದೆಂಬುದು ಸುವೇದ್ಯವಾಗಿದೆ. ಇವರು ನಿಯೋಗಿಗಳೋ ಅಥವಾ ಮಂತ್ರಿಗಳಾಗಿದ್ದರೋ ಎಂಬುದನ್ನು ಸಾಧಾರಗಳಿಂದ ಸಿದ್ಧಪಡಿಸಬೇಕಾಗಿದೆ.[೧೪]

ಆಧಾರ ಗ್ರಂಥಗಳು

೧. ಕೆಳದಿನೃಪವಿಜಯ (ಲಿಂಗಣ್ಣ ಕವಿ)

೨. ಇಕ್ಕೇರಿ ಸಂಸ್ಥಾನದ ಚರಿತ್ರೆ—ಎಂ. ಎಸ್. ಪುಟ್ಟಣ್ಣ.

೩. Nayakas of Ikkeri[೧೫], By Dr. K. D. Swaminathan.

೪. ಕೆಳದಿಯ ಅರಸರು ಹಾಗೂ ಪೋರ್ತುಗೀಜರು. ಡಾ. ಬಿ. ಕೆ. ಶಾಸ್ತ್ರೀ, ಗೋವಾ.

೫. ಶುಕಸಪ್ತತಿ-ಶರಜಾ ನಾಗಮಂತ್ರೀಶ ವಿರಚಿತ.
(ವಿದ್ವಾನ್ ಸುರತ್ಕಲ್ ವೆಂಕಟರಾಯಾಚಾರ್ಯ)

೬. ನವಯುಗ (ಧರ್ಮಸ್ಥಳದ ಧರ್ಮ–ಸಾಹಿತ್ಯ ಸಮ್ಮೇಳನ 1973, ಪುರವಣಿ.)

---

೧೪. ಸರಜಾ ಮನೆತನದವರೆಂದು ಹೇಳಲಾದ ಹಲವರು ಶಿವಮೊಗ್ಗ, ಬೆಂಗಳೂರು, ಹಿರೇಸರ (ತೀರ್ಥಹಳ್ಳಿ) ಮುಂತಾದ ಕಡೆಗಳಲ್ಲಿದ್ದಾರೆ. (ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ ಪುಟ 227)—ಇವರಲ್ಲಿ ಮಾಹಿತಿ ಪಡೆಯಲು ಈ ವರೆಗೆ ನಡೆಸಿದ ನನ್ನ ಪ್ರಯತ್ನಗಳು ಸಫಲವಾಗಿಲ್ಲ.

೧೫. ಇದು ಅನೇಕ ಲೋಪದೋಷಗಳಿಂದ ಕೂಡಿದ್ದು ನಂಬಲರ್ಹವಾಗಿಲ್ಲವೆಂದು ಡಾ. ಗಾಯಿ-ಯವರು ಹೇಳಿದ್ದಾರೆ. (ಮಾನವಿಕ ಕರ್ಣಾಟಕ ಸಂ. ೧, ಸಂ. ೧, ಪು. ೧೦೦) ಇವನ್ನು ಗೋವಾದ ಡಾ. ಬಿ. ಕೆ. ಶಾಸ್ತ್ರಿಯವರು "ಕೆಳದಿಯ ಅರಸರು ಹಾಗೂ ಪೋರ್ತುಗೀಜರು" ಎಂಬ ಪುಸ್ತಕದಲ್ಲಿ ಸ್ಥಿರೀಕರಿಸಿದ್ದಾರೆ. ಹಾಗೂ ಪೂನಾದ ಡಾ. ಚಿಟ್ನೀಸ್‌ರವರು 1969 ರಲ್ಲಿ ಶಿವಮೊಗ್ಗದಲ್ಲಿ ನಡೆದ ಕೆಳದಿ ಇತಿಹಾಸ ಸಮ್ಮೇಳನದಲ್ಲಿ ಸಾಧಾರಗಳೊಡನೆ ವಿವೇಚಿಸಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಕೆಳದಿ ಇತಿಹಾಸವು ಸಮಗ್ರ ಸಾಧಾರಾಂಶಗಳಿಂದ ಸಂಶೋಧನೆ ನಡೆಸಿ ಪ್ರಕಟವಾಗುವವರೆಗೆ ಇದನ್ನು ಸತ್ಯಕ್ಕೆ ಒಪ್ಪಿಕೊಳ್ಳದೇ ವಿಧಿಯಿಲ್ಲದಂತಾಗಿದೆ.

ಶೇಖರ ನಾಯಕ ಕ್ರಿ. ಶ. 1715–1740		—	ವೆಂಕಟಯ್ಯ KNV P. 183	—	—	—	—	ಮುಪ್ಪ ನಾಯಕನೆಂಬವನು ತರೀಕೆರೆ ಸಂಸ್ಥಾನ ಆಳಿದ್ದು ಕಂಡುಬರುತ್ತದೆ. **KNV. P. 183**

* ಈ ಗುರುತು ಮಾಡಿದವರ ಹೆಸರುಗಳು **KNV** ಯಲ್ಲಿ ಬದುಕುಮಾಡಿದವರ ಪಂಕ್ತಿಯಲ್ಲಿ ಮಾತ್ರ ಉಲ್ಲೇಖವಾಗಿವೆ. ಇವರ ಕಾರ್ಯವ್ಯಾಪ್ತಿ ಮತ್ತು ಚಟುವಟಿಕೆಗಳ ಸಂಗತಿಗಳು ಕಾಣಸಿಗುವುದಿಲ್ಲ.

1. ಇ.ಸ.ಚ.ಯಲ್ಲಿ ಈತನ ಕಾರ್ಯಚಟುವಟಿಕೆಗಳ ಸಂಗತಿಗಳು ದೊರಕುತ್ತವೆ. **KNV** ಯಲ್ಲಿ ಬದುಕುಮಾಡಿದವರ ಸಾಲಿನಲ್ಲಿದೆ.
2. ತಿರುಮಲಯ್ಯನು ಶರಜಾರಾಯನ ಮಗ ಎಂದಿರುವುದು ಕುತೂಹಲವುಂಟು ಮಾಡಿದೆ. ಈತನು ಶರಜಾ ಶಂಕರನಾರಾಯಣಯ್ಯನ ಮಗನೆ ? ಇಬ್ಬರೂ ಒಂದೇಕಾಲದಲ್ಲಿ ಜೀವಿಸಿದ್ದರೆ ?
3. ಇದೂ ಇರಬಹುದೆ ?

ಶ್ರೀ ಸರ್ಜಾ ಚಂದ್ರಶೇಖರಯ್ಯನವರು ಕರ್ನಾಟಕ ಭಾರತಿಯಲ್ಲಿ ಹೇಳಿದ ತಮ್ಮ ಮುತ್ತಜ್ಜನವರು ಇದರಲ್ಲಿ ಯಾರ ತಲೆಮಾರಿಗೆ ಸೇರಿದವರೆಂಬುದು ತಿಳಿದುಬಂದಿಲ್ಲ.

೭. Gezetteer, By Hayavadan Rao.

೮. (a) ಕರ್ನಾಟಕ ಭಾರತಿ, ಸಂಪುಟ ೧, ಸಂ. ೧ (ಕ. ವಿ. ವಿ. ಧಾರವಾಡ)

(b) ಕರ್ನಾಟಕ ಭಾರತಿ, ಸಂಪುಟ ೨, ಸಂ. ೧ (ಕ. ವಿ. ವಿ. ಧಾರವಾಡ)

(c) ಕರ್ನಾಟಕ ಭಾರತಿ, ಸಂಪುಟ ೩, ಸಂ. ೨ (ಕ. ವಿ. ವಿ. ಧಾರವಾಡ)

೯. ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ. ಡಾ. ಸಾ. ಶಿ. ಮರುಳಯ್ಯ.

೧೦. Karnatak through the Ages.

೧೧. ಇಕ್ಕೇರಿ ಅರಸರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨. ಕೆಳದಿ ನಾಯಕರು, ಡಾ. ದೀಕ್ಷಿತ್.

೧೩. ಶಿವತತ್ವರತ್ನಾಕರ.

೧೪. QJMS Vol XXII, July 1931.

೧೫. ನಮ್ಮ ಮನೆತನದವರು ಬರೆದ ಹಸ್ತಪ್ರತಿ.

ಸಿಡ್ಲಿನ ಸಪ್ಪಳ

ಧರಣೇಂದ್ರ ಕುರಕುರಿ

ಏರುಣಿಕಿ ಬಿಸಲಾಗ
ಕಾದ ಹುಡಿ ದಾರ್‍ಯಾಗ
ಒಬ್ಬನss ನಡದು ನಡದು ದಣದು
ಹುಬ್ಬಿಗೆ ಕೈ–
ಹಚ್ಚಿ ನೋಡಿದರ
ಇನ್ನೂ ದೂರ
ದಾರಿ.
ಹೊಂತೂಟ್ಲೆ ಊರ
ಮುಟ್ಟೇನಂದರ ಮ್ಯಾಲ
ಕನಸಿನ ಹೊರಿ
ಬ್ಯಾರಿ.

ನೀನು ;
ಮೆಲ್ಲಕ ದೂರ ಮೂಡ ಏರಿ
ಬಂದಂಗ. ರಪರಪ
ಹನಿ ಉದುರೂವಾಗ
ಧೂಳ ಎಲ್ಲ ಕುಂತು
ನೆಲ ತಂಪು.
ಹುರುಪಿಗೆದ್ದ ಕನಸೆಲ್ಲ
ಕಳ್ಳಿ–ಮುಳ್ಳಿ ಕಪಾಟ–ಮುಳ್ಳಿ

ಆಡಬೇಕನ್ನೂದರೊಳಗ
ಮಾಡ ನೆತ್ತಿವ್ಯಾಲ
ಬಂದು, ಗಡಗಡ
ಗದ್ದರಸಿ, ಅಡಮಳಿ ಹೊಡದು,
ಸಿಡ್ಲಬಿದ್ದು, ಮಾಯಾದಾಗ
ಗೂಡು ಸೇರಿದ ಕನಸು
ಇನ್ನೂ ಹೊರಬಿದ್ದಿಲ್ಲ.

ಮಳ್ಯಾಗ ತೋದ ಅರಬಿ
ಒಣಗಿದರೂ
ಸಿಡ್ಲಿನ ಸಪ್ಪಳ ಕಿಂವ್ಯಾಗ
ಇನ್ನೂ ಗೊಂಯ್ಯಂತ
ಗುಂಯ್ಯಗುಡತೈತಿ.

ವೇದಕಾಲೀನ ಕೆಲವು ಸಾಂಕೇತಿಕ ಪ್ರತಿಮೆಗಳು

ಅಬೋಧಿ ಅಗ್ನಿ ಮತ್ತು ಜಾತವೇದ ಅಗ್ನಿ

ಶಂ. ಬಾ. ಜೋಶಿ

೧. ಅಬೋಧಿ ಅಗ್ನಿಯ ವಿಚಾರ :

ವಿಶ್ವಸ್ಥ ಪ್ರ–ಚೋದಕ, ಪ್ರೇರಕ ತತ್ತ್ವವನ್ನು ಗ್ರಹಿಸಿಕೊಳ್ಳುವ ಪುರಾತನ ಪ್ರಯತ್ನಗಳ ಸಮೀಕ್ಷೆಯಲ್ಲಿ ಮಾನವರ ಪ್ರಜ್ಞಾವಿಕಾಸ ಕ್ರಮವು ಬೆಳಕಿಗೆ ಬರಬಲ್ಲದು; ಈ ಸಂ–ಗತಿ 'ಅ–ಬೋಧಿ ಅಗ್ನಿ' ಹಾಗೂ 'ಜಾತವೇದ ಅಗ್ನಿ' ಇವೆರಡೂ ಸಂಕೇತಗಳ ಮೂಲಕವಾಗಿಯೂ ಅರಿಕೆಗೆ ಬರುತ್ತವೆ. 'ಅಪೋ ವಾ ಇದಂ ಅಗ್ನೇ ಆಸೀತ್' ಎಂಬ ಉಲ್ಲೇಖದಂತೆ, 'ಅಪೋ ವಾ ಇದಂ ಅಗ್ರೇ **ಮಹತ್ ಸಲಿಲಂ** ಆಸೀತ್; ಸ ಊರ್ಮಿಃ ಊರ್ಮಿಮ್ ಅಸ್ಕಂದತೆ' ಎಂಬ ನಿರ್ದೇಶನಗಳೂ ಉಂಟು. ಈ ಬಗೆಯ ವಿವಿಧ ಉಲ್ಲೇಖಗಳೂ ಸಮೀಕ್ಷಾರ್ಹವಾಗಿವೆ. (ಜೈಮಿನೀಯ ಉಪ್ಷನತ್, ೧–೫೬.೧, ಋ. ವೇ. ೧೨೯.೩ ; ೭೨.೬; ವಾಜ. ಸಂಹಿತಾ ೮.೫೯ ; ಬೃ. ಉಪನಿಷತ್ ೪–೩–೩೨).

ಈ 'ಅಪ' ಸ್ವರೂಪೀ 'ಸಲಿಲ'ದಲ್ಲಿ 'ಅಗ್ನಿ'ಯೂ ಇದ್ದುದನ್ನು, ಶ್ವೇತಾಶ್ವತರ ಉಪನಿಷತ್ತು ಸ್ಪಷ್ಟಪಡಿಸುತ್ತದೆ. 'ಸ ಏವ ಅಗ್ನಿಃ ಸಲಿಲೇ ಸನ್ನಿವಿಷ್ಟಃ (೬.೧೫). ಜೈಮಿನೀಯೋಪನಿಷತ್ತು ಆಪಃ ಸಮಿಸ್ಥ ಈ ಅಗ್ನಿಯನ್ನು ಪ್ರಾಣರೂಪದಲ್ಲಿಯೂ (ಅಗ್ನಿರ್ವೈ ಪ್ರಾಣಾಃ) ಕಾಣುತ್ತದೆ. ಇಷ್ಟೇ ಏಕೆ ? ಈ ಸೃಷ್ಟಿಯ ಕಾರಣತತ್ತ್ವವನ್ನೇ ಅಗ್ನಿಯಾಗಿ ಕಂಡಿದ್ದು, ಜಗದಾದಿ **ದೈ**ವತಗಳಲ್ಲಿ ಆದಿದೇವನೇ 'ಅಗ್ನಿ' ಎಂದು ಸೂಚಿಸುವ ಉಲ್ಲೇಖಗಳಿಗೂ ಕೊರತೆಯಿಲ್ಲ, ವೈದಿಕ ಸಾಹಿತ್ಯದಲ್ಲಿ. ಈ ದೇವನು ಯಾರು ? ಯಾರಿಗೆ ಹವಿಸ್ಸನ್ನೀಯಲಿ ? = 'ಕಸ್ಮೈ ದೇವಾಯ ಹವಿಷಾವಿಧೇಮ' (ಋ. ೧೨೧.೧) ಎಂಬ ಸೂಕ್ತದ **'ಕ'** ಹೆಸರನ್ನು 'ಅಗ್ನಿ' ತತ್ತ್ವ ಸೂಚಕವಾಗಿಯೂ ಬಗೆಯಲಾಗುತ್ತದೆ. ಆಪಃ ಸಲಿಲತತ್ತ್ವದಂತೆ; ಏಕೆಂದರೆ ಆದಿಯ ಆಪಃ ಸಲಿಲಸ್ಥ ಅಗ್ನಿಯನ್ನು **'ಕ'** ಎಂಬ ಬೀಜಾಕ್ಷರದಿಂದ ನಿರ್ದೇಶಿಸಲಾಗುವುದರಿಂದ ಈ ಸಂಕೇತಕ್ಕೆ ಉಭಯಾರ್ಥಗಳೂ ಸಂಭವಿಸುತ್ತವೆ.

ಈ 'ಅಗ್ನಿ' ತತ್–ತ್ವವು ವಿಶ್ವವ್ಯಾಪಿಯಾಗಿದೆ: ವಿಶ್ವಾಧಾರ ಶಕ್ತಿಯಾಗಿದೆ; ಆದರೂ ವಿಶ್ವದಿಂದ ಬೇರೆಯಾಗಿ ಅರಿಕೆಗೆ ಬರುವುದಿಲ್ಲ. ಈ ಕಾರಣದಿಂದಲೇ ಈ ಅಗ್ನಿಯನ್ನು 'ಅ–ಬೋಧಿ ಅಗ್ನಿ' ಎಂದು ಕರೆಯಲಾಗಿದೆ. ಪ್ರಾಣಿ–ವನಸ್ಪತಿಗಳೆಲ್ಲೆಲ್ಲ

ಇರುವ ಈ 'ಅಗ್ನಿ'ಯು ವೃಕ್ಷದ ಮೂಲಕ ಪ್ರತೀತಿಗೆ ಬಂದುದರಿಂದ ಬೌದ್ಧ ಸಂಪ್ರದಾಯದಲ್ಲಿ **'ಬೋಧಿವೃಕ್ಷ'**ವೆಂಬ ಹೆಸರಿನಲ್ಲಿ ಆಲ, ಅರಳಿ ವೃಕ್ಷದ ಸಾಂಕೇತಿಕ ಉಪಾಸನೆಯು ನಡವಳಿ ಉಳಿದುಬಂದಿದೆ. ಬಿಲ್ವ ಶಮೀ (:ಬನ್ನಿ ವಹ್ನಿ), ಬೇ(ಂ)ವು (ಬೆಂ) ಈ ವೃಕ್ಷಪೂಜೆಯೂ ಅನೇಕ ಸಂಪ್ರದಾಯಗಳಲ್ಲಿ ಉಂಟು. ಕೊನೆಯ ಎರಡೂ ಗಿಡಗಳು 'ಅಗ್ನಿ'ಯುಕ್ತವಿರುವುದಾಗಿ ಇರುವ ಸಾಂಕೇತಿಕ ನಾಮ-ರೂಪಗಳು, ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಮೌಲಿಕವಾಗಿವೆ.

ಈ 'ಅ-ಬೋಧಿ'ಯನ್ನು 'ನ-ಚಿಕೇತ'ನೆಂದೂ ವೇದದಲ್ಲಿಯೇ ಕರೆಯಲಾಗಿದೆ. (ಋ. ೫೧). 'ಜಾತವೇದ ಅಗ್ನಿ', ಅಂಜಿ ಓಡಿಬಂದು ನೀರಲ್ಲಿ ಅಡಗಿದನು. ಎಂಬ ಹಾಗಿನ ಒಂದು ಪವಾಡ ಕಥೆ (myth) ಈ ಸೂಕ್ತದಲ್ಲಿಯೇ ಉಂಟು. ಈ ಕಥೆಯೊಳಗಿನ ಸಾಂಕೇತಿಕ ಅರ್ಥದ ವಿವರಣೆ ಉದ್ಬೋಧಕವಿದ್ದರೂ ಅದನ್ನು ಇಲ್ಲಿ ವಿವರಿಸಲು ಹೊರಟರೆ ವಿಷಯಾಂತರವೆನಿಸುವುದು ನಿಶ್ಚಿತವಿದೆ. ಆದುದರಿಂದ ಆ ಇಡೀ ಕಥೆಯ ಆಶಯದ ವಿಚಾರ ಹಾಗೆ ಇರಲಿ; ಈ ಋಗ್ವೇದದಲ್ಲಿ 'ಜಾತವೇದ ಅಗ್ನಿ'ಯ ಹೆಸರಿನಲ್ಲಿ ಪೂಜೆಗೊಳ್ಳುವವನು 'ನ-ಚಿಕೇತಾಗ್ನಿ'ಯೇ ಎಂಬುದು ಈ ಸೂಕ್ತದಿಂದ ವ್ಯಕ್ತವಾಗುತ್ತದೆ. 'ಜಾತವೇದ ಅಗ್ನಿಯು' ನೀರಲ್ಲಿ ವಿಲೀನನಾದುದರಿಂದ, ಆತನು ಸ್ವತಂತ್ರ ಅಸ್ತಿತ್ವಕ್ಕೆ ಎರವಾಗುತ್ತಾನೆ. 'ಜಾತವೇದ' ಅಗ್ನಿಯ ಉಪಾಸನಾ ಸಂಪ್ರದಾಯವು ನಚಿಕೇತಾಗ್ನಿ ಉಪಾಸನೆಯನ್ನು ಸ್ವೀಕರಿಸಿತು ಎಂದು ಇದರ ಅರ್ಥವಾಗುತ್ತದೆ.

ಉಪನಿಷತ್ತುಗಳಲ್ಲಿ ಒಂದೆಡೆಗೆ ಅಗ್ನಿಯು 'ಜಾತವೇದ' ಎಂಬ ವಿಶೇಷ ಹೆಸರಿನ ವಿಡಂಬನೆಯಿದೆ. 'ಹೇ ಜಾತವೇದ, ಕಿಂ ಇದಂ ಯಕ್ಷಂ' (ಕೇನ ೨.೩) 'ಹೇ ಅಗ್ನಿಯೆ, ನಿನ್ನ ಎದುರು ಇರುವ ಈ 'ಯಕ್ಷ' ರೂಪಿ 'ಬ್ರಹ್ಮ' ತತ್ತ್ವ, ಏನು ಹೇಳು. ಇಲ್ಲವಾದರೆ ನಿನ್ನ 'ಜಾತವೇದ' ಎಂಬ ಹೆಸರಿಗೆ ಕೇಡು ಎಂಬಲ್ಲಿರುವ ಕಟಕಿ, ಕೊಂಕುಮಾತು, ಆ ಯುಗದಲ್ಲಿ ಇದ್ದ ಇವೆರಡೂ 'ಅಗ್ನಿ' ಸಂಪ್ರದಾಯದೊಳಗಿನ ಸ್ಪರ್ಧೆಯನ್ನು ಬಯಲಿಗೆ ತರುತ್ತದೆ. ಈ ಸ್ಪರ್ಧೆಯ ಮೇಲೆ ಬೆಳಕನ್ನು ಬೀರಬಲ್ಲ, ಇನ್ನೂ ಹಲವು ಬೇರೆ ಪ್ರಮಾಣಗಳು ದೊರೆಯುತ್ತವೆ. ಒಂದುಕಾಲಕ್ಕೆ ಶ್ರೇಷ್ಠನೆಂದು ಬಗೆಯಲಾಗಿದ್ದ ಅಹೀವೃತ್ತಹನ್ ಇಂದ್ರನು, ಪುರಾಣ ಕಥೆಗಳಲ್ಲಿ ಖಳನಾಯಕನಾಗಿದ್ದಾನೆ. 'ಜಾತವೇದಸಂ ವಿಶ್ವರೂಪಂ.... ಪ್ರಾಣಃ ಪ್ರಜಾನಾಂ....' ಎಂದಿರುವಲ್ಲಿ ಜಾತವೇದನನ್ನು ನಚಿಕೇತ= ಅಬೋಧಿ ಅಗ್ನಿಸ್ವರೂಪನಾಗಿ ಕಲ್ಪಿಸಿದ್ದನ್ನು ಕಾಣಬಹುದು. (ಪ್ರಶ್ನ ಉ. ೧-೭). ಗರ್ಭಸ್ಥ ಜೀವವನ್ನು 'ಜಾತವೇದ ಅಗ್ನಿ' ಎಂದಿರುವಲ್ಲಿ, 'ಬೃಹತ್ ಉಲ್ಬಸ್ಥ' (ಗರ್ಭಾಶಯಸ್ಥ) ಅಗ್ನಿಗೆ ನಚಿಕೇತನೆಂದು ಹೆಸರಿಸಿರುವ ಋಗ್ವೇದದ 'ಸಮಯ'ವನ್ನು ಮರಳಿ ಕಾಣಿಸಿಕೊಳ್ಳುತ್ತದೆ (ಕಠ ೪. ೮; ಬೃ. ೬.೩.೧). ಈ ಉದಾಹರಣೆಗಳಿಂದ 'ಜಾತವೇದ' ಹೆಸರಿನ ಅಗ್ನಿಯ ಆರಾಧಕರ ಸಂಪ್ರದಾಯವು ತನ್ನ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಂಡು ಬರುವಲ್ಲಿ ವಿಫಲವಾಯ್ತು, ಎಂಬ ಸಂಗತಿ ಹೊರಡುತ್ತದೆ; ಒಂದುಕಾಲದಲ್ಲಿ ವಿಭಿನ್ನ ಜೀವನದೃಷ್ಟಿಕೋನದ 'ಅಬೋಧಿ' ಅಗ್ನಿ ಹಾಗೂ

'ಜಾತವೇದ' ಅಗ್ನಿ ಪೂಜಕರಲ್ಲಿ ಅಂತರವು ಉಳಿಯದೆ ಹೋದುದಕ್ಕೆ, ಇವೆರಡೂ ಹೆಸರು ಸಮಾನಾರ್ಥಕವಾಗಿ ಅಥವಾ ಪರ್ಯಾಯ ಪದಗಳಾಗಿ ವ್ಯವಹರಿಸತೊಡಗಿದ್ದೇ ಪ್ರಮಾಣವಾಗಿದೆ.

೨. ಜಾತವೇದ ಅಗ್ನಿಯ ವಿಚಾರ :

ವಿಶ್ವನು, ವಿಶ್ವರೂಪನು ಆಗಿರುವುದರಿಂದ ಈ ಅಗ್ನಿ, 'ಅ–ಬೋಧ' ರೂಪನು ; ಚೇತಸ ಪ್ರಜ್ಞೆಗೆ ನಿಲುಕನು, ಎಂಬ ಕಾರಣದಿಂದ 'ನ–ಚಿಕೇತನು' ಆಗಿರುವ ಅಗ್ನಿಯನ್ನು, ವಿಶ್ವ–ದೇಹದಿಂದ ಅಥವಾ ದೇಹ– ವಿಶ್ವದಿಂದ ಬೇರ್ಪಡಿಸಿ 'ಪ್ರಜ್ಞೆ'– ಉಪ– ಜ್ಞೆಯ ರೂಪವನ್ನು 'ಚಿದಗ್ನಿ'ಯಾಗಿ ಆರಂಭಿಸುವ ಸಂಪ್ರದಾಯವೊಂದು ಪ್ರಭಾವಶಾಲಿ ಯಾಗಿದ್ದ ಕಾಲವು ಬಾದಾಯ್ತು ಎಂಬುದನ್ನು ನಿದರ್ಶನಕ್ಕೆ ತಂದುಕೊಡುವ ವಿವಿಧ ಪ್ರಮಾಣಗಳು, ಇಂದಿನ ಋಗ್ವೇದದಲ್ಲಿ ದೊರೆಯುತ್ತವೆ. 'ಆ–ತ್ಮನ್' ತತ್ತ್ವವು, ಅಬೋಧಿ ಅಗ್ನಿ ಸಂಪ್ರದಾಯದ ಪಾರಿಭಾಷಿಕ ಪದವಾಗಿದೆ. 'ಸ್ವ–ಉಪಜ್ಞೆ'ಯ ಪ್ರಯೋಗಗಳು ಆತ್ಮನ್ ಸಂಕೇತದಷ್ಟು ಪ್ರಾಚೀನವಲ್ಲ ; ಆದರೂ ಜಾತ–ವೇದ ಸ್ವರೂಪನು ಎಂದರೆ ಇವನು ಹುಟ್ಟಿನಿಂದಲೆ 'ವೇದ' ಎಂದರೆ ಜ್ಞಾನ–ಅರಿವು ಉಳ್ಳವನು ಎಂಬ ಈ ಅರ್ಥವು 'ಸ್ವ–ಉಪಜ್ಞೆ' ಎಂಬ ಸಂಕೇತದಲ್ಲಿ ಉಂಟು. ಆದುದರಿಂದ ಜ್ಞಾ(ನ), 'ಉಪಜ್ಞಾ' ಇದನ್ನು ಜಾತವೇದ ಅಗ್ನಿಯ ಪ್ರತೀಕವಾಗಿ ಬಗೆಯಲು ಯಾವ ಆತಂಕವೂ ತೋರದು. ವಿಶ್ವ–ದೇಹವಲ್ಲಿಯೆ ಆಗಲಿ, ಜಾತವೇದನಿಗೆ ಸ್ವತಂತ್ರ ಅಸ್ತಿತ್ವವನ್ನು ಕಲ್ಪಿಸಿ, ನಡೆಸುವ ಈ ಬಗೆಯ ಅಗ್ನಿಪೂಜಕರ ಸಂಪ್ರದಾಯವು ವಿಶ್ವರೂಪ ಅಗ್ನಿಯನ್ನು ಆರಾಧಿಸುವ ಸಂಪ್ರದಾಯಕ್ಕೆ ಮಾನ್ಯವಿರಲಿಲ್ಲ; ಈ ಮೊದಲಿನ ಅಬೋಧಿ ಅಗ್ನಿಯ ಸಮೀಕ್ಷೆಯಲ್ಲಿ ಈ ಮಾತು ಹೊರಡುತ್ತಿದೆ.

೩. ಅಬೋಧಿ ಮತ್ತು ಜಾತವೇದದ ತುಲನೆ :

ಜಾತವೇದ ಅಗ್ನಿಯನ್ನು ವಿಶ್ವರೂಪವಾಗಿ ಬಗೆಯಲಾಗುವುದಿಲ್ಲ. ಏಕೆಂದರೆ, ಪ್ರಜ್ಞೆ–ಉಪ–ಜ್ಞೆಯು ತಾರತಮ್ಯದ ತುಲನೆಯಲ್ಲಿ ಸ್ಪಷ್ಟವಾಗಿ ಅರಿಕೆಗೆ ಬರುತ್ತದೆ: ಅಥವಾ ತುಲನೆ, ಮೌಲ್ಯಮಾಪನ, ಅರ್ಥೀಕರಣವು ಈ ಪ್ರಜ್ಞೆಯ–ಉಪಜ್ಞೆಯ ಎಂದರೆ 'ಜಾತವೇದ' ತತ್ತ್ವದ ಹುಟ್ಟು ಸ್ವ–ಭಾವ. ಜಾತವೇದವು ನಿನ್ನೆ–ಇಂದು–ನಾಳೆಯ ಅಸ್ತಿತ್ವವನ್ನು ಮನ್ನಿಸುತ್ತದೆ; ಆದರೆ ಏಕಾತ್ಮಕ ವಿಶ್ವರೂಪವಾಗಿರುವ ಅ–ಬೋಧಿ, ನ–ಚಿಕೇತ ಅಗ್ನಿಯ ಉಪಾಸನೆಯಲ್ಲಿ 'ಕಾಲ' ತತ್ತ್ವಕ್ಕೆ = ನಿನ್ನೆ–ಇಂದು–ನಾಳೆಯ ಸ್ವರೂಪದ ತಾರತಮ್ಯವಿರುವ ಈ ಕಾಲಗತಿಗೆ ಸ್ಥಾನವೇ ಇರಲಾರದು : ಇಲ್ಲವೇ ಇಲ್ಲ. ಏಕೆಂದರೆ ಈ ಅ–ಬೋಧಿಯೆ 'ಕಾಲ' ಸ್ವರೂಪನು. ಕಾಲಗತಿಯು ಪ್ರಾರಂಭವಾದುದೇ ಇವನಿಂದ. ಈ ಅ–ಬೋಧಿ; ನಚಿಕೇತನು, ತ್ರಿಕಾಲಾತೀತ, ಪಾತಳಿ ಯಲ್ಲಿ ಇದ್ದ–ಇರುವ–ವಿಶ್ವರೂಪನು. ಆದರೆ ಭೌತಪಾತಳಿಯ ಮೇಲಣ ನಾಮ–

ರೂಪಾತ್ಮಕ ಆವರಣವಲ್ಲಿ ಕಾಣಿಸಿಕೊಳ್ಳತೊಡಗುವ ಕ್ಷಣದಿಂದ, ಇವನು ಬ್ರಹ್ಮಾಂಡ ದಿಂದ ಬೇರೆಯಾಗಿ, ಪಿಂಡಾಂಡ ರೂಪದಲ್ಲಿ ಸಂಚಲಿ(ರಿ)ಸುತ್ತಾನೆ. ಆಗ ಈ ಅ–ಧೋರ್ಧ್ವಗ್ನಿಯ ಗತಿಯ ಸಂದರ್ಭದಿಂದ ಅರಿಕೆಗೆಬರುವ ಗತಿಯೇ 'ಕಾಲ' ಎನಿಸುತ್ತದೆ.

'ಭಾ'ಷಾ ಸಂಕೇತಗಳ ಮೂಲಕವಾಗಿ, ವ್ಯಕ್ತಿಯಲ್ಲಿ ಉಂಟಾಗುವ **'ಭಾ'**ಸ, ಇದು ಚೇತನ— ಪ್ರಜ್ಞಾಪಾತಳಿಯ ಮೇಲಣ 'ಪ್ರ—ಕಾಶ'; ಇದನ್ನು "ಜ್ಯೋತಿ" ಎಂದೂ ಹೆಸರಿಸುವಲ್ಲಿ ಪುರಾತನಕಾಲದಿಂದ ಕಾಣಿಸಿಕೊಳ್ಳುತ್ತ ಬಂದಿರುವ ಅರ್ಥ ದೊಳಗಿನ ಸೂಕ್ಷ್ಮತಮತಾರತಮ್ಯವು ಹೃದ್ಯವಾಗಿದೆ; ನಿತಾಂತ ರಮಣೀಯವಾಗಿದೆ : 'ಜ್ಯೋತಿ' ಎಂದೊಡನೆ, ಅಲ್ಲಿ ಚಂದ್ರನೊಡನೆ ಇರುವ ಅದರ ಸಾಹಚರ್ಯವು ಅಭಿ ಪ್ರೇತವಿದೆ. ಇದು ನಿಷ್ಕಾರಣವಲ್ಲ ; **ಚಂದ್ರ**—ಜ್ಯೋತಿ, **ದೀಪ**—ಜ್ಯೋತಿ ಇದು ಕತ್ತಲೆಯ ಸಂದರ್ಭದಲ್ಲಿ ಮಿನುಗುವ–ಮಿನುಗಿದ 'ಬೆಳಕು' ; ಕಾಶ್(ಹೊಳೆ, ಮಿಂಚು) ಈ ಆಖ್ಯಾತಸಾಧಿತದಿಂದ ಸೂಚಿತವಾಗುವ 'ಪ್ರ—ಕಾಶ' ರೂಪ ಬೆಳಕನ್ನು ಸೂರ್ಯನ ಸಾಹಚರ್ಯದಿಂದ ಅರಿತುದಾಗಿದೆ. 'ಜ್ಯೋತಿ' ಮತ್ತು ಪ್ರ—ಕಾಶ ಇವೆರಡೂ 'ಬೆಳಕು'ಗಳೇ. ಆದರೂ ಇವೆರಡು ವಿಭಿನ್ನ ಸ್ವರೂಪದ ಬೆಳಕುಗಳು— ತತ್ತ್ವತಃ ಇವೆರಡನ್ನೂ ಅಭಿನ್ನ ಅಥವಾ ಸಮಾನ ಎಂದು ಬಗೆವಲ್ಲಿ—ಜ್ಯೋತಿಃ ದೀಪಃ(ಚಂದ್ರ) ಮತ್ತು ಪ್ರ—ಕಾಶಃ(ಸೂರ್ಯ) ಒಂದೇ ಎಂದಲ್ಲಿ—ರಾತ್ರಿ = ಹಗಲು ಎಂದೆಂಬ ವಾಸ್ತವ ; ಸತ್ಯವನ್ನು ಲೆಕ್ಕಿಸದಿರುವ, ಸತ್ಯದ ಅವಜ್ಞೆಯ ಅಪರಾಧಕ್ಕೆ ಎಡೆದೊರೆಯು ತ್ತದೆ ; ಚಂದ್ರನು ರಸಾಧಿಪತಿ ; ಈ ಕಾರಣದಿಂದ, ವೇದೋಪನಿಷತ್ತುಗಳಲ್ಲಿ ಬರುವ 'ಆಪೋ ಜ್ಯೋತಿಃ, ರಸೋಽಮೃತಮ್' (ಋಗ್ವೇದ), ಮತ್ತು 'ಅಪ್ಸು ಜ್ಯೋತಿಃ .... ಜ್ಯೋತಿಷ್ಯಾಪಃ ....' (ತೈ. ಉ. ೩.೮), ಈ ನಿರ್ದೇಶನಗಳು ಅರ್ಥಪೂರ್ಣವಾಗಿವೆ.

'ಜ್ಯೋತಿ' ರೂಪ ಬೆಳಕು ಮತ್ತು 'ಪ್ರಕಾಶ' ರೂಪ ಬೆಳಕು ಇವೆರಡೂ ವಿಭಿನ್ನ ಪಾತಳಿಯ 'ಭಾಸ' (ಅರಿವು) ಎಂಬುದು, ಉಪನಿಷದಾದಿಗಳ ನಿರ್ದೇಶ ದಿಂದ ದೃಢಪಡುತ್ತದೆ. 'ಅಯಂ....ಅಪ್ಸು ಪುರುಷಃ' ಎಂಬವನು, 'ಅಪ್ಸು ಅಗ್ನಿಃ' ಸ್ವರೂಪ ವಿಶ್ವನಿಯಂತ್ರವು ; ವಿಶ್ವಸೃಜನ, ಧಾರಣ, ವಿನಾಶದ ಕಾರಣನು ಎಂದು ವೇದೋಪನಿಷತ್ತುಗಳು ಸಾರುತ್ತಬಂದಿವೆ. ಈ ಜ್ಯೋತಿರೂಪ ತತ್ತ್ವವನ್ನು ವಿವಿಧ ದೇವತಾಸ್ವರೂಪಗಳಲ್ಲಿ ಪೂಜಿಸಲಾಗುವುದನ್ನು ಜಗತ್ತಿನ ಎಲ್ಲ ಸಂಪ್ರದಾಯ ಗಳಲ್ಲಿಯೂ ಕಾಣದೊರೆಯುತ್ತದೆ. ಪ್ರಣತಿ, ಸಮೆ, ದೀಪಸ್ತಂಭ ರೂಪದಲ್ಲಿ ಪೂಜಿಸ ಲಾಗುವ 'ಜ್ಯೋತಿಃ' ಸ್ವರೂಪ ದೈವತವೇ ಕ್ರೈಸ್ತ ಪಂಥೀಯ ಮೇಣಬತ್ತಿ ಜ್ಯೋತಿ, ಕ್ರಿಸ್‌ಮಸ್ 'ವೃಕ್ಷ' ರೂಪ ಜ್ಯೋತಿ; ವಹ್ನಿ(=ಬನ್ನಿ) ಅಗ್ನಿರೂಪ ವೃಕ್ಷವು ಇಲ್ಲಿ ತುಲನಾರ್ಹವಾಗಿದೆ. ಈ 'ಜ್ಯೋತಿ'ಯನ್ನು 'ಆದರ್ಶ' (ಕಂನಡಿ) ಎಂದು ಹೇಳಲಾಗಿರುವಲ್ಲಿ ಔಚಿತ್ಯವಿದೆ (ಬೃ. ಪಿ. ೨.೧.೯ ಕಠ ೬–೫, ಛಾಂ. ೮.೭.೪). 'ಆ—ದರ್ಶ' ಎಂಬ ಪದಕ್ಕೆ ಇಂದು ಗುರಿ, ಗಂತವ್ಯಸ್ಥಾನ ಎಂಬೀ ಬಗೆಯ

ಅರ್ಥವಿದೆ, ವಿಶ್ವಃ ದೇಹಸ್ಥ ಈ ಜ್ಯೋತಿಯನ್ನು ಅರಿಯುವುದು ಬಾಳಿಗುರಿ ಎಂದೂ, ಇಲ್ಲಿ ಸೂಚಕತೆಯಿದೆ. ಇದುವೆ ದೇಹಸ್ಥ ಪ್ರತ್ಯಗಾತ್ಮತತ್ತ್ವವೆಂದು ವರ್ಣಿಸಲಾಗಿರು-ವುದನ್ನು ಗಮನಿಸುವುದು ಅವಶ್ಯವಿದೆ. 'ಅವೃತ್ತ ಚಕ್ಷುಃ ಪ್ರತ್ಯಗಾತ್ಮಾನಂ' ಕಾಣ ಬಲ್ಲನು, ಎಂದು ಕಠೋಪನಿಷತ್ತು ಹೇಳುತ್ತದೆ (೪.೧).

ಆಪಃ ವಸಸ್ಥ 'ಅಬೋಧಿ' ಅಗ್ನಿಯನ್ನು, 'ಅಪೋಜ್ಯೋತಿ' ಎಂದು ಹೆಸರಿ ಸಿರುವಲ್ಲಿ, ಇದು ಚಂದ್ರನೊಳಗಿನ (ಅಗ್ನಿ)ಜ್ಯೋತಿ ಎಂಬುದನ್ನೂ ಸೂಕ್ಷ್ಮವಾಗಿ ಸೂಚಿಸಲಾಗಿದೆ. ಚಂದ್ರನ ಪ್ರತಿಬಿಂಬದಲ್ಲಿ ಕಾಣುವ ಕಪ್ಪು. 'ಅಗ್ನಿ'ಯ ಸಾಂಕೇತಿಕ ದರ್ಶನಮಾಡಿಸುತ್ತದೆ. ಇದನ್ನು 'ಅಮಃ' ಎಂಬ ಸಂಕೇತದಿಂದ ಸೂಚಿಸಲಾಗಿದೆ (ಛಾಂ. ೧.೬.೬). 'ಅಗ್ನಿಃ ಅಮಃ' ಎಂಬಲ್ಲಿ ಈ ಮಾತು ದೃಢಪಡುತ್ತದೆ. (ಛಾಂ. ೧.೬೧). 'ಅಮಾವಾಸ್ಯೆ'ಯೆಂದು ಈ ದೇವರು ಇಡಿಯಾಗಿ 'ಅಮ' = ಅಗ್ನಿಸ್ವರೂಪ ನಾಗುವನೆಂದು ಅರ್ಥ. ಈ ಕಾರಣದಿಂದಲೇ, 'ಅಮಾವಾಸ್ಯೆ' ಮೃತ್ಯುಸೂಚಕ ತಿಥಿಯಾಗಿ 'ಸವನ ಪಿತೃ ಅಮಾವಾಸ್ಯಾ' ಎಂಬ ತಿಥಿಯನ್ನು ಭಾದ್ರಪದ 'ಪಕ್ಷ ಮಾಸ'ದ (ಶ್ರಾದ್ಧದ) ಕೊನೆಯ ತಿಥಿಯನ್ನಾಗಿ ಕಲ್ಪಿಸಲಾಗಿದೆ. ಚಂದ್ರನ (ಆದಿತ್ಯಸ್ಯ) ಮಂಡಲಸ್ಥ ('ಶುಕ್ಲಂ ಭಾಃ') ಶುಭ್ರಃ ಗಂಜಿಯಂತಹ (ಮಂಡ)ಭಾಗವನ್ನು ಆಪಃ ರಸಸ್ವರೂಪದ (ಅರ್ಕ, ಸಾರ) ಎಂದು ಬಗೆಯಲಾಗಿದೆ (ಛಾಂ. ೧.೬.೫) 'ಮತ್ ನೀಲಂ ಪರಂ ಕೃಷ್ಣಂ' ಎಂಬ ವಿವರಣೆಯ ಮೇಲಿಂದ ಈ 'ಕೃಷ್ಣ' ರೂಪವು, ನೀರೊಳಗಿನ 'ಅಗ್ನಿ' ರೂಪವಿರುವುದಾಗಿ ಬೇರೆ ವಿವರಿಸಬೇಕಾಗಿಲ್ಲ. ಇಲ್ಲಿ, ಕೃಷ್ಣ–ನೀಲ ಅಗ್ನಿಯನ್ನು ಆಪಃ ರಸಸ್ಥ ಜ್ಯೋತಿಯಾಗಿ ಬರೆಯಲಾಗಿರುವ ಸಂಗತಿಯೂ ದೃಢಪಡುತ್ತದೆ.

೪. ಅಬೋಧಿಯು ಜಾತವೇದನಿಗೂ ಪುರಾತನನು :

ಮಾನವರಿಗೆ ಜಾತವೇದ ಅಗ್ನಿಯ ಅಸ್ತಿತ್ವವು ಪ್ರತೀತಿಗೆ ಬರಲು, ಅದೆಷ್ಟೊ ಸಾವಿರ ವರುಷಗಳು ಗತಿಸಿವೆ. ವೇದವಲ್ಲಿ 'ಆದೌ' 'ಪ್ರಥಮೇ' 'ಅಗ್ರೇ' ಎಂಬೀ ಬಗೆಯ 'ಸರ್ವಪ್ರಥಮ' '**ಪ್ರ—ಪ್ರಥಮ**' ದೈವತ, ಪ್ರಮಾಧಿ ದೈವತ ಎಂದು ವರ್ಣಿಸಲ್ಪಟ್ಟಿರುವ ದೈವತನಾಮಗಳು ತೋರಿಕೆಗೆ ಬೇರೆಬೇರೆ ಎನಿಸಿದರೂ ಇವೆಲ್ಲವೂ, ಸೃಷ್ಟಿಗೆ ಕಾರಣನೆಂಬ ಅಗ್ನಿಕುಮಾರನ ಪರ್ಯಾಯ ನಾಮಗಳೇ ಸರಿ. ಜಾಗ ತಿಕ ಪುರಾತನ ಸಂಸ್ಕೃತಿಗಳಲ್ಲಿ ಬರುವ ಆದಿದೈವತದ ಸ್ವರೂಪದಿಂದಲೂ ಈ ಮಾತಿಗೆ ಪುಷ್ಟಿದೊರೆಯುತ್ತಿದೆ. ಇಜಿಪ್ತಿನ ಮುರಿಯಸ್ ಪೈಪರ್ ಅಥವಾ ಆಸ್ಪ. ಪ್ರೀಸಿನ ಬೋರಿಯಾಸ್; ಸುಮೇರಿನ ತೈಮತ್ ಮತ್ತು ಅಪ್ಸು ಇತ್ಯಾದಿ ಈ ಆದಿದೈವತದ ನಾಮರೂಪಗಳು ಬೇರೆ ಎನಿಸಿದರೂ ಇವೆಲ್ಲವು ನಾಗ. ಸರ್ಪನ ಪರ್ಯಾಯಗಳೇ ಆಗಿವೆ. ಭಾರತೀಯ ಪರಂಪರೆಯಲ್ಲಿರುವ 'ಆದಿಶೇಷ' ನಾಗನೇ ತಾನೆ? ಈ ಹಿನ್ನೆಲೆಯಲ್ಲಿ 'ಅಗ್ನಿಕುಮಾರ'ನೆಂಬುದು ನಾಗ. ಸರ್ಪದ ಇನ್ನೊಂದು ಹೆಸರು ಎಂಬ ಮಾತು ಹೊರಡುತ್ತದೆ.

ಅಂತರಿಕ್ಷದಿಂದ ವಾಯುವು; ವಾಯುವಿನಿಂದ ಅಗ್ನಿ; ಅಗ್ನಿಯಿಂದ ಆಪ; ಆಪದಿಂದ ಪೃಥಿವೀ—ಓಷಧಿ—ಅನ್ನ ಸೃಷ್ಟಿಯಾಯಿತು; ಎಂಬ ಕ್ರಮದ ಈ ವಿಚಾರವು, 'ಜಾತವೇದ' ಅಗ್ನಿಯ ಬೋಧನೆಯಲ್ಲಿ ಪ್ರಚಲಿತವಾದದ್ದು; ತಿದ್ದುಪಡಿ ಹೊಂದಿದ ಬೆಳಕಿನ ವಿಚಾರ. ಆದರೆ ಅತಿ ಪುರಾತನ ಉಲ್ಲೇಖಗಳಲ್ಲಿ ಆಪ—ಅಗ್ನಿ (ನಾಗ) ಇವೆರಡರ ನಿರ್ದೇಶವೆ ಕಾಣದೊರೆಯುತ್ತದೆ. ಇಜಿಪ್ತ, ಸುಮೇರ, ಕ್ರೀಟ (ಗ್ರೀಸ). ಇರಾಣ. ಭಾರತಾದಿ ದೇಶಗಳಲ್ಲಿ ಆದಿ ಜಲದೇಶದಿಂದ ನಾಗನು ಹೊರ ಬಂದನೆಂಬ ಹಾಗಿನ ಪವಾಡ ಸಂಭವಿಸಿದ ವರ್ಣನೆಗಳೆ ದೊರೆಯುತ್ತವೆ.

೫. ಆದಿಮಾತಾ ಸಂಪ್ರದಾಯ ಮೊದಲು :

ವೇದದಲ್ಲಿ ಬರುವ 'ಅಪಾಂ ನಪ್ತೃ' ಎಂಬ ಸಂಯುಕ್ತ ಸಂಕೇತವು ಇದಕ್ಕೆ ನಿದರ್ಶನ. ನಪ್ತೃ ಈ ಸಂಕೇತಕ್ಕೆ ಮೊಮ್ಮಗನೆಂದು ಅರ್ಥವಿದ್ದರೂ ಪ್ರಸ್ತುತ ಆಪದ ಸಂದರ್ಭದಲ್ಲಿ 'ನಪ್ತೃ' ಪದಕ್ಕೆ ಸಂತಾನವಾಚಿಯಾದ ಅರ್ಥವುಂಟು. ಆದುದರಿಂದ ಈ ಅಪಾಂನಪ್ತೃವು. ಅಪೋವತ್ಸನಾದನು. ಇಲ್ಲಿ 'ಆಪ'(ನೀರು) ತಾಯಿಯ ಸ್ವರೂಪದ್ದಾಯ್ತು. ಅಪೋವತ್ಸನು 'ಕುಮಾರ' ಅಗ್ನಿಸ್ವರೂಪ — ಜ್ಯೋತಿ ಸ್ವರೂಪನಾಗುತ್ತಾನೆ. ಇರಾಣಿನ ಪುರಾತನ ಗ್ರಂಥವಾದ 'ಅವೆಸ್ತಾ' ಇದು ಹಲವು ರೀತಿಯಿಂದ ಋಗ್ವೇದವನ್ನು ಹೋಲುತ್ತಿರುವುದಾಗಿ ಕಂಡುಬಂದಿದೆ. ಋಗ್ವೇದದ ಅಪಾಂನಪ್ತೃ ದೈವತವು ಅವೆಸ್ತಾದಲ್ಲಿಯೂ ಉಂಟು. ಈ ಹಿನ್ನೆಲೆಯಲ್ಲಿ 'ಅಗ್ನೇಃ ಆಪಃ' ಎಂಬ ನಂಬುಗೆಯು, ನೀರಿನಿಂದ ಅಗ್ನಿ ಹುಟ್ಟಿದ್ದನ್ನು ಸೂಚಿಸುವ 'ಅಪಾಂ-ನಪಾತ್' ದೈವತದಷ್ಟು ಪುರಾತನವಲ್ಲ ಎಂಬುದು ಬೆಳಕಿಗೆಬರುತ್ತಿದೆ.

ಆಪವು ಅಗ್ನಿಕುಮಾರನಿಗೆ ಜನ್ಮವಿತ್ತಿದೆ ಎಂಬುದನ್ನು ಸೂಚಿಸುವ 'ಅಪಾಂನಪ್ತೃ' ಸಂಕೇತದ ಬಲದಿಂದ ಮಾತೆಯೆ ಆದಿಮ ದೈವತವೆಂಬ ಸಂಗತಿಯು ದೃಢಪಡುತ್ತದೆ. ಆದಿಮಾತೆ. ವಿಶ್ವಜನನಿ ಎಂದು ಸಂಸ್ತುತಳಾದ ಆದಿತಿಯ ಸ್ತೋತ್ರಗಳು ಋಗ್ವೇದದ ಹತ್ತೂ ಮಂಡಲಗಳಲ್ಲಿವೆ; 'ಯತ್ ಜಾತಂ, ಯತ್ ಜನಿತ್ವಂ' ಹುಟ್ಟಿದ್ದೂ. ಹುಟ್ಟದಿರುವುದೂ ಎಲ್ಲವೂ ಅದಿತಿಯೆ, ಎಂಬಲ್ಲಿ ಈ ಮಾತೆಯ ಏಕಮೇವಾ ದ್ವಿತೀಯತ್ವವು ವರ್ಣಿಸಲ್ಪಟ್ಟಿದೆ.

ಆದರೆ, ಆದಿಮಾತಾ ಸಂಪ್ರದಾಯವು ಹಿಂದೆಬಿದ್ದು, ಆದಿಪುರುಷ, ಕುಮಾರನ ಆರಾಧನೆಯು ಪ್ರತಿಷ್ಠೆಪಡೆಯುತ್ತದೆ. ಋಗ್ವೇದದ ಕೊನೆಯ ಮಂಡಲದಲ್ಲಿ ಮಾತ್ರ ಇರುವ 'ಪುರುಷ' ಸೂಕ್ತವೆ ಇದಕ್ಕೆ ನಿದರ್ಶನ. ಆದಿಮಾತೆ ಅದಿತಿ 'ಯತ್ ಜಾತಂ ಯತ್ ಜನಿತ್ವಂ' ಎಂದು ಹೊಗಳಲ್ಪಟ್ಟಿದ್ದರೆ, 'ಯತ್ ಭೂತಂ, ಯತ್ ಚ ಭವ್ಯಂ' ಎಲ್ಲವೂ ಈ ಪುರುಷನೇ ಎಂದು ಪ್ರಶಂಸಿಸಲ್ಪಟ್ಟಿದ್ದಾನೆ. 'ಆಪದಿಂದ ಅಗ್ನಿ' ಎಂಬ ಅದು ನೂತನ ರೂಪತಾಳುತ್ತದೆ: ಆದರೆ 'ಮಾತೆಯಿಂದ ಮಗು' ಎಂಬಲ್ಲಿ ರುವ ನೈಸರ್ಗಿಕತೆ, 'ಕುಮಾರನು ತನ್ನ ಸ್ತ್ರೀಯನ್ನು ಪ್ರಸವಿಸಿದನು' ಎಂಬಲ್ಲಿ

ಸುತರಾಂ ಇಲ್ಲ; ಆದರೆ ಇದು ಸಮಂಜಸವೆ ಎಂಬ ಸಂದೇಹಕ್ಕೆ ಎಡೆಯಿದೆ.

ಆದಿಮಾತಾ ಸಂಪ್ರದಾಯದ ಯುಗವು ಗತಿಸಿದ ಬಳಿಕ ಪ್ರಾರಂಭವಾದ ಆದಿ ಪುರುಷ ಪೂಜೆಯು ಪರಂಪರೆಯು, ಗುರು ಪೀಳಿಗೆಯು ಕ್ರಮದಿಂದ ಆಧುನಿಕಕಾಲದ ವರೆಗೂ ಉಳಿದುಬಂದಿದೆ.

೬. ಜಾತವೇದನ ಜನ್ಮಕುಂಡಲಿ :

ಈ ಸ್ಥಿತ್ಯಂತರದ ಸಂದರ್ಭದಲ್ಲಿ, 'ಜಾತವೇದ' ಅಗ್ನಿಪೂಜೆಯ ಸಂಪ್ರದಾಯವು ತಲೆದೋರಿ, ಬೇಗನೆ ತನ್ನ ಪ್ರತಿಷ್ಠೆಗೆ ಎರವಾದುದಾಗಿ ಊಹಿಸಲು ಅವಕಾಶವಿದೆ. ಅಭಿವ್ಯಕ್ತಿ ಮಾಧ್ಯಮ, ಪ್ರತಿಮೆಯಾಗಿ ಭಾಷೆಯಲ್ಲಿ ಕಾಣಿಸಿಕೊಂಡ ಚಂದ್ರ ಮತ್ತು ಸೂರ್ಯರ ಉಲ್ಲೇಖಗಳ ತೌಲನಿಕ ಸಮೀಕ್ಷೆಯಲ್ಲಿ ಈ ಸಂಗತಿ ಬಯಲಿಗೆಬರುತ್ತದೆ. ಸೌರಸಂಪ್ರದಾಯವು ಹಿಮ್ಮೆಟ್ಟಿ ತನ್ನ ಸ್ಥಾನಮಾನಕ್ಕೆ ಎರವಾದುದು ಮತ್ತು ಚಾಂದ್ರ ಸಂಕೇತಗಳು ಪ್ರತಿಷ್ಠೆಪಡೆದುದು ಅರಿಕೆಗೆ ಬರುತ್ತದೆ.

ಅಬೋಧಿ ಅಗ್ನಿಯು ಆಪಃ ರಸ್ಥನು; 'ಅಪೋಜ್ಯೋತಿ' ಎಂದು ಬಗೆಯಲ್ಪಡು ವನು. ಇವನು ಚಾಂದ್ರ ಅಗ್ನಿ, ಗೌತಮಾಗ್ನಿ! ಗೋ–ತಮಃ ಕಾಣಲು ತೀರ ಸೌಮ್ಯ! ಚಂದ್ರನಲ್ಲಿರುವ ಈ ಅಗ್ನಿಯನ್ನು, ಮಧು(ರ), ರಸಸ್ವರೂಪಿ ಎಂದು ಪುರಾತನರು ತಮ್ಮ ಸೂಕ್ಷ್ಮದೃಷ್ಟಿಯಿಂದ ಎಂದೋ ಕಂಡಿದ್ದಾರೆ. ಮಧು (ರ) ಸ್ವರೂಪೀ ಈ ದೈವತವನ್ನು 'ಅಗ್ನಿ' ಎಂದು ಗುರುತಿಸಿದ್ದು ಹೇಗೆ? ತೋರಿಕೆಗೆ ಶಾಂತ, ಮಧುರ–ರೂಪನ ನಿಜಸ್ವರೂಪವು ಬೋಧೆಗೆ ನಿಲುಕದ್ದು, ಎಂಬ ಅನುಭವದಿಂದಾಗಿ ಈ ಅಗ್ನಿಗೆ ಅ–ಬೋಧಿ, ನಚಿಕೇತ ಎಂಬ ಹೆಸರು ಸಾರ್ಥವೆ ಇದೆ; ಏಕೆಂದರೆ ಈ ಮಾಧುರ್ಯ 'ಅಮೃತ'ದಂತೆ ಎನಿಸಿ, ತತ್ತ್ವತಃ ವಿಷಸ್ವರೂಪ ಮೃತ್ಯುಸ್ವರೂಪವಾಗಿದೆ; ಜಾಗತಿಕ ವಿನೆಲ್ಲ ವಿರಕ್ತ ಪಂಥಗಳಿಗೆ, ಸಂಸಾರವು ಅಸಾರ; ಮೃತ್ಯುಸ್ವರೂಪವಾಗಿದೆ; ಎಂಬ ಮೊದಲಪಾಠ ಬೋಧಿಸಿದ ಗುರುವು ಚಂದ್ರಮನೆ. ಸಂನ್ಯಾಸಿಗಳಲ್ಲಿ 'ಸಹಸ್ರಚಂದ್ರ ಶಾಂತಿ'ಯು ನಡೆವಳಿಯಿದೆ. "ಬೋಧಿ" ವೃಕ್ಷವು ಚಂದ್ರವೃಕ್ಷವಾಗಿದೆ.

ಸೂರ್ಯನ ಆರಾಧನೆ ಚಂದ್ರಮನ ಉಪಾಸನೆಯಷ್ಟು ಪುರಾತನವಲ್ಲ. ಸುಮೇರಿನಲ್ಲಿ ಚಂದ್ರನ ಪುರಾತನ ಗುಡಿಗಳು ದೊರೆತಿವೆಯೆ ಹೊರತು ಸೂರ್ಯನವಲ್ಲ. ಚಂದ್ರಮನ ಪೂಜೆಯೆ, ಸೂರ್ಯನಿಗಿಂತ ಮೊದಲು ಪ್ರಚಲಿತವಿತ್ತು. ಮಾನವರಲ್ಲಿ ಪ್ರಾಧಾನ್ಯದಿಂದ, ಚಂದ್ರಮನೇ ಕಾಲ–ಗತಿಯ ಮಾನದಂಡವಾಗಿರುವುದಾಗಿ ಕಾಣುತ್ತದೆ. 'ತಿಂಗಳು' ಎಂಬ ಸಂಕೇತಕ್ಕೆ ಚಂದ್ರನೆಂಬ ಅರ್ಥವಿದೆ! ಒಂದು 'ತಿಂಗಳು' ಅವಧಿ ಚಂದ್ರನ ಸಂದರ್ಭದಿಂದ ಸ್ಪಷ್ಟವಾಗಿ ಅರಿಕೆಗೆ ಬರುತ್ತದೆ. 'ಮಾಸ' (Month) ಇಂಡೋ ಯುರೋಪಿಯನ್ ಸಂಕೇತಗಳು ಚಂದ್ರನಿಂದ ಪ್ರಚಲಿತವಾಗಿವೆ. ಹೆಣ್ಣುಮಕ್ಕಳ 'ಮುಟ್ಟು' ತಿಂಗಳಿಗೆ ಸಂಬದ್ಧವಿದೆ. ಇಂಗ್ಲಿಷಿನ ಇಂಥ ಇನ್ನೊಂದು ಉದಾಹರಣೆ.

ಪಾಶ್ಚಾತ್ಯ ಭಾಷೆಯಲ್ಲಿ 'ಚಂದ್ರ'=ಚಂದ್ರಾ, ಸ್ತ್ರೀ ಪ್ರತೀಕ. ಋಗ್ವೇದದಲ್ಲಿ

'ರಾ ಕಾ' ಈ ಜೋಡು ಬೀಜಾಕ್ಷರಗಳಿಂದ ಸೂಚಿತವಿರುವ ದೇವಿಪೌರ್ಣಿಮಾ ಚಂದ್ರ ದೇವಿಯರ ಜಾತ್ರೆಗಳಲ್ಲಿ ಪ್ರಾಧಾನ್ಯದಿಂದ ಹುಣ್ಣಿಮೆಗೇ ಜರಗುವ ವಾಡಿಕೆ; ಅಮಾ-ವಾಸ್ಯೆಯಂದಿನ ದೇವೀ ಉತ್ಸವಗಳು ಆದಿಪುರುಷ ಸಂಪ್ರದಾಯವು ಪ್ರಚಾರಕ್ಕೆ ಬಂದ ಬಳಿಕಿನವು ಇರಬೇಕು. ಹುಣ್ಣಿಮೆಯ ಜಾತ್ರೆ, ಮಳೆ-ಬೆಳೆಯ ಸಲುವಾಗಿ ನಡೆಯುತ್ತಿದ್ದ ಸಾಮೂಹಿಕ ಆಚಾರ ಕ್ರಿಯೆಯ ಅಂಗವಾಗಿ ರೂಢಿಗೆ ಬಂದುದಾಗಿದೆ.

ಚಂದ್ರನು ಉಭಯಲಿಂಗೀ ದೈವತವೆಂಬ ಶ್ರದ್ಧೆಯು ಇದೆ. ಚಂದ್ರಮಂಡಲವು ಸ್ತ್ರೀಯ ಆಕೃತಿ: ಅದರೊಳಗಿನ ಕಪ್ಪು. ಅಬೋಧಿ ಅಗ್ನಿಕುಮಾರನ ಸಂಕೇತ. ಹೀಗಿ-ದನ್ನು ಇಡಿಯಾಗಿ 'ಅಪಾಂ ನಪಾತ್' ದೈವತವಾಗಿ ಕಾಣುತ್ತಿರಬೇಕು. 'ಜಗತಃ ಪಿತರೌ' ಏಕಾತ್ಮಕರಾಗಿರುವುದಾಗಿ ಷೋಡಶ ಕಲಾಪೂರ್ಣ ಚಂದ್ರನ ಮೂಲಕ ಗ್ರಹಿಸಿಕೊಂಡುದಾಗಿ ಅನೇಕ ಉಲ್ಲೇಖಗಳಿಂದ ಗೊತ್ತಾಗುತ್ತದೆ.

ಜಾತವೇದನ ಪ್ರತಿಷ್ಠೆಯ ಹಿನ್ನೆಲೆ :

ಸೃಜನಕ್ಕೆ ಪ್ರೇರಕವಾದ ಈ ಚಾಂದ್ರಸಂಪ್ರದಾಯದ ದುಷ್ಪರಿಣಾಮಗಳು ತೀವ್ರವಾಗಿ ಕಾಣತೊಡಗುವಾಗ ತಲೆದೋರಿದ ಪ್ರ-ಜ್ಞಾ ಪ್ರಕಾಶವು ಸೌರಸಂಪ್ರದಾಯಕ್ಕೆ ನಾಂದಿಯಾಯ್ತು. ಸುಮೇರಿನ ತೈಮತ್-ಅಪ್ಸುಗಳ ಪುತ್ರ 'ಎಂಕಿ'ಯ ಕಥೆ ಇದಕ್ಕೆ ಸಾಕ್ಷಿ. 'ಎಂಕಿ' (ಅಥವಾ 'ಈ') ಎಂಬ ಈ ದೈವತನಾಮದಲ್ಲಿ ಜ್ಞಾನಮೂರ್ತಿ. ಜ್ಞಾನದೇವ ಎಂಬ ಅರ್ಥವಿರುವುದಾಗಿ, ಏನೆಲ್ಲ ತಜ್ಞರಿಗೂ ಕಂಡುಬಂದಿದೆ.

ಆದಿಮಾತೆ ತೈಮಾತೆಯು ನೀತಿ-ಅನೀತಿಯನ್ನು ಲೆಕ್ಕಿಸದೆ ಸೃಜನಕಾರ್ಯರತಳಾಗಿದ್ದಳು. ಎಂಕಿಗೆ, ತನ್ನ ಜನ್ಮಕ್ಕೆ ಕಾರಣನೆಂಬ ಅಪ್ಸುವಿನ ಬಗೆಗೆ ತಿರಸ್ಕಾರ ಹೆಚ್ಚಿ, ತನ್ನ ತಂದೆಯನ್ನು ಕೊಲ್ಲುತ್ತಾನೆ. ತೈಮಾತೆಯು, 'ಕಿಂಗು' ಎಂಬ ತನ್ನ ಮಗನೊಬ್ಬನನ್ನೆ ಪತಿಯಾಗಿ ಸ್ವಿಕರಿಸುತ್ತಾಳೆ! ಎಂಕಿಯ ಸೇಡುತೀರಿಸುವ ಹೊಂಚುಹಾಕುತ್ತಾಳೆ. ಆಗ ಎಂಕಿಪುತ್ರ ಮರ್ದುಕನು ಅಜ್ಜಿ ತೈಮಾತೆಯನ್ನೂ ಕೊಂದು. ಕಿಂಗುವಿಗೆ ಬುದ್ಧಿಕಲಿ-ಸುತ್ತಾನೆ.

ತಾಯ್ಗಂಡತನದ ಆಚಾರ-ಸಂಪ್ರದಾಯಗಳ ದುಷ್ಪರಿಣಾಮಗಳಿಂದ ಬಂದ ಅನುಭವದ ಬೆಳಕಿನಲ್ಲಿ ಚಾಂದ್ರಸಂಪ್ರದಾಯ = ರಾತ್ರಸಂಪ್ರದಾಯ ಪ್ರತಿಷ್ಠೆಗೆ ಎರವಾಗುತ್ತದೆ. ತಾರಾಗಣದೊಡನೆ ಸ್ವಚ್ಛಂದವಾಗಿ ಭೋಗವಿಲಾಸದಲ್ಲಿ ತೊಡಗಿದ 'ಭೋಗಿಚಿ'(ನಾಗ) ಎಂದು ಪ್ರಜ್ಞಾಪ್ರಕಾಶದಲ್ಲಿ ಸ್ಪಷ್ಟವಾಗತೊಡಗುತ್ತದೆ. ಚಂದ್ರನು ಶಾಪಗ್ರಸ್ತನಾಗಿ ಕ್ಷಯವೃದ್ಧಿಯ ಭವಚಕ್ರದಲ್ಲಿ ಸಿಲುಕಿದ ಹಾಗಿನ ಪವಾಡ ಕಥೆ ಪ್ರಚಾರಕ್ಕೆ ಬರುತ್ತದೆ.

ಈ ಹಿನ್ನೆಲೆಯಲ್ಲಿ 'ರಾತ್ರ' ಸಂಪ್ರದಾಯಕ್ಕೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ತೀವ್ರ ಸಮಸ್ಯೆಯನ್ನು ಎದುರಿಸಬೇಕಾಯಿತು. ಭೋಗವಾದವು ತ್ಯಾಜ್ಯವೆಂದು ನಿರ್ಣ

ಯಿಸಲ್ಪಟ್ಟು, ಆತ್ಯಂತಿಕ ತ್ಯಾಗದ ನೈತಿಕ ಮೌಲ್ಯಗಳ ನೂತನ ಸಂಪ್ರದಾಯಗಳು ಮೈದೋರತೊಡಗಿದ್ದು, ಈ ಸಂಧಿಕಾಲದಲ್ಲಿಯೆ.

ಸೌಂದರ್ಯಾನುಭೂತಿಯ ರಸಾಸ್ವಾದನೆಯ ಸಂದರ್ಭದಿಂದ ಪ್ರಾಪ್ತವಾದ ಆ ದಿಕ್ಕಾಲಾತೀತ ದಿವ್ಯ ಆನಂದರಸದ ದಿವ್ಯಸ್ಮೃತಿಯನ್ನು ಉಳಿಸಿಕೊಳ್ಳುವ ಪ್ರಯತ್ನವು ಏನೆಲ್ಲ ವಿರಕ್ತಪಂಥಗಳಲ್ಲಿಯೂ ಕಾಣದೊರೆಯುತ್ತದೆ. **'ತತ್'**ವುಯ ಸಿದ್ಧಿಗೆ ಪೋಷಕ ಪ್ರೇರಕವಾದ ನಾಮಸ್ಮರಣ, ಧ್ಯಾನ–ಧಾರಣ-ಸಮಾಧಿಯ ಸಾಧನಾನುಷ್ಠಾನ ಗಳ ಒಂದಿಲ್ಲೊಂದು ಪ್ರಕಾರವು ಇಲ್ಲದ ವೈರಾಗ್ಯಪಂಥಗಳು ದೊರೆಯಲಾರವು.

ಮತಾಂತರ ಮಾಡಿದ ಜಾತವೇದಿಗಳು :

ಚಾಂದ್ರ ಅಭೇದಿ ಅಗ್ನಿಯ ಆರಾಧನೆಯ ಈ ನೂತನ ತಂತ್ರ ಮಂತ್ರಗಳ ನಿರ್ಮಿತಿಯಲ್ಲಿ, ಸೌರ ಜಾತವೇದ ಅಗ್ನಿಯ ಕೈವಾಡವು ಉಂಟು. ಜಾತವೇದಿಗಳು ಲೌಕಿಕ ಪ್ರತಿಷ್ಠೆಯನ್ನುಳ್ಳ ಚಾಂದ್ರಸಂಪ್ರದಾಯಿಗಳಾಗಿದ್ದುಂಟು. 'ಅಂಗಿರ' 'ಭೃಗು' ನಾಮಧಾರೀ ಋಷಿಗಳು ಮೊದಲು ಜಾತವೇದಿಗಳು. ಆದರೆ, ಈ ಪರಂಪರೆ ಯವರು ಆಪಃ ರಸಸ್ಥ ಸಂಪ್ರದಾಯಕ್ಕೆ ಸೇರಿದ್ದು ಅನೇಕ ಪ್ರಮಾಣಗಳಿಂದ ಬೆಳಕಿಗೆ ಬರುತ್ತಿದೆ. 'ಅಂಗಿರ' ಹೆಸರು 'ಅಂಗಿರಸ' ಎಂದು ಮಾರ್ಪಡುತ್ತದೆ; 'ಅಂಗಾನಾಂ ರಸಃ' ಸ್ವರೂಪೀ ಅಗ್ನಿಪೂಜಕರಾದುದನ್ನು ಸೂಚಿಸಲು, 'ಅಂಗಿರಸ' ಎಂಬ ನೂತನ ನಾಮ ರೂಪವು ಅವಶ್ಯವಾಯ್ತು! 'ಭೃಗು'ವನ್ನು ಗೀತೆ 'ಮಹರ್ಷಿಗಳ'ಲ್ಲಿ ಒಬ್ಬನೆಂದು ಹೇಳಿದೆ. ಆದರೆ 'ವಾರುಣೀವಿದ್ಯೆಯ' ಪ್ರಚಾರಕ ಭೃಗುವು ಒಬ್ಬನು ತೈತ್ತಿರೀಯೋಪ ನಿಷತ್ತಿನಲ್ಲಿ ಬಂದಿದ್ದಾನೆ! ಇವನನ್ನು 'ವರುಣಪುತ್ರ'ನೆಂದು ಹೇಳಲಾಗಿದೆ. ಆದರೆ ಋಗ್ವೇದದಲ್ಲಿ ವರುಣಪುತ್ರನೆಂದರೆ ವಸಿಷ್ಠನೇ. ಅಗಸ್ತ್ಯನ ಹೆಸರಿದ್ದರೂ ಅದು ಗೌಣ.

ಮೊದಲಿನ ಸೌರಪಂಥೀಯ ವರುಣದೈವತವು ಋಗ್ವೇದದಲ್ಲಿಯೆ ಆಪಃ ರಸ ಸ್ವರೂಪಿಯಾಗುತ್ತದೆ! ಇದು ರಾತ್ರದೈವತವೆಂದು ಸಂಪ್ರದಾಯವೇ ಒಪ್ಪಿದೆ. ವರು–ಣವು ಪ್ರಚ್ಛನ್ನ ಚಂದ್ರಮನೆಂದು ಪಾಶ್ಚಾತ್ಯ ಸಂಶೋಧಕರು ಸಪ್ರಮಾಣವಾಗಿ ತೋರಿಸಿಕೊಟ್ಟಿದ್ದಾರೆ.

ಇಂತಹ ಹಲವು ಪ್ರಮಾಣಗಳಿಂದ, ಜಾತವೇದ ಅಗ್ನಿಪೂಜಕರ ಸೌರಸಂಪ್ರ–ದಾಯವು ತಲೆಯೆತ್ತಿ ಪ್ರತಿಷ್ಠಿತವಾಗತೊಡಗಿದ್ದುದು ಅರಿಕೆಗೆ ಬರುತ್ತದೆ. ಆದರೆ ಅಬೋಧಿ ಅಗ್ನಿಪೂಜಕ ಚಾಂದ್ರಸಂಪ್ರದಾಯವು ಲೋಕಪ್ರಿಯವಾಗತೊಡಗಿ ಸೌರ ಜಾತವೇದಿಗಳ ಸಂಪ್ರದಾಯವು ನೆಲಕ್ಕೆ ಕುಪ್ಪಳಿಸಿದ್ದುವನ್ನು. ವರುಣಾದಿ ಅನೇಕ ಸೌರ ಪ್ರತಿಮೆಗಳ ಪರಿವರ್ತನದಿಂದ ನಿರ್ಧರಿಸಿಕೊಳ್ಳಬಹುದಾಗಿದೆ. ಚಂದ್ರಮ 'ಸೋಮ' ನಾಮಾಂತರವು ಇಂಥ ಇನ್ನೊಂದು ಮೌಲಿಕ ಪ್ರಮಾಣ.

ಮಾನವೀಯ ಹಕ್ಕುಗಳು ಮತ್ತು ಯುಕ್ತರಾಷ್ಟ್ರ ಸಂಸ್ಥೆ

ವ್ಹಿ. ಜಿ. ಮಾರಿಹಾಳ

All people have had to struggle to win human rights. Each of them today enjoys some of these rights. No people possesses all of them. The great task still lies ahead. —*UNESCO*

ಪೀಠಿಕೆ :

ಮಾನವನು ಈ ಹಿಂದೆ ನಡೆದುಬಂದ ದಾರಿ ದೀರ್ಘವಾದದ್ದು, ಕಷ್ಟತಮವಾದದ್ದು. 'ಬಿಡಾಡಿ' ಪ್ರಾಣಿಯಾಗಿದ್ದಂದಿನಿಂದ – ಮಾನವೀಯ ಹಕ್ಕುಗಳ ಪಾತ್ರತೆಯನ್ನು ಪಡೆಯುವವರೆಗಿನ ಅವನ ಸಾಹಸ ಅಸಾಮಾನ್ಯವಾದುದಾಗಿದೆ. ಇಂದಿಗೂ ಆ ಭಗೀರಥ ಪ್ರಯತ್ನ ಅವಿಶ್ರಾಂತವಾಗಿ ನಡೆದೇ ಇದ್ದು, ಎಲ್ಲರೂ ಅವುಗಳನ್ನು ಸಮಾನವಾಗಿ ಉಪಭೋಗಿಸುವಂತಾಗುವುದೂ ಒಂದು ಭವಿಷತ್ತಿನ ಕಾತರದ ನಿರೀಕ್ಷೆಯಾಗಿದೆ. ಈ ದಿಶೆಯಲ್ಲಿ ಮಡಿದ ಅನೇಕ ಅಂತರಾಷ್ಟ್ರೀಯ ಸಂಘ–ಸಂಸ್ಥೆಗಳಲ್ಲಿ 'ಯುನೆಸ್ಕೊ'ಗೈದ ಗೆಯ್ಮೆ ಶ್ಲಾಘನೀಯವಾದದ್ದು.

ಇಂದಿಗೂ ಅನೇಕ ಜನಾಂಗಗಳು ಕತ್ತಲೆಯಲ್ಲಿವೆ. ಜಗತ್ತಿನ ಹತ್ತರಲ್ಲಿಯ ಆರು ಮನುಷ್ಯರಿಗೆ ತೀರ ಸಣ್ಣ ನಿರೀಕ್ಷೆಯಾದ ಓದು–ಬರೆಹವೂ ಕೂಡ ಶೂನ್ಯ. ಇಂತಹ ಜನ ಈ ಮಾನವೀಯ ಹಕ್ಕುಗಳ ಬಗ್ಗೆ ಯಾವ ಪ್ರಜ್ಞೆಯನ್ನು ಹೊಂದಬೇಕು? ಮಾನವ ಜನಾಂಗವು ಇಷ್ಟೊಂದು ಮಹತ್ವದ ವೈಚಾರಿಕ ಘಟ್ಟವನ್ನು ಮುಟ್ಟಿದೆಯೆಂಬ ಕಲ್ಪನೆಯೂ ಕೂಡ ಅವರನ್ನು ನಿಲುಕಿದಂತಿಲ್ಲ. ಅತ್ಯಂತ ಕೆಳಗಿನ ಬೇಡಿಕೆಗಳಾದ ನಿದ್ರಾ–ಆಹಾರ–ಮೈಥುನಗಳೊಡನೆ ಅಷ್ಟೇ ಮೂಲಭೂತವಾದ ಸ್ವಾತಂತ್ರ್ಯವೂ ಕೂಡ ಒಂದು ಮಹತ್ವದ ಅಂಶವೆಂಬುದನ್ನು ಅವರು ಎಂದು ತಿಳಿಯಬೇಕು? ಮನುಷ್ಯನ ಆತ್ಮಮೂಲ್ಯ ಆಸ್ತಿಗಳಲ್ಲಿ ಅವನ ಸ್ವಾತಂತ್ರ್ಯವೂ ಪ್ರಮುಖ ವಿಷಯ. ಈ ಸ್ವಾತಂತ್ರ್ಯದ ರಕ್ಷಣೆಯು ಅವನ ಅವಿರತ ಪ್ರಯತ್ನದ ಒಂದು ಕುರುಹಾಗಿದೆ. ಇಂತಹ ಪ್ರಯತ್ನದಲ್ಲಿ ಅನೇಕ ಸಾಮಾಜಿಕ ಸಂಸ್ಥೆಗಳು ಮಾಡಿದ ಕೆಲಸ ಸಣ್ಣದಲ್ಲ. ಪ್ರಯೋಗಾಲಯಗಳು, ಪತ್ರಿಕೆಗಳು, ರೇಡಿಯೋ, ಟೆಲಿವ್ಹಿಜನ್, ನಾಟಕ–ಸಿನೆಮಾ, ವಸ್ತುಸಂಗ್ರಹಾಲಯಗಳು, ಶಿಕ್ಷಣಸಂಸ್ಥೆಗಳು ಮುಂತಾದವುಗಳು ಈ ಕಾರ್ಯದಲ್ಲಿ ಮುಖ್ಯ ಸಹಾಯಕಾರಿ ಸಂಸ್ಥೆಗಳಾಗಿವೆ.

೧೦ ಡಿಸೆಂಬರ, ೧೯೪೮ :

೧೯೪೮ನೆಯ ವರ್ಷದ ಡಿಸೆಂಬರ್ ೧೦ನೆಯ ತಾರೀಖು ಮಾನವನ ಇತಿಹಾಸದಲ್ಲಿಯೇ ಮಹತ್ವದ ಘಟ್ಟ; ಘಟನೆ. ಅಂದು ಈ ಹಕ್ಕುಗಳು ಅಂತರಾಷ್ಟ್ರೀಯ ಸಂಸ್ಥೆಯಾದ ಯುಕ್ತರಾಷ್ಟ್ರಸಂಘದಲ್ಲಿ ಪ್ರಸ್ತಾಪಿಸಲ್ಪಟ್ಟು, ಸ್ವೀಕರಿಸಲ್ಪಟ್ಟವು. ಮಾನವೀಯ ಭವಿಷತ್ತಿನ ಜವಾಬ್ದಾರಿ ಅಂದಿನಿಂದ ವಿಶ್ವದ ಎಲ್ಲ ಮಾನವಜನಾಂಗಗಳ ಮೇಲೆ ಹೇರಿದಂತಾಯಿತು. ಬಹುಸಂಖ್ಯಾಕರು ಹಸಿವು-ಅನ್ಯಾಯ-ಅಜ್ಞಾನಗಳಿಂದ ಬಳಲುತ್ತಿರುವಾಗ ನಮ್ಮ ಬಾಯಿಮಾತಿನ ಶ್ರೀಮಂತ ಉಪದೇಶ ಅರ್ಥವಿಲ್ಲದ್ದು. 'ವಚನೇ ಕಿಂ ದರಿದ್ರತಾ'ದಿಂದ ಯಾವ ಪುರುಷಾರ್ಥದ ಸಾಧನೆಯಾದೀತು ?

ಮಾನವತೆ ಮತ್ತು ಅದು ಶೇಖರಿಸಿದ ಸಭ್ಯತೆಯ ಉಳಿವಿಗಾಗಿಯಾದರೂ ನಾವು ಈಗ ಕಾರ್ಯತತ್ಪರರಾಗಬೇಕಾಗಿದೆ. ನಮ್ಮ ಸಂಸ್ಕೃತಿ, ಶಿಕ್ಷಣ, ವಿಜ್ಞಾನ ಮುಂತಾದವುಗಳು ಈಗ ಮಾನವೀಯ ಹಕ್ಕುಗಳ ರಕ್ಷಕರಾಗಬೇಕು.

ಇತಿಹಾಸ :

ಐತಿಹಾಸಿಕವಾಗಿ, ಈ ಮಾನವೀಯ ಪ್ರವಾಸದಲ್ಲಿ ಮನುಷ್ಯ ಅನೇಕ ಘಟ್ಟಗಳನ್ನು ದಾಟಿಬಂದಿದ್ದಾನೆ. ಲಕ್ಷಾಂತರ ವರ್ಷಗಳ ಈ ಪ್ರವಾಸ ಅವಿರತವಾಗಿ ಇನ್ನೂ ನಡೆದೇಯಿದೆ. ಪ್ರಾರಂಭ ಯುಗಗಳಲ್ಲಿ ಅವನು ಪಶುಗಳಲ್ಲಿ-ಪಶುವಾಗಿದ್ದ. ದೈವೇಚ್ಛೆಯೇ ಇರಬೇಕು—ಅವನಲ್ಲಿ ತುಸು ಪ್ರಜ್ಞೆ ಉಳಿದ ಪ್ರಾಣಿಗಳಿಗಿಂತ ಹೆಚ್ಚು ಜಾಗ್ರತವಾಯಿತು. ಅದರ ಸಹಾಯದಿಂದ ಅವನು ತನ್ನ ಪ್ರಾಥಮಿಕ ಸಾಧನಗಳನ್ನು ಹುಡುಕಿದ. ಭೂಮಿಯಿಂದ ಆಹಾರ ಪಡೆಯುವ ಕಲೆ ಅವನಿಗೆ ಗೊತ್ತಾಗಿ ಒಕ್ಕಲುತನವನ್ನು ಪ್ರಾರಂಭಿಸಿದ. ಒಂದೆಡೆ ನೆಲೆನಿಂತು ತನ್ನದೊಂದು ಸಂಸಾರವನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದ. ಈ ಪ್ರಯತ್ನದಲ್ಲಿ 'ನನ್ನದು', 'ನಿನ್ನದು' ನಿರ್ಣಯವಾಗಬೇಕಾಯಿತು. ಈ ನಿರ್ಣಯಗಳ ದಾರಿಯಲ್ಲಿ ಕೆಲವು ಪ್ರಾಥಮಿಕ ತಿಳುವಳಿಕೆಗಳು ಮೂಡಿದಂಬವು; ಅವು ನಂತರದಲ್ಲಿ ಕಟ್ಟಳೆಗಳಾದವು. ತಾನು ಯಾವರೀತಿ ನಡೆದುಕೊಳ್ಳಬೇಕು, ಉಳಿದವರು ತನ್ನೊಡನೆ ಹೇಗೆ ನಡೆದುಕೊಳ್ಳಬೇಕೆಂಬ ಮಾತುಗಳೇ ರೂಢಿಯಲ್ಲಿ ಆಗ ಕಟ್ಟಳೆಗಳಾದವು. ಈ ಮೂಲ ಕಟ್ಟಳೆಗಳೇ ವಿಸ್ತೀರ್ಣಗೊಂಡು ಇಂದಿನ ವೈಯಕ್ತಿಕ ಸ್ವಾತಂತ್ರ್ಯ, ರಾಜಕೀಯ ಹಕ್ಕುಗಳು, ಕಡ್ಡಾಯದ ಶಿಕ್ಷಣ, ಸಾಮಾಜಿಕ ಕಲ್ಯಾಣದ ಅಂತಸ್ತಿನವರೆಗೂ ಬಂದು ನಿಲುಕಿವೆ. ಇಂದು ವಿಕಾಸಗೊಂಡ ಈ ಮಾನವೀಯ ಹಕ್ಕುಗಳ ನಿರ್ಮಿತಿಗೆ ಜಗತ್ತಿನ ಎಲ್ಲ ಜನಾಂಗಗಳೂ ತಮ್ಮ ಪಾಲನ್ನು ಸೇರಿಸಿವೆ: ಅವುಗಳ ಅನುಭವಗಳು ಇಲ್ಲಿ ಪಕ್ವವಾಗಿವೆ.

ಒಂದು ಕಾಲವಿತ್ತು—ಮನುಷ್ಯ ಪಶುವಿಗಿಂತಲೂ ಪಶುವಾಗಿದ್ದ. ಸುಮಾರು ೨೦,೦೦೦ ವರ್ಷಗಳ ಹಿಂದಿನ ಫ್ರಾನ್ಸ್ ದೇಶದಲ್ಲಿ ಲಭ್ಯವಾದ ಮನುಷ್ಯನ ಪಾದದ ಗುರುತು ಇದನ್ನು ಪ್ರತ್ಯಕ್ಷೀಕರಿಸುತ್ತದೆ. ಅವನು ಉಳಿದ ಪ್ರಾಣಿಗಳೊಡನೆ ಹೋರಾ-

ದಿದ್ದಲ್ಲದೆ, ತನ್ನಂತೆಯೇ ಇರುವ ಉಳಿದ ಮಾನವರೊಡನೆಯೂ ಹೋರಾಡಿದನು (ಅಲ್ಡಿನ್ ಗುಹೆಯಲ್ಲಿನ ಕಾಲಿನವುದೈ). ನಂತರದ ಶತ-ಶತಮಾನಗಳಲ್ಲಿ ಅವನು ತುಸು ಸಂಶೋಧಕನೂ ಆಗಬೇಕಾಯಿತು; ತಾನು ನಿರ್ಮಿಸಿದ ಪ್ರಾಥಮಿಕ ಸಾಧನ-ಸಲಕರಣೆಗಳಿಂದಾಗಿ ಅವನು ಉಳಿದ ಪ್ರಾಣಿಗಳಿಂದ ಬೇರ್ಪಡಬೇಕಾಯಿತು. ಈ ರೀತಿ ನಿರ್ಮಿಸಿಕೊಂಡ ಸಾಧನ-ಸಾಮಗ್ರಿಗಳ ಸಂಖ್ಯೆ ಅಂದಿನಿಂದ—ಇಂದಿನವರೆಗೆ ಅಸಂಖ್ಯ. ಕಟ್ಟಡವಿಗಳಲ್ಲಿ ಕಾಡುಕಾಳುಗಳನ್ನು ಶೇಖರಿಸಿ ಯಾವುದೋ ಜಲಾಶಯಗಳ ಸಮೀಪ ಉತ್ತಿ-ಬಿತ್ತಿ ಬೆಳೆತೆಗೆಯಲು ಪ್ರಯತ್ನಿಸಿದನಲ್ಲದೆ, ತನ್ನ ಅಂಡಲೆತವನ್ನು ಬಿಟ್ಟು ಮನೆ ಮಾಡಿಕೊಂಡನು. ನೀರಾವರಿಯ ಉಪಯೋಗವನ್ನು ಕಂಡುಕೊಂಡು ಅದನ್ನು ಪ್ರಯೋಗಿಸಿದ್ದೂ ಆಯಿತು. ತನ್ನ ಗಡಿ ಇನ್ನೊಬ್ಬರ ಗಡಿಸೀಮೆಗಳ ನಿರ್ಣಯ ಗಳನ್ನು ಮಾಡಿಕೊಂಡ. ಸಕಾಲವಲ್ಲಿ ಮಳೆ ಬೇಕಾಯಿತು— ಮಳೆಯ ದೇವತೆಯನ್ನು ಅವನು ಪ್ರಾರ್ಥಿಸಿಕೊಳ್ಳಬೇಕಾಯಿತು. ಆ ವಿನಂತಿಯೇ ಪ್ರಾರ್ಥನೆಯಾಯಿತು. ಈ ನಿಸರ್ಗದೇವತೆಗಳು ತನಗೆ ಚನ್ನಾದ ಸುಗ್ಗಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿದುದೇ ಒಂದು ದೊಡ್ಡ ಸಂಗ್ರಹವಾಯಿತು. ಈ ಸಂಗ್ರಹಣೆಯ ದಾರಿಯಲ್ಲಿಯೇ ಅವನು ಬರೆವಣಿಗೆಯನ್ನು ಹುಡುಕಿದನು: ತಾನು ಹೊರಹೊಮ್ಮಿಸುವ ಧ್ವನಿಗೆ ಚಿತ್ರ-ರೇಖೆಗಳ ಸಂಬಂಧವನ್ನು ಕಲ್ಪಿಸಿ ಭಾಷೆಯನ್ನು ತಯಾರಿಸಿದನು; ಅದರೊಡನೆ ಲಿಪಿಯೂ ಬಂತು. ಈ ಲಿಪಿಯ ಸಹಾಯದಿಂದ ಅವನು ತನ್ನ ಅನೇಕ ವಿಚಾರ ಗಳನ್ನು ಬರೆದು ಶೇಖರಿಸಿಟ್ಟುಕೊಳ್ಳಲು ಸಹಾಯಕಾರಿಯಾಯಿತು. ಈ ಶೇಖರಣೆ ಯಲ್ಲಿ ಕಾವ್ಯವಿದೆ, ನಾಟಕಗಳಿವೆ, ವಿಜ್ಞಾನವಿದೆ— ಅದರಂತೆ ಇನ್ನೂ ಅನೇಕ ರೀತಿಯ ಅಭಿವ್ಯಕ್ತಿಯನ್ನು ನಾವು ಅದರಲ್ಲಿ ಕಾಣುತ್ತೇವೆ. ತನ್ನ ವಿಕಾಸವನ್ನು ನಮೂದಿಸಲು ಇದೊಂದು ಅವನ ಪ್ರಬಲ ಸಾಧನವಾಯಿತು.

ಸುಮಾರು ಕ್ರಿ.ಪೂ. ೨೦೦೦ ವರ್ಷಗಳ ಹಿಂದೆ ಬಾಬಿಲೋನ್ ಸಂಸ್ಕೃತಿ ಪ್ರವರ್ಧ ಮಾನವಾಗಿ ಬೆಳೆಯಿತು. ಈ ಸಂಸ್ಕೃತಿಯ ಮೂಲ ದೃಷ್ಟಾರ ಹಮ್ಮುರಾಬಿಯು ಮಾಡಿದ ಕಾರ್ಯ ಗಮನಾರ್ಹವಾದುದಾಗಿದೆ. ಜಗತ್ತಿನಲ್ಲಿ ಮೊದಲಬಾರಿ ಅವನು ಮೂಲಭೂತ ಕಟ್ಟಳೆಗಳನ್ನು ಅಧಿಕಾರದ ಕಟ್ಟಿನಲ್ಲಿ ಜಾರಿಗೆತರಲು ಪ್ರಯತ್ನಿಸಿದ್ದಾನೆ. ಈ ನ್ಯಾಯನಿರ್ಣಯದ ಪದ್ಧತಿಯು ಇಂದಿಗೂ ಜಗತ್ತಿನ ಎಲ್ಲ ಜನಾಂಗಗಳಲ್ಲಿ ಕಾರ್ಯ ರೂಪದಲ್ಲಿದೆ. ಇಜಿಪ್ತದ 'ಪಿರ್‍ಯಾಮಿಡ್'ಗಳು ಅನೇಕ ಐತಿಹಾಸಿಕ ದಾಖಲೆಗಳನ್ನು ಕೊಡುವುದರಲ್ಲಿ ತೀರ ಪ್ರಸಿದ್ಧ. ಈ ಕಟ್ಟಡಗಳ ಗರ್ಭಗಳಲ್ಲಿ 'ಸತ್ತವರ ಪುಸ್ತಕ' (Book of the dead) ಇರಲೇಬೇಕು. ಅಲ್ಲಿ 'ಮಮ್ಮೀ'ಕರಿಸಿದ ರಾಜನ ಆತ್ಮ ಹೇಳಿದ ಮಾತು ಇಂತಹ ಒಂದು ಪುಸ್ತಕದಲ್ಲಿದೆ.* ನಾನು ಬಡವರನ್ನು ಕಾಡಿಲ್ಲ; ಯಾರನ್ನೂ ನಾನು ಒತ್ತಾಯದಿಂದ ದುಡಿಯಲು ಹಚ್ಚಿಲ್ಲ; ನಾನ ಯಾರಿಗೂ ದ್ರೋಹ ಮಾಡಿಲ್ಲ;

---

* Human rights–Unesco publication 1950.

ಅನ್ಯಾಯವನ್ನೂ ಬಗೆದಿಲ್ಲ; ನಾನು ಪಕ್ಷಪಾತ ಮಾಡಿಲ್ಲ. ಈ ಮಾತೆಗಳು ಅಂದಿನ ನಿರಂಕುಶ ಪ್ರಭುಗಳ ಅಂತರಿಕ ಧ್ವನಿಗಳನ್ನು ವಿವರಿಸುತ್ತವೆ.

ಬದುಕಿಗೆ ಆದರ, ಹಿಂಸೆಗೆ ವಿರೋಧ ಇವು ನಮ್ಮ ಸಭ್ಯತೆಗೆ ಅಳತೆಗೋಲುಗಳಾ–ಗಿವೆ. ಈ ದಿಸೆಯಲ್ಲಿ ಹಿಂದೂ ವಿಚಾರಗಳು ಮಹತ್ವದ ಮೈಲುಗಲ್ಲುಗಳೆಂದೇ ಹೇಳಬೇಕು. ಜೈನ–ಬೌದ್ಧರ ಕಾಲವಲ್ಲಿಯಂತೂ ಈ ಮಾತುಗಳಿಗೆ ಒಂದು ಪೂರ್ಣತೆಯೇ ಬಂದಿತು; ಜೀವನವನ್ನು ಗೌರವಿಸುವುದು ಮಾನವನ ಆದ್ಯಕರ್ತವ್ಯವೇ ಆಯಿತು. ಚೀನಿ ವೈಚಾರಿಕರು ಸಭ್ಯತೆಯನ್ನು ಇನ್ನೂ ಹೆಚ್ಚಿನ ಪೂರ್ಣತೆಯತ್ತ ಎಳೆದೊಯ್ದ–ರೆಂದೇ ಹೇಳಬೇಕು. ವಿಚಾರಪರತೆ, ಪ್ರೀತಿ, ಶಾಂತಿ ಮುಂತಾದವುಗಳು ಅಲ್ಲಿ ಪರಸ್ಪರ ಕರ್ತವ್ಯಗಳಾದವು. ಗ್ರೀಸ್ ದೇಶದಲ್ಲಿ ಮಾನವನು ಪ್ರಥಮವಾಗಿ ತನ್ನ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯಗಳನ್ನು ಪ್ರಕಟಿಸಿದ ಸ್ಪಷ್ಟ ಸೂಚನೆಗಳನ್ನು ಆ ಸಂಸ್ಕೃತಿಯಲ್ಲಿ ನಾವು ಧಾರಾಳವಾಗಿ ಕಾಣುತ್ತೇವೆ. ನಿಸರ್ಗಜೀವನದಿಂದ ಮುಕ್ತನಾಗಿ ಅವನು ಅಲ್ಲಿ ವಿಜ್ಞಾನದ ಅಡಿಪಾಯವನ್ನು ಹಾಕಲು ಪ್ರಯತ್ನಿಸಿದ್ದಾನೆ. ಅಲ್ಲಿ ಅವನು ಒಂದು ಸುಸಂಘಟಿತ ರಾಜ್ಯ ಕಟ್ಟಲು ಪ್ರಯತ್ನಿಸಿದ್ದಲ್ಲದೆ, ಅದನ್ನು ಹಿಡಿತದಲ್ಲಿಡಲು ಹೆಣಗಿದ್ದಾನೆ. ಅಂದಿನ ಜನಾಂಗದ ಸ್ವಾತಂತ್ರ್ಯಪ್ರಿಯತೆಯನ್ನು ಮಹಾನ್ ಗ್ರೀಕ್ ದಾರ್ಶನಿಕ ಸಾಕ್ರೆಟೀಸ್‌ನ ಮಾತಿನಲ್ಲಿ ಕಂಡುಕೊಳ್ಳಬಹುದಾಗಿದೆ. ಪ್ರಚಲಿತ ಜನಜೀವನದ ವಿಚಾರಗಳಿಗಿಂತ ವಿಪರ್ಯಸ್ತರೀತಿಯಲ್ಲಿ ಅವನು ಸಾರ್ವಜನಿಕವಾಗಿ ತನ್ನ ವಿಚಾರಗಳನ್ನು ಪ್ರಕಟಿಸಿದ್ದುದು ಆಗ ರಾಜದ್ರೋಹವಾಗಿ ಪರಿಣಮಿಸಿತು; ಅದಕ್ಕೆ ಅವನಿಗೆ ಮರಣ–ದಂಡನೆಯೂ ವಿಧಿಸಲ್ಪಟ್ಟಿತು. ಅವನ ಸಮೀಪವರ್ತಿಗಳಾದ ಕೆಲವರು ಅವನಿಗೆ ಈ ಮರಣದಂಡನೆಯನ್ನು ತಪ್ಪಿಸಿಕೊಳ್ಳುವ ರೀತಿಯಲ್ಲಿ ಓಡಿಹೋಗುವ ಸಲಹೆಯನ್ನಿತ್ತರಂತೆ! ಆಗ ಅವನು ಅವರಿಗೆ ಕೊಟ್ಟ ಉತ್ತರ ಸ್ವಾತಂತ್ರ್ಯಪ್ರಿಯತೆಗೆ ನಾಂದಿಯಂತಿದೆ, "ನೀನು ಹೇಳಿದಂತೆ ಕೇಳಿ ಬದುಕುವುದಕ್ಕಿಂತ, ನಾನು ನನ್ನ ಸದಸದ್ವಿವೇಕದಂತೆ ನಡೆದು ಸಾವನ್ನಪ್ಪಲು ಪ್ರೀತಿಸುತ್ತೇನೆ. ಸಾವನ್ನು ತಪ್ಪಿಸುವುದು ಕಠಿಣವಲ್ಲ: ಆದರೆ ಕಾಪಟ್ಯವನ್ನು ತಪ್ಪಿಸುವುದು ತೀರ ಕಠಿಣ."

ನಂತರದ ಯುಗಗಳಲ್ಲಿ ರೋಮನ್‌ರು ಅನೇಕ ಕಟ್ಟಳೆಗಳನ್ನು ನಿರ್ಮಿಸಿ ಅವುಗಳಿಗೆ ಕಾಯ್ದೆಗಳ ಸ್ವರೂಪವನ್ನು ಕೊಡಲು ಪ್ರಯತ್ನಿಸಿದ್ದಾರೆ. ಅವರು ತಮ್ಮ ಎಲ್ಲ ಕಟ್ಟಳೆಗಳನ್ನು–ಸಾಮಾನ್ಯ ಕಾಯೆ ಗಳು, ಗುನ್ಹೆಯ ಕಾಯ್ದೆಗಳು. ಖಾಸಗಿ ಕಾಯ್ದೆಗಳು. ಸಾರ್ವಜನಿಕ ಕಾಯ್ದೆಗಳು. ಮತ್ತು ಅಂತರಾಷ್ಟ್ರೀಯ ಕಾಯ್ದೆಗಳೆಂದು ವರ್ಗೀಕರಣ ಮಾಡುವಷ್ಟು ದೂರ ಅವರು ನಿಲುಕಿದ್ದಾರೆ.

ಮಹಾನ್ ಪ್ರವಾದಿ ಏಸೂಸ್ವಾಮಿಯು ಅಂದಿನ ತಲೆಮಾರಿನಲ್ಲಿ ಒಂದು ವಿಶೇಷ ಮಹತ್ವದ ಬದಲಾವಣೆಯನ್ನು ತರಲು ಪ್ರಯತ್ನಿಸಿದ. ಕ್ರೌರ್ಯವೇ ಮೂರ್ತಿಮಂತವಾಗಿದ್ದ ಕಾಲವದು. ಅಂತಹ ಕಾಲದಲ್ಲಿ ತನ್ನ ನೆರೆಹೊರೆಯನ್ನು ತ್ರಿಕರಣಪೂರ್ವಕವಾಗಿ ಪ್ರೀತಿಸುವ ಸಂದೇಶವನ್ನು ಅವನು ಜಗತ್ತಿಗೆ ಸಾರಿದ್ದಾನೆ. ಅವನು ಕಲಿಸಿದ

ಅನೇಕ ನೀತಿಯ ಮಾತುಗಳಲ್ಲಿ–ಅನ್ಯಾಯಕ್ಕೆ ಪ್ರತಿಯಾಗಿ ಪ್ರೀತಿಯನ್ನು ಕೊಡಬೇಕೆಂಬ ಮಾತಿನಲ್ಲಿ ವಿಶ್ವಬಂಧುತ್ವದ ಅಭಿಪ್ರಾಯವನ್ನು ನಾವು ಕಾಣುತ್ತೇವೆ. ಇಡಿಯ ಮಾನವ ಜನಾಂಗವೇ ಒಂದು ಎಂಬ ಮಾತು ಅಲ್ಲಿ ಧ್ವನಿತವಾಯಿತು.

ಏಕಚಕ್ರಾಧಿಪತಿಗಳ ಆಳಿಕೆಯ ಕಾಲದಲ್ಲಿ ಅನೇಕ ರಾಜರು ತಮ್ಮ ಸತ್ಪರಂಪರೆಯನ್ನು ಬಿಟ್ಟುಕೊಟ್ಟು ಕ್ರೂರಿಗಳಾದರು. ಅವರ ಈ ದಬ್ಬಾಳಿಕೆಯನ್ನು ತಳ್ಳಿಹಾಕಲು ಆ ರಾಜರ ಸಮೀಪವರ್ತಿ ಸರದಾರರೇ ಪ್ರಯತ್ನಿಸಿದ ಉದಾಹರಣೆಗಳು ಇತಿಹಾಸದಲ್ಲಿ ಹೇರಳವಾಗಿವೆ. ಇವುಗಳಲ್ಲಿ, ೧೩ ನೇಯ ಶತಮಾನದಲ್ಲಿಯ 'ಮ್ಯಾಗ್ನಾ–ಚಾರ್ಟಾ' ಒಂದು ಮಹತ್ವದ ದಾಖಲೆಯಾಗಿದೆ. ಈ ಪತ್ರವು ಅನೇಕರಿಗೆ ಸ್ವಾತಂತ್ರ್ಯವನ್ನು ತಂದುದಲ್ಲದೆ, ಸರಕಾರವನ್ನು ಹದ್ದುಬಸ್ತಿನಲ್ಲಿಡಲು ಅನೇಕ ಮಿತಿಗಳನ್ನು ಅದು ನಿರ್ಧರಿಸಿದೆ. ಈ ಮಿತಿಗಳನ್ನು ಅನುಸರಿಸಿಯೇ ನಂತರದಲ್ಲಿ ಕೆಲವು ಕಟ್ಟಳೆಗಳು ಮುಂಬಂದು ಕಾಯ್ದೆಗಳ ಸ್ವರೂಪವನ್ನೂ ಪಡೆದವು. ಸ್ವಾತಂತ್ರ್ಯದ ಮುಖ್ಯ ಗುಣವಿಶೇಷವೆಂದರೆ ಅದು ಎಲ್ಲರಿಗೂ ಇರಬೇಕು. ಎಲ್ಲರಿಗೂ ಸಮಾನತೆಯಿಂದ ಹಂಚಲ್ಪಡಬೇಕೆಂಬ ಮಾತನ್ನು ಈ ಕಟ್ಟಳೆಗಳು ಅಂದಿನ ಜನಾಂಗಕ್ಕೆ ಸಾರಿದವು.

ಈ ಜಾಡಿನಲ್ಲಿಯೇ, ಫ್ರೆಂಚ್ ರಾಜ್ಯಕ್ರಾಂತಿ (೧೭೮೯)ಯು ಮಾನವನ ಜೀವನದಲ್ಲಿ ಇನ್ನೊಂದು ಮಹತ್ವದ ಘಟನೆಯಾಗಿದೆ. ಈ ಕ್ರಾಂತಿಯು ಮಾನವನಿಗಿರಬೇಕಾದ ಸ್ವಾತಂತ್ರ್ಯ–ಸಮತೆ–ಬಾಂಧವ್ಯಗಳ ಕೊಡುಗೆಯನ್ನು ವಿಶ್ವಕ್ಕೇನೇ ಕೊಟ್ಟಿದೆ. ಮಾನವನಿಗೆ ಅವನ ಹಕ್ಕುಗಳು ಜನನದಿಂದಲೇ ಬರುತ್ತವೆಂಬ ಮಾತು ಈ ಕ್ರಾಂತಿಯಿಂದಾಗಿ ನಿರ್ಣಯಿಸಲ್ಪಟ್ಟಿತು. ಮಧ್ಯಯುಗದ ಸೇವಕವೃತ್ತಿ (serfdon) ಆಮೂಲಾಗ್ರ ಅಂದು ನಾಶಪಡಿಸಲ್ಪಟ್ಟಿತು. ದುರ್ದೈವದ ಮಾತೆಂದರೆ, ಅಲ್ಲಿ ಜೀತವು ನಾಶವಾದರೂ, ಗುಲಾಮಗಿರಿಯು ನಾಶವಾಗಲಿಲ್ಲ. ಬಡವರನ್ನು, ಅಜ್ಞಾನಿಗಳನ್ನು, ಹಿಂದುಳಿದವರನ್ನು, ಮರುಳರನ್ನು ಪಶುಗಳಂತೆ ಹಿಡಿದು ಪೇಟೆಗಳಲ್ಲಿ ಉಳಿದ ಪ್ರಾಣಿಗಳನ್ನು ವಿಕ್ರಯಿಸುವಂತೆ ವ್ಯವಹರಿಸುವ ಈ ಉದ್ಯೋಗ ೧೯ನೆಯ ಶತಮಾನದ ವರೆಗೂ ಇದ್ದಿತು. ಗ್ರೀಕ್–ರೋಮನ್‌ರೂ ಕೂಡ ಈ ಗುಲಾಮರನ್ನು ಇರಿಸಿಕೊಂಡಿದ್ದರಂತೆ! ಉದಾರಿಗಳಾದವರು ಕೆಲವರು ತಮ್ಮ ಗುಲಾಮರಿಗೆ ಮುಕ್ತಿಯನ್ನೂ ಕಲ್ಪಿಸಿದ್ದರಂತೆ! ನಂತರದ ದಿನಗಳಲ್ಲಿ ಯಂತ್ರಕೈಗಾರಿಕೆ, ಮತ್ತು ಹೊಸನೆಲಗಳ ಶೋಧದಿಂದ ಹೆಚ್ಚು ಜನರು ದುಡಿಯಬೇಕಾಯಿತು. ಈ ಜನಬೇಡಿಕೆಯ ಪ್ರಮೇಯವೂ ಗುಲಾಮಗಿರಿಯನ್ನು ಮುಂದುವರಿಸಲು ಕಾರಣವಾಯಿತು. ಅಮೇರಿಕೆಗೆ ಆಫ್ರಿಕದ ನಿಗ್ರೋಗಳು ವಲಸೆಹೋದ ರೀತಿಯು ಈ ಮಾತನ್ನು ಸ್ಪಷ್ಟೀಕರಿಸುತ್ತದೆ. ಮುಂದೆ ಅಮೇರಿಕೆಯ ಅಧ್ಯಕ್ಷ ಲಿಂಕನ್‌ನ ಕಾಲದಲ್ಲಿ ಈ ದುಷ್ಟವೃತ್ತಿಯು ಹೊಡೆದುಹಾಕಲ್ಪಟ್ಟಿತು. ಈ ಹೋರಾಟದಲ್ಲಿ ಲಿಂಕನ್ ತನ್ನ ಪ್ರಾಣವನ್ನೇ ಬಲಿಕೊಡಬೇಕಾಯಿತು. ಗುಲಾಮನಾದವನು, ಸೇವಕನಾದವನು ತನ್ನ ಈ ಸ್ವಾತಂತ್ರ್ಯವನ್ನು ಅತಿ ನೋವಿನ ಹೋರಾಟದಿಂದಲೇ ಗಳಿಸಿದ್ದಾನೆ. ಈಗ ಅವನು ತನ್ನ ಅಭಿಪ್ರಾಯಗಳನ್ನು ಮುಕ್ತಮನಸ್ಸಿನಿಂದ

ಹೇಳುತ್ತಾನೆ; ತನ್ನ ಧರ್ಮವನ್ನು ಅನುಸರಿಸುತ್ತಾನೆ; ತನ್ನ ಮಕ್ಕಳನ್ನು ತನಗೆ ತಿಳಿದಂತೆ ಬೆಳೆಸುತ್ತಾನೆ. ಈ ದಿಶೆಯಲ್ಲಿ ನಮ್ಮ ಕಾಲದ ಪತ್ರಿಕೆಗಳು, ಧರ್ಮಮಠಗಳು ಇನ್ನೂ ಅನೇಕ ಇಂತಹ ಸಾಮಾಜಿಕ ಸಂಸ್ಥೆಗಳು ಅಧಿಕಾರದಲ್ಲಿದ್ದವರನ್ನು ನೇರಮಾರ್ಗಕ್ಕೆ ತರುವ ಪ್ರಯತ್ನ ಮಾಡಿವೆ. ಇಲ್ಲಿ ಪ್ರಾಮುಖ್ಯವಾಗಿ ಶಿಕ್ಷಣವು ಮಹತ್ವದ ಘಟಕವಾಗಿದೆ. ಶಿಕ್ಷಣವಿಲ್ಲದ ರಾಜ್ಯಕೀಯ ಅರ್ಥವಿಲ್ಲದ್ದು.

ಹಿಟ್ಲರ್-ಒಂದು ನೈಶ್ಚಿಕ ದುರಂತ :

೨೦ನೆಯ ಶತಮಾನದ ಮಧ್ಯದಲ್ಲಿ ಜಗತ್ತು ಒಂದು ಸ್ತಿಮಿತಕ್ಕೆಬರುವ ಕಾಲಕ್ಕೆ ಮಾನವನು ತನ್ನ ಸ್ವಾತಂತ್ರ್ಯದ ಹಕ್ಕುಗಳಿಗೆ ಚ್ಯುತಿಯನ್ನು ತಂದುಕೊಳ್ಳುವಂತಹ ಘಟನೆಗೆ ಈಡಾದನು. ಹಿಟ್ಲರ್‌ನ ರಾಜಕೀಯದಲ್ಲಿ ಜರ್ಮನ್ ಜನಾಂಗವು ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡಿತು. ಅಂದು ನೈತಿಕ ವಿಚಾರಗಳೆಲ್ಲವೂ ಗಾಳಿಗೆ ತೂರಲ್ಪಟ್ಟವು. ಜನಾಂಗ – ಜನಾಂಗಗಳಲ್ಲಿ ದ್ವೇಷವು ಬೋಧಿಸಲ್ಪಟ್ಟಿತಲ್ಲದೆ, ಮಾನವೀಯ ಹಕ್ಕುಗಳು ತುಳಿಯಲ್ಪಟ್ಟವು. ಈ ಎಲ್ಲದುದರ ಪರಿಣಾಮವೇ–ಯುದ್ಧ. ಈ ಕೇಡು ಅಂತರಾಷ್ಟ್ರೀಯ ವ್ಯಾಪ್ತಿಗೆ ನೂಕಲ್ಪಟ್ಟುದು ಇನ್ನೂ ದುಃಖದ ವಿಷಯ. ಅನೇಕ ದೇಶಗಳು ನೇರವಾಗಿ ಭಾಗವಹಿಸಿದ್ದಂತೆ, ಇನ್ನೂ ಅನೇಕ ದೇಶಗಳು ಅಪರೋಕ್ಷವಾಗಿ ತೊಂದರೆಗೊಳಗಾದವು. ಜಗತ್ತಿನ ಸೃಜನಾತ್ಮಕ ಪ್ರಗತಿ ಕುಂಠಿತಗೊಂಡು ಮಾನವೀಯತೆಯೇ ನಶಿಸಿಹೋಯಿತೇನೋ ಎಂಬ ಭಾವನೆ ಬುದ್ಧಿವಂತ ಸಮಾಜದಲ್ಲಿ ತಲೆದೋರಿತು. ಪೊಳ್ಳು ಶುದ್ಧರಕ್ತದ ದುರಭಿಮಾನವನ್ನು ಜರ್ಮನ್ ಜನತೆ ತಮ್ಮ ಮನದಲ್ಲಿ ಹಿಡಿಯಿತು. ಸರ್ವಾಧಿಕಾರಿ ಸರಕಾರ ಜನತೆಗೆ ಬೇಕಾದುದನ್ನು ಮಾಡದೆ ತನಗೆ ಬೇಕಾದುದನ್ನು ಮಾಡಿತು. ಇಡಿಯ ಜಗತ್ತೇ ತಲ್ಲಣಿಸಿತು.ಬೇಡವಾದರೂ ಅನೇಕ ದೇಶಗಳು ಈ ಹತ್ಯಾಕಾರಿ ಸಂಘಟನೆಯಲ್ಲಿ ಪಾಲುಗೊಂಡವು. ಜನಾಂಗ ದ್ವೇಷಕ್ಕೆ ಮತ್ತೊಂದು ಉದಾಹರಣೆಯೇ ಇಲ್ಲದಂತಹ ಯಹೂದಿ ಹತ್ಯೆ ಆಗ ನಡೆಯಿತು. ನಿರಪರಾಧಿಗಳು 'ಕಾನ್ಸೆಂಟ್ರೇಶನ್' ಕ್ಯಾಂಪುಗಳಲ್ಲಿ ಎಷ್ಟೋ ವರ್ಷಗಳವರೆಗೆ ಹೆಣಗಳ ರೂಪದಲ್ಲಿ ಬದುಕಿದರು–ಕೆಲವರು ಸತ್ತರು. ಮಾನವೀಯ ಹಕ್ಕು-ಸ್ವಾತಂತ್ರ್ಯವನ್ನು ಗೌರವಿಸಿದ ಅನೇಕ ಗೌರವಸ್ಥರು ಶಿಕ್ಷಿಸಲ್ಪಟ್ಟರು. ಕೆಲವರು ಜೀವ ಉಳಿಸಿಕೊಳ್ಳಲು ದೇಶತ್ಯಾಗ ಮಾಡಬೇಕಾಯಿತು. ದೇಶ ದೇಶಗಳಲ್ಲಿಯ ಸೃಜನಾತ್ಮಕ ಸಂಪನ್ಮೂಲಗಳು ಮದ್ದು–ಗುಂಡುಗಳ ನಿರ್ಮಿತಿಗೆ ಹಾಳುಮಾಡಲ್ಪಟ್ಟವು. ಇವರ ಒಟ್ಟು ಪರಿಣಾಮವೆಂದರೆ ಯುದ್ಧ–ಗಡಿಬಿಡಿ. ಇದರ ಒಟ್ಟು ಪರಿಣಾಮವೆಂದರೆ, ಅನೇಕ ರಾಜ್ಯಗಳು ನಿರ್ನಾಮವಾದವು. ಕೆಲವು ಆ ಕಾವಿನಿಂದ ಇನ್ನೂ–೩೫ ವರ್ಷಗಳ ನಂತರವಲ್ಲಿಯೂ ಚೇತರಿಸಿಕೊಂಡಿಲ್ಲ. ಅನೇಕರು ಸಾವುನೋವುಗಳಿಗೆ ತುತ್ತಾದರು. ಕೂಳಿಗೂ ಬರ ಬಂದಿತು. ಜನತೆ ಅಸಹಾಯ ಸ್ಥಿತಿಯಲ್ಲುಳಿಯಿತು. ಈ ಒಂದು ೨ನೆಯ ಮಹಾಯುದ್ಧದಿಂದ ಸತ್ತವರೆಷ್ಟು? ಸುಮಾರು ೪ ಕೋಟಿ ಎಂದು ಅಂದಾಜು ಮಾಡಲಾಗಿದೆ !

ಯಂತ್ರಯುಗದ ಗಂಡಾಂತರ :

ಮಾನವೀಯ ಹಕ್ಕುಗಳ ಚ್ಯುತಿಗೆ ಇನ್ನೊಂದು ಗಂಡಾಂತರವೆಂದರೆ-ಯಂತ್ರ ಯುಗ ಯಾಂತ್ರಿಕ ಕ್ರಾಂತಿಯ ನಂತರವಲ್ಲಿ ಅನೇಕ ಯಂತ್ರಸ್ಥಾವರಗಳು ಸ್ಥಾಪಿಸಲ್ಪಟ್ಟವು. ಅವು ಲಕ್ಷಾಂತರ ಜನರನ್ನು ತಮ್ಮ ಕಕ್ಷೆಯಲ್ಲಿ ಸೆಳೆದುಕೊಂಡವು. ಇವುಗಳ ಭರಾಟೆಯ ಪ್ರಗತಿಯಿಂದ ಅನೇಕ ದೇಶಗಳು ತಮ್ಮ ಬಂಡವಾಳಗಳನ್ನು ಜಗತ್ತಿನಾದ್ಯಂತ ವಿಸ್ತರಿಸಿಕೊಂಡವು; ಅದನ್ನೇ ಉಳಿದ ದೇಶಗಳನ್ನು ತಮ್ಮ ಕೈಯಲ್ಲಿರಿಸಿಕೊಳ್ಳಲು ಸಂಧಾನವನ್ನಾಗಿಸಿದವು. ಅನೇಕ ಯುದ್ಧಪ್ರಿಯರಿಗೆ ಇದೂ ಒಂದು ಮಹತ್ವದ ಅಸ್ತ್ರವಾಯಿತು. ಇದು ಮುಂದೆ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಹಾನಿಯನ್ನು ತಂದಿತು. ಯಂತ್ರ ಸ್ಥಾವರಗಳ ದಾಸ್ಯತ್ವ ಆಗ ದೇಶದೇಶಗಳಲ್ಲಿ ಕಂಡ ನಗ್ನಸತ್ಯವಾಯಿತು. ಅನೇಕರು ಈ ಕೇಡನ್ನು ಎದುರಿಸಲು ಸಿದ್ಧರಾದರು. ಈಗೇನೋ ನಾವು ಮಾನವೀಯ ಹಕ್ಕುಗಳನ್ನು ಧಾರಾಳವಾಗಿ ಅನುಭವಿಸಿದರೂ ಅವು ತಾವೇ ಬಂದವುಗಳಲ್ಲ. ಅವುಗಳನ್ನು ಮಾನವನು ಅನೇಕ ವರ್ಷಗಳ ತ್ಯಾಗ-ಬಲಿದಾನ-ಹೋರಾಟಗಳಿಂದ ಗೆದ್ದುಕೊಂಡಿದ್ದಾನೆ. ಇವುಗಳನ್ನು ಮನ್ನಿಸುವಾಗ ದೇಶದೇಶಗಳಲ್ಲಿನ ಹಿತಾಸಕ್ತಿಗಳಿಗೆ ಪೆಟ್ಟಾಗುವುದು ಸಹಜ. ವ್ಯಷ್ಟಿ-ಸಮಷ್ಟಿ ದ್ವಂದ್ವ ಕಿತ್ತೇಳುವೂದೂ ಅಷ್ಟೇ ಸಹಜ. ಈ ಹಿತಾಸಕ್ತಿಗಳು ವೈಯಕ್ತಿಕ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಪ್ರವೃತ್ತಿಯನ್ನು ಪ್ರಕಟಿಸಲೂಬಹುದು.

ಗುಲಾಮರ ವ್ಯಾಪಾರ :

ಅತಿ ಪುರಾತನ ಗ್ರೀಕ್-ರೋಮನ್‌ರ ಕಾಲದಿಂದಲೂ ಈ ಮಾರಾಟ ಅನೂಚಾನವಾಗಿ ೧೯ ನೆಯ ಶತಮಾನದವರೆಗೂ ಬಂತು. ಹೊಸಜಗತ್ತಿನ ಶೋಧನೆಯಿಂದ ಜನಶಕ್ತಿಯ ಬೇಡಿಕೆ ಹೆಚ್ಚಾಯಿತು. ಹೊಲಗಳಲ್ಲಿ ದುಡಿಯಲು, ಯಂತ್ರಸ್ಥಾವರಗಳಲ್ಲಿ ಕೆಲಸಮಾಡಲು, ಬಿಳಿಯರ ಸೇವಕರಾಗಲು ಅನೇಕರು ಬೇಕಾದರು. ಈ ಕಾರಣಗಳಿಂದಾಗಿ ಗುಲಾಮರ ವ್ಯಾಪಾರಕ್ಕೆ ಎಲ್ಲಿಲ್ಲದ ಕಳೆಯೇರಿತು. ದನದ ಪೇಟೆಯಲ್ಲಿ ದನಗಳನ್ನು ಕೊಳ್ಳುವಂತೆ ಜನರನ್ನು ಹಣವಿದ್ದವರು ಕೊಂಡು ಕುತ್ತಿಗೆಗೆ ಹಗ್ಗಕಟ್ಟಿ ಮನೆಗೊಯ್ಯುವ ದೃಶ್ಯ ಆಗ ಸರ್ವೇಸಾಮಾನ್ಯವಾಗಿತ್ತು. ಈ ಗುಲಾಮರು ಗಂಡ-ಹೆಂಡರಿರಬಹುದು, ತಾಯಿಮಕ್ಕಳಿರಬಹುದು— ಅವರು ಯಾವ ಕರುಣೆಯಿಲ್ಲದೇನೇ ಅಗಲಿಸಲ್ಪಟ್ಟರಲ್ಲದೆ, ಪಶುಗಳಿಗಿಂತಲೂ ತೀರ ಹೀನರೀತಿಯಲ್ಲಿ ನಡೆಸಿಕೊಳ್ಳಲ್ಪಟ್ಟರು. ೧೮೫೨ ರಲ್ಲಿಯ 'Uncle Tom's Cabin' ನಲ್ಲಿಯ ಆ ದಾರುಣ ಚಿತ್ರ ಈ ಮಾತಿಗೊಂದು ಜ್ವಲಂತ ಉದಾಹರಣೆಯಾಗಿದೆ. ೧೯ ನೆಯ ಶತಮಾನದಲ್ಲಿ ಈ ವ್ಯಾಪಾರಕ್ಕೆ ತಡೆಬಂದಿತು. ಪ್ರಾಯಶಃ ಇದಕ್ಕೆ ತಡೆಯನ್ನು ತಂದವರಲ್ಲಿ ಶ್ರೀ ವಿಲ್‌ಬರ್‌ಪೋರ್ಸ್‌ರನ್ನು ನಾವು ಇಲ್ಲಿ ನೆನೆಯಬೇಕು.

ಹೊಸಜಗತ್ತಿನ ಸಂಪರ್ಕ :

ಜಗತ್ತಿನ ಅನೇಕ ಜನಾಂಗಗಳು ಯುಗಯುಗಗಳಿಂದ ತಮ್ಮತಮ್ಮಲ್ಲಿ ಅನೇಕ

ರೀತಿಯ ಸಂಪರ್ಕಗಳನ್ನಿರಿಸಿಕೊಂಡ ಮಾತು ತೀರ ಹಳೆಯದು. ಈ ಸಂಪರ್ಕವು ಮನುಷ್ಯರು ಮನುಷ್ಯರನ್ನು ತಿನ್ನುವ ರೀತಿಯಲ್ಲಿಯೂ ಇದ್ದ ಕುರುಹುಗಳನ್ನು ನಾವು ಈಗ ಕಾಣುತ್ತೇವೆ. ೧೬ನೆಯ ಶತಮಾನದಲ್ಲಿ ಯುರೋಪಿನ ಸಮುದ್ರ ದಂಡೆಯ ಪ್ರದೇಶದ ಜನ ಈ ಹೀನಮಾನವ ಮಾಂಸಭಕ್ಷಣದ ಕೆಲಸದಲ್ಲಿದ್ದ ಮಾತನ್ನು U.N.O. ಪ್ರಕಟಣೆಯು ಚಿತ್ರ ಮುಖಾಂತರ ಪ್ರಕಟಿಸಿದೆ. ಈ ರೀತಿ, ಮಾನವನಲ್ಲಿಯ ಅನೇಕ ಹೀನ ಪ್ರವೃತ್ತಿಗಳು ತೀರ ಕಳೆಪೆಯಾಗಿ ಇಡಿಯ ಮಾನವ ಜೀವನಕ್ಕೇನೇ ಮಾರಕವಾದ ಉದಾಹರಣೆಗಳು ಹೇರಳವಾಗಿವೆ. ಈ ಜನಸಂಪರ್ಕಗಳು ಮಿಶ್ರಪರಿಣಾಮಗಳನ್ನು ತಂದಿವೆ. ೧೮ನೆಯ ಶತಮಾನದವರೆಗೂ ಮಾನವನ ವೈಯಕ್ತಿಕ ಅಭಿಪ್ರಾಯಕ್ಕೆ ಮಹತ್ವ ಬರಲಿಲ್ಲ. ಹಾಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದವರು ಶಿಕ್ಷೆಗೆ ಗುರಿಯಾದರು. ಅನೇಕರು ತಮ್ಮ ತಲೆಗಳನ್ನೂ ಕಳೆದುಕೊಂಡರು.

ವೈಯಕ್ತಿಕ ಆಸ್ತಿಯ ಸಂರಕ್ಷಣೆ :

ವೈಯಕ್ತಿಕ ಆಸ್ತಿ ಈಗ ಒಂದು ವಿವಾದಾಸ್ಪದ ಸಂಗತಿ. ಕಮ್ಯುನಿಸ್ಟ ಕ್ರಾಂತಿಯ ನಂತರದಲ್ಲಿ ಅದು ಇನ್ನೂ ಕೆಳಕ್ಕೆ ಇಳಿಸಲ್ಪಟ್ಟದೆ. ಜಗತ್ತಿನ ಇತಿಹಾಸದಲ್ಲಿ ಈ ವೈಯಕ್ತಿಕ ಆಸ್ತಿಗಳಿಗೆ— ಕ್ರೂರರಾಜರ ಕಾಲದಲ್ಲಿಯೂ ಕೂಡ ಮನ್ನಣೆಯಿತ್ತು. ಮಾನವನ ಕುಟುಂಬ, ಮನೆ, ಮುಂತಾದವುಗಳೊಡನೆ ಇನ್ನೂ ಅನೇಕ ವಸ್ತುಗಳು ಈ ವೈಯಕ್ತಿಕ ಆಸ್ತಿಯಲ್ಲಿ ಸೇರಿಕೊಂಡಿವೆ. ಈ ಆಸ್ತಿಯ ಸಂರಕ್ಷಣೆಯೊಂದಿಗೆ ಅವನು ತನ್ನ ದುಡಿಮೆಯ ಘನತೆಯನ್ನು ಹೆಚ್ಚಿಸಿಕೊಂಡಿದ್ದಾನೆ. ಕುಟುಂಬದ ಸ್ವಾತಂತ್ರ್ಯದೊಂದಿಗೆ ತನ್ನ ದುಡಿಮೆಯ ಕ್ಷೇತ್ರದಲ್ಲಿಯೂ ಅವನಿಗೆ ವಿಶೇಷ ಸ್ವಾತಂತ್ರ್ಯಗಳು ಈಗಲೀಗ ಲಭಿಸಿವೆ. ವೈಯಕ್ತಿಕ ಆಸ್ತಿಯ ಬಗ್ಗೆ ಅದರ ವಿರೋಧಿಗಳು ಮಾಡುವ ಆರೋಪಗಳಲ್ಲಿ ಒಂದು ಅತ್ಯಂತ ಮಹತ್ವದ್ದು : ಈ ಆಸ್ತಿಯು ಬೆಳೆದು ಉಳಿದವರ ಆಸ್ತಿಗಳನ್ನು ಕಬಳಿಸಲು ಸಾಧ್ಯವೆಂಬುದು, ಸಣ್ಣ ಮೀನಗಳನ್ನು ದೊಡ್ಡ ಮೀನಗಳು ನುಂಗುವ ರೀತಿಯಲ್ಲಿ. ಆದರೆ ವೈಯಕ್ತಿಕ ಆಸ್ತಿಯು ಅದೊಂದು ಮಾನವೀಯ ಹಕ್ಕು. ರಸಿಯಾದಂತಹ ಕಮ್ಯುನಿಸ್ಟ ದೇಶದಲ್ಲಿಯೂ ಕೂಡ ಈಗ ಈ ಸ್ವಂತದ ಆಸ್ತಿಗೆ— ಕೆಲವು ಪರಿಮಿತಿಗಳ ಮುಖಾಂತರ ಒಪ್ಪಿಗೆ ದೊರೆತಿದೆ.

ಸ್ತ್ರೀ ಸ್ವಾತಂತ್ರ್ಯ :

ಹೆಣ್ಣನ್ನು ಗಂಡು ನಡೆಸಿಕೊಂಡ ರೀತಿಯೂ ಒಂದು ಕುತೂಹಲಕಾರಕ ಇತಿಹಾಸ ವಾಗಿದೆ. ಅನೇಕ ಯುಗಗಳಲ್ಲಿ ಹೆಣ್ಣು ಕೇವಲ ಭೋಗವಸ್ತುವಾಗಿ ಉಳಿಯಿತು. ಈ ಮಾತು ಮಧ್ಯಯುಗದವರೆಗೂ ಬಂದುನಿಲುಕಿದೆ. ಮಧ್ಯಯುಗದಲ್ಲಿ ಸ್ತ್ರೀಗೆ ಗೌರವಾದರಗಳು ಹೆಚ್ಚಿದವು. ಈಗಂತೂ ಸ್ತ್ರೀಯು ಸಮಾಜದಲ್ಲಿ ಬಹುದೊಡ್ಡ ಸ್ಥಾನಗಳನ್ನು ಗಳಿಸಲು ಸಾಹಸಪಟ್ಟಿದ್ದಾಳೆ. ಈ ಹಿಂದಿನ ನೂರುವರ್ಷಗಳಲ್ಲಿ ಆಕೆಯ

ಪ್ರಗತಿ ಕ್ರಾಂತಿಕಾರಿಯೆನ್ನುವಷ್ಟು ದ್ರುತಗತಿಯನ್ನು ಪಡೆದಿದೆ. ಆದರೆ ಜಗತ್ತಿನ ಅನೇಕ ಜನಾಂಗಗಳಲ್ಲಿ ಆಕೆಗೆ ಬರಬೇಕಾದ ಸ್ವಾತಂತ್ರ್ಯ ಬಂದಿಲ್ಲ. ಅನೇಕ ಹಿಂದುಳಿದ ಏಶಿಯ, ಆಫ್ರಿಕಾ ದೇಶಗಳಲ್ಲಿ ಆಕೆ ಈಗ್ಲೂ ಅಬಲೆ. ೪ ಆಡುಗಳಿಗೆ ಒಬ್ಬ ಊರ ಗೌಡನ ಮಗಳನ್ನು ಪಡೆಯುವುದು ಈಗ್ಲೂ ಆಫ್ರಿಕೆಯ ಒಂದು ದೇಶದಲ್ಲಿ ಸಾಧ್ಯ. ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ ಸುಧಾರಿತ ಪಾಶ್ಚಾತ್ಯ ಪೌರ್ವಾತ್ಯ ದೇಶಗಳಲ್ಲಿ ಬಂದಿದೆ— ಬರುವುವರಲ್ಲಿದೆ. ಅಲ್ಲಿ ಸ್ವೈರವೃತ್ತಿ ಸ್ತ್ರೀಯರಲ್ಲಿ ತಾಂಡವವಾಡುತ್ತಿದೆ. ಸ್ವಾತಂತ್ರ್ಯ ಬೇರೆ— ಸ್ವೈರ ಬೇರೆ. ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಕೌಟುಂಬಿಕ ಸ್ವಾಸ್ಥ್ಯ ಹಾಳಾಗಿದೆ. ಹುಟ್ಟಿದ ಮಕ್ಕಳು ಬೀದಿಯಪಾಲು. ವಾರಸುದಾರರಿಲ್ಲದ ಮಕ್ಕಳಿಗೆ ಅಲ್ಲಿನ ಸರಕಾರವು ಈಗ ವಾರಸುದಾರವಾಗಬೇಕು. ಹಿಪ್ಪಿಗಳು, ಬೀಟರ್‌ಗಳು, ಫ್ಲಾವರ್ ಸನ್ಸ್ ಮುಂತಾದ ತರುಣ ಅಲೆಮಾರಿಗಳು ಈ ಕೌಟುಂಬಿಕ ಅಸ್ವಾಸ್ಥ್ಯ ಮತ್ತು ಸ್ತ್ರೀಯ ಸ್ವೈರದಿಂದ ನಿರ್ಮಾಣಗೊಂಡಿದ್ದಾರೆ.

ಧಾರ್ಮಿಕ ಸಹನೆ :

ಧರ್ಮ–ಧರ್ಮಗಳಲ್ಲಿನ ಅಸಹನೆಯೂ ಕೂಡ ಮಾನವೀಯ ಹಕ್ಕುಗಳ ಕ್ಷೇತ್ರದಲ್ಲಿ ಮಹತ್ವದ ಪಾತ್ರವನ್ನಾಡಿದೆ, 'ಧರ್ಮ'ದ ಸ್ವಾರ್ಥಕ್ಕಾಗಿಯೇ ಅನೇಕ ಯುದ್ಧಗಳಾಗಿವೆ. ಧರ್ಮದ ಹೆಸರಿನಲ್ಲಿ ಅನೇಕ ಜನಾಂಗಗಳು ಅಳಿಯಲ್ಪಟ್ಟವು. ಇದಕ್ಕೆ ಪ್ರಬಲ ಉದಾಹರಣೆಯೆಂದರೆ— ಯಹೂದಿಯರದು. ಧರ್ಮದ 'ರಕ್ಷಣೆ'ಯ ನೆಪದಲ್ಲಿ ಎಷ್ಟೋ ವೈಚಾರಿಕರು ಸಾವನ್ನಪ್ಪಿದರು. ಒಂದು ಧರ್ಮದ ನಂಬುಗೆಯು ಇನ್ನೊಂದಕ್ಕಿಂತ ತೀರ ವಿಭಿನ್ನವಾದುದೇ ಹಲವಾರು ತಿಕ್ಕಾಟಗಳಿಗೆ ಕಾರಣವಾಗಿದೆ. ಬುದ್ಧ ತನ್ನ ಹಾಸಿಗೆಯ ಮೇಲೆ ಮಲಗಿ ಸಾಯುವಾಗ ಅವನಿಗೆ ಎಂತಹ ದುಃಖಗಳು ಬಂದವೆಂಬುದು ಸಂದಿಗ್ಧವಾಗಿದ್ದರೂ, ಸಾಕ್ರೆಟಿಸ್ ತನ್ನ ನಂಬುಗೆಗಾಗಿಯೇ 'ಹ್ಯಾಮ್ ಲಾಕ್' ವಿಷ ಕುಡಿದು ಸ್ವಸಂತೋಷದಿಂದ ಮರಣವನ್ನು ಅಪ್ಪಿದ್ದಾನೆ. ಜಗತ್ತಿಗೇನೇ ಲೇಸನ್ನು ಬಯಸಿದ ಏಸು ಸ್ವಾಮಿ ಕ್ರೂಜೆಗೆ ಮೊಳೆಹೊಡಿಸಿಕೊಂಡು ಪ್ರಾಣಬಿಡುವಾಗ 'ದೇವನೇ ಅವರನ್ನೆಲ್ಲ ಕ್ಷಮಿಸೆಂದು' ಪ್ರಾಣಬಿಟ್ಟದ್ದು ಮಹತ್ವದ ಮಾತೇ ಆಗಿದೆ. ಅನೇಕ ಜನಾಂಗಗಳು ತಮ್ಮ ರಾಜಕೀಯ ಪ್ರಾಬಲ್ಯದಿಂದ ಮೆರೆಯುವಾಗ ತಮ್ಮ ಧರ್ಮಗಳನ್ನು ಉಳಿದವರ ಮೇಲೆ ಒತ್ತಾಯದಿಂದ, ಒತ್ತಾಸೆಯಿಂದ ಹೇರಿದ ಸಂದರ್ಭಗಳು ಕಾಲನ ಗರ್ಭದಲ್ಲಿ ಉಳಿದಿವೆ. ಈ ಒತ್ತಾಯದ ಧಾರ್ಮಿಕ ಹೇರುವಿಕೆ ಮಿಥ್ಯೆ ಎಂಬ ಕಲ್ಪನೆ ಈಗ ಮಾನವೀಯ ಹಕ್ಕುಗಳಲ್ಲಿ ಮಿಳಿತವಾದದ್ದು ಅಸಾಮಾನ್ಯ ವೆಂದೇ ಹೇಳಬೇಕು.

ಶಿಕ್ಷಣ :

ಶಿಕ್ಷಣವು ಮಾನವನ ವಿಶಿಷ್ಟ ಹಕ್ಕು. ಅನೇಕ ಭೌಗೋಲಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳಿಂದಾಗಿ ಶಿಕ್ಷಣವು ಕಷ್ಟದಲ್ಲಿದೆ. ಅನಕ್ಷರತೆ ಹೋಗಬೇಕು

ಎಂಬ ವಿಚಾರದಲ್ಲಿ ಎರಡು ಅಭಿಪ್ರಾಯ ಎಲ್ಲಿಯೂ ಇಲ್ಲ. ಶಿಕ್ಷಣವಿಲ್ಲದ ಹಕ್ಕುಗಳಾಗಲಿ, ರಾಜಕೀಯ ಸ್ವತಂತ್ರತೆಯಾಗಲಿ ಮುಂದೆ ಅನಾಹುತಗಳಿಗೆ ಕಾರಣವಾಗುವುದು. ತನ್ನ ಹಕ್ಕುಗಳ ಬಗ್ಗೆ ಪ್ರತಿಯೊಬ್ಬನಲ್ಲಿ ಜಾಗ್ರುತಿಯುಂಟಾಗುವಂತೆ, ಕರ್ತವ್ಯದ ಪ್ರಜ್ಞೆಯೂ ಅವನಲ್ಲಿ ಜಾಗ್ರುತವಾಗಿರಬೇಕಾಗುತ್ತದೆ. ಗಾಂಧೀಜಿಯವರು ಹೇಳಿದರು, "ಹಕ್ಕುಗಳು ಕರ್ತವ್ಯದೊಡನೆಯೇ ಕೂಡಿವೆಯೆಂಬ ಮಾತು ನನ್ನ ಅನಕ್ಷರಸ್ಥ ಬುದ್ಧಿವಂತ ತಾಯಿಯಿಂದ ನಾನು ಕಲಿತೆ, ವಿಶ್ವಮಾನವತೆ ಎಂಬ ಕರ್ತವ್ಯದೊಂದಿಗೆ ನಮಗೆ ಮಾನವತೆಯ ಹಕ್ಕು ಇದೆ." ಶಿಕ್ಷಣವು ತನ್ನೊಂದಿಗೆ ವೈಜ್ಞಾನಿಕ ಪ್ರಗತಿಯನ್ನೂ ತರಬೇಕಾಗಿದೆ. ಈ ಪರಿವರ್ತನೆಯಿಂದಲೇ ನಂತರದಲ್ಲಿ ಜಗತ್ತಿನ ಬದಲಾವಣೆ ಬರಬೇಕು.

ಮಾನವೀಯ ಹಕ್ಕುಗಳು :

ಮಾನವೀಯ ಹಕ್ಕುಗಳು ನಡೆದುಬಂದ ದಾರಿ ತೀರ ದೀರ್ಘವಾದದ್ದು. ಇತಿಹಾಸದ ಪುಟ-ಪುಟಗಳಲ್ಲಿ ಅವುಗಳ ಉಲ್ಲೇಖಗಳು ಹೇರಳವಾಗಿವೆ. ಏಕಸ್ವಾಮ್ಯದ ರಾಜರಿದ್ದಾಗಲೂ ಈ ಮಾನವೀಯ ಹಕ್ಕುಗಳು ಗೌರವಿಸಲ್ಪಟ್ಟಿವೆ. ಮೊಗಲರ ಕಾಲದಲ್ಲಿ ಜಹಾಂಗೀರ ದೊರೆ ತನ್ನ ಹೆಂಡತಿ ನೂರಜಹಾನ ಅಗಸನನ್ನು ಕೊಂದು ದರ್ಬಾರಿನಲ್ಲಿ ಕೈದಿಯಾದ ಕಥೆ ಐತಿಹಾಸಿಕ ಸತ್ಯವಾಗಿದೆ. ಚೋಳರಾಜರ ಕಾಲದಲ್ಲಿ ತಿರುಕೊಳವಿನಾಚಿಯ ಮಗ ರಾಜಶೇಖರ ರಾಜನ ಮಗನ ಕುದುರೆಯ ಖುರಪುಟಕ್ಕೆ ತುತ್ತಾಗಿ ಸತ್ತಾಗ ಸ್ವತಃ ರಾಜನೇ ತನ್ನ ಮಗನಿಗೆ ಶಿಕ್ಷೆಯನ್ನು ವಿಧಿಸಿದ ಮಾತು ಷಡಕ್ಷರಿಯ 'ರಾಜಶೇಖರ ವಿಳಾಸ' ಕಾವ್ಯಕ್ಕೆ ಕಥಾವಸ್ತುವಾಯಿತು. ಈ ರೀತಿ ಹಲವು ಜನಾಂಗಗಳಲ್ಲಿ ಪ್ರಚಲಿತವಿದ್ದ ಅನೇಕ ಸಾಮಾನ್ಯ ಹಕ್ಕುಗಳು ನಂತರದಲ್ಲಿ ಕ್ರೋಢೀಕರಿಸಲ್ಪಟ್ಟಿವೆ. ಈಗ ಅವು ಅಂತರಾಷ್ಟ್ರೀಯ ಸಂಘಟನೆಗಳ ಮುಖಾಂತರ ಜಗತ್ತಿನಾದ್ಯಂತ ಮತ್ತೊಮ್ಮೆ ಪ್ರಕಟವಾಗಿವೆ. ಅವುಗಳಲ್ಲಿ ಮಹತ್ವದವುಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ.

೧. ಎಲ್ಲರೂ ಹುಟ್ಟುವಾಗಲೇ ಸ್ವತಂತ್ರರು, ಸಮಾನರು.
೨. ಪ್ರತಿಯೊಬ್ಬರೂ ಎಲ್ಲ ಹಕ್ಕುಗಳಿಗೂ ಬಾಧ್ಯರು.
೩. ಪ್ರತಿಯೊಬ್ಬನಿಗೂ ತನ್ನ ಜೀವನ-ಸ್ವಾತಂತ್ರ್ಯದ ರಕ್ಷಣೆಯ ಹಕ್ಕಿದೆ.
೪. ಗುಲಾಮಗಿರಿಯಲ್ಲಿ ಯಾರನ್ನೂ ಹಿಡಿದಿಡುವಂತಿಲ್ಲ.
೫. ಅಮಾನುಷ ಶಿಕ್ಷೆ-ಕ್ರೌರ್ಯಗಳಿಗೆ ಯಾರೂ ಗುರಿಯಾಗಕೂಡದು.
೬. ಕಾಯ್ದೆಗಳ ಎದುರಿಗೆ ಎಲ್ಲರೂ ಸಮಾನರು.
೭. ಯಾರನ್ನೂ ಕಾರಣವಿಲ್ಲದೆ ಹಿಡಿದಿಡುವ, ಗಡಿಪಾರು ಮಾಡುವ ಅಧಿಕಾರ ಯಾರಿಗೂ ಇಲ್ಲ.

೮. ಪ್ರತಿಯೊಬ್ಬನಿಗೂ ತನ್ನ ಮೇಲೆ ಬಂದ ಆರೋಪಗಳನ್ನು ಅಲ್ಲಗಳೆಯುವ, ಸಿದ್ಧ ಮಾಡುವ ಅಧಿಕಾರವಿದೆ.
೯. ಯಾವ ಸರಕಾರವಾದರೂ ತಪ್ಪಿಗೆ ಯೋಗ್ಯವಾದುದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ಕೊಡಕೂಡದು.
೧೦. ಪ್ರತಿಯೊಬ್ಬನಿಗೂ ತನ್ನ ವೈಯಕ್ತಿಕ ಜೀವನದ ಸಂರಕ್ಷಣೆಯ ಅಧಿಕಾರವಿದೆ.
೧೧. ಪರದೇಶಗಳಿಗೆ ಹೋಗುವ-ತಿರುಗಿಬರುವ ಅಧಿಕಾರ.
೧೨. ತನ್ನ ರಾಜ್ಯದಲ್ಲಿ ಎಲ್ಲಿ ಬೇಕಾದರೂ ವಿಹರಿಸುವ, ಸುತ್ತಾಡುವ ಅಧಿಕಾರ.
೧೩. ಇನ್ನೊಂದು ದೇಶದಲ್ಲಿ ಆಶ್ರಯಪಡೆಯುವ ಹಕ್ಕು.
೧೪. ರಾಷ್ಟ್ರೀಯತೆಯ ಹಕ್ಕು.
೧೫. ಜನಾಂಗ, ಧರ್ಮ, ರಾಷ್ಟ್ರೀಯತೆಯ ಕಾರಣಗಳಿಂದಾಗಿ ಪರಸ್ಪರ ಮದುವೆ-ಮಕ್ಕಳನ್ನು ಹೆರುವುದು ತಡೆಹಿಡಿಯದೆಯಿರುವ ಅಧಿಕಾರ.
೧೬. ಸ್ವಂತದ ಆಸ್ತಿಯ ಹಕ್ಕು.
೧೭. ವೈಚಾರಿಕ ಸ್ವಾತಂತ್ರ್ಯ.
೧೮. ಅಭಿಪ್ರಾಯ ಸ್ವಾತಂತ್ರ್ಯ.
೧೯. ಸಂಘ-ಸಂಸ್ಥೆಗಳ ಸದಸ್ಯತ್ವದ ಸ್ವಾತಂತ್ರ್ಯ.
೨೦. ಸರಕಾರದ ಕೆಲಸಗಳಲ್ಲಿ ಭಾಗವಹಿಸುವ ಹಕ್ಕು.
೨೧. ನೌಕರಿಯ ಸಮಾನ ಹಕ್ಕು.
೨೨. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಧಿಕಾರಗಳು.
೨೩. ದುಡಿಮೆಯ ಅಧಿಕಾರ.
೨೪. ಸಮಾನ ಸಂಬಳದ ಅಧಿಕಾರ.
೨೫. ವಿಶ್ರಾಂತಿಯ ಅಧಿಕಾರ.
೨೬. ತನ್ನ ಇಚ್ಛೆಗೆ ತಕ್ಕಂತೆ ಬದುಕುವ ಅಧಿಕಾರ.
೨೭. ಎಲ್ಲ ಮಕ್ಕಳಿಗೂ ಸಂರಕ್ಷಣೆಯ ಅಧಿಕಾರ.
೨೮. ಶಿಕ್ಷಣದ ಅಧಿಕಾರ.
೨೯. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಅಧಿಕಾರ.
೩೦. ಬರೆಯುವ ಅಭಿಪ್ರಾಯಗಳನ್ನು ಪ್ರಕಟಿಸುವ ಅಧಿಕಾರ.

ಉಪಸಂಹಾರ :

ಮಾನವನು ತನ್ನ ಹಕ್ಕುಗಳ ಬಗೆಗೆ ಹೋರಾಡಿದ ಹೋರಾಟಕ್ಕೆ ದೊಡ್ಡ ಹಿನ್ನೆಲೆಯಿದೆ. ಪ್ರಾರಂಭಿಕ ಯುಗಗಳಲ್ಲಿ ಅವನು ಅನೇಕ ಸಾಧನೆಗಳನ್ನು ಕಂಡಿದ್ದರೂ, ಇಂದಿನ ಗೆಲ್ಮೆಗಳಿಗೆ ಅವು ಬೀಜಸ್ವರೂಪವಾಗಿವೆ. ಅವನು ಮಡುಕಿದ ಒಕ್ಕಲುತನ, ಭಾಷೆ, ಲಿಪಿ, ಕಾಯ್ದೆ-ಕಟ್ಟಳೆಗಳು ಇವೆಲ್ಲ ಅವನ ಜೀವನಕ್ಕೆ ಸೌಂದರ್ಯವನ್ನು

ತಂದುಕೊಟ್ಟಿವೆ. ವಿಶ್ವಬಾಂಧವ್ಯದ ಕೊನೆಯ ಗುರಿ ಅದರಿಂದ ಸಾಧ್ಯವಾಗಿದೆ. ನಂತರದ ದಿನಗಳಲ್ಲಿ ಸ್ವಾತಂತ್ರ್ಯ, ಸ್ವಾವಲಂಬನೆ, ದಾಸ್ಯನಿರ್ಮೂಲನ, ಪ್ರೌಢ ಮತದಾನ ಪದ್ಧತಿ ಮುಂತಾದ ಕಲ್ಪನೆಗಳು ಜನಸಾಮಾನ್ಯರ ಜೀವನದಲ್ಲಿ ಪ್ರವೇಶಿಸಿ ಅವರನ್ನು ಇನ್ನೂ ಹೆಚ್ಚಿನ ಎತ್ತರಕ್ಕೆ ನಿಲುಕಿಸಿವೆ. ಅವೆಲ್ಲವುಗಳ ನಿರ್ಣಯಾವತಾರಗಳಂತೆ ಈ ಮಾನವೀಯ ಹಕ್ಕುಗಳು ಮಾನವತೆಯ ಸಂರಕ್ಷಣೆಗೆ ಪ್ರಕಟವಾಗಿವೆ.

ಈ ಹಕ್ಕುಗಳಿಗೆ ಅನೇಕ ಅಡಚಣೆಗಳೂ ಬಂದಿವೆ. ಎಂದು ಅವು ಹತ್ತಿಕ್ಕಲ್ಪಟ್ಟಿವೆಯೋ ಅಂದು ನಾವು ಘರ್ಷಣೆ, ಯುದ್ಧಗಳನ್ನು ಕಂಡಿದ್ದೇವೆ. ಇಂದಿನ ತಲೆಮಾರಿನಲ್ಲಿ ಮಾನವೀಯ ಹಕ್ಕುಗಳ ವ್ಯಾಪ್ತಿ ಇನ್ನೂ ಹೆಚ್ಚುತ್ತಲಿದೆ. ಲೇಖನ ಸ್ವಾತಂತ್ರ್ಯ ಮತ್ತು ಪ್ರಯಾಣದ ಸ್ವಾತಂತ್ರ್ಯಗಳು ಇಂದಿನ ತಲೆಮಾರಿನ ಮಹತ್ವದ ಕೊಡುಗೆಗಳಾಗಿವೆ. ಇಂದು ಕುಕರ್ಮಿಗಳಿಗೂ, ಗುನ್ಹೆಗಾರರಿಗೂ ಮಾನವರಾಗಿ ಬಾಳಲು ಅಸ್ಪದಗಳನ್ನು ಕೊಡುವ ಬದಲಾದ ಸಾಮಾಜಿಕ ನೀತಿ ನಿರ್ಮಿಸಲ್ಪಟ್ಟಿದೆ. ದುಡಿಮೆಯ ಘನತೆ ಇಂದು ಕಾಕತಾಲೀಯ ನ್ಯಾಯದಿಂದಲಾದರೂ ಹೆಚ್ಚಿದೆ. ಅದರ ಪರಿಣಾಮದಂತೆ ಜನಜೀವನದ ಮಟ್ಟವೂ ಹೆಚ್ಚಿದೆ. ಕುಟುಂಬದ ಸಂರಕ್ಷಣೆಯ ದೃಷ್ಟಿಯಲ್ಲಿ ಸ್ವಂತದ ದುಡಿಮೆಯ ಫಲ ದುಡಿದವನಿಗೆ ಮುಟ್ಟುವಂತಹ ಸ್ಥಿತಿ ಇಂದು ವ್ಯವಸ್ಥಿತಗೊಂಡಿದ್ದು ಮಹತ್ವದ ಬದಲಾವಣೆಯೆಂದೇ ಹೇಳಬೇಕು. ಧರ್ಮಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಶಿಕ್ಷಣದ ಹಕ್ಕುಗಳು ವಿಶ್ವದಲ್ಲಿ ಮಾನ್ಯತೆಯನ್ನು ಪಡೆದು ಎದ್ದುನಿಂತಿವೆ. ಸರಕಾರಗಳ ವಿಸ್ತಾರಗೊಳ್ಳುತ್ತಿರುವ ಅನೇಕ ರಂಗಗಳಲ್ಲಿ ಪ್ರತಿಯೊಬ್ಬರೂ ಪಾಲುದಾರರಾಗುತ್ತಿರುವುದು ನಮ್ಮ ಕಾಲದ ಪ್ರಜಾಪ್ರಭುತ್ವದ ಮಹತ್ವದ ಹೆಮ್ಮೆಯೆಂದೇ ಹೇಳಬೇಕು. ●

ಕೋಳೂರ ಕೊಡಗೂಸು

ಸಂ : ಎಮ್. ಎಸ್. ಸುಂಕಾಪೂರ

ವಿಳಸಿತ ತಿಳಿಗೊಳ ಬಳಸಿರ್ದಳಿಗಿಳಿ
ಹೊಳೆವ ಹಂಸಮಿಥುನಗಳಿಂದ
ಥಳಥಳಿಸುವ ಉಪವನಯುತ ಕೋಳೊ
ರಿಹುದು ನೋಡು ಅದು ಬಹುಚೆಂದ || ೧ ||

ನಳಿನಾಂಬಕಿಯೆಳೆದಳಿರಡಿ ಸುಳಿಗುರುಳ್
ಸುಳಿನಾಭಿಯು ಸೊಗಸಿಂದವಳು
ಬಳೆಯುತ ಶಿವದೇವನ ಸುತೆಯೆನಿಸಿರು
ವಳು ಕೊಡಗೂಸೆಂಬುವವಳು || ೨ ||

ಬಾಲೆ ಹಾಲಿನಾ ಶೀಲ ಶಿವಾಲಯ
ಕಾಲಸವಿಲ್ಲದೆ ನೀ ಹೋಗಿ
ಬಾಲಚಂದ್ರಧರಗರ್ಪಿಸಿ ಒಲವಿಂ
ದಾಲಯದೊಳಗಿರು ನೀ ತಂಗಿ. || ೩ ||

ಕಾಲಮೂಲಕುದ್ದಾಲ ಕಲುಷ ಹರ
ಭಾಲನೇತ್ರ ಪರ ಪುರದಲ್ಲಿ
ಕಲ್ಲಿನಾಥನ ಪೂಜಿಸಿ ಬರುವೆನು
ನಿಲ್ಲದೆ ನಾಲ್ಕನೆ ದಿನದಲ್ಲಿ || ೪ ||

ಸಡಗರದಿರೆ ಪೈದೊಳೆದು ಮಡಿಯನು
ಟ್ಟುಡುಪತಿಮುಖಿ ಓಡಿದಳು ಪಾಲ
ಕಡುತವಕದಿ ಗುಡಿಹೊಕ್ಕು ನುಡಿದಳು
ಪೃಡ ಒಡಲಿಗೆ ಕುಡಿ ನೀ ಹಾಲ || ೫ ||

ಅಡಿಯೊಳಿಡುತ ನಡುಗಂಬದ ಮರೆಯೊಳು
ಅಡಗಿ ನೋಡಿ ಕುಡಿಯದಿರೆ ಹಾಲ

ಮಿಡುಕುತ ಮನದೊಳು ತಡವಡಿಸುತ ನೀ
ಕುಡಿಯದ ಕಾರಣವೇನೆನಲು ॥ ೬ ॥

ಬಾಲಿಕಿ ಹಾಲಿದು ಸಾಲದು ಸಲಿಸಲು
ಶೂಲಿ ಸೊಗಸದೇನೆಂದೊಲ್ಲ್ಯೊ
ಕಾಲಬೀಳ್ವೆ ಕರೆದೊಯ್ವೆನು ತೇರಿಗೆ
ನೀಲದ ಮಣಿಯುಂಗರ ಕೊಡಲ್ಯೊ ॥ ೭ ॥

ವಂಚನೆಯಾಡುವಳಲ್ಲೊ ನಾಗರ
ಪಂಚಮಿಯೊಳು ಹೊಸ ಕುಂಚಿಗೆಯ
ಪಂಚಮುಖನೆ ನಿನಗ್ಹೊಲಿಸಿ ಕೊಡುವೆನಾ
ಮುಂಚೆ ತೂಗುವೆನು ಉಯ್ಯಾಲೆಯ ॥ ೮ ॥

ಭಾಳನಯನ ಪರಮೇಶ್ವರ ಮೆಚ್ಚುತ
ಹಾಲ ಕುಡಿ ಹರುಷದೊಳೆಂದಾ
ಬಾಲೆಯ ನುಡಿ ಈ ಹಾಲಿನಕಿಂದಲಿ
ಆಲಿಗೆ ಸೊಗಸಾಗಿಹುದೆಂದ ॥ ೯ ॥

ಚಂದದಿ ಬಂದನು ತಂದೆಯು ಊರಿಂ-
ಗೆಂದನು ತಂದಿ ನೀ ಬರಿ ತಳಿಗೆ
ಇಂದುವದನೆ ಇದರಂದವ ನುಡಿ ನೀ
ಕೊಂದೆನು ಸೈರಿಸೆನರಗಳಿಗೆ. ॥ ೧೦ ॥

ಹುಡುಗಿಯೆನುತ ಮೃಡ ಕುಡಿಯದೆ ಕಾಡಿದ
ಕಡೆಗೆ ಕುಡಿದ ಬಿಡದೆ ಹಾಲಾ
ಬಡಿವುದು ನಡತೆನ್ನೊಡನೆ ಗುಡಿಗೆ ನಡೆ
ಉಡುಧರ ಕುಡಿವನು ನಾಳ್ಹಾಲ ॥ ೧೧ ॥

ಎಂದಿನಂದದಿ ವಂದಿಸಿ ಮುಂದಿಡೆ
ಇಂದಿನಿಸೊಲ್ಲದೆ ಸುಮ್ಮನಿರೆ
ತಂದೆ ಕೊಲುವೆನೆಂದರೆಯಟ್ಟಲು ಶಿವ
ಹೊಂದಿಸಿಕೊಂಡನು ತನ್ನೊಳಗೆ ॥ ೧೨ ॥

ಗದಾಯುದ್ಧದ ಒಂದು ಪದ್ಯವನ್ನು ಕುರಿತು

ಬಿ. ಕೆ. ಹಿರೇಮಠ

'ಸಿಂಹಾವಲೋಕನ ಕ್ರಮ'ದಿಂದ ಭಾರತದೊಳಗಣ ಕಥೆಯೆಲ್ಲವನ್ನೂ ಆರುಪಿದ ರನ್ನನ ಕವಿತಾಶಕ್ತಿ ಅಪೂರ್ವವಾದುದು. ಆದರೆ ರನನ್ನ ಈ ಗದಾಯುದ್ಧ(ಸಾಹಸಭೀಮ ವಿಜಯ)ದ ಚತುರ್ಥಾಶ್ವಾಸದ ೪೬ನೆಯ ಪದ್ಯ ಸಂದೇಹಕ್ಕೆಡೆಮಾಡುತ್ತದೆ. ಇದ್ದಕ್ಕಿದ್ದಂತೆ ಭೀಮನಿಂದ ಹತನಾದ ದುಶ್ಶಾಸನನನ್ನು ಸಂಜಯ ತೋರಿಸುತ್ತಾನೆ. 'ಕೇಳಲಾಱೆಂ' ಎಂದು ದುರ್ಯೋಧನ ಮುಂದೆಮುಂದೆ ಎಂದು ಸಾಗುತ್ತಾನೆ. ಮತ್ತೆ ಇದೇ ದೃಶ್ಯ ಪಂಚಮಾಶ್ವಾಸದ ಪ್ರಾರಂಭದಲ್ಲಿ ಪುನರಾವರ್ತನೆಯಾಗಿದೆ. ಹೀಗಿದ್ದಾಗ ಇಲ್ಲಿ ಸಂದೇಹಕ್ಕೆಡೆಮಾಡುವ ಪದ್ಯವೆಂದರೆ ಚತುರ್ಥಾಶ್ವಾಸದ ೪೬ನೆಯ ಪದ್ಯವಾಗಿದೆ. ಈ ಪುನರಾವರ್ತನೆಯನ್ನು ಕವಿ ರನ್ನ ಮಾಡಿರಲು ಸಾಧ್ಯವೆ ? ಎಂಬ ಪ್ರಶ್ನೆ ಎದ್ದುನಿಲ್ಲುತ್ತದೆ. ಈ ಪದ್ಯದಿಂದುಂಟಾಗುವ ಸಂದೇಹವನ್ನು ಕಳೆದುಕೊಳ್ಳಬೇಕಾದರೆ ಈ ಪದ್ಯ ಕವಿಕೃತವೋ ? ಪ್ರಕ್ಷಿಪ್ತವೊ ? ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಈ ಲೇಖನದ ಮುಖ್ಯ ಉದ್ದೇಶ ಇದೇ ಆಗಿದೆ.

ಚತುರ್ಥಾಶ್ವಾಸದ ೪೫ನೆಯ ಪದ್ಯದ ನಂತರ ಬರುವ ವಚನ, ಅನಂತರದ ಪದ್ಯ ಹೀಗಿದೆ:[1]

> ಅಂತು ಬಹುಳ ಪ್ರತ್ಯವಾಯ ಪ್ರದೇಶಂಗಳನೆಂತಾನುಂ ಕಳಿದು ಪೋಗೆವೋಗೆ-
> ಮುನಿದೆಯ್ದುಂದಿಲ್ಲಿ ಭೀಮಂ ಭವದನುಜನನಾ ದ್ರೌಪದೀದ್ರೋಹನಂ ಕೊಂ
> ದನೆಸಲ್ಕಾಂ ಕೇಳಲಾಱೆಂ ಪರಿಭವಮನಿದಂ ಮುಂದೆ ಮುಂದೆಂದು ಬಾಷ್ಪಾಂ
> ಬುನಿಮಗ್ನಂ ಭಗ್ನಚಿತ್ತಂ ತಲೆಯನೆಱಗಿ ಬಿಲ್ಲೋಜನೆಲ್ಲಿರ್ದನೆಲ್ಲಿ
> ರ್ದನೊ ಭೀಷ್ಮಂ ನೋಡುವೆಂ ತೋಱೆನೆ ಕುರುಕುಲನಂ ಸಂಜಯಂ ಕೊಂಡು-
> ಪೋದಂ ॥ ೪೬ ॥

ಮೇಲಿನ ಪದ್ಯದ ಹಿನ್ನೆಲೆ ಇಂತಿದೆ. ಮಗ ದುರ್ಯೋಧನನನ್ನು ಉಳಿಸಿಕೊಳ್ಳಲು ಅಂಧನೃಪ ಗಾಂಧಾರಿಯರು ಸಂಧಿಯ ಮಾತನಾಡುತ್ತಾರೆ. ದುರ್ಯೋಧನ ಅದಕ್ಕೆ ಕಿವಿಗೊಡದೆ ಸಮರವೇ 'ಸೈ' ಎನ್ನುತ್ತಾನೆ. ಉಪಾಯಗಾಣದ ಅಂಧನೃಪ 'ನೆಗೞ್ದ ಕಜ್ಜಮಾವುದುಮಂ' ಪಿತಾಮಜ್ಜ ಭೀಷ್ಮರೊಡನೆ ಆಲೋಚಿಸಿ 'ನೆಗೞ್ವುದು' ಎಂದು ಹೇಳು

---

೧. ಇಲ್ಲಿನ ಆಶ್ವಾಸ ಮತ್ತು ಪದ್ಯಗಳ ಸಂಖ್ಯೆ ಶ್ರೀ ರಾಮಾನುಜಯ್ಯಂಗಾರ್ಯರಿಂದ ಪರಿಶೋಧಿತವಾದ 'ಗದಾಯುದ್ಧಂ' (ಪರಿಷ್ಕೃತ ತೃತೀಯ ಮುದ್ರಣ-೧೯೫೫) ಎಂಬ ಗ್ರಂಥದಲ್ಲಿಯುವಾಗಿವೆ.

ತ್ತಾನೆ. ಆ ಮಾತನ್ನು ಕೇಳಿ ದುರ್ಯೋಧನ ಅವರನ್ನು ಬೀಳ್ಕೊಂಡು 'ಸಂಜಯದ್ವಿತೀಯ' ನಾಗಿ ಸಂಗ್ರಾಮ ಭೂಮಿಯಲ್ಲಿ ಬರುತ್ತಿದ್ದಾನೆ. ಮರುಳ್‌ಗಳು ಎದುರಾಗಿ ಕಾಡಿಸುತ್ತವೆ. ಅವುಗಳೊಡನೆ ಹೋರಾಟಕ್ಕೆ ನಿಲ್ಲಲಣಿಯಾದ ದುರ್ಯೋಧನನನ್ನು 'ನಯದೆ ಬಗ್ಗಿಸಿದ' ಸಂಜಯ, ಇಲ್ಲಿಯೇ ಆ ಭೀಮ ದುಶ್ಶಾಸನನನ್ನು ಕೊಂದುದು ಎಂದು ಆ ನೆಲೆಯನ್ನು ತೋರುತ್ತಾನೆ. ಅಲ್ಲಿ ಮೇಲೆ ಹೇಳಿದ ಪದ್ಯ (ಗ. ಯು. ೪–೪೬) ಕಾಣಿಸಿಕೊಳ್ಳುತ್ತದೆ.

ಇಲ್ಲಿಯ ದುರ್ಯೋಧನನ ಪ್ರತಿಕ್ರಿಯೆ ವಿಸ್ಮಯವನ್ನುಂಟುಮಾಡುವುದಾಗಿದೆ. ಸಂಜಯನು 'ಇಲ್ಲಿ ಭೀಮಂ ಭವದನುಜನನಾ ದ್ರೌಪದೀ ದ್ರೋಹನಂ ಕೊಂದಂ' ಎಂದು ಹೇಳಿದರೆ ಸುಯೋಧನ 'ಕೇಳಲಾಱೆಂ ಪರಿಭವಮನದಂ ಮುಂದೆ ಮುಂದೆ' ಎಂದು ಕಣ್ಣೀರ್ಗೂಡಿ ಭಗ್ನಚಿತ್ತನಾಗಿ ತಲೆಬಾಗುತ್ತಾನೆ. ಅಲ್ಲದೆ ಬಿಲ್ಗೋಜ ಭೀಷ್ಮರು ಎಲ್ಲಿದ್ದಾರೆ ಅವರನ್ನು ಕಾಣುವೆ; ಎಂದು ಆತುರಪಡುತ್ತಾನೆ. ಸಂಜಯ ದುರ್ಯೋಧನನನ್ನು ಕರೆದುಕೊಂಡು ಹೋಗುತ್ತಾನೆ. ಇಲ್ಲಿಂದ ಮುಂದೆ ದುರ್ಯೋಧನ ಕುಂಭಸಂಭವರನ್ನು ಅನಂತರ ಅಭಿಮನ್ಯುಕುಮಾರನನ್ನು ಆಮೇಲೆ ಲಕ್ಷ್ಮಣಕುಮಾರನನ್ನು ಅಲ್ಲನೆ ತನಗಾಗಿ ಮಡಿದ ಇನ್ನೂ ಅನೇಕ ವೀರರ ಶವಗಳನ್ನು ಕಂಡು ಶೋಕಾಕುಳೀಕೃತ ಚಿತ್ತನಾಗಿ 'ನನ್ನ ಕಾರಣದಿಂದಾಗಿ ಈ ನೃಪಸುತರುಗಳು ಈ ಗತಿಯನ್ನು ಹೊಂದಬೇಕಾಯಿತೆ ?' ಎಂದು ಕಳವಳಿಸುತ್ತಾನೆ. ಅನಂತರ ಚಾಳುಕ್ಯಕಂಠೀರವನ ಸ್ತುತಿ (ಗ. ಯು. ೪–೬೫)ಯೊಂದಿಗೆ ಚತುರ್ಥಾಶ್ವಾಸ ಕೊನೆಗೊಳ್ಳುತ್ತದೆ.

ಪಂಚಮಾಶ್ವಾಸದ ಪ್ರಾರಂಭದ ಕಂದಪದ್ಯದ ಅನಂತರ ವಚನ, ಪದ್ಯಗಳು ಹೀಗಿವೆ,

> 'ಎಂಬುದುಮುದನವಕರ್ಣಿಸಿ ಭೀಮಸೇನನ ಗದಾಪರಿಘ ಪ್ರಹರಣದಿಂ ರುಧಿರಪ್ರವಾಹ ವಶಗತನಾಗಿರ್ದ ಯುವರಾಜನಿರ್ದೆಡೆಯುಂ ಕುರುರಾಜನೆಯ್ದುವಂದಾಗಳ್-
>
> ಇದು ಭೀಮಂ ದೇವ ಕಾಳಿಂಗನ ಗಜಘಟೆಯುಂ ಕೊಂದ ತಾಣಂ ಭರಂಗೆ
> ಯ್ದಿದು ಭೀಮಂ ದೇವ ಕೌರವ್ಯರನನಿಬರುಮಂ ತಿಂದ ತಾಣಂ ಮೊಗಂ ಬೊ
> ಕ್ಕಿದು ಭೀಮಂ ದೇವ ದುಶ್ಶಾಸನ ರುಧಿರಮುಮಂ ಪೀರ್ದ ತಾಣಂ ಛಲಂ ಬ
> ಟ್ಟಿದು ಭೀಮಂ ದೇವ ಧಾತ್ರೀಸುತನಿಭದೊಳಿಭಂ ಪೋರ್ದವೊಲ್ಪೋರ್ದ ತಾಣಂ ॥೨॥
>
> ಪುಡಿಯೊಳ್ಪೊರಳ್ಚಿಯುಂ ಮೆ
> ಯ್ಯಡಗಂ ತಿಱಿತಿಱಿದು ತಿಂದು ಗೊಲ್ಲಂ
> ಗುಡಿದುಂ ನೆತ್ತರನೆಂತುಂ
> ಹಿಡಿಂಬರಿಪು ತಣಿದನಿಲ್ಲ ದುಶ್ಶಾಸನನಂ ॥ ೩ ॥

ಎಂದು ಸಂಜಯ ಪೇೞೆ ಕೆಳಗಿವಿಗೇಳ್ದು ಕಿಱಿದೆಡೆಯುಂ ಪೋಗೆ...ಅಟಲಂ ಸೈರಿಸಲಾರದೆ....!

ಇಲ್ಲಿ ದುರ್ಯೋಧನ ಪಲುಂಬಿ ಪಲವಾಡುವುದನ್ನು ನೋಡಬಹುದಾಗಿದೆ. ಇದರಿಂದ ತೋರಿಬರುವ ಅಂಶವೆಂದರೆ ದೃಶ್ಯದ ಪುನರಾವರ್ತನೆ.[೨] ಆ. ೪. ಪದ್ಯ ೪೬ನ್ನು ಗಮನಿಸಿದಾಗ, ಸಂಜಯ ತೋರಿಸಿದ ದುಶ್ಶಾಸನನ ಪರಿಭವವನ್ನು ನೋಡಲಾರದೆ 'ಮುಂದೆ ಮುಂದೆ' ಎನ್ನುವ ಸುಯೋಧನನನ್ನು ಆ ಪರಿಭವದ ತಾಣವನ್ನು ದಾಟಿಸಿ ಸಂಜಯನು ಕೊಂಡುಹೋಗಿದ್ದಾನೆ, ಎನ್ನುವ ಮಾತು ಸ್ಪಷ್ಟವಾಗಿದೆ. (ಯಾಕಂದರೆ ಮುಂದೆ ದ್ರೋಣ, ಅಭಿಮನ್ಯು, ಮುಂತಾದವರನ್ನು ಕಂಡು ದುಃಖಿಸುವ ಚಿತ್ರಣ ಬರುತ್ತದೆ). ಹೀಗಿದ್ದರೂ ಆ. ೫. ಪ. ೧ರ ನಂತರದ ವಚನ, ೨ ಮತ್ತು ೩ನೆಯ ಪದ್ಯಗಳಲ್ಲಿ ಮತ್ತೆ ದುಶ್ಶಾಸನನ ಪರಿಭವದ ತಾಣ ಕಾಣಬೇಕೆ? ಅದೇ ಸ್ಥಳವನ್ನು ದಾಟಿ ಮುಂದೆ ಹೋದವರು ಅದೇ ತಾಣವನ್ನು ಮತ್ತೆ ನೋಡುವುದು ಆಭಾಸವಾಗಿ ಕಂಡುಬರುತ್ತದೆ.

ಸುಯೋಧನ, ಸಂಜಯರು ಸುತ್ತುವರೆದು ಬಂದರೆಂದು ಗ್ರಹಿಸಿದರೆ? ಅಲ್ಲಿ ಇನ್ನೂ ಆಭಾಸಕ್ಕೆಡೆ ದೊರೆಯುತ್ತದೆ. ಹಿಂದೆ ಸಂಜಯ ಅದೇ ದುಶ್ಶಾಸನನ ಪರಿಭವದ (ಆ. ೪. ಪ. ೪೬) ಘೋರದೃಶ್ಯವನ್ನು ತೋರಬಯಸಿದಾಗ 'ಕೇಟಲಾಱೆಂ ಪರಿಭವಮನದಂ' ಎಂದು ಮುಂದೆಸಾಗಲು ಬಯಸಿದ ದುರ್ಯೋಧನನಿಗೆ ಸಂಜಯ ಮತ್ತು ಅದೇ ಕರುಳಿರಿವ ದೃಶ್ಯವನ್ನು (ಆ. ೫. ಪ. ೨–೩)ತೋರಿಸುವ ಅವಶ್ಯಕತೆಯೇನಿತ್ತು ಎಂದೆನಿಸುತ್ತದೆ. ಸಂಜಯನಿಗೆ ಪಾಂಡವರ ಬಲವನ್ನು ಹೆಗ್ಗಳಿಸಿ ಹೇಳಿ ದುರ್ಯೋಧನನನ್ನು ಯುದ್ಧದಿಂದ ತಡೆಯಬೇಕಾಗಿದೆ. ಅದಕ್ಕಾಗಿ ಪಾಂಡವರ ಅದರಲ್ಲಿಯೂ ಭೀಮನ ಶೌರ್ಯದ ಜೀವಂತ ನಿದರ್ಶನದಂತಿರುವ ದುಶ್ಶಾಸನನ ವಧಾಸ್ಥಾನವನ್ನು ಪುನಃ ಪುನಃ ತೋರಿಸುತ್ತಾನೆ ಎಂದೆನ್ನಬಹುದಾಗಿದೆ (ಇಲ್ಲಿ ರನ್ನನು ಸಂಜಯನ ವಿಷಯವಾಗಿ ಹೇಳುವ 'ನಿಸರ್ಗಮೂರ್ಖನುಂ' 'ಸ್ವಭಾವ ಧೃಢನುಂ' ಎಂಬ ಮಾತನ್ನು ಸ್ಮರಿಸಬಹುದು). ಆದರೆ ಸಂಜಯ ಪರ್ಯಾಯವಾಗಿ ಪಾಂಡವರ ಬಲವನ್ನು ಹೊಗಳಿ ದುರ್ಯೋಧನನನ್ನು ತಡೆಯಲು ಯತ್ನಿಸುತ್ತಿದ್ದಾನೆಯೆ ಹೊರತು ಹೀಗೆ ದುಶ್ಶಾಸನನನ್ನು 'ದ್ರೌಪದೀ ದ್ರೋಹನಂ' ಎಂದು ಕಟುವಾಗಿ ನುಡಿದಾಗಲಿ, ಬಿರುನುಡಿಯನ್ನಾಡಿಯಾಗಲಿ ಆತನ ಮನವನ್ನು ನೋಯಿಸಿಲ್ಲ ಎಂಬುದನ್ನು ಗಮನಿಸಬಹುದಾಗಿದೆ.

---

೨. ಶ್ರೀ ರಾಮಾನುಜೈಯ್ಯಂಗಾರ್ಯರು ರನ್ನನ ಗದಾಯುದ್ಧದ ಚತುರ್ಥಾಶ್ವಾಸದ ಕಥಾಪ್ರಸ್ತಾರವನ್ನು ಕೊಡುತ್ತ (೪೬) "ಇದು ಭೀಮನು ನಿನ್ನ ತಮ್ಮನನ್ನು ಕೊಂದ ತಾಣವು" ಎಂದು ಸಂಜಯನು ತೋರಿಸಿ ಹೇಳಲು ಅವನು ಕೆಳಗಿವಿಯಾಗಿ "ದ್ರೋಣನು ಎಲ್ಲಿದ್ದನು, ಭೀಷ್ಮರು ಎಲ್ಲಿರುವರು; ಆ ಸ್ಥಳಗಳನ್ನು ತೋರಿಸು ನಡೆ" ಎಂದು ಹೇಳುವನು (ಪುಟ lXiii).

ಪಂಚಮಾಶ್ವಾಸದ ಕಥಾಪ್ರಸ್ತಾರವನ್ನು ಕೊಡುತ್ತ '(೧-೩) ಅವರು ಹಾಗೆಯೇ ರಣರಂಗದಲ್ಲಿ ಸಂಚರಿಸುತ್ತಾ ಯುವರಾಜನಾದ ದುಶ್ಶಾಸನನು ಬಿದ್ದಿದ್ದೆಡೆಗೆ ಬಂದಾಗ, ಸಂಜಯನು "ಇದೇ ಭೀಮನು ನಿನ್ನ ತಮ್ಮನನ್ನು ಕೊಂದ ಸ್ಥಾನವೆಂದು ತೋರಿಸಿ" ಅವನ ರಕ್ತವನ್ನು ಕುಡಿದೂ ಭೀಮನು ತೃಪ್ತಿಹೊಂದಿರಲಿಲ್ಲ ಎಂದು ಹೇಳಲು '...ಅದನ್ನು ನೋಡಿ ಪಲುಬಿ....' ಎಂಬ ಪುನರಾವರ್ತಿಯ ಈ ಮಾತುಗಳನ್ನು ಗಮನಿಸಬೇಕು.

'ಪುಡಿಯೊಳ್ ಪೊರಳ್ಚಿಯುಂ .... ಹಿಡಿಂಬರಿಪು ತಣಿದನಿಲ್ಲ ದುಶ್ಶಾಸನನಂ' (ಆ. ೫. ಪ. ೩.) ಎಂಬಲ್ಲಿ ದುಶ್ಶಾಸನನ ಜರ್ಜರಿತವಾದ ಶರೀರವನ್ನು ವರ್ಣಿಸಿ ನುಡಿಯುತ್ತಿದ್ದರೂ, ಅಲ್ಲಿ ದುರ್ಯೋಧನನ ಮನಸ್ಸಿಗೆ ಆಘಾತವನ್ನುಂಟುಮಾಡಬೇಕೆಂಬ ಉದ್ದೇಶವಿಲ್ಲ. 'ಎಂತುಂ ಹಿಡಿಂಬರಿಪು ತಣಿದನಿಲ್ಲ' ಎನ್ನುವಲ್ಲಿ 'ದುಶ್ಶಾಸನನ ಪಾಡನ್ನು ಎಲ್ಲಿಗೆ ತಂದಿಟ್ಟ ಈ ಭೀಮ' ಎಂಬ ಮರುಕವಿದೆ (ಇಲ್ಲಿ ಆ. ೪. ಪ. ೪೬ ರಲ್ಲಿಯ 'ಭವದನುಜನನಾ ದ್ರೌಪದೀ ದ್ರೋಹನಂ ಕೊಂದಂ' ಎಂಬಲ್ಲಿಯ ಕಟಕಿಯನ್ನು ಗುರುತಿಸದೆ ಬಿಡಲಾಗದು). ಇದರಿಂದ ಗದಾಯುದ್ಧದ ಆ. ೪. ರ ೪೬ ನೆಯ ಪದ್ಯದಲ್ಲಿಯ ಸಂಜಯನ ನುಡಿ, ಅದಕ್ಕೆ ಸುಯೋಧನನ ಪ್ರತಿಕ್ರಿಯೆ ಅಸಹಜವಾಗಿ ಚಿತ್ರಿತವಾಗಿದೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

ಅದೇ ಪದ್ಯವನ್ನು(ಆ. ೪. ಪ. ೪೬)ಇನ್ನಷ್ಟು ಉಜ್ಜಿನೋಡೋಣ. ಇಲ್ಲಿ ಮೊದಲಸಲ ದುರ್ಯೋಧನನ ತನ್ನನುಜನ ಪರಿಭವದ ಕುರುಹವನ್ನು ಕಾಣುತ್ತಾನೆ. ಆಗ ಅಷ್ಟಾಗಿ ದುಃಖ ಅವನಲ್ಲುಕ್ಕಲಿಲ್ಲ. ಅದೇ ದುರ್ಯೋಧನ ಅನಂತರ ಕಂಡಾಗ (ಆ. ೫. ಪ. ೩ರ ನಂತರದ ಭಾಗ) ದುಃಖ ಕಟ್ಟೆಯೊಡೆಯ ಏಕೆ ಮೇರೆವಪ್ಪುವುದೋ ಗೊತ್ತಾಗುವುದಿಲ್ಲ. ಹೀಗೂ ವಿಚಾರಿಸಬಹುದು. 'ಬಿಲ್ಗೋಜನೆಲ್ಲಿರ್ದನೆಲ್ಲಿರ್ದನೊ ಭೀಷ್ಮಂ ನೋಡುವೆಂ' ಎನ್ನುವ ಸುಯೋಧನನಲ್ಲಿ ದ್ರೋಣ ಮತ್ತು ಭೀಷ್ಮರಲ್ಲಿರಿಸಿದ ಅತಿಭಕ್ತಿ ಕಾರಣವಾಗಿ ತಮ್ಮನನ್ನು ದಾಟಿಹೋದನು ಎಂದು. ಈ ಮಾತು ಅಷ್ಟು ಸಮಂಜಸವಾಗಿ ಕಾಣಲಾರದು. ಯುದ್ಧೋದ್ಯೋಗದಲ್ಲಿ 'ಮರೆಯ ಪಾಂಡವ' ರಾಗಿ ಕಾರ್ಯನಿರ್ವಹಣೆ ಮಾಡಿದರೆಂಬ ಕಾರಣದಿಂದ ಅವರೆಲ್ಲರನ್ನು ಹಳಿದು ದುರ್ಯೋಧನನು ನುಡಿಯುವ—

ಮುಡಿಯದೆ ಪಗೆ ರವಿಸುತನಿಂ
ಮುಡಿಗುಂ ಮೇಣ್ ಶೌರ್ಯಶಾಲಿ ದುಶ್ಶಾಸನನಿಂ
ಮುಡಿಗುಂ ಮೇಣೆನ್ನಿಂದಂ
ಮುಡಿಗುಂ ಪೆಱಪೆಱರಿನೆನ್ನ ಪಗೆ ಮುಡಿದಪುದೇ? (ಆ. ೩. ಪ. ೬೩)

ಎಂಬ ಮಾತನ್ನಿಲ್ಲಿ ನೆನೆಯಬಹುದು. ಹೀಗೆಂದ ಮಾತ್ರಕ್ಕೆ ದುರ್ಯೋಧನನಲ್ಲಿ ಬಿಲ್ಗೋಜ ಮತ್ತು ಭೀಷ್ಮರ ವಿಷಯದಲ್ಲಿ ಭಕ್ತಿ. ಗೌರವಾದರಗಳು ಇಲ್ಲವೆಂದಲ್ಲ. ಇತ್ತು ನಿಜ. ಆದರೆ ದುಶ್ಶಾಸನನನ್ನು ಅಲಕ್ಷಿಸಿ ಮುಂದೆ ಸಾಗುವಷ್ಟು ಎಂದು ಹೇಳಲಾದೀತೆ ?

ಇನ್ನೂ ಒಂದು ದೃಷ್ಟಿಯಿಂದ ವಿಚಾರಿಸಬಹುದು. ಮೊದಲಸಲ ದುಶ್ಶಾಸನನ ಶವ ಕಂಡಾಗಲೂ ದುರ್ಯೋಧನ ದುಃಖಿತನಾಗಿದ್ದ ಎಂಬುದನ್ನು 'ಕೇಟಿಲಾಜಿಂ ಪರಿಭವಮನದಂ ಮುಂದೆ ಮುಂದೆಂದು ಬಾಷ್ಪಾಂಬುನಿಮಗ್ನಂ ಭಗ್ನಚಿತ್ತಂ ತಲೆಯುನೆಱಿಗಿ ಸಾಗಿದ ಎಂಬ ನುಡಿಯನ್ನೇ ಮುಂದುಮಾಡಿ ಹೇಳಬಹುದು. ('ಗದಾಯುದ್ಧ

ಸಂಗ್ರಹಂ'[೩]ದ 'ದುರ್ಯೋಧನ ವಿಲಾಪಂ' ಎಂಬ ಭಾಗದಲ್ಲಿಯ ೧೧ನೆಯ ಪದ್ಯಕ್ಕೆ ಟಿಪ್ಪಣಿಯನ್ನು 'ಪರಿಭವಮುಂ ಆದಂ–ಹಾಗೆ ಕೊಲೆಯಾದ ಅವಮಾನದ ವಿಷಯವನ್ನು ತಮ್ಮನಿಗೆ ಆ ದುರ್ಮರಣವನ್ನು ತಪ್ಪಿಸಿ ಅವನನ್ನು ತಾನು ಉಳಿಸಿಕೊಳ್ಳಲಿಲ್ಲವಲ್ಲಾ ಎಂದು ದುರ್ಯೋಧನನಿಗೆ ಅಷ್ಟೊಂದು ಪರಿತಾಪ, ಸಂತಾಪ……'ಎಂದು ಬರೆಯುತ್ತಾರೆ). ಈ ಕಾರ್ಯವನ್ನು ತನ್ನಿಂದ ತಪ್ಪಿಸಲಾಗಲಿಲ್ಲವಲ್ಲ ಎಂಬ ಕಾರಣದಿಂದಾಗಿ 'ತಲೆಯಂನೆಱಗಿ'ದುದೇನು ಆಶ್ಚರ್ಯವಲ್ಲ. ಆದರೆ ಹಾಗೆಂದು ಹಾಗೆಯೇ ದಾಟಿ ಮುಂದುವರೆಯುವುದು ಮಾತ್ರ ಆಶ್ಚರ್ಯವಾಗಿ ಕಾಣುತ್ತದೆ. ಅಲ್ಲದೆ, ತನ್ನ 'ನಚ್ಚಿನಣುಗದಮ್ಮ' ದುಶ್ಯಾಸನನಿಗಾಗಿ ಸುಯೋಧನ ವ್ಯಕ್ತಪಡಿಸುವ ಕಳವಳ ಇಷ್ಟೇ ಏನು ಎಂದೆನಿಸುತ್ತದೆ.

೪ನೆಯ ಆಶ್ವಾಸದ ೪೬ನೆಯ ಪದ್ಯದಲ್ಲಿ ವ್ಯಕ್ತವಾದ ಸುಯೋಧನನ ಪ್ರತಿಕ್ರಿಯೆಯನ್ನೇ ನಾವು ಗಟ್ಟಿಯಾಗಿ ಹಿಡಿದರೆ, ದುರ್ಯೋಧನ ಬೇರೆಡೆಗಳಲ್ಲಿ ನುಡಿಯುವ (ತೃತೀಯಾಶ್ವಾಸಂ)

ಎನಗಿರ್ವರುಮೆರಡುಂ ತೋ
ಳೆನಗಿರ್ವರುಮೆರಡು ಕಣ್ಗಳನ್ನರೆ ಯುವರಾ
ಜನುಮಂಗರಾಜನುಂ ಪೋ
ಱೆನೆ ಸಂಜಯ ಮುತ್ತಮೆನಗೆ ಮಾನಸವಾಟೀ ॥ ೬೭ ॥

ಕಟಿದಂ ದಿನಕರ ತನಯಂ
ಕಟಿದಂ ಯುವರಾಜನಪ್ಪ ದುಶ್ಶಾಸನನುಂ
ತುಟಿಲಾಳ್ಗಳಿರ್ವರುಮಂ
ಕಟಿಪಿ ಸುಯೋಧನನ ಬಾಟ್ಟುದಂ ನಂಬಿದಿರೇ ॥ ೬೮ ॥

ಎನಗೆ ಮನಮಿಂದು ಶೂನ್ಯಂ
ಮನೆ ಶೂನ್ಯಂ ಬೀಡು ಶೂನ್ಯವಾದುದು ಸಕಲಾ
ವನಿ ಶೂನ್ಯಮಾಯ್ತು ದುಶ್ಶಾ
ಸನನಿಲ್ಲದೆ ಕರ್ಣನಿಲ್ಲದಾನೆಂತಿರ್ಪೆಂ ॥ ೬೯ ॥

ಅಲ್ಲದೆ 'ಜನನೀಸ್ತನ್ಯಮನುಂಡನಾಂಬಟಿಕ ನೀಂ……ಹಾ ವತ್ಸ ದುಶ್ಶಾಸನಾ' (ಆ. ೫. ಪ. ೭) ಎಂಬ ಮತ್ತು '……….ದುಶ್ಶಾಸನನಿರವಂ ಕಂಡುಮಿನ್ನುಮೆನ್ನಸುವಿದು ನೆಟ್ಟನೆ ಪೋದುದಿಲ್ಲ ಕಲ್ಲೆರ್ದೆತನದಿಂದೆನ್ನಂತು ಬರ್ದನಾವನು–ಮೊಳನೇ' (ಆ. ೫, ಪ. ೨೮)

೩. ಸಂ: ತೀ. ನಂ. ಶ್ರೀಕಂಠಯ್ಯನವರು. ಪ್ರಕಾಶಕರು, ಕಾವ್ಯಾಲಯ ಮೈಸೂರು (ಎರಡನೆಯ ಮುದ್ರಣ. ೧೯೫೫)

ಎಂದು ಮುಂತಾಗಿ ನುಡಿದು ವಿಪ್ರಲಾಪಗೈವುದು 'ಕೃತಕ' ವೆಂದೆನಿಸದಿರಲಾರದು. ಈ ವಿಪ್ರಲಾಪ 'ಕೃತಕ' ವೆಂದಾದರೆ ಕಾವ್ಯದ ಉದ್ದೇಶ ಅದರಲ್ಲಿಯೂ ರನ್ನ ಚಿತ್ರಿಸ ಬಯಸಿದ ದುರ್ಯೋಧನನ ಪಾತ್ರ ಮಣ್ಣುಗೂಡುತ್ತದೆ. ಹೀಗಿರುವಾಗ ಇಂತಹ ಆಭಾಸ ಮತ್ತು ಅನೇಕ ಸಮಸ್ಯೆಗಳನ್ನುಂಟು ಮಾಡುವ ಈ ಪದ್ಯ ರನ್ನ ಕೃತವಾದುದಲ್ಲ ಎಂದರಾಗದೆ?

ಕವಿ ಪಂಪನನ್ನು ಅನೇಕ ವಿಷಯಗಳಲ್ಲಿ ಅನುಸರಿಸಿದ ರನ್ನನ ಈ ಭಾಗವನ್ನು, ಪಂಪನಲ್ಲಿ ಬರುವ ಇದೇ ಭಾಗದೊಡನೆ ತೂಗಿ ನೋಡಿದಾಗಲೂ ಈ ಪದ್ಯ (ಅ. ೪. ಪ. ೪೬) ಹೊರತಾಗಿ ನಿಲ್ಲುವುದನ್ನು ಗಮನಿಸಬಹುದು. ಎರಡೂ ಕಾವ್ಯಗಳಲ್ಲಿಯು ಈ ಭಾಗದ ಸಂಯೋಜನೆ ಹೀಗಿದೆ :

ಪಂಪ (ವಿಕ್ರಮಾರ್ಜುನ ವಿಜಯು[೪], ತ್ರಯೋದಶ ಆಶ್ವಾಸ, ಪುಟ ೪೪೬)

ಪದ್ಯ ೫೪–೫೫ ಮರುಳ್ಗಳ ಸನ್ನಿವೇಶ, ೫೬ ಕುಂಭಸಂಭವರ ಕಳೇವರ ದರ್ಶನ. ಅನಂತರದ ವಚನ ಮತ್ತು ಪದ್ಯ ೫೭ ರಲ್ಲಿ ದುಶ್ಶ್ಯಾಸನನ ಕಳೇವರ ಕಂಡು ಉಮ್ಮಳಿಸುವುದು, ಅನಂತರದ ಭಾಗದಲ್ಲಿ ಕರ್ಣಸುತ ವೃಷಸೇನ, ಕರ್ಣ ಮುಂತಾದ ವೀರರ ಕಳೇವರ ಕಾಣುತ್ತಾನೆ.

ರನ್ನ (ಗದಾಯುದ್ಧ–ಚತುರ್ಥಾಶ್ವಾಸಂ. ಪುಟ. ೪೯, ೫೦)

ಪದ್ಯ ೪೪–೪೫ ಮರುಳ್ಗಳ ಸನ್ನಿವೇಶ, ೪೬ ದುಶ್ಶ್ಯಾಸನ ಕಳೇವರ ದರ್ಶನ[೫], ೪೮–೪೯–೫೧ ದ್ರೋಣರ ಕಳೇವರ ಕಂಡು ದುಃಖಿಸುವುದು, ಅನಂತರದ ಭಾಗದಲ್ಲಿ ಅಭಿಮನ್ಯು, ಲಕ್ಷಣಕುಮಾರ ಮುಂತಾದ ವೀರರನ್ನು ಕಂಡು ಪ್ರಳಾಪಿಸುತ್ತಾನೆ. ಮತ್ತೆ ಆಶ್ವಾಸ ೫ ರ ೨–೩ನೆಯ ಪದ್ಯದಲ್ಲಿ ದುಶ್ಶ್ಯಾಸನನ ಕಳೇವರ ಕಾಣುತ್ತಾನೆ– ದುರ್ಯೋಧನನ ದುಃಖ ಮೇರೆವರಿಯುತ್ತದೆ.

ಪಂಪ – ರನ್ನರ ಈ ಭಾಗವ ದೃಶ್ಯಸಂಯೋಜನೆ ಹೆಚ್ಚುಕಡಿಮೆ ಒಂದೇ ಆಗಿದ್ದು ಗದಾಯುದ್ಧದ ೪೬ನೆಯ ಪದ್ಯ ಮಾತ್ರ ಈ ಸಂಯೋಜನೆಗೆ ಹೊರತಾಗಿ ನಿಲ್ಲುತ್ತದೆ. ಈ ಪದ್ಯವನ್ನುಳಿದು ನೋಡಿದರೆ ಪಂಪ, ರನ್ನರ ಕಾವ್ಯಗಳಲ್ಲಿಯು ಈ ಭಾಗ ಸ್ಥೂಲವಾಗಿ ಮರುಳ್ಗಳ ಸನ್ನಿವೇಶ–ದ್ರೋಣರ ಕಳೇವರ ದರ್ಶನ[೬]– ದುಶ್ಶ್ಯಾಸನನ ಕಳೇವರ ದರ್ಶನ ಹೀಗಿದೆ.

---

೪. ಪ್ರ. ಸಂ: ಡಾ॥ ಕೆ. ವಿ. ಪುಟ್ಟಪ್ಪ. ಮೈಸೂರು ವಿಶ್ವವಿದ್ಯಾಲಯ–೧೯೬೦

೫. ಕೃತಕವಾಗಿ ತೋರುವ ಪದ್ಯ. ಇದೇ ಪದ್ಯ ಕುರಿತಾಗಿ ಈ ಲೇಖನವಿದೆ.

೬. ರನ್ನನ ಕಾವ್ಯದಲ್ಲಿ ದ್ರೋಣರ ನಂತರ ಅಭಿಮನ್ಯು. ಲಕ್ಷಣಕುಮಾರ ಮುಂತಾದ ವೀರರನ್ನು ದಾಟಿ ದುಶ್ಶ್ಯಾಸನನ ಶವವನ್ನು ಕಾಣುತ್ತಾನೆ ದುರ್ಯೋಧನ. ಅವರೂ ಆಭಾಸಕ್ಕೆಡೆಯಿಲ್ಲ ಎಂಬುದನ್ನು ಗಮನಿಸಬೇಕು.

ಮೇಲಿನ ಸಂಗತಿಗಳ ಬೆಳಕಿನಲ್ಲಿ ಈ ಪದ್ಯ (ಅ. ೪. ಪ. ೪೬) ಈ ಭಾಗಕ್ಕೆ ಹೊಂದದೇ ಇರುವುದು ಕಂಡುಬರುತ್ತದೆ. ಇನ್ನೊಂದು ಸಂಗತಿಯೆಂದರೆ ಈ ಪದ್ಯವನ್ನು ಬಿಟ್ಟು ಕಾವ್ಯವನ್ನೋದಿದರೆ ಯಾವ ರೀತಿಯ ಭಂಗವೂ ಉಂಟಾಗುವುದಿಲ್ಲ. ಅಷ್ಟೇ ಅಲ್ಲ ಕಾವ್ಯದ ಅವಶ್ಯ ಭಾಗವೊಂದು 'ಕಳಚಿದೆ' ಎಂಬ ಭಾವನೆಯೂ ಉಂಟಾಗುವದಿಲ್ಲ. ಅಲ್ಲದೆ ೪೭ನೆಯ ಪದ್ಯ ಕಥಾನಕಕ್ಕೆ, ಕವಿಯ ಆಶಯಕ್ಕೆ ಊನವಾಗದಂತೆ ಮುಂದಿನ ಪದ್ಯಗಳಿಗೆ ಕೊಂಡಿಯಾಗಿ ನಿಂತು ಈ ಪದ್ಯದ (೪೬) ಅವಶ್ಯಕತೆ 'ಇಲ್ಲ' ಎಂಬುವನ್ನು ತೋರಿಸುತ್ತದೆ. ಅಂದಮೇಲೆ ಈ ಪದ್ಯ[೭] ಪ್ರಕ್ಷಿಪ್ತವಾಗಿರುವ ಸಾಧ್ಯತೆಯಿದೆ. ಅಂದರೆ ರನ್ನನ ಕವಚವನ್ನೇ ಹಾಕಿಕೊಂಡು ಯಾರಿಗೂ 'ರನ್ನನದೇ ಈ ಪದ್ಯ' ಎಂಬ ಭ್ರಮೆಯನ್ನುಂಟುಮಾಡುವ ಸಮರ್ಥನೊಬ್ಬ (ಔಚಿತ್ಯವರಿಯದೆ) ಸೇರಿಸಿದ ಪದ್ಯವಾಗಿರಬಹುದಾಗಿದೆ.

'ಈ ಪದ್ಯ ಪ್ರಕ್ಷಿಪ್ತವಾದುದಲ್ಲ' ಎಂದು ಹೇಳುವುದಾದರೆ, ರನ್ನ ಇಂತಹ ದೋಷವನ್ನುಂಟು ಮಾಡಬಹುದೆ ಎಂಬ ಪ್ರಶ್ನೆ ಏಳದಿರದು. ಕವಿ ರನ್ನ 'ಸಿಂಹಾವಲೋಕನಕ್ರಮ'ದಿಂದ ಕಾವ್ಯವನ್ನು ರಚಿಸಿದವ, ಬಹುಶಃ ಪುನರಾವರ್ತಿಯನ್ನು ಮಾಡಲಾರ. ಅಲ್ಲದೆ 'ದಂಡನಾಯಕಂ ಕೇಶಿ ತಿರ್ದೆ' ಪೆಟ್ಟಿ ಕೃತಿ ಇದಾಗಿರುವುದರಿಂದ ಬರೆವವನ, ತಿದ್ದುವವನ ಕಣ್ತಪ್ಪಿಸಿ ಈ ಪುನರಾವರ್ತಿ ನುಸುಳಿರಲಾರದು ; ಎಂದಾಗ ಈ ಪದ್ಯ (೪೬) ಎಷ್ಟರಮಟ್ಟಿಗೆ ಕಾವ್ಯದಲ್ಲಿ ಅದರಲ್ಲಿಯೂ ಈ ಪ್ರಸಂಗದಲ್ಲಿ ಮೌಲ್ಯಯುತವಾದುದಾಗಿದೆ ಎಂಬುದನ್ನು ನಿರ್ಣಯಿಸಬಹುದಾಗಿದೆ.

---

೭. ಈ ಪದ್ಯವನ್ನು ವಿದ್ವಾನ್ ಕೆ.ವಿ. ಕೃಷ್ಣಭಟ್ಟ ಅವರು ಸಂಪಾದಿಸಿ ಪ್ರಕಟಪಡಿಸಿದ 'ಸಾಹಸ ಭೀಮ ವಿಜಯಂ' (ಗದಾಯುದ್ಧಂ)ದಲ್ಲಿಯೂ, ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರು ಸಂಪಾದಿಸಿರುವ 'ಗದಾಯುದ್ಧ ಸಂಗ್ರಹಂ', ಪ್ರಕಾಶಕರು: ಕಾವ್ಯಾಲಯ ಮೈಸೂರು. (ಎರಡನೇಯ ಮುದ್ರಣ–೧೯೫೫) ದಲ್ಲಿಯೂ ಕಾಣಬಹುದು.

ಶ್ರೀ ರಾಮಾನುಜೈಯ್ಯಂಗಾರ‍್ಯರು ಗದಾಯುದ್ಧದ 'ಭೂಮಿಕೆ' ಬರೆಯುತ್ತ ನುಡಿದ ಮಾತುಗಳನ್ನು ಕೂಡ ಇಲ್ಲಿ ಲಕ್ಷಿಸಬಹುದಾಗಿದೆ.

"ಈ ಮುದ್ರಣದಲ್ಲಿ ಪ್ರಾಯಶಃ ೨ ರಿಂದ ೭ ರ ತನಕ ಆಶ್ವಾಸಗಳಲ್ಲಿ ಮೂಲಪಾಠವು ಸರಿಯಾಗಿದೆ ಎಂದು ಹೇಳಬಹುದು..... ಮತ್ತು ಹಲವು ಕಡೆಗಳಲ್ಲಿ ಮೂಲಪಾಠಗಳು ಸರಿಯಾಗಿಲ್ಲವೆಂದು ತೋರುತ್ತದೆ. ಅವನ್ನು ಮಾತೃಕೆಗಳಿಂದ ಸರಿಪಡಿಸಲು ಸಾಧ್ಯವಾಗಲಿಲ್ಲ; ಇದ್ದ ಹಾಗೆಯೇ ಮುದ್ರಿಸಿರುತ್ತೇನೆ..."

ಬೆಳಗಾವಿ ಜಿಲ್ಲೆಯ ಉಪಭಾಷೆಗಳು

ಎಂ. ಬಿ. ಭೋಯಿ

ಉತ್ತರಕರ್ನಾಟಕದ ಪ್ರತಿಯೊಂದು ಜಿಲ್ಲೆಗೂ ಒಂದಿಲ್ಲೊಂದು ಪರಭಾಷೆಯ ಸಂಪರ್ಕ ಬಂದೇಬರುತ್ತದೆ. ಬೆಳಗಾವಿ ಜಿಲ್ಲೆಗೆ ಪರಂಪರಾಗತವಾದ ನೆರೆ ಎಂದರೆ ಮರಾಠಿ. ನೃಪತುಂಗನು ಹೇಳುವ ತಿರುಳ್ಗನ್ನಡದ ಕೇಂದ್ರಗಳಲ್ಲಿ ಒಕ್ಕುಂದವೂ ಒಂದು. ಇದು ಇಂದಿನ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿದೆ. ಒಂದಾನೊಂದು ಕಾಲದಲ್ಲಿ ಮರಾಠಿ ಬಹುದೂರದಲ್ಲಿತ್ತೆಂದು ತಿಳಿಯಬಹುದಾದರೂ ಶಿವಾಜಿಯ ಅನಂತರ ಮರಾಠರು ಪ್ರಬಲ ಜನಾಂಗವಾಗಿ ಮಾರ್ಪಟ್ಟು ಕರ್ನಾಟಕದಲ್ಲಿ ಬಹುಸಂಖ್ಯೆ ಸಂಸ್ಥಾನಗಳನ್ನು ಸ್ಥಾಪಿಸಿದರು. ಬೆಳಗಾವಿ ಜಿಲ್ಲೆಯಲ್ಲಿ ಈ ಸಂಸ್ಥಾನಗಳ ಸಂಖ್ಯೆ ವಿಶೇಷವಾಗಿತ್ತು. ಇದರಿಂದಾಗಿ ಮರಾಠಿಯ ಪ್ರಭಾವ ಬೆಳಗಾವಿ ಜಿಲ್ಲೆಯ ಮೇಲೆ ವಿಶೇಷವಾಗಿದೆ. ಈಗ ಕರ್ನಾಟಕ–ಮಹಾರಾಷ್ಟ್ರದ ಗಡಿಪ್ರದೇಶದಲ್ಲಿ (ಬೆಳಗಾವಿ ಜಿಲ್ಲೆಯ ಪಶ್ಚಿಮ–ಉತ್ತರದಲ್ಲಿ) ಒಂದು ವಿಶಿಷ್ಟವಾದ ಕನ್ನಡವೇ ಬಳಕೆಯಲ್ಲಿದೆ. ಅದರ ಪರಿಚಯವನ್ನು ಶ್ರೀ ಮಿರ್ಜಿ ಅಣ್ಣಾರಾಯರ ನಿಸರ್ಗ ಕಾದಂಬರಿಯಲ್ಲಿ ಕೆಲಮಟ್ಟಿಗೆ ಕಾಣಬಹುದು.

ಬೆಳಗಾವಿ ಜಿಲ್ಲೆಯನ್ನು ಭಾಷೆಯ ದೃಷ್ಟಿಯಿಂದ ನಾಲ್ಕು ಘಟಕಗಳಾಗಿ ಒಡೆಯಬಹುದು. ೧) ಮಹಾರಾಷ್ಟ್ರದ ಗಡಿಯ ಕನ್ನಡ ೨) ಗೋಕಾಕ ಕನ್ನಡ ೩) ಬೈಲಹೊಂಗಲದ ಕನ್ನಡ ೪) ರಾಮದುರ್ಗದ ಕನ್ನಡ.

೧. ಮಹಾರಾಷ್ಟ್ರದ ಗಡಿಯ ಕನ್ನಡ : ಇವರಲ್ಲಿ ಬೆಳಗಾವಿ ತಾಲೂಕಿನ ಬಾಗೇವಾಡಿ ಭಾಗವನ್ನು ಹೊರತುಪಡಿಸಿ ಉಳಿದಭಾಗ, ಪೂರ್ಣ ಚಿಕ್ಕೋಡಿ ತಾಲೂಕು. ದಕ್ಷಿಣ–ಪೂರ್ವ ಭಾಗವನ್ನು ಹೊರತುಪಡಿಸಿ ಉಳಿದ ಹುಕ್ಕೇರಿ ತಾಲೂಕು, ಅಥಣಿ ತಾಲೂಕು, ರಾಯಬಾಗ ತಾಲೂಕಿನ ದಕ್ಷಿಣ–ಪೂರ್ವ ಭಾಗವನ್ನು ಹೊರತುಪಡಿಸಿ ಉಳಿದ ಭಾಗ ಇಷ್ಟೆಲ್ಲ ಸಮಾವೇಶವಾಗುತ್ತವೆ. ಅಲ್ಲದೆ ಮಹಾರಾಷ್ಟ್ರದ ಕೊಲ್ಹಾಪೂರ. ಗಡಹಿಂಗ್ಲಜ, ಶಿರೋಳೆ. ಹಾತಕಣಗಲಾ (ಹತ್ತಿಕಣಗಲಿ), ಈಚಲಕರಂಜಿ(ಇಂಚಲಕರಜಗಿ) ಈ ಎಲ್ಲ ಪ್ರದೇಶಗಳೂ ಈ ಭಾಷೆಯ ವೈಶಿಷ್ಟ್ಯಗಳನ್ನೇ ಹೊಂದಿವೆ. (ಇಲ್ಲೆಲ್ಲ ಇರುವ ಕನ್ನಡಿಗರು ಇದೇ ಉಪಭಾಷೆಯನ್ನಾಡುತ್ತಾರೆ.)

೨. ಗೋಕಾಕ(ಗೋಕಾವಿ)ಕನ್ನಡ : ಇವರಲ್ಲಿ ಗೋಕಾಕ ತಾಲೂಕು, ಹುಕ್ಕೇರಿ ತಾಲೂಕಿನ ದಕ್ಷಿಣ – ಪೂರ್ವಭಾಗ (ಹುಕ್ಕೇರಿ ತಾಲೂಕಿನ ಪಾಶ್ಚಾಪೂರ ಗ್ರಾಮ

ಇದರಲ್ಲಿ ಸಮಾವೇಶವಾಗುತ್ತದೆ.) ರಾಯಬಾಗ ತಾಲೂಕಿನ ದಕ್ಷಿಣ-ಪೂರ್ವ ಭಾಗ. ಸವದತ್ತಿ ತಾಲೂಕಿನ ಪಶ್ಚಿಮೋತ್ತರ ಭಾಗ ಇವು ಈ ಉಪಭಾಷೆಯ ಪ್ರದೇಶಗಳು.

೩. ಬೈಲಹೊಂಗಲ ಕನ್ನಡ: ಇವರಲ್ಲಿ ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ವಿಭಾಗ, ಖಾನಾಪೂರ ತಾಲೂಕು, ಬೈಲಹೊಂಗಲ ತಾಲೂಕು, ಸವದತ್ತಿ ತಾಲೂಕಿನ ಬಹುಭಾಗ (ಎಂದರೆ ಪೂರ್ವ ಮತ್ತು ಉತ್ತರದ ಸ್ವಲ್ಪ ಭಾಗವನ್ನು ಬಿಟ್ಟು) ಇವರಲ್ಲಿ ಸಮಾವೇಶವಾಗುತ್ತವೆ. ಸವದತ್ತಿ ನಗರವು ಇದೇ ವಿಭಾಗದಲ್ಲಿ ಸೇರ್ಪಡೆಯಾಗುತ್ತದೆ. ಅಲ್ಲದೆ ಧಾರವಾಡ ತಾಲೂಕಿನ ಪಶ್ಚಿಮ ಹಾಗೂ ಉತ್ತರ ಪ್ರದೇಶವು ಇವರಲ್ಲಿಯೇ ಸಮಾವೇಶವಾಗುತ್ತದೆ. ಧಾರವಾಡ ತಾಲೂಕಿನ ಅಳಣಾವರ ಪಟ್ಟಣ, ಗರಗ ಗ್ರಾಮಗಳು ಇದೇ ಉಪಭಾಷೆಗೆ ಸೇರುತ್ತವೆ. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕನ್ನು ಕೂಡ ಈ ವಿಭಾಗದಲ್ಲಿಯೇ ಸೇರಿಸಬಹುದೆಂದು ತೋರುತ್ತದೆ.

೪. ರಾಮದುರ್ಗದ ಕನ್ನಡ: ಇದರಲ್ಲಿ ರಾಮದುರ್ಗ ತಾಲೂಕು ಸವದತ್ತಿ ತಾಲೂಕಿನ ಪೂರ್ವ ಭಾಗಗಳು ಸಮಾವೇಶವಾಗುತ್ತವೆ.

ಮೇಲಿನವುಗಳಲ್ಲಿ ಬೈಲಹೊಂಗಲದ ಉಪಭಾಷೆಯ ಪ್ರದೇಶಕ್ಕೆ ಸಂಬಂಧಿಸಿದವನಾದ ಕಾರಣ ನಾನು ಆ ಉಪಭಾಷೆಯ ಬಗೆಗೆ ಧೈರ್ಯದಿಂದ ಮಾತಾಡಬಹುದು. ಬೆಳಗಾವಿ ತಾಲೂಕಿನಲ್ಲಿ ಹಲವು ವರ್ಷಗಳ ವರೆಗೆ ಇದ್ದುದರಿಂದ ಅದರ ಬಗೆಗಿನ ನನ್ನ ತಿಳುವಳಿಕೆ ಸಾಧಾರಣಮಟ್ಟಿಗೆ ಇದೆ. ಇನ್ನುಳಿದ ಉಪಭಾಷೆಗಳ ಬಗೆಗೆ ಹೀಗೆ ಹೇಳಲು ಶಕ್ಯವಾಗದು. ಆದುದರಿಂದ ಈ ಲೇಖನದಲ್ಲಿ ನನ್ನ ಹಾಗೂ ಬೆಳಗಾವಿ (ಮಹಾರಾಷ್ಟ್ರದ ಗಡಿ)ಕನ್ನಡಗಳ ಬಗೆಗೆ ಹೆಚ್ಚಿನ ವಿವರಗಳನ್ನು ಒದಗಿಸಲು ಶಕ್ಯವಾಗಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಗೋಕಾಕ ಕನ್ನಡ, ರಾಮದುರ್ಗ ಕನ್ನಡ, ಬೈಲಹೊಂಗಲದ ಕನ್ನಡಗಳಲ್ಲಿ ಪರಸ್ಪರ ಸಾಮ್ಯಗಳು ಹೆಚ್ಚು: ಆ ಕಾರಣ ಹೊರಗಿನವರಿಗೆ ಇವುಗಳಲ್ಲಿಯ ವ್ಯತ್ಯಾಸಗಳೇ ತೋರಲಿಕ್ಕಿಲ್ಲ. ಗಡಿ ಕನ್ನಡ ಹಾಗೂ ಇನ್ನಿತರ ಕನ್ನಡಗಳಲ್ಲಿಯ ಭೇದಗಳು ಹೆಚ್ಚು, ಸಾಮ್ಯಗಳು ಕಡಿಮೆ. ಗಡಿ ಕನ್ನಡವು ಕರ್ನಾಟಕದ ಇನ್ನುಳಿದ ಉಪಭಾಷೆಗಳಿಗಿಂತ ಬಹು ಸಂಗತಿಗಳಲ್ಲಿ ಭಿನ್ನವಾಗಿದೆ. ಕಾರಣ ಅದರ ಬಗೆಗೆ ವಿಶೇಷ ಅಭ್ಯಾಸ ಆವಶ್ಯಕ ಹಾಗೂ ಪ್ರಯೋಜನಕಾರಿ.

ಈ ಜಿಲ್ಲೆಯ ಬ್ರಾಹ್ಮಣರು ಒಂದು ಬಗೆಯ ಉಪಭಾಷೆಯನ್ನಾಡುತ್ತಾರೆ. ಇನ್ನುಳಿದವರು ಆ ಪ್ರದೇಶಕ್ಕನುಸಾರವಾಗಿ ಬೇರೆಯಾದ ಉಪಭಾಷೆಗಳನ್ನಾಡುತ್ತಾರೆ. ಎಂದರೆ ಇಡೀ ಜಿಲ್ಲೆಯಲ್ಲಿಯ ಬ್ರಾಹ್ಮಣರ ಉಪಭಾಷೆಯೊಂದೆ. ನಾಲ್ಕು ಉಪಭಾಷಗಳಿರುವುದು ಬ್ರಾಹ್ಮಣೇತರರಲ್ಲಿ ಮಾತ್ರ. ಹೊಲೆಯ ಮುಂತಾದ ಕೆಳವರ್ಗದವರ

ಭಾಷೆಗೂ ಉಳಿದವರ ಭಾಷೆಗೂ ವ್ಯತ್ಯಾಸಗಳೇನೂ ಇಲ್ಲ. ಹೊಲೆಯರ ಮುದುಕರಲ್ಲಿ ಮಾತ್ರ ಅಲ್ಪಮಟ್ಟಿನ ಸ್ವರಾಘಾತವು ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಭಾಷಾ ಅಲ್ಪಸಂಖ್ಯಾಕರಾಗಿ ಮರಾಠಿಗರು, ಮುಸಲ್ಮಾನರು, ಪಟ್ಟೆಗಾರರು, ವಡ್ಡರು, ಕೊರವರು, ಲಮಾಣಿಗಳು, ಗೊಲ್ಲರು ಇದ್ದಾರೆ. ಖಾನಾಪೂರ ತಾಲೂಕಿನ ಗುಡ್ಡಗಳಲ್ಲಿ ಮರಾಠಿಯ ಉಪಭಾಷೆಯೊಂದನ್ನಾಡುವ ಗೌಳಿಗರು ಕೆಲ ಸಂಖ್ಯೆಯಲ್ಲಿದ್ದಾರೆ.

ವರ್ಣಗಳು : ಬೆಳಗಾವಿ ಜಿಲ್ಲೆಯ ಕನ್ನಡದ ನಾಲ್ಕು ಉಪಭಾಷೆಗಳ ವರ್ಣಮಾಲೆ ಒಂದೇರೀತಿಯಾಗಿದೆ. ಗಡಿಕನ್ನಡ ಹಾಗೂ ಬ್ರಾಹ್ಮಣರ ಕನ್ನಡದಲ್ಲಿ ಮಹಾಪ್ರಾಣಗಳು ಇವೆ. ಉಳಿದ ಕನ್ನಡಗಳಲ್ಲಿ ಮಹಾಪ್ರಾಣಗಳು ಇಲ್ಲವೇ ಇಲ್ಲ.

ಗಡಿ ಕನ್ನಡ	**ಬರಹ ಕನ್ನಡ**
ಖುತ್ತಾ, ಖುತ್ತಾನ	ಕುಳಿತಿದ್ದಾನೆ
ಖನಕ	ಕನಕ = 'ತೋಯಿಸಿದ ಗೋದಿಯ ಹಿಟ್ಟು'
ಖಂಯ್	ಕಹಿ
ಖುರಪಿ	ಕುರುಪಿ = 'ಚಿಕ್ಕ ಕುಡುಗೋಲು'
ಝುಣಕ	'ಹಿಟ್ಟಿನ ಪಲ್ಲೆ'
ಝೋಪಡಿ (ಹಿಂದಿ)	'ಗುಡಿಸಲು'
ಘಾಣ, ಘಾಣೆ	'ಹೊಲಸು'
ಥಾರೆ	ಎಚ್ಚರ, ತಿಳುವಳಿಕೆ
ಥೋಡೆ	ಸ್ವಲ್ಪ
ಥಂಡಿ	ತಂಡಿ = 'ತಂಪು'
ಛೆಲೂ	ಚೆಲುವ, ಒಳ್ಳೆಯ

ಬ್ರಾಹ್ಮಣರ ಕನ್ನಡ	**ಬರಹ ಕನ್ನಡ**
ಖಮ್ಮಗ	ಕಮ್ಮಗೆ
ಖಾಯೆಂ	ಕಾಯಂ (Permanent)
ಖೋಡಿ	(ಒಂದು ಬೈಗುಳ)
ಛೋಲೊ	ಚೆಲುವ, ಒಳ್ಳೆಯ
ಥೇಟ	ಪೂರಾ, ಅಪ್ಪಟ
ಧಿಮಾಕು	ಸೊಕ್ಕು
ಫಾಳೆ	ಪಾಳೆ (ಕಂದಾಯ)

ಚ – ಜ : ಉತ್ತರಕರ್ನಾಟಕದಲ್ಲಿ ಇವುಗಳಿಗೆ ಎರಡು ರೀತಿಯ ಉಚ್ಚಾರವಿದೆಯೆಂದು ಸಂಶೋಧಕರೆಲ್ಲ ಹೇಳುತ್ತಾರಷ್ಟೆ. ಆದರೆ ಅವುಗಳ ಪರಿಸರವನ್ನು ಕುರಿತು

ಕೆಲವರು ಹೇಳಿದ್ದು ತಪ್ಪಾಗಿದೆ. "ಇ. ಎ ಮೊದಲಾದ ಪೂರ್ವಸ್ವರಗಳು ಪರದಲ್ಲಿರುವಾಗ ಇತರ ಪ್ರಭೇದಗಳಲ್ಲಿರುವಂತೆ ತಾಲವ್ಯೋಚ್ಚಾರಣೆಯೂ ಉಳಿದ ಸ್ವರಗಳು ಪರದಲ್ಲಿರುವಾಗ ದಂತ್ಯೋಚ್ಚಾರಣೆಯೂ ಈ ಮೇಲಿನ ಕನ್ನಡಗಳಲ್ಲಿ ಕಂಡು ಬರುತ್ತದೆ.* ಎಂಬ ಮಾತು ಅಷ್ಟು ಸರಿಯಾಗಿಲ್ಲ; ಗಡಿಕನ್ನಡವನ್ನು ಹೊರತು ಪಡಿಸಿ ಈ ಜಿಲ್ಲೆಯ ಉಳಿದ ಉಪಭಾಷೆಗಳಲ್ಲಿ ಇವುಗಳಿಗೆ ಪದಾದಿಯಲ್ಲಿ ಎರಡು ರೀತಿಯ ಉಚ್ಚಾರವಿದೆ. ಇ. ಎ ಮೊದಲಾದ ಪೂರ್ವಸ್ವರಗಳು ಹಾಗೂ ಅ. ಆ ಎಂಬ ಮಧ್ಯ ಸ್ವರಗಳು ಪರದಲ್ಲಿದ್ದಾಗ ತಾಲವ್ಯೋಚ್ಚಾರವಿರುತ್ತದೆ. ಉ.ಬ. ಮೊದಲಾದ ಪಶ್ಚಸ್ವರಗಳು ಪರದಲ್ಲಿದ್ದರೆ ದಂತ್ಯ ಉಚ್ಚಾರವಿರುತ್ತದೆ. ಪದಮಧ್ಯದಲ್ಲಿ ಪೂರ್ವ ಸ್ವರಗಳನ್ನುಳಿದು ಬೇರೆ ಸ್ವರಗಳು ಪರದಲ್ಲಿದ್ದಾಗ ದಂತ್ಯೋಚ್ಚಾರವಿರುತ್ತದೆ.
ಮಧ್ಯಸ್ವರಗಳು ಪರದಲ್ಲಿದ್ದಾಗ ಆಗುವ ತಾಲವ್ಯೋಚ್ಚಾರಣೆ :

ಆಡುನುಡಿ	**ಬರಹ ಕನ್ನಡ**
ಚಟಿ, ಚಟಾ	—
ಚಟ್ಟಿ	'ಚಟ್ಣಿ'
ಚಮಚಿ	—
ಚರಗ	'ಕೆಲ ಹಬ್ಬಗಳಲ್ಲಿ ಹೊಲದಲ್ಲಿ ಸಿಂಪಡಿಸುವ ನೈವೇದ್ಯ'
ಚಳಿ	—
ಚಾಟ	'ಆಸರ, ನೆರಳು'
ಚಾಳೆ	'ನಡತೆ'
ಜಗಳ	—
ಜರ	'ಜ್ವರ', 'ಜರಿ'
ಜರಿ	ಜಾರು
ಜವಳೆ	'ಚೌಲ'
ಜಳಕ	—
ಜಾಡ್ಸು	ಜಾಡಿಸು
ಜಾತ್ರಿ	ಜಾತ್ರೆ
ಜಾರು	—

ಪೂರ್ವಸ್ವರಗಳು ಮುಂದೆ ಬಂದರೆ ಆಗುವ ತಾಲವ್ಯೋಚ್ಚಾರ :

ಚಿಗಳಿ	'ಹುಣಿಸೆಯ ಹಣ್ಣುಕಾಯಿಗಳಿಂದ ಮಾಡಿದ ಖಾದ್ಯ'

---

* ಡಾ. ಡಿ. ಎನ್. ಶಂಕರಭಟ್ಟ "ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ". ಪು. ೭೧.

ಚಿಗಿ	—
ಚೀಟ	'ಪೊಟ್ಟಣ'
ಚೀಲ	—
ಚೀರು	'ಚೀರು'
ಚೆಲುವ, ಚಲವ	—
ಜಿಗಿ	—
ಜಿಗಳಿ	'ಜಿಗಣೆ'
ಜೀತ	'ಕಮತ, ಆಳುತನ'
ಜೀರ್ಗಿ	'ಜೀರಗೆ'
ಜೀರ	'ಅತಿಯಾದ ಅಸ್ವಾಸ್ಥ್ಯ'

ಗಡಿ ಕನ್ನಡದಲ್ಲಿ ಮೇಲೆ ಸೂಚಿಸಿದಂತೆ ಮಧ್ಯಸ್ವರಗಳು ಪರವಲ್ಲಿದ್ದಾಗಲೂ ದಂತ್ಯೋಚ್ಚಾರವಿರುತ್ತದೆ.

ಚಟಾ	ಚಟ
ಜನ	—
ಜಾಕಣ	(ಮುಚ್ಚಳ)
ಜಾತಿ	—
ಜಾಸ್ತ	(ಹೆಚ್ಚು)
ಜಾಗ	(ಸ್ಥಳ)

ಪಶ್ಚಸ್ವರಗಳಿದ್ದಾಗ ಆಗುವ ದಂತ್ಯೋಚ್ಚಾರಣೆ :

ಚೂಣೆ	'ಮುಂದಿನ'
ಚೂರಿ	—
ಚೋಟ, ಚೋಟಿ	'ತೋರುಬೆರಳು ಹೆಬ್ಬೆರಳುಗಳಿಂದಾಗುವ ಉದ್ದಳತೆ'
ಚೋಳ	ಚೇಳು
ಜುಗಾಡ	'ಅಜಾರಿ, Sickness'
ಜುರಿ	'ಮಾವಿನಕಾಯಿಯ ರಸ'
ಜುಲುಪಿ	ಮುಂಗುರುಳು
ಜೂಲ	'ಒಂದು ಜಾತಿಯ ನಾಯಿ'
ಜೋಡಿ	—
ಜೋಗಿ	—
ಜೋಲಿ	—

ಪದಮಧ್ಯದಲ್ಲಿ ಪೂರ್ವಸ್ವರಗಳನ್ನು ಹೊರತುಪಡಿಸಿ ಬೇರೆ ಸ್ವರಗಳಿದ್ದಾಗ ಆಗುವ ದಂತ್ಯೋಚ್ಚಾರಣೆ :

ಕಚ್ಚ	ಕಚ್ಚು, 'ಅಕ್ಕಿತೊಳೆ', 'ಅಕ್ಕಿತೊಳೆದ ನೀರು'
ಕಾಚ	ಕಾಚು
ಕಿಚ್ಚ	—
ಕೆಚ್ಚು	—
ಕೆಚ್ಚಲು	—
ಕೊಚ್ಚು	—
ಕೋಚ	ತುದಿ, ಚುಂಗ,
ಕಂಚ	ಕಂಚು
ಕಂಚಿ	'ಒಂದು ಹುಳಿಕಾಯಿ'
ಗಚ್ಚು	'ಗಾರೆ'
ನುಚ್ಚ	—
ನ್ಯಚ್ಚ	ನೆಚ್ಚು
ಪಾಚಿ	—
ಬಚ್ಚಲ	ಬಚ್ಚಲು
ಬಿಚ್ಚ	ಬಿಚ್ಚು
ಬ್ಯಚ್ಚಗ	ಬೆಚ್ಚಗೆ
ಹಚ್ಚ	ಹಚ್ಚು
ಹಚ್ಚ, ಹೆಂಚ	ಕೊಯ್ಯು
ಮ್ಯಚ್ಚ	ಮೆಚ್ಚು
ಮಂಚ	—
ಅಜ್ಜ	—
ಅಂಜು	—
ಗಜಗ	—
ಗೊಜ್ಜ	ಹುಳಿಪದಾರ್ಥ
ಗಂಜಿ	—
ಗಜ್ರಿ	ಗಜ್ಜರಿ
ಬಜನಿ	ಭಜನಾ
ಮಜಲ	ಮಜಲು
ಮಂಜ	ಮಂಜು
ಸಜ್ಜು	ಸಜ್ಜು

ಅನುನಾಸಿಕ ಯ, ವ ಗಳು : ಈ ಎರಡು ವರ್ಣಗಳಿಗೆ ಅನುನಾಸಿಕ ಹಾಗೂ ನಿರನುನಾಸಿಕ ಎರಡೂ ಉಚ್ಚಾರಗಳು ಈ ಭಾಷೆಗಳಲ್ಲಿ ಇವೆ. ಆಧುನಿಕರು ಈ ಅಭಿಪ್ರಾಯವನ್ನು ಬೇರೊಂದು ರೀತಿಯಲ್ಲಿ ವಿವರಿಸುತ್ತಾರೆ. ಎಂದರೆ ಈ ವರ್ಣಗಳು ಅನುನಾಸಿಕವಾಗಿರದೆ ಕನ್ನಡದಲ್ಲಿ ಕೆಲವು ಅನುನಾಸಿಕ ಸ್ವರಗಳಿವೆಯೆಂದೂ ಅಂಥ ಸ್ವರಗಳು ಸೇರಿದಾಗ ಅನುನಾಸಿಕೋಚ್ಚಾರ ಹೊಂದುವವೆಂದೂ ಅವರ ವಿವರಣೆ. ಆದರೆ ಈ ಎರಡೇ ವರ್ಣಗಳಲ್ಲಿ ಇಂಥ ಅನುನಾಸಿಕ ಸ್ವರಗಳು ಸೇರುವುದು ಒಂದು ವಿಶೇಷವೆಂದು ಹೇಳಬೇಕು. ಉಳಿದ ವರ್ಣಗಳ ಜೊತೆಗೆ ಅನುನಾಸಿಕ ಸ್ವರಗಳು ಸೇರುವುದು ತೀರ ಅಪರೂಪ. ಅಂಥ ಕೆಲವು ಉದಾಹರಣೆಗಳು

ತ್ವಾ̃ಟ	ತೋಟ, (ತೋಂಟ, ಹ. ಗ.)
ಹೊ̃ಟಿ	'ಯುಕ್ತಿ', 'ಚಕ್ಕಡಿಯ ಹಿಂಭಾಗ'
ತ್ವಾ̃ಟಿ	ತೋಟೆ, ತೊಗಟೆ
ಗ್ವಾ̃ತ	ಗೋತ
ಹೋತ	ಹೋತ

ಹೀಗೆ ದೀರ್ಘಸ್ವರಗಳು ಮಾತ್ರ ಅನುನಾಸಿಕತ್ವವುಳ್ಳವಾಗಿ ಕೆಲವೆಡೆ ಇವೆ. ಇನ್ನುಳಿದ ಸ್ವರಗಳು ಅನುನಾಸಿಕವಾಗುವುದು ಯ, ವ, ಗಳ ಜೊತೆಗೆ ಬಂದಾಗಲೇ.

ಣ- ನ : ಬೆಳಗಾವಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಈ ವರ್ಣಗಳ ಉಚ್ಚಾರದಲ್ಲಿ ಅಂತರವಿಲ್ಲ.

ಕನ್ನ	ಕಣ್ಣು
ಅನ್ನ	ಅಣ್ಣ
ಬ್ಯನ್ನಿ	ಬೆಣ್ಣೆ
ಸನ್ನ	ಸಣ್ಣ
ಕನಿ	ಕಣಿ

ವಕಾರಲೋಪ : ಸ್ವೀಕೃತ ಪದಗಳ ಆದಿಯಲ್ಲಿಯ ಪೂರ್ವಸ್ವರಗಳಿಂದೊಡಗೂಡಿದ ವಕಾರವು ಲೋಪಹೊಂದುತ್ತದೆ.

ಈರ	ವೀರ
ಯಾಳಿ	ವೇಳೆ
ಈಳಿ	ವೀಳೆಯ
ಇಮಾನ	ವಿಮಾನ

ಇಸಾ	ವಿಷ
ಇದಿ	ವಿಧಿ
ಇಸ್ರಾಮ	ವಿಶ್ರಾಮ

ಶಕಾರ: ಸಂಸ್ಕೃತದ ಈ ಊಷ್ಮವು ಈ ಕನ್ನಡಗಳ ಕೆಲಪದಗಳಲ್ಲಿ ಉಳಿದುಕೊಂಡಿದೆ.

ಶಾಂತಿ	—
ಶಂಕ	ಶಂಕು
ಶಲ್ಲೆ	—
ಶಾಲ	ಶಾಲು

ಆದಿಯು ಹಕಾರ :

ಹಡಿ	ಹಡೆ
ಹಗೇ	'ಕಾಳಿಡುವ ಸ್ಥಳ'
ಹಂತಾ	ಅಂತಹ, ಅಂಥ
ಹಾಂಗ	ಹಾಗೆ
ಹಾರ	ಆಹಾರ
ಹೇನತಿ, ಹೆನ್ತಿ	ಹೆಂಡತಿ
ಹೌದ	ಅಹುದು
ಹ್ಯಂಗ	ಹೇಗೆ
ಹ್ವಡಿ	ಹೊಡೆ
ತರಾ	ತರಹ
ಪಾನಿ	ಪಹಣಿ
ಬರಿ	ಬರಹ
ಬಾಳ	ಬಹಳ
ಸಲೂ, ಸಲುವ	ಸಲಹು
ಸಾವಕಾರ	ಸಾಹುಕಾರ
ಸಿವ್ವ	ಸಿಂಹ

ಗಡಿಕನ್ನಡದಲ್ಲಿ ಪದಮಧ್ಯದಲ್ಲಿ ಹ್ರಸ್ವಸ್ವರ, ದೀರ್ಘಸ್ವರಗಳೆರಡಕ್ಕೂ ಅನುನಾಸಿಕವು ಪರವಾಗುವುದು ಒಂದು ವಿಶೇಷ. ಹಳಗನ್ನಡದಲ್ಲಿ ಕಂಡುಬಾರದಿದ್ದರೂ ಇಂದು ಈ ಪ್ರಭೇದದಲ್ಲಿ ಅನುನಾಸಿಕವು ಕಂಡುಬರುತ್ತದೆ.

ಉದಾ :

ಆಂಕಳ	ಆಕಳು
ಒಂಗಟ	ಒಗಟು
ಕಂಬಳ	ಕವುಲ
ಕೊಂದಲ	ಕೊದಲು
ಗಾಂದಿ	ಗಾದರಿ
ಜಾಂಗಟಿ	ಜಾಗಟೆ
ಸ್ವಾಂಗ	ಸೋಗು
ಹಂಕಳಿ	ಹಕ್ಕಳಿ
ಹಿಂತಲ	ಹಿತ್ತಲು
ಹೊಂದ, ಹೋಂದ, ಹೌಂದ,	ಅಹುದು, ಹೌದು
ಹ್ವಂಕಳ	ಹೊಕ್ಕಳು

ಸ–ಚ : ಪದಾದಿಯಲ್ಲಿ ಸಕಾರವಿದ್ದು ಅನಂತರವ ದ್ವಿತಿಯಾಕ್ಷರವು ಚ–ಜ ಗಳನ್ನು ಹೊಂದಿದ್ದರೆ ಅಂಥ ಸಕಾರವು ಚಕಾರವಾಗಿ ಮಾರ್ಪಡುತ್ತದೆ.

ಚಜ್ಜ	ಸಜ್ಜ
ಚೂಜಿ	ಸೂಜಿ
ಚ್ವಂಚಿ, ಚಂಚಿ,	ಸಂಜಿ
ಚಜ್ಜಕ	ಸಜ್ಜಗೆ
ಚಂಜಿ	ಸಂಜೆ
ಚೋಜ್ಗ	ಸೋಜಿಗ
ಚ್ವಚ್ಚಿ	ಸ್ವಚ್ಛ

ಪ, ಹಕಾರಗಳು : ಹಳೆಗನ್ನಡದ ಪಕಾರವು ಹಕಾರವಾಗಿ ಪರಿವರ್ತನೆ ಹೊಂದಿದ್ದು ಈ ಉಪಭಾಷೆಗಳಲ್ಲಿಯೂ ಕಂಡುಬರುವುದರ ಜೊತೆಗೆ ಕೆಲಪವಗಳಲ್ಲಿ ಪ್ರಾರಂಭ ದಲ್ಲಿ ಕೂಡ ಉಳಿದಿವೆ. ಈ ಉಪಭಾಷೆಗಳಲ್ಲಿ ಹಕಾರವು ಆದಿಯಲ್ಲಿ ಮಾತ್ರ ಬರ ಬಲ್ಲದು.

ಆದಿ ಪಕಾರ :

ಪಕಳಿ	ಪಕಳೆ
ಪಕ್ಕ	—
ಪಟ್ಟ	—
ಪಡಿ	'ಒಂದು ಕಾಳಿನ ಆಳತೆ'

ಪನದೇ	'ಮಜ್ಜಿಗೆಯ ಸಾರು'
ಪರಿ	ಪೊರೆ
ಪಳಿ	'ಹಲಗೆ'
ಪಾಚಿ	—
ಪಾಡ	'ಒಳ್ಳೆಯ', ಮಾಗಿ ಹಣ್ಣಾಗುತ್ತಿರುವ ಕಾಯಿ
ಪಾಲ	—
ಪಾಳಿ	'ಹರವಾದ ಕಲ್ಲು ಮುಂತಾದದ್ದು'
ಪುಕ್ಕ	—
ಪುಡಿ	—
ಪೂರಾ	—
ಪ್ಯಾಂಟಿ	ಪೆಂಟೆ
ಪ್ಯಾಟಿ	ಪೇಟೆ

ಮಧ್ಯಸ್ವರಗಳು : ə,a,a,: ಈ ಮೂರೂ ಸ್ವರಗಳು ಬೆಳಗಾವಿ ಜಿಲ್ಲೆಯ ಉಪಭಾಷೆಗಳಲ್ಲಿ ಇವೆ. ə : ಈ ದೀರ್ಘವು ಬೈಲಹೊಂಗಲದ ಉಪಭಾಷೆಯ ಕೆಲಪದಗಳಲ್ಲಿ ಕಂಡುಬರುತ್ತದೆ. ಮೂಲ ಕನ್ನಡದಲ್ಲಿ a a : ಎಂಬ ಸ್ವರಗಳಿದ್ದವೆಂಬ ಗ್ರಹಿಕೆಯೆ ಇಂದಿನ ದ್ರಾವಿಡ ಭಾಷಾವಿಜ್ಞಾನಿಗಳಲ್ಲಿರುವಂತೆ ತೋರುತ್ತದೆ. ಇದಕ್ಕೆ ಆಧಾರವೇನೋ ತಿಳಿಯದು. ಬೆಳಗಾವಿ ಜಿಲ್ಲೆಯಲ್ಲಿಯ ಜನರಿಗೆ ə,a: ಎಂದು ರೂಢಿಯಿದೆಯೆ ಹೊರತು a a : ಎಂಬುದು ಅವರ ಕಲ್ಪನೆಯಲ್ಲೂ ಇಲ್ಲ.

ə ಸ್ವರ	ಬರಹ-ಅರ್ಥ	a ಸ್ವರ	ಬರಹ-ಅರ್ಥ
ಅರಿ	ಅರಿ, 'ತಿಳಿ'	ಅರಿ	ಅರೆ
ಕತ್ತಿ	'ಖಡ್ಗ'	ಕತ್ತಿ	ಕತ್ತೆ
ಕಳಿಗಿ	'ಕೊಂಡಿ'	ಕಳಿಗಿ	'ಎಳೆಯ ಆಡು'
ಗಳಿಗಿ	ಗಳಿಗೆ	ಗಳಿಗಿ	'ದೊಡ್ಡ ಬುಟ್ಟಿ'
ಗಂಡ	ಗಂಡು	ಗಂಡ	'ಪತಿ'
ತಡಿ	'ಕುದುರೆಯ ಜೀನು'	ತಡಿ	ತಡೆ
ನರಿ	'ಪ್ರಾಣಿ'	ನರಿ	ನರೆ
ದಂಡ	ದಂಡು	ದಂಡ	'Fine'
ಪಡಿ	'ಕಾಳಿನ ಒಂದು ಅಳತೆ'	ಪಡಿ	ಪಡೆ
ಬತ್ತ	ಬತ್ತು	ಬತ್ತ	ಭತ್ತ
ಮನಿ	ಮನೆ	ಮನಿ	ಮೊನೆ

ಗ್ರಾಂಥಿಕಭಾಷೆಯ ಪದಾದಿಯಲ್ಲಿ ಅಸ್ವರವಿದ್ದು ದ್ವಿತಿಯಾಕ್ಷರದಲ್ಲಿ ಇ ಸ್ವರವಿದ್ದರೆ ಅಂಥ ಪರಿಸರದಲ್ಲೆಲ್ಲ ಈ ಉಪಭಾಷೆಗಳಲ್ಲಿ ಎ ಸ್ವರವಿರುತ್ತದೆ.

ಅಗಿ	ಮೊಳಕೆ
ಅಡಿಗಿ	ಅಡಿಗೆ
ಅರಿ	'ತಿಳಿ'
ಕಡಿ (ಧಾ)	—
ಕತ್ತಿ	—
ಕರಿ (ಧಾ)	—
ಕಲಿ (ಧಾ)	—
ಕಲಿಕಿ	ಕಲಿಕೆ
ಕಳ್ಳಿ	'ಒಂದು ಗಿಡ'
ಕಂಟಿ	ಚಿಕ್ಕಗಿಡ
ಗಡಿಗಿ	ಗಡಿಗೆ
ಗಳಿಗಿ	ಗಳಿಗೆ
ಗರಿ	—
ಚಂಡಿ	—
ತಳಿಗಿ	ತಳಿಗೆ
ದನಿ	—
ನಡಿಗಿ	ನಡಿಗೆ
ನರಿ	—
ನಳಿಕಿ	ನಳಿಕೆ
ಪಟ್ಟಿ	—
ಪರಿ	'ರೀತಿ'
ಪಳಿ	'ಹಲಗೆ'
ಬಡಿ (ಧಾ)	—
ಬನ್ನಿ	'ಒಂದುಗಿಡ'
ಬರಿ	'ಕಲ್ಲಿನ ಚೂರು'
ಬಸಿ (ಧಾ)	—
ಬಳ್ಳಿ	—
ಮಡಿ	'ಬೆಲೆಯುಳ್ಳ ಸೀರೆ'
ಮರಿ	—
ಮಸಿ	—
ಹತ್ತಿ	—
ಹಳ್ಳಿ	—

ಗ್ರಾಂಥಿಕಭಾಷೆಯಲ್ಲಿ ದ್ವಿತೀಯ ಸ್ವರವು ಎಕಾರವಿದ್ದರೆ ಅದು ಇಕಾರವಾಗಿ ಪರಿವರ್ತನೆ ಹೊಂದುವುದು ಈ ಭಾಷೆಗಳಲ್ಲಿ ಸಾಮಾನ್ಯವಷ್ಟೆ. ಇಂಥ ಪದಗಳ ಆದಿಯಲ್ಲಿಯ ಅಕಾರವು a ಸ್ವರವಾಗಿರಂತ್ತದೆ.

a ಸ್ವರ	ಗ್ರಾಂಥಿಕ ಕನ್ನಡ	a ಸ್ವರ	ಗ್ರಾಂಥಿಕ ಕನ್ನಡ
ಕಟ್ಟಿ	ಕಟ್ಟೆ	ದಂಡಿ	ದಂಡೆ
ಕತ್ತಿ	ಕತ್ತೆ	ಬಟ್ಟಿ	ಬಟ್ಟೆ
ಕಪ್ಪಿ	ಕಪ್ಪೆ	ಬರಿ	ಬರೆ
ಕರಿ	ಕರೆ	ಬಳಿ	ಬಳೆ
ಕಲಿ	ಕಲೆ	ಮರಿ	ಮರೆ
ಕಳಿ	ಕಳೆ	ಮಳಿ	ಮಳೆ
ತಟ್ಟಿ	ತಟ್ಟೆ		

ಮೇಲೆ ಸೂಚಿಸಿದ ನಿಯಮಕ್ಕೆ ಅಪವಾದವಾಗಿ ಪದಾದಿಯಲ್ಲಿಯ ವ್ಯಂಜನವು ಮ್ ಅಥವಾ ನ್ ಆಗಿದ್ದರೆ ಅಲ್ಲಿಯ ಅಕಾರವು ಕೆಲಪದಗಳಲ್ಲಿ ə ಇನ್ನು ಕೆಲವು ಪದಗಳಲ್ಲಿ a ಆಗಿರುತ್ತದೆ.

ə	a	ಬರಹ
ಮನಿ	—	ಮನೆ
—	ಮಳಿ	ಮೊಳೆ
—	ಮಸಿ	ಮಸೆ
—	ಮಲಿ	ಮೊಲೆ
—	ಮಳಿ	ಮಳೆ
ನಡಿ	—	ನಡೆ
ನಗಿ	—	ನಗೆ
—	ನರಿ	ನರೆ

ಗ್ರಾಂಥಿಕಕನ್ನಡ ಮೂರು ಅಕ್ಷರಗಳುಳ್ಳ ಪದಗಳ ಪ್ರಥಮ ಹಾಗೂ ದ್ವಿತೀಯ ಸ್ವರಗಳೆರಡೂ ಅಕಾರಗಳಾಗಿದ್ದರೆ ಈ ಭಾಷೆಗಳಲ್ಲಿ ಅಂಥ ಪದಗಳ ಪ್ರಥಮ ಸ್ವರವು a ಹಾಗೂ ದ್ವಿತೀಯ ಸ್ವರವು ə ಆಗಿ ಉಚ್ಚರಿಸಲ್ಪಡುತ್ತವೆ.

ಅಗಲ	—
ಅಡಗ	ಅಡಗು
ಅಡವ	ಅಡವು
ಅಮರ	ಅಮರು, 'ಹಿಡಿಯಲು ಸಾಧ್ಯವಾಗು'

ಅರಗ	ಅರಗು
ಅರಸ	—
ಕಡಗ	—
ಕಳಗ	ಚಕ್ಕಡಿಯ ಮೇಲಿನ ಸಾಲುಬಡಿಗೆಗಳು
ಕರಗ	ಕರಗು
ಗಬಳಿ	'ಫಜೀತಿ'
ತಗಡ	ತಗಡು
ಬರಗ	'ಒಂದು ಧಾನ್ಯ'
ಬಳಗ	—
ಮಗಳ	ಮಗಳು
ಹಡಗ	ಹಡಗು

ತ್ರ್ಯಕ್ಷರಿಯ ಆದಿಸ್ವರವು ಅಕಾರವಾಗಿದ್ದು ಮಧ್ಯಸ್ವರವು ಇ ಅಥವಾ ಉ ಆಗಿರುವ ಗ್ರಾಂಥಿಕ ಕನ್ನಡದ ಪದಗಳ ಮಧ್ಯಸ್ವರಗಳಿಗೆ ə ಸ್ವರವು ಆದೇಶವಾಗುವುದು.

ಅಗಳ	ಅಗುಳು
ಅದರ	ಅದಿರು
ಅರವ	ಅರಿವು
ಕಸರ	ಕಸಿರು
ಕಸವ	ಕಸುವು
ಬಸರ	ಬಸಿರು
ಸಡಲ	ಸಡಿಲು
ಹಸವ	ಹಸಿವು
ಹಸರ	ಹಸಿರು

ದೀರ್ಘ ə ಕಾರ: ಬೈಲಹೊಂಗಲದ ಉಪಭಾಷೆಯಲ್ಲಿಯ ಕೆಲವೇ ಪದಗಳಲ್ಲಿ ದೀರ್ಘಸ್ವರವಾದ ə : ಕಂಡುಬರುತ್ತದೆ.

ಉದಾ :

ಅ:ಸ	ಅಷ್ಟು (ಸಂಖ್ಯೆ)
ಅ:ಟ	ಅಷ್ಟು (ಪರಿಮಾಣ)
ಅ:ತಿ	ಇದೆ

ಈ ಉಪಭಾಷೆಗಳಲ್ಲಿ ಮೂರು ಅಕ್ಷರಗಳುಳ್ಳ ಪದಗಳ ಮಧ್ಯಸ್ವರವು ಲೋಪ ಹೊಂದುವುದರಿಂದ ಎರಡು ಅಕ್ಷರದ ಪದಗಳಾಗಿ ಮಾರ್ಪಡುತ್ತವೆ. ಅಂಥ ಪದಗಳ ಆದಿಸ್ವರವು ಅಕಾರವಾಗಿದ್ದರೆ ಅದು æ ಎಂದು ಉಚ್ಚರಿಸಲ್ಪಡುತ್ತದೆ.

ಅವ್ರು	ಅವರು
ಕವ್ಳ	ಕವಳೆ
ಕತ್ಲ	ಕತ್ತಲು
ಕಪ್ಲಿ	ಕಪ್ಪಲಿ
ಕಂಬ್ಳಿ	ಕಂಬಳಿ
ಗದ್ಲ	ಗದ್ದಲ
ಗಂಟ್ಲ	ಗಂಟಲು
ತಂಬ್ಲ	ತಂಬಲು, ‘ ತಂಪು ’
ತಪ್ಲ	ತಪ್ಪಲು, ‘ ಎಲೆ ’
ಬಟ್ಲ	ಬಟ್ಟಲು
ಮಕ್ಕ	ಮಕ್ಕಳು
ಸಕ್ರಿ	ಸಕ್ಕರೆ
ಸವ್ರು	ಸವರು
ಹಪ್ಳ	ಹಪ್ಪಳೆ*

ಮೇಲಿನ ನಿಯಮಕ್ಕೆ ಅಪವಾದವಾಗಿ (ಪದಾದಿಯಲ್ಲಿ ಮ, ತ, ಸ ವ್ಯಂಜನಗಳಿದ್ದರೆ ?) ಕೆಲವು ಪದಗಳಲ್ಲಿ ɵ ಸ್ವರವು ಕಂಡುಬರುತ್ತದೆ.

ಸಪ್ಳ	ಸಪ್ಪಳೆ
ಸಂಪ್ಗಿ	ಸಂಪಿಗೆ
ಸಂಗ್ತಿ	ಸಂಗತಿ, ‘ಜೋಡಿ’
ಸಂಗ್ಟಿ	‘ಜೋಳದ ನುಚ್ಚಿನಿಂದ ಮಾಡಿದ ಅನ್ನ’
ಸತ್ಗಿ	ಸತ್ತಿಗೆ, ‘ಕೊಡೆ’
ಮಜ್ಗಿ	ಮಜ್ಜಿಗೆ
ಮಲ್ಗಿ	ಮಲ್ಲಿಗೆ
ತವ್ಡ	ತವಡು
ತಂಗ್ಳ	ತಂಗಳೆ
ತಂಬ್ಗಿ	ತಂಬಿಗೆ

ಅಂತ್ಯಾಕ್ಷರವು ದ್ವಿತ್ವವಾಗಿರುವ ದ್ವ್ಯಕ್ಷರಿಗಳ ಪ್ರಥಮಸ್ವರವು ಅಕಾರವಾಗಿದ್ದರೆ ಅನಿಶ್ಚಿತವಾಗಿರುತ್ತದೆ.

ə	a	**ಬರಹ ಕನ್ನಡ**
ಅಟ್ಟ		ಅಟ್ಟು
ಕಟ್ಟ		ಕಟ್ಟು

---

* ೨೩ ಪುಟದ ಅಡಿಟಿಪ್ಪಣಿ ನೋಡಿರಿ.

ಕಣ್ಣ		ಕಣ್ಣು
ಕಂಟಿ		ಕಂಟಿ
ಗಂಟ		ಗಂಟು
ಚಂಡ		ಚಂಡು
ಜಂತ		ಜಂತು
ತಟ್ಟ		ತಟ್ಟು
ನಟ್ಟ		'ಒಂದು ಬಗೆಯ ಹುಲ್ಲು'
ಬತ್ತಿ		—
ಮಟ್ಟಿ		'ಮಿದುವಾದ ಕಲ್ಲಿನ ಪುಡಿ'
ಮತ್ತಿ		ಮುಚ್ಚಿ
ಮಬ್ಬ		ಮುಬ್ಬು
ಕಟ್ಟ		ಕಷ್ಟ
	ಕಳ್ಳಿ	—
	ಕಂತಿ	'ಲಿಂಗದಮೇಲಿನ ನಯು'
	ಕಂಬ	—
	ಕಂಡ	'ಮಾಂಸ'
	ದಂಡ	—
	ಪಕ್ಕ	—
	ಬಂಟ	—
	ಬಂಡ	ಭಂಡ
	ಹಕ್ಕಿ	'ಗೋದಲೆ'

ಕೇಶಿರಾಜನು ಹೇಳುವ ಒಂದೇ ಹ್ರಸ್ವಸ್ವರದಿಂದ ಕೂಡಿದ ಲ, ಳ, ಣ, ನ ಗಳಿಂ ಕಡೆಯಲ್ಲಿರುವ ಶಬ್ದಗಳು ಸ್ವರ ಸೇರಿ ದ್ವಿತ್ವವಾಗಿದ್ದು ಅವುಗಳ ಆದಿಸ್ವರವು ಅಕಾರ ವಾಗಿದ್ದರೆ ಅದು ə ಸ್ವರವಾಗಿ ಈ ಉಪಭಾಷೆಗಳಲ್ಲಿ ಉಚ್ಚರಿಸಲ್ಪಡುತ್ತದೆ.

ಕಣ್ಣ	ಕಣ್ಣು
ಕಲ್ಲ	ಕಲ್ಲು
ತಳ್ಳ	ತಳ್ಳು
ಪಳ್ಳ	ಪೊಳ್, ಪೊಳ್ಳು
ಮಣ್ಣ	ಮಣ್ಣು
ಸಲ್ಲ	ಸಲ್ಲು
ಹಣ್ಣ	ಹಣ್ಣು
ಹಲ್ಲ	ಹಲ್ಲು

ಈ ಉಪಭಾಷೆಗಳ ಪದಾದಿ ಪೂರ್ವಮಧ್ಯಸ್ವರಗಳಾದ ಎ, ಏ ಗಳು ಯ, ಯಾ ಎಂಬ ಅಕ್ಷರಗಳಾಗಿ ಪರಿವರ್ತನೆ ಹೊಂದುತ್ತವೆ. ಯ. ಯಾ ಇವು ಸ್ವರಗಳೆಂದು ಹೇಳುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

ಎ > ಯ

ಯಲಬ	ಎಲುವು
ಯಲಿ	ಎಲೆ
ಯಲ್ಲಾ	ಎಲ್ಲ
ಯಳಕ	ಎಳಕು
ಯಳೆಗ	ಎಳೆಗ
ಕ್ಯಟ್ಟ	ಕೆಟ್ಟ
ಕ್ಯದರ	ಕೆದರು
ಕ್ಯನಿ	ಕೆನೆ
ನ್ಯಲಾ	ನೆಲ
ಪ್ಯಂಟಿ	ಪೆಂಟೆ
ಬ್ಯಡಗ	ಬೆಡಗು
ಬ್ಯಳಕ	ಬೆಳಕು
ಬ್ಯಳಿ	ಬೆಳೆ
ಬ್ಯಳ್ಳಿ	ಬೆಳ್ಳಿ
ಮ್ಯಳಿ	ಮೆಳೆ

ಏ > ಯಾ

ಯಾಕ	ಏಕೆ
ಯಾತ	ಏತ
ಯಾಲಕ್ಕಿ	ಏಲಕ್ಕಿ
ಕ್ಯಾಕಿ	ಕೇಕೆ
ಕ್ಯಾಕರಕಿ	ಕೇಕರಿಕೆ
ಕ್ಯಾದಗಿ	ಕೇದಗೆ
ಕ್ಯಾರ	ಕೇರ 'ಒಂದು ಮರ'
ಕ್ಯಾರಿ	ಕೇರೆ 'ಒಂದು ಹಾವು'
ಜ್ಯಾಡ	ಜೇಡ
ತ್ಯಾಪಿ	ತೇಪೆ
ತ್ಯಾವಸಿ	ತೇವು

ಬ್ಯಾಗಿ	ಬೇಗೆ
ಬ್ಯಾಟಿ	ಬೇಟೆ
ಬ್ಯಾನಿ	ಬೇನೆ
ಬ್ಯಾರಿ, ಬ್ಯಾರೆ	ಬೇರೆ
ಮ್ಯಾಲ	ಮೇಲೆ

ಹೀಗಿದ್ದರೂ ಇನ್ನು ಅನೇಕ ಪದಗಳಲ್ಲಿ ದೀರ್ಘ ಏ ಉಳಿದಿದೆ.

ಏಟ	ಏಟು
ಏಡಿ	—
ಏಳ, (ಯೇಳ)	ಏಳು (ಧಾ)
ಕೇಡ	ಕೇಡು
ಕೇರ	ಕೇರು (ಧಾ)
ಕೇರಿ	—
ಗೇಣ	ಗೇಣು
ತೇರ	ತೇರು
ನೇಗ್ಲ	ನೇಗಿಲು
ಬೇಕ	ಬೇಕು
ಬೇಡ	ಬೇಡು
ಬೇರ	ಬೇರು
ಮೇಟಿ	—
ಸೇಡ	ಸೇಡು
ಸೇರ	ಸೇರು
ಹೇರ	ಹೇರು
ಹೇಳ	ಹೇಳು

ಪದಾದಿಯ ಒ, ವ ಆಗಿ ಮಾರ್ಪಡುತ್ತದೆ.

ವಗ್ಗಣಿ	ಒಗ್ಗರಣೆ
ವಣ	ಒಣ
ವಡಿ	ಒಡೆ
ವಲಿ	ಒಲೆ
ವಳಗ	ಒಳಗ
ವಳ್ಳೇ, ವಳೇ	ಒಳ್ಳೆಯ
ಕ್ವಡಾ	ಕೊಡ

ಕ್ವಳಿ	ಕೊಳೆ
ತ್ವಳಿ	ತೊಳೆ
ನ್ವಗ	ನೊಗ
ಸ್ವಳ್ಳಿ	ಸೊಳ್ಳೆ
ಹ್ವಳಿ	ಹೊಳೆ
ಹ್ವಸ	ಹೊಸ

ಓ > ವಾ

ವಾರಿಗಿ, ವಾರ್ಗಿ	ಓರಗೆ
ಕ್ವಾಟಿ	ಕೋಟೆ
ಕ್ವಾಡಗ	ಕೋಡಗ
ಕ್ವಾಣಿ	ಕೋಣೆ
ಕ್ವಾರಿ	ಕೋರೆ
ಜ್ವಾಳ	ಜೋಳ
ತ್ವಾಟ	ತೋಟ
ತ್ವಾಳ	ತೋಳ
ದ್ವಾರ, ಡ್ವಾರ	ದೋರೆ
ದ್ವಾರೆ	ಹೋರೆ, 'ಕೆಲಸ'
ಸ್ವಾಗಿ	ಸೋಗೆ

ಆದರೂ ಅನೇಕ ಪದಗಳಲ್ಲಿ ಅದು ಉಳಿದಿದೆ.

ಉದಾ :

ಓಣಿ	—
ಕೋಲ	ಕೋಲು
ಕೋಳಿ	—
ಗೋಣ	ಗೋಣು
ಜೋಟ, ಜೋಟಿ	'ಹೆಬ್ಬೆರಳು ತೋರ್ಬೆರಳುಗಳ ಅಳತೆ'
ಜೋರ	ಜೋರು
ತೋರ	ತೋರು
ತೋಪ	ತೋಪು
ತೋಡ	ತೋಡು
ನೋಟ	—
ನೋಡ	ನೋಡು
ಬೋಳ	ಬೋಳು

ಮೇಲೆ ಸೂಚಿಸಿದ ಸಂದರ್ಭದಲ್ಲಿ ಆದಿ ವ್ಯಂಜನವು ಪವರ್ಗವಾಗಿದ್ದಲ್ಲಿ ಒ>ಅ ಆಗಿಯೂ ಓ>ಆ ಆಗಿಯೂ ಪರಿವರ್ತನೆ ಹೊಂದುತ್ತವೆ.

೧. ಪರಿ	—
ಪಳ್ಳ	—
ಪಕ್ಕಿ	ಬೊಕ್ಕೆ
ಬಗಳ	ಬೊಗಳು
ಬಗಸಿ	ಬೊಗಸೆ
ಬಜ್ಜ	ಬೊಜ್ಜು
ಬಟ್ಟ	ಬೊಟ್ಟು
ಬಡ್ಡಿ	ಬೊಡ್ಡೆ
ಬಡ್ಡಿ	ಬೊಡ್ಡಿ 'ವೇಶ್ಯೆ'
ಮಟ್ಟಿ	ಮೊಟ್ಟೆ
ಮಡ್ಡಿ	ಮೊರಡಿ
ಮನಿ	ಮೊನೆ
ಮರಾ	ಮೊರ
ಮಲಿ	ಮೊಲೆ
ಮಲಾ	ಮೊಲ
ಮಮ್ಮಗ	ಮೊಮ್ಮಗ
ಮಳಾ	ಮೊಳ
ಮಳಿಕಿ	ಮೊಳಕೆ
೨. ಬಾನ	ಬೋನ
ಮಾಡ	ಮೋಡ
ಮಾರಿ	ಮೋರೆ

ಮಧ್ಯಮ ಮತ್ತು ದ್ವಿತೀಯ ಸ್ವರ : ಮೂರು ಅಕ್ಷರಗಳುಳ್ಳ ಪದಗಳ ಮಧ್ಯ-ಸ್ವರವು ಲೋಪ ಹೊಂದುವುದು ಕನ್ನಡದ ಹಲವಾರು ಉಪಭಾಷೆಗಳಲ್ಲಿ ಕಂಡು ಬರುವ ಪ್ರಕ್ರಿಯೆ. ಪ್ರಸ್ತುತ ಉಪಭಾಷೆಗಳಲ್ಲಿ ಈ ಪ್ರಕ್ರಿಯೆಯು ಕೆಳಗಿನ ವೈಶಿಷ್ಟ್ಯ-ಗಳನ್ನುಳ್ಳದ್ದಾಗಿದೆ.

ಮಧ್ಯ ಅಕ್ಷರವು ರಕಾರನಿಂದೊಡಗೂಡಿದ್ದು ಅದರ ಮುಂದೆ ಟ, ಡ, ಣ, ಳ ಗಳಿಂದೊಡಗೂಡಿದ ಅಕ್ಷರವಿದ್ದರೆ ಆ ರಕಾರದ ಮುಂದಿನ ಸ್ವರ ಲೋಪಹೊಂದಿ ರಕಾರವು ಮುಂದಿನ ವ್ಯಂಜನದೊಡನೆ ಸಮರೂಪಧಾರಣೆ ಹೊಂದುತ್ತದೆ.

ಅಳ್ಳಿ	ಅರಳಿ
ಅಳ್ಳ	ಅರಳು
ಉಳ್ಳಿ	ಉರುಳಿ

ಒಳ್ಳೆ	ಒರಳು
ಕಡ್ಡಿ	ಕರಡಿ
ಕಡ್ಡ	ಕರಡು
ಕಳ್ಳೆ	ಕರುಳು
ಕ್ವಳ್ಳೆ	ಕೊರಳು
ಗ್ವಟ್ಟ	ಗೊರಟ
ಚಟ್ಟ	ಚರಟ
ಪಟ್ಟಿ	ಪರಟಿ
ಪಡ್ಡಿ	ಪರಡಿ
ಬಡ್ಡ	ಬರಡು
ಬಿಡ್ಡಿ	ಬಿರಡಿ
ಮಡ್ಡಿ	ಮೊರಡಿ
ಮುಳ್ಳ	ಮುರುಳ
ಹಡ್ಡ	ಹರಡು
ಹ್ವಳ್ಳ	ಹೊರಳು
ಕಣಿ	ಕರಣಿ

ಪರದಲ್ಲಿ ಮೂರ್ಧನ್ಯಗಳನ್ನುಳಿದು ಬೇರೆ ವ್ಯಂಜನಗಳಿದ್ದರೆ ಈ ಸಮರೂಪಧಾರಣೆಯು ನಡೆಯುವುದಿಲ್ಲ.

ಅರವ	ಅರಿವು
ಬಾರ್ಗಿ	ಓರಗೆ
ಕರಿಕಿ	ಕರಿಕೆ, ಗರಿಕೆ
ಕೂರ್ಗಿ	ಕೂರಿಗೆ
ಗಾರ್ಗಿ	ಗಾರಿಗೆ
ಗ್ವರಿಕಿ	ಗೊರಕೆ
ಚರಿಗೆ	ಚರಿಗೆ, ‘ ತಂಬಿಗೆ ’
ಜೀರ್ಗಿ	ಜೀರಗೆ
ಬೆರಿಕಿ	ಬೆರಕೆ
ಪರಿಕಿ	‘ ತೆಂಗು, ಸಿಂದಿ ಮುಂ, ಗಿಡಗಳ ಗರಿ ’
ಸರಿಗಿ	ಸರಿಗೆ ‘ ಆಭರಣ ವಿಶೇಷ ’
ಸುರಿಗಿ	ಸುರಿಗೆ ‘ ಮದುವೆಯಲ್ಲಿ ಪಂಚಕಲಶಗಳಿಗೆ ಸುತ್ತುವ ದಾರ,–ಸುತ್ತುವಿಕೆ ’

ಮಧ್ಯ ಅಕ್ಷರದಲ್ಲಿ ರಕಾರವಿದ್ದು ಕೊನೆಯ ಅಕ್ಷರದಲ್ಲಿ ಲಕಾರವಿದ್ದರೆ ರಕಾರದ ಮುಂದಿನ ಸ್ವರವು ಲೋಪಹೊಂದುತ್ತದೆ.

ಅರ್ಲ್	ಅರಲು
ಉರ್ಲ್	ಉರುಲು, ಉರುಳು
ಕರ್ಲ್	ಕರಲು
ಜಿರ್ಲಿ	ಜಿರಲಿ, ಜಿರಳೆ
ನರ್ಲಿ	—
ಪರ್ಲ್	ಪರಲು 'ಸಂಬಂಧ'
ಬರ್ಲ್	ಬರಲು 'ಪೊರಕೆ'
ಹರ್ಲ್	ಹರಲಿ 'ಅಪಕೀರ್ತಿ'

ತ್ರ್ಯಕ್ಷರಿಯ ಪ್ರಥಮ ಸ್ವರವು ದೀರ್ಘವಾಗಿದ್ದರೆ ನಡುವಿನ ಸ್ವರವು ಲೋಪ ಹೊಂದುತ್ತದೆ.

ವಾರ್ಗಿ	ಓರಗೆ
ಓಡ್ಸ	ಓಡಿಸು
ಕಾಗ್ದ, ಕಾದ್ಗ	ಕಾಗದ
ಕಾಡ್ಗಿ	ಕಾಡಿಗೆ
ಕೂರ್ಗಿ	ಕೂರಿಗೆ
ಕೇಳ್ಕಿ	ಕೇಳಿಕೆ
ಗಾರ್ಗಿ	ಗಾರಿಗೆ
ಚಾವ್ಡಿ	ಚಾವಡಿ
ಜಾಡ್ಸ	ಜಾಡಿಸು
ತೋರ್ಕಿ	ತೋರಿಕೆ
ನೇಗ್ಲ	ನೇಗಿಲು
ಪೇಲ್ಕಿ	ಪೇಲಿಕೆ, ಪೇರಿಕೆ
ಬೇಡ್ಕಿ	ಬೇಡಿಕೆ
ಸ್ಯಾವ್ಗಿ	ಸೇವಗೆ
ಸಾರ್ಸ	ಸಾರಿಸು
ಸಾಸ್ವಿ	ಸಾಸಿವೆ
ಹೋಳ್ಗಿ	ಹೋಳಿಗೆ
ಹೇನ್ತಿ	ಹೆಂಡತಿ

ತ್ರ್ಯಕ್ಷರಿಯ ದ್ವಿತೀಯಾಕ್ಷರವು ದ್ವಿತ್ವವಾಗಿದ್ದರೆ ಅದರಲ್ಲಿಯೂ ಸ್ವರವು ಲೋಪ ಹೊಂದುತ್ತದೆ.*

ಅಪ್ಣಿ	ಅಪ್ಪಣೆ
ಕಂಬ್ಳಿ	ಕಂಬಳಿ
ಕತ್ರಿ	ಕತ್ತರಿ
ಕತ್ಲ	ಕತ್ತಲು
ಗಂಟ್ಲ	ಗಂಟಲು
ಗ್ವಂಚ್ಲ	ಗೊಂಚಲು
ಚಪ್ರ	ಚಪ್ಪರ
ತಂಬ್ಗಿ	ತಂಬಿಗೆ
ನ್ಯಟ್ಗಿ	ನೆಟ್ಟಗೆ
ನಂಬ್ಗಿ, ನ್ಯಂಬ್ಗಿ	ನಂಬಿಕೆ
ಪಟ್ಣ	ಪಟ್ಟಣ
ಮ್ಯಟ್ಲ	ಮೆಟ್ಟಲು
ಸತ್ಗಿ	ಸತ್ತಿಗೆ
ಸಪ್ಳ	ಸಪ್ಪಳ

ದ್ವಿತೀಯಾಕ್ಷರವು ಯ್, ವ್, ಗಳಿಂದ ಕೂಡಿದ್ದರೆ ಅವುಗಳ ಸ್ವರವು ಲೋಪ ಗೊಂಡು ತ್ರ್ಯಕ್ಷರಿಯು ದ್ವ್ಯಕ್ಷರಿಯಾಗುತ್ತದೆ.

ಅವ್ರು	ಅವರು
ಕವ್ಣಿ	ಕವಣೆ
ಕವ್ಲ	ಕವಲು
ನವ್ಲ	ನವಿಲು
ಸವ್ಳ	ಸವಳು
ಬಯ್ಲ	ಬಯಲು
ಪಯ್ರು	ಪಯರು
ಹಯ್ನ	ಹಯನ

---

* ಇಲ್ಲಿ ಆಗುವ ಕಾರ್ಯ ಇಷ್ಟು— ೧ ಮಧ್ಯದ್ವಿತ್ವಗಳು ಸರಳಾಗುವುದು ೨ ಮಧ್ಯಸ್ವರ ಲೋಪ ಹೊಂದುವುದು. ೩ ಮಧ್ಯದಲ್ಲಿ ಅನುನಾಸಿಕವಾಗಿದ್ದರೆ ಅದು ಲೋಪ ಹೊಂದಿ ಅದರ ಹಿಂದಿನ ಸ್ವರವು ಅನುನಾಸಿಕತ್ವವನ್ನು ಹೊಂದುತ್ತದೆ. (ಮೂರನೆಯ ಪ್ರಕ್ರಿಯೆ ನಡೆಯುತ್ತದೆಂದು ಪ್ರೊ. ಮಾಡ್ರಾ ಅವರ ಹೇಳಿಕೆ.)

ತ್ರ್ಯಕ್ಷರಿಯ ಮಧ್ಯಸ್ವರವು ದೀರ್ಘವಾಗಿದ್ದರೆ ಲೋಪವಿಲ್ಲ.

ಉಡಾಳ	'ಪೋಲಿ'
ವಗ್ಯಾಣ	ಒಗೆಯೋಣ
ಕಿತ್ತಾಟ	—
ಗಿರಾಕಿ	—
ನಗಾರಿ	—
ದೊಡ್ಡಾಟ	—
ಬಂಗಾರ	—
ಮಾರಾಟ	—
ಸಿಂಗಾರ	—
ಸುಮಾರ	'ಕೀಳು' 'ಹೀನ'
ಸನೇಕ	'ಸಮೀಪಕ್ಕೆ'

ಮೇಲೆ ವಿವರಿಸಿದ ಪರಿಸರಗಳನ್ನುಳಿದು ಉಳಿದೆಡೆಗಳಲ್ಲೆಲ್ಲ ತ್ರ್ಯಕ್ಷರಿಯು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ.

ಅಗುಳಿ	ಅಗುಳಿ
ಅಡವ	ಅಡವು
ಉಳಸಿ	ಉಸುಳಿ, 'ಕಾಳಿನ ಪಲ್ಲೆ'
ಕಡಗ	—
ಕಸವ	ಕಸುವು
ಕಳಗ	'ಚಕ್ಕಡಿಯ ಮೇಲ್ಭಾಗದಲ್ಲಿ ನಿಲ್ಲಿಸಿದ ಬಡಿಗೆ'
ಗಡಿಗಿ	ಗಡಿಗೆ
ಗಳಿಕಿ	ಗಳಿಕೆ
ಗಳಿಗಿ	ಗಳಿಗೆ
ಚಿಗಳಿ	'ಹುಣಿಸೆಯ ಕಾಯಿಯಿಂದ ಮಾಡಿದ ತಿಂಡಿ'
ತಗಲ	'ಸುಳ್ಳು'
ತಳಕ	ತಳಕು
ತ್ವಡಕ	ತೊಡಕು
ನಡಗ	ನಡುಕ
ನಡಿಗಿ	ನಡಿಗೆ
ನಿರಿಗಿ	ನಿರಿಗೆ
ನ್ಯಲವ	ನೆಲವು

ಪಕಳಿ	ಪಕಳಿ
ಪಡಕಿ	ಪಡಿಕೆ 'ಸೀರೆಯ ಚಿಂದಿ'
ಬಗಲ	'ಕೊಂಕುಳ'
ಬಗಳಿ	'ಫಜೀತಿ'
ಬಡಿಗಿ	ಬಡಿಗೆ
ಬ್ಯಸಗಿ, ಬ್ಯಸಿಗಿ	ಬೆಸಿಗೆ, ಬೆಸುಗೆ
ಬಳಗ	—
ಮಳಿಕಿ	ಮೊಳಕೆ
ಮಡಿಕಿ	ಮಡಿಕೆ, 'ಒಂದು ಧಾನ್ಯ'
ಯಬಡ	ಎಬಡ 'ಪೆದ್ದ'
ವಡಕ	ಒಡಕು

ಅಂತ್ಯಸ್ವರ :

ಗ್ರಾಂಥಿಕ ಕನ್ನಡದಲ್ಲಿ ಉಕಾರಾಂತವಾಗಿರುವ ಪದಗಳೆಲ್ಲ ಈ ಉಪಭಾಷೆಗಳಲ್ಲಿ ಸಾಮಾನ್ಯವಾಗಿ ಅ ಸ್ವರಾಂತವಾಗುತ್ತವೆ.

ಅವ್ರ	ಅವರು
ಊರ	ಊರು
ಓಡ	ಓಡು
ಕಾಳ	ಕಾಳು
ಕುಂದ	ಕುಂದು
ಕ್ಯಡ	ಕೆಡು
ಗೀಳ	ಗೀಳು
ತೋಡ	ತೋಡು
ನಾಡ	ನಾಡು
ನ್ಯನಪ	ನೆನಪು
ಬದಕ	ಬದುಕು
ಬೀಡ	ಬೀಡು
ಬ್ಯರಸ	ಬೆರಸು
ಬೇಡ	ಬೇಡು
ಹರವ	ಹರವು
ಸಲ್ಲ	ಸಲ್ಲು
ಹಲ್ಲ	ಹಲ್ಲು

ಗ್ರಾಂಥಿಕಕನ್ನಡದಲ್ಲಿ ಅಕಾರಾಂತವಾಗಿರುವ ದ್ವ್ಯಕ್ಷರಿಗಳ ಪ್ರಥಮ ಸ್ವರವು ಹ್ರಸ್ವವಾಗಿದ್ದರೆ ಅಕಾರವು ದೀರ್ಘ ಆಕಾರವಾಗುತ್ತದೆ. ವ್ಯಂಜನದಿಂದೊಡಗೂಡಿದ ವಿಭಕ್ತಿ ಪ್ರತ್ಯಯ ಸೇರಿದರೆ ದೀರ್ಘಾದೇಶವಿಲ್ಲ.

ಕಡಾ	ಕಡ
ಕಣಾ	ಕಣ
ಕ್ವಡಾ	ಕೊಡ
ಗುಣಾ	ಗುಣ
ತಡಾ	ತಡ
ದನಾ	ದನ
ನರಾ	ನರ
ನ್ಯಣಾ	ನೆಣ
ನ್ಯಲಾ	ನೆಲ
ಪಡಾ	ಪಡ, 'ಬೀಳು' 'ಪಾಳು'
ಮಣಾ	ಮಣ
ಮರಾ	ಮರ
ಯಡಾ	ಯಡ
ಸರಾ	ಸರ
ಹಣಾ	ಹಣ
ಹ್ವಲಾ	ಹೊಲ

ವ್ಯಂಜನಯುಕ್ತ ವಿಭಕ್ತಿ ಪ್ರತ್ಯಯಕ್ಕೆ :

ಹ್ವಲಕ್ಕ	ಹೊಲಕ್ಕೆ (ಚ. ವಿ.)
ಹ್ವಲದಿಂದ	ಹೊಲದಿಂದ (ತೃ, ಪಂ; ವಿ.)
ಹ್ವಲದಾಗ	ಹೊಲದಲ್ಲಿ (ಸ. ವಿ.)

ಬರಹ ಕನ್ನಡದಲ್ಲಿಯ ಅಂತ್ಯ ಎಕಾರವು ಈ ಉಪಭಾಷೆಗಳಲ್ಲಿ ಬದಲಾವಣೆಗೆ ಒಳಗಾಗುತ್ತದೆ.

I ಎ > ಇ

—	ಬರಹ	—	ಬರಹ
ಕಟ್ಟಿ	ಕಟ್ಟೆ	ಪ್ಯಂಟಿ	ಪೆಂಟೆ
ಕಣಿಕಿ	ಕಣಿಕೆ	ಬಳಕಿ	ಬಳಕೆ
ಕಳಿ	ಕಳೆ	ಬ್ಯಳಿ	ಬೆಳೆ
ಕ್ವಳಿ	ಕೊಳೆ	ಮಳಕಿ	ಮೊಳಕೆ
ಗಳಿಕಿ	ಗಳಿಕೆ	ಮ್ಯಕ್ಕಿ	ಮೆಕ್ಕೆ
ತಟ್ಟಿ	ತಟ್ಟೆ	ಮ್ಯಳಿ	ಮೆಳೆ

ತ್ವಳಿ	ತೊಳೆ	ಯಳಿ	ಎಳೆ
ತ್ವಂಡಿ	ತೊಂಡೆ	ವಂಟಿ	ಒಂಟೆ

II ಎಕಾರಾಂತವಾದ ಕ್ರಿಯಾವಿಶೇಷಣಗಳು ಅಕಾರಾಂತವಾಗುತ್ತವೆ.

ಕ್ಯಂಪ್ಗ	ಕೆಂಪಗೆ
ತ್ಯಳ್ಗ	ತೆಳ್ಳಗೆ
ನಡಕ	ನಡುವೆ
ಬ್ಯಳ್ಗ	ಬೆಳ್ಳಗೆ
ಮ್ಯಲ್ಕ	ಮೆಲ್ಲಗೆ, 'ಮೆಲ್ಲನೆ'
ಸಪ್ಗ	ಸಪ್ಪಗೆ

III ವಿಶಂಕೆ, ಅವಧಾರಣೆ, ಪ್ರಶ್ನೆಯನ್ನು ಸೂಚಿಸಲು ಅಂತ್ಯದಲ್ಲಿ ಬರುವ ಎ, ಏಕಾರಗಳು ಅ. ಅಃ (ದೀರ್ಘ) ಆಗುತ್ತವೆ.

ಅದಃ	ಅದೇ
ಅಲ್ಲಃ	ಅಲ್ಲವೇ
ಇದಃ	ಇದೇ
ಕಪ್ಪಃ	ಕಪ್ಪೇ
ನೀನಃ	ನೀನೇ
ಹೌದಃ	ಆಹುದೇ
ಹ್ವಾದಃ	ಹೋದನೇ
ಬರ್ಯಾಕಃ ಬೇಕ	ಬರೆಯುಲಿಕೇ ಬೇಕು
ತರಾಕಃ ಬೇಕ	ತರಲಿಕ್ಕೇ ಬೇಕು
ಬಿಳೀದಃ ಅಃತಿ	ಬಿಳಿಯದೇ ಅದೆ

IV ಚತುರ್ಥಿ ವಿಭಕ್ತಿಯ ಅಂತ್ಯ ಎಕಾರವು ಅಕಾರವಾಗಿ ಪರಿವರ್ತನೆ ಹೊಂದುತ್ತದೆ.

ಅವ್ಗ	ಅವನಿಗೆ
ಕುಲಕ್ಕ, ಕರಿಲಕ	ಕುಲಕ್ಕೆ
ಕ್ಯಲಸಕ್ಕ	ಕೆಲಸಕ್ಕೆ
ದನಕ್ಕ, ದನಕ	ದನಕ್ಕೆ
ನಡಕ್ಕ	ನಡುವಿಗೆ
ಮನಕ್ಕ, ಮನಕ	ಮನಕ್ಕೆ
ಹ್ವಡತಕ್ಕ	ಹೊಡೆತಕ್ಕೆ
ಹ್ವಲಕ್ಕ, ಹ್ವಲಕ	ಹೊಲಕ್ಕೆ

V ಅಂತ್ಯ ಎಕಾರವು ಹೀಗೆ ಮೇಲಿನ ಬದಲಾವಣೆಗೊಳಗಾಗಿದ್ದರೂ ಕೆಲವೇ ಪದಗಳಲ್ಲಿ ಅದು ಉಳಿದುಕೊಂಡಿದೆ ಹಾಗೂ ಅದು ಹ್ರಸ್ವ, ದೀರ್ಘಗಳ ಮಧ್ಯದ [ɛ] ಉಚ್ಚಾರವುಳ್ಳದಾಗಿದೆ.

ಈಳೇ	ವೀಳೆಯ
ವಳ್ಳೇ	ಒಳ್ಳೆಯ
ಕಡೇ	ಕಡೆಯ
ಕರೇ	'ಸತ್ಯ' (ಖರ–ಮರಾಠಿ)
ಕಳೇ	'ಪೈರಿನಲ್ಲಿಯ ಕಸ'
ಕೂಳೇ	'ಪೈರು ಕೊಯ್ದನಂತರದ ಚಿಗುರು'
ಗಳೇ	'ಹೊಲ ಹರಗುವುದು', 'ಹರಗುವ ಸಾಧನ'
ತೋಡೇ	ಕಾಲು ಅಥವಾ ಕೈಯ ಆಭರಣ
ತಂಟೇ	'ಜಗಳ'
ಪಾಳೇ	'ಕಂದಾಯ' 'ಪಾಳಿ'
ಬರೇ	ಬರಿಯ
ಹಗೇ	ಕಾಳು ಮುಚ್ಚಿಡಲು ನೆಲದಲ್ಲಿ ತೋಡಿದ ತಗ್ಗು
ಹಂಡೇ	ತಾಮ್ರದ ದೊಡ್ಡ ಪಾತ್ರೆ

ಹಳೆಗನ್ನಡದ ಯಕಾರಾಂತ ಏಕಾಕ್ಷರಿಗಳು ಸ್ವತಂತ್ರವಾಗಿ ಪ್ರಯೋಗಿಸಲ್ಪಟ್ಟಾಗ ಈ ಉಪಭಾಷೆಗಳಲ್ಲಿ ಈಗಲೂ ವ್ಯಂಜನಾಂತಗಳಾಗಿಯೇ ಬಳಕೆಯಾಗುತ್ತವೆ.

ಕಯ್	ಕೈ
ಕಾಯ್	ಕಾಯಿ
ಕ್ವಯ್	ಕೊಯ್ಯು
ತ್ಯಯ್	ತೆಯ್ಯು
ತ್ವಯ್	ತೊಯ್ಯು
ನ್ಯಯ್	ನೆಯ್ಯು
ಬಯ್, ಬ್ಯಯ್	ಬಯ್ಯು
ಹ್ವಯ್	ಹೊಯ್ಯು

ಈ ಲೇಖನವನ್ನು ಓದಿ ಹಲವು ಸಲಹೆ ಸೂಚನೆಗಳನ್ನಿತ್ತ ಪ್ರೊ. ವಿಲಿಯಂ ಮಾಡ್ತಾ, ಕ. ವಿ. ವಿ. ಧಾರವಾಡ ಅವರಿಗೆ ಲೇಖಕನ ನೆನಕೆಗಳು ಸಲ್ಲುತ್ತವೆ.

ಲಾವಣಿಯ ಶಿಲ್ಪ

ಶ್ರೀರಾಮ ಇಟ್ಟಣ್ಣವರ

ದಾಸರ ಪದಗಳಲ್ಲಿ, ಶರಣರ ಸ್ವರವಚನಗಳಲ್ಲಿ ಸಾಮಾನ್ಯವಾಗಿ ಪಲ್ಲ, ನುಡಿಗಳನ್ನು ಕಾಣುತ್ತೇವೆ. ಕೆಲವು ಹಾಡುಗಳಲ್ಲಿ ಪಲ್ಲದ ಕೆಳಗೆ ಅನುಪಲ್ಲವೂ ಸೇರಿಕೊಳ್ಳುವುದುಂಟು. ಪಲ್ಲದಲ್ಲಿ ಪದದ ಮೂಲಭಾವ ಶೇಖರಿಸಿಕೊಂಡಿರುತ್ತದೆ. "ಆರು ಬದುಕಿದರಯ್ಯ ಹರಿ ನಿನ್ನ ನಂಬಿ। ತೋರು ಈ ಜಗದೊಳಗೆ ಒಬ್ಬರನು ಕಾಣೆ।" ಎಂಬುದು ಪುರಂದರ ದಾಸರ ಒಂದು ಪದದ ಪಲ್ಲ. ಮುಂದೆ ನುಡಿಗಳಲ್ಲಿ ಹರಿಯನ್ನು ನಂಬಿ ಯಾರು ಯಾರು ಕೆಟ್ಟರೆಂಬುದನ್ನು ವಿವರವಿವರವಾಗಿ ಹೇಳಲಾಗಿದೆ. ಒಂದು ಪದದಲ್ಲಿ ಐದೊ ಆರೊ ನುಡಿಗಳಿರಬಹುದು. ಹಾಡುವಾಗ ಪ್ರತಿ ನುಡಿಯ ಕೊನೆಯಲ್ಲಿ ಪಲ್ಲನ್ನು ಪುನರುಚ್ಚಾರಗೊಳಿಸುವರು. ಕವಿಯ ಮುದ್ರಿಕೆಯು ಕೊನೆಯ ನುಡಿಯಲ್ಲಿ ಕಂಡುಬರುವುದು. ಮೇಲಿನ ಎಲ್ಲ ಹಾಡುಗಳಲ್ಲಿ ರಚನೆ ಒಂದೇ ಸ್ವರೂಪದ್ದಾಗಿದೆ.

ಕಂಠಸ್ಥ ಹಾಡುಗಳ ಚೌಕಟ್ಟು ಒಂದೇ ತೆರನಾಗಿರದೆ ವೈವಿಧ್ಯಪೂರ್ಣವಾಗಿವೆ. ಜನಪದ ನೀಳ್ಗೀತೆಗಳೆಲ್ಲ ರಚನೆಯ ದೃಷ್ಟಿಯಿಂದ ವೈವಿಧ್ಯವನ್ನು ಕಾಯ್ದುಕೊಂಡಿವೆ. ಡೊಳ್ಳಿನ ಹಾಡು, ಗೊಂದಲಿಗರ ಹಾಡು, ಚೌಡಕಿಯ ಹಾಡು, ಲಾವಣಿ ಮುಂತಾದವುಗಳ ಶಿಲ್ಪ ಒಂದರಿಂದ ಒಂದು ಭಿನ್ನ. ಡೊಳ್ಳಿನ ಹಾಡು, ಗೊಂದಲಿಗರ ಹಾಡು, ಚೌಡಕಿಯ ಹಾಡುಗಳಲ್ಲಿ ಹಾಡು ಒಂದೇ ಮಟ್ಟದಲ್ಲಿ ಹರಿದುಕೊಂಡು ಹೋಗಿ ಧ್ವನಿಯ ಏರಿಳಿತಗಳಿಗೆ ಹೆಚ್ಚಿನ ಅವಕಾಶವಿರುವುದಿಲ್ಲ.

ಲಾವಣಿ ಮಾತ್ರ ಇಡೀ ರಚನೆಯ ದೃಷ್ಟಿಯಿಂದ ಸಾವಯವ ಸೌಂದರ್ಯ ಪಡೆಯುತ್ತದೆ. ಹಾಡು ಸಾಗಿದಂತೆ ಭಾವಕ್ಕೆ ತಕ್ಕಂತೆ ಬದಲಾಗುವ ಛಂದಸ್ಸು, ಛಂದಸ್ಸಿಗೆ ಹೊಂದಿಕೊಂಡು ಬರುವ ಧ್ವನಿಯ ಏರಿಳಿತ ಮನವನ್ನು ಸೂರೆಗೊಳ್ಳುವವು. ಪಲ್ಲ, ಚೌಕುಗಳೆಂದು ಲಾವಣಿಯನ್ನು ಮುಖ್ಯವಾಗಿ ವಿಭಾಗಿಸಿದರೆ ಪ್ರತಿಯೊಂದು ಚೌಕದಲ್ಲಿ ಹಲವಾರು ವಿಭಾಗಗಳನ್ನು ಕಾಣುತ್ತೇವೆ. ಚಾಲ, ಕೂಡುಪಲ್ಲ, ದುಡುಕಿ, ದುಯಿರಿ ಎಂದು ಚೌಕದ ವಿವಿಧ ಹಂತಗಳನ್ನು ಗುರುತಿಸಬಹುದು.

ಚೌಕದ ಈ ಅಂಗಾಂಗಗಳು ಪ್ರತಿ ಲಾವಣಿಯ ಚೌಕುಗಳಲ್ಲಿ ಇದ್ದೇತೀರಬೇಕು ಎನ್ನುವ ನಿಶ್ಚಿತತೆಯೇನೂ ಇಲ್ಲ. ಅದು ಆಯಾ ಲಾವಣಿಕಾರನಿಗೆ ಬಿಟ್ಟುಕೊಟ್ಟ ವಿಷಯ. ಲಾವಣಿಯ ವಸ್ತುವಿನ ಆಯ್ಕೆಯ ಮೇಲೂ ಅದು ಅವಲಂಬಿಸಿರುತ್ತದೆ. ಲಾವಣಿ ಕಥೆಯನ್ನೊಳಗೊಂಡಿದ್ದರೆ ಮೇಲೆ ಹೇಳಿದ ಬಹುತೇಕ ವಿಭಾಗಗಳನ್ನು ಉಪಯೋಗಿಸಿ

ಕೊಂಡು ಲಾವಣೆಕಾರ ಚೌಕನ್ನು ಹೊಸೆಯುತ್ತಾನೆ. ಹೇಳುವ ವಿಷಯ ವಿವರಣಾತ್ಮಕ ಸಂಗತಿಯಾಗಿದ್ದರೆ ಅಥವಾ ಕಥೆಯಾಗಿದ್ದರೆ ಎಲ್ಲಿಯೂ ಬೇಸರ ಹುಟ್ಟಿಸಬಾರದೆಂಬ ಉದ್ದೇಶದಿಂದ ಚಾಲ, ದುಡುಕಿ, ದುಯುರಿ, ಕೂಡುಪಲ್ಲುಗಳನ್ನು ಹೆಣೆದು ಛಂದಸ್ಸಿನಲ್ಲಿ ವೈವಿಧ್ಯ ನಿರ್ಮಾಣಮಾಡಿಕೊಳ್ಳುವುದರಿಂದ ಒಂದೇ ಚೌಕಿನಲ್ಲಿ ವಿವಿಧ ಲಯಗಳಿಗೆ ಅವಕಾಶ ದೊರೆತು ಪ್ರತಿಚೌಕವು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತದೆ.

ಪಲ್ಲ : ಲಾವಣಿಯ ಪಲ್ಲ ಸಭಿಕರನ್ನು ಉದ್ದೇಶಿಸಿಯೇ ಪ್ರಾರಂಭವಾಗುತ್ತದೆ. ಅಂದರೆ ಹಾಡುಗಬ್ಬದ ಲಾವಣಿ ಸಾರ್ಥಕವಾಗುವುದು ಸಾವಿರಾರು ಜನ ಕೂಡಿದ ಸಭೆಯನ್ನು ಕಂಡಾಗಲೇ. "ನಾನು ಇಂಥ ಹಾಡು ಹಾಡುತ್ತೇನೆ" ಎಂದು ಸಭಿಕರಿಗೆ ವಂದಿಸಿ ನುಡಿಯುವಲ್ಲಿ ನಮ್ರತೆ ಒಡೆದುಕಾಣುತ್ತದೆ.

"ಸಮಸ್ತ ಕೂಡಿರಿ ಸಭಾಗಣಂಗಳ ಸಣ್ಣದೊಡ್ಡವರು ನಿವೆಲ್ಲಾ
ಗಾಡಿಕಾರ ಶಿವ ಮಾಡಿದ ಆಟಾ ನೋಡಿದವರು ಯಾರ್‍ಯಾರಿಲ್ಲಾ"

* * *

"ಅಸಲಕವಿ ಮಾಡಿ ನಾನು ಕಸರಿಲ್ಲದ ಹಾಡತೀನ
ಚಿತ್ತವಿಟ್ಟ ಕೇಳರೆಪ್ಪಾ ಸರವರಿನ್ನು
ಹುಸಿ ಅಲ್ಲ ಈ ಮಾತ ಟಿಸಿ ಬಡಿತ ನಾಡಿನೊಳಗ
ಅರಮುಂದಿ ಅಕ್ಕಕಂಗ್ಯಾರ ಬಂದs ಸವನು".

* * *

"ಸರುವ ಜನರಿಗೆಲ್ಲ ಸಮುಜಲಿಂದ ಹೇಳತೀನ
ಬರಿ ಐತಿ ಹೌದ ಹೌದ ಅನ್ನಿಸಿಕೊಳ್ಳೂದು
ನೀಗುವಾಂಗಿದ್ರ ಹಿಡಿಬೇಕ ಊರಾಗ ಕಾರಭಾರ ಮಾಡೂದು."

ಮೇಲಿನ ಈ ಉದಾಹರಣೆಗಳೆಲ್ಲ ಮುಂಚಿನ ಮಾತನ್ನು ಪುಷ್ಟೀಕರಿಸುತ್ತವೆ. ಸಭಿಕರನ್ನು ಉದ್ದೇಶಿಸಿ ಹೇಳುವ ಮಾತನ್ನು 'ಕೇಳಿರಿ' ಎಂದೋ 'ಹೇಳತ್ತೀನ' ಎಂದೋ ಚುಟುಕಿಯಲ್ಲಿ ಮುಗಿಸಿ ಒಮ್ಮೆಲೆ ಲಾವಣಿಯ ಉದ್ದೇಶ ಅಥವಾ ಮೂಲಭಾವಕ್ಕೆ ಕವಿ ಬಂದುಬಿಡುತ್ತಾನೆ.

ದಾಸರ ಹಾಡುಗಳಲ್ಲಿರುವಂತೆ ಲಾವಣಿಯ ಪಲ್ಲಗಳಲ್ಲಿಯೂ ಇಡೀ ಲಾವಣಿಯ ಮೂಲಭಾವ ಅಡಗಿಕೊಂಡಿರುತ್ತದೆ. ಪ್ರತಿ ಚೌಕನ್ನು ಮುಗಿಸಿ ಪಲ್ಲನ್ನು ಪುನರುಚ್ಚಾರಗೊಳಿಸಬೇಕಾಗುವದರಿಂದ ತಿರುತಿರುಗಿ ಓದುಗರನ್ನು ಲಾವಣಿಯ ಉದ್ದೇಶಕ್ಕೆ ತಂದುಬಿಡುತ್ತದೆ. ಪಲ್ಲ ಎನ್ನುವುದು ಹಾಡಿನ ತಿರುಳಾಗಿರುವುದರಿಂದ ಬಂಧುರವೂ ಆಗಿರುತ್ತದೆ.

" ಮಾಲಗಾರ ಅಣ್ಣನ ಮಾತು ಕೇಳು ಮಾಡಿದಾನ ತ್ವಾಟಾ
ಈ ದೇಯಾದ ಒಳಗೊಂದು ಬಾಂವಿ ತೋಡಿಸಿದಾನ ಆತ್ಮರಾಮನಾಟಾ"

ಇದು ಒಂದು ಅನುಭಾವ ಲಾವಣಿಯ ಪಲ್ಲ. ಮುಂದೆ ಲಾವಣಿಯ ತುಂಬ 'ಆತ್ಮ' ಎಂಬ ತೋಟಗಾರ ಈ ದೇಹವನ್ನು ತೋಟವನ್ನಾಗಿ ಮಾಡಿಕೊಂಡ ರೀತಿ ಸೊಗಸಾಗಿ ಮೂಡಿಬಂದಿದೆ. ಅನುಭವಕ್ಕೆ ಗಮ್ಯವಾದ ಆತನ ರೀತಿಯನ್ನು ಏನು ಹೇಳಲಿ. ಈ ದೇಹದಲ್ಲಿ ಭಾವಿ ತೋಡಿಸಿ ಉತ್ತಿ, ಬಿತ್ತಿ ಬೆಳೆಮಾಡುತ್ತಾನೆ ಎಂಬುದೇ ಇಡೀ ಲಾವಣಿಯ ಮಧ್ಯದಿಂದ ಹೊರಸೂಸುವ ಮುಖ್ಯಭಾವ.

ಚೌಕ: ಪಲ್ಲ ಮುಕ್ತಾಯಗೊಂಡ ತರುವಾಯ ಪ್ರಾರಂಭವಾಗುವುದು ಚೌಕ. ಒಂದೊಂದು ಲಾವಣಿ ೬-೭ ಚೌಕುಗಳ ವರೆಗೆ ವ್ಯಾಪಿಸುತ್ತದೆ. ಅನುಭಾವವನ್ನು ನೇರವಾಗಿ ಬಿಂಬಿಸುವ ಲಾವಣಿಗಳು ಮಾತ್ರ ಮೂರು ಚೌಕುಗಳಲ್ಲಿ ಮುಕ್ತಾಯವಾಗುವದು ಸಾಮಾನ್ಯ. ಕತೆಯಂಥ ದೀರ್ಘಕ್ರಿಯೆ ಇದ್ದರೆ ಒಂದೊಂದು ಚೌಕೂ ಸುದೀರ್ಘವಾಗಿ ವಿವರಣೆಗೆ ಅವಕಾಶ ನೀಡುತ್ತದೆ. ಹೀಗೆಂದು ಯಾವೊಂದು ಚೌಕೂ ತನ್ನಷ್ಟಕ್ಕೆ ತಾನು ಮೇರೆಮೀರಿ ವಿಸ್ತಾರಗೊಳ್ಳುವುದಿಲ್ಲ. ಎಲ್ಲ ಚೌಕುಗಳು ಚೌಕಟ್ಟಿನಲ್ಲಿ ಸಾಮ್ಯತೆಯನ್ನು ಪಡೆಯುತ್ತವೆ. ಅಥವಾ ಮೊದಲನೆಯ ಚೌಕದ ರೂಪವನ್ನೇ ಆಮೇಲೆ ಬರುವ ಚೌಕುಗಳೆಲ್ಲ ಅನುಸರಿಸುತ್ತವೆ.

ಚೌಕದ 'ಪ್ರಾರಂಭದ ಸಾಲುಗಳು', ಚಾಲ, ದುಡಕಿ, ದುಯಿರಿ, ಕೂಡುಪಲ್ಲ ಮುಂತಾದವುಗಳು ಚೌಕದ ವಿವಿಧ ಅಂಗಗಳು. ಪ್ರಾರಂಭದ ಸಾಲುಗಳು ಛಂದಸ್ಸಿನ ದೃಷ್ಟಿಯಿಂದ ಪಲ್ಲನ್ನೇ ಹೋಲುತ್ತಿದ್ದು ಸಂಖ್ಯೆಯಲ್ಲಿ ಹೆಚ್ಚಾಗಿರುತ್ತವೆ. (ಚೌಕದ ಮೊದಲಲ್ಲಿ ಬರುವ ಸಾಲುಗಳನ್ನು 'ಪ್ರಾರಂಭದ ಸಾಲುಗಳು' ಎಂದು ನಾನಿಲ್ಲಿ ಹೆಸರಿಸಿದ್ದೇನೆ. ಈ ಸಾಲುಗಳನ್ನು ಕೆಲವರು 'ಏರು' ಎಂದು ಗುರುತಿಸುತ್ತಾರೆ. ಆದರೆ ಆ ಶಬ್ದ ಗಮಕದ ದೃಷ್ಟಿಯಿಂದ ಬಂದುದು, ಗಮಕದ ದೃಷ್ಟಿ ಬಿಟ್ಟು ಬೇರೆ ಹೆಸರು ದೊರೆಯುವವರೆಗೆ ನಾನು 'ಪ್ರಾರಂಭದ ಸಾಲುಗಳು' ಎಂದು ಗುರುತಿಸಿದ್ದೇನೆ.) ಈ ಪ್ರಾರಂಭದ ಸಾಲುಗಳಲ್ಲಿ ಕಥೆಯ ಓಟ, ವರ್ಣನೆ, ವಿವರಣೆ ಏನೆಲ್ಲ ಸ್ಪಷ್ಟವಾಗಿ ಮುಂದುವರಿಯುವುದನ್ನು ಕಾಣುತ್ತೇವೆ. ಒಂದೇ ದಿಕ್ಕಿನಲ್ಲಿ ಸರಾಗವಾಗಿ ಸಾಗುವ ತುಂಬುನದಿಯಂತೆ ಇದರ ಗತಿ.

> "ಹಾಳ ಕತಿ ಹಳವಂಡ ಹಾಡಿದರ ಹೆಂಗಸೂರ ಸುಮ್ಮ ಕುಂತ ಕೇಳುದಿಲ್ಲಾ
> ಮಲಗಿದ ಕೂಸಿಗಿ ಮೆಲ್ಲಕ ಎಬ್ಬಿಸಿ ಮಲಿಯ ಕುಡಸತಾರ ಹಗಲೆಲ್ಲಾ
> ಭಾರತ ರಾಮಾಯಣ ಹಾಡ ಹಾಡಿದರ ಹಿರಿಯಾರ ಕೇಳತಾರ ಖುಶಿಯಾಲಾ
> ಅವರ ಮುಂದ ನಮ್ಮ ಶ್ಯಾಣೆತಾನ ತೋರ್ಸಿದರ ಗೊಂಗಡ್ಯಾನ್ರ ಮಾಡತಾರ—
> ಗಲಾಬಲಾ
>
> ಗೆಜ್ಜಿ ಕಟ್ಟಿ ಕುಣಕುಣದ ಹಾಡಿದರ ಹೌದ್ಹೌದ ಅನ್ನೂದ ಜಗವೆಲ್ಲಾ
> ಹೆಣ್ಣುಗಂಡಿನ ಪದಾ ಹಾಡಿದರ ಮನದಾಗ ನಗತಾರ ಖುಶಿಯಾಲಾ."

ಇನ್ನೊಂದು ಕಥಾಲಾವಣಿಯಲ್ಲಿ ಮಗನು ತಂದೆಗೆ ಬುದ್ಧಿ ಹೇಳುವ ಸನ್ನಿವೇಶದಲ್ಲಿ ಬರುವ ಸಾಲುಗಳು :

" ಮನಿಕೂಳ ತಿಂದ ನೀನು ಮಂದಿ ಉಸಾಬರಿ ಮಾಡಿ ಹಿಂಡಮುಂಡ
ಅನಿಸಿಕೊಳ್ಳುದೇನ ಅಗತಿ
ನಿನ್ನ ಕಾಲಾಗನಕಾ ನನಗ ತೆಲಿಬ್ಯಾಸರಿಕಿ ಹಿಡದsತಿ
ಇನ್ನ ಸಾಕಮಾಡೊ ಹಿಂದ ಕಾರಭಾರ ಆಗೂದಾಗೇತಿ
ಹೂಂ ಮಾತ ಕೇಳವಲ್ಲಿ ಹೂ ಮಾರು ಜಾಗಾದಾಗ ಹುಲ್ಲ ಮಾರುದೈತೇನೊ
ನಿನ್ನ ಪ್ರಿತಿ
ಇನ್ನ ತ್ವಾಡೆ ದಿನದಾಗ ಅಗ್ಗದ ಹರಿಪಲ್ಲೆ ಆಗಿ ಹೋಗತಿ ।
ಊರ ಉಪಕಾರ ಏನ ಬಲ್ಡು ಹೆಣಾ ಸಿಂಗಾರ ಅರಿದಪ್ಪಾ ಕರ್‍ಯಾಕ ಬಂದ್ರ
ಕಟ್ಲಿಕ ಅವರ ಮನಿಗಿ ಹೋಗತಿ
ಮಂದಿ ನ್ಯಾಯ ಅಂದ್ರ ಹಿಗ್ಗಿ ಉಬ್ಬಿ ಉಡಾ ಆಗತಿ
ಮಂದಿ ಉಳಗಾ ಸೋಸುದಂದ್ರ ಆನಿ ಸಗತಿ ಬರತsತಿ
ಈ ಸರತೇಕ ಮನ್ಯಾಗ ತೀರ ದಗದಾ-ಬಗಸಿ ಮಾಡವಲ್ಲಿ ಹುಗದಬಿಡುವಂತಾ
ಸಿಟ್ಟ ನನಗ ಹತ್ತೇತಿ
ಇನ್ನ ಸಾಕಮಾಡೊ ಮುಪ್ಪಿನ ಕಾಲಕ ಆದಿ ಅಪಕೀರ್ತಿ.

ಸಾಮಾನ್ಯವಾಗಿ ನೇರವಾಗಿ ಅನುಭಾವವನ್ನೇ ವಸ್ತುವನ್ನಾಗಿರಿಸಿಕೊಂಡ ಲಾವಣಿಗಳೆಲ್ಲ ಮೊದಲ ರೀತಿಯ ಚೌಕಟ್ಟನ್ನು ಅನುಸರಿಸುತ್ತವೆ. ಎರಡನೆಯ ರೀತಿಯ ಚೌಕಟ್ಟನ್ನು ಕಥೆಗಾಗಿ, ಚರಿತ್ರೆಗಾಗಿ ಬಳಸುವುದುಂಟು.

ಚಾಲ: ಲಾವಣಿಗೆ ಪೂರ್ಣಮೆರಗು ತುಂಬಿ ಗಮಕದ ಸತ್ವವನ್ನು ತೋರಿಸಿಕೊಟ್ಟು ಸಭಿಕರ ಮನೋಲ್ಲಾಸಗೊಳಿಸುವುದೇ ಚಾಲ. ತುಂಬಿ ತುಂಬಿ ಹರಿಯುವ ನದಿ ಎದುರಿಗೆ ಶಿಖರ ಬಂದಾಗ ಥಟ್ಟನೆ ನಿಂತು ಬೇರೆ ಗತಿ ಪಡೆದಾಗಿನ ರೀತಿಯೇ ಚಾಲವನ್ನು ಪ್ರತಿಬಿಂಬಿಸುತ್ತದೆ. ಪಾದಗಳು ಕಿರಿದಾಗಿರುವುದರಿಂದ ಪ್ರಾಸದ ಮೋಡಿ ಬಹುಬೇಗ ಮನಸೆಳೆದುಕೊಳ್ಳಬಲ್ಲುದು. ಎಂಥ ಸನ್ನಿವೇಶ, ಭಾವವನ್ನಾದರೂ ಈ ಚಾಲ ಸತ್ವಯುತವಾಗಿ ನಿರೂಪಿಸಬಲ್ಲುದು. 'ಚಾಲ' ಎಂದು ಲಾವಣಿಕಾರ ಅಥವಾ ಲಿಪಿಕಾರ ಬರೆದಿರದಿದ್ದರೂ ಅದನ್ನು ಸಹಜವಾಗಿ ಗುರುತಿಸುವಷ್ಟು ವೈಶಿಷ್ಟ್ಯತೆಯನ್ನು ಅದು ಪಡೆದುಕೊಂಡಿರುತ್ತದೆ. ಚಾಲನ್ನು ಎಳೆದೆಳೆದು ಸಾವಕಾಶವಾಗಿ ಹಾಡುವುದು ಗೀಗೀ ರೀತಿಯಾದರೆ ನೇರವಾಗಿ ಪ್ರಾಸಿನ ಮೇಲೆ ಒತ್ತಡವಿಟ್ಟು ಜನರನ್ನು ಮರಳುಗೊಳಿಸುವದು ಬೈಲು ಲಾವಣಿಯ ರೀತಿ. ಅದರಲ್ಲೂ ದುಃಖದ ಭಾವ ಇದ್ದಲ್ಲಿಯಂತೂ ಚಾಲ ತನ್ನ ಪೂರ್ಣ ಸತ್ವವನ್ನು ತೋರ್ಪಡಿಸುತ್ತದೆ. ತಾಯಿ ತನ್ನ ಮಗುವನ್ನೇ ಕೊಲ್ಲಲು ಅಣಿಯಾದಾಗ ಮಗ ಬೇಡಿಕೊಳ್ಳುತ್ತಾನೆ :

" ಕೊಲ್ಲೂದ ಕೊಲ್ಲತಿ ಕಾಶಿ
ಗಂಟಲ ಬಣಗೇತಿ ನೀರಡಿಸಿ
ಕೊಲ್ಲ ನೀರ ಕುಡಿಸಿ

ಅಳತಾನ ಕಣ್ಣ ನೀರ ಉಳಿಸಿ
ನನ್ನ ಜೀಂವಾ ಮಾಡಬ್ಯಾಡ ಗಾಸಿ
ಕಟ್ಟಿ ಹೊಡಮುಳಿಸಿ.

ಈ ಚಿಕ್ಕಚಿಕ್ಕ ಸಾಲುಗಳಲ್ಲೇ ಕವಿಯು ಎಷ್ಟೊಂದು ಭಾವಪೂರ್ಣವಾದ ಮಾತುಗಳನ್ನು ಜೋಡಿಸಿದ್ದಾನೆ! 'ಕೊಲ್ಲೂದ ಕೊಲ್ಲತಿ ಕಾಶಿ......ಕೊಲ್ಲ ನೀರ ಕುಡಿಸಿ' ಎನ್ನುವ ೩ ಸಾಲಿನ ಆ ಚಾಲಭಾಗ ಮಗುವಿನ ದುಃಖವನ್ನೆಲ್ಲ ತೆರೆದುತೋರಿಸುತ್ತದೆ. 'ಕಾಶಿ' ಎನ್ನುವ ಪದ ಕೇವಲ ಪ್ರಾಸಕ್ಕಾಗಿ ಬಂದಿಲ್ಲ; ತಾಯ್ತನಕ್ಕೆ ಸವಾಲು ಹಾಕಿ ದುಃಖ–ಕೋಪಗಳ ವಳ್ಳುರಿಯನ್ನು ಸಮಸಮವಾಗಿ ಕೇಳುಗರ ಮೇಲೆ ಹರಡುತ್ತದೆ.

ಸೊಸೆ ಮಾವನ ಮೇಲೆ ಚಾಡ ಹೇಳುವ ರೀತಿ :

"ನಿಮ್ಮ ಅಪ್ಪ ಆದ ನನಗ ಮೂಲ। ಬೇಡ್ತಾನ ತುಪ್ಪ ಹಾಲ।
ದಿನಕ ಮೂರು ಹೊತ್ತಾ
ಎರಡು ಇಲ್ಲದ ಹಾಕೋಣಿಲ್ಲ ಕುತ್ತಾ ॥

ಕಡದ ಬೆಣ್ಣಿ ಹಿಂಡಿದ ಹಾಲ। ಕೈಗ್ಹತ್ತಿಗೊಡವಲ್ಲ।
ಕಾಡ್ತಾನ ವಿಪರೀತಾ
ಎಂದ ಹ್ವಾದೀತ ಮುದಿಮೂಳ ಸತ್ತಾ ॥

ಹೆಣ್ತಿ ಮಾತ ಗಂಡ ಕೇಳಿಕೊಂಡ। ಆದ ಬೆಂಕಿ ಕೆಂಡ।
ಅಪ್ಪನ ಸುತ್ತಾ
ಜೈತಾನ ಬಾಯಿಗೆ ಬಂದತ್ತಾ ॥

ಮೊದಲನೆಯದು ಭಾವದ ದೃಷ್ಟಿಯಿಂದ ಮೇಲ್ಮೆಯನ್ನು ಪಡೆದರೆ ಎರಡನೆಯದು ಸಹಜವಾಗಿ ಬರುವ ಪ್ರಾಸದಿಂದಾಗಿ ಕೇಳುಗರ ಲಕ್ಷ್ಯವನ್ನು ಸೆರೆಹಿಡಿಯುತ್ತದೆ.

ಈ ಚಾಲಗಳು ಒಂದು ಚೌಕದಲ್ಲಿ ಒಂದೇ ಇರುತ್ತದೆಂದಲ್ಲ: ಹಾಗಿರುವುದು ಹೆಚ್ಚು. ಕೆಲವು ಹಾಡುಗಳ ಚೌಕುಗಳಲ್ಲಿ ಒಂದನೇ ಚಾಲ ಎರಡನೇ ಚಾಲ, ಮೂರನೇ ಚಾಲ ಎಂದು ಬರುವುದುಂಟು. ಎರಡು, ಮೂರನೆಯ ಚಾಲಗಳಿಗೆ 'ದುಸರಿ ಚಾಲ', 'ತಿಸರಿ ಚಾಲ' ಎಂದೂ ಕರೆಯುವ ವಾಡಿಕೆ. ಇವಕ್ಕೇ ಗಮಕದ ದೃಷ್ಟಿಯಿಂದ 'ಏರಚಾಲ', 'ಇಳೂ ಚಾಲ' ಎಂದೂ ಹೆಸರಿಸುತ್ತಾರೆ. ಇನ್ನು ಕೆಲವರು 'ಚಾಲ' ಎನ್ನುವುದನ್ನು ಬಿಟ್ಟು ಕೇವಲ 'ಏರು', 'ಇಳು', ಎಂದು ಕರೆಯುತ್ತಾರೆ.

ದುಡಕಿ : ಇದೂ ಕೂಡ ಚೌಕದ ಒಂದು ಅಂಗ. ಚಾಲದಂತೆಯೇ ಚಿಕ್ಕಚಿಕ್ಕ ಸಾಲುಗಳಲ್ಲಿ ಹಿಡಿದಿಡಲ್ಪಟ್ಟಿರುತ್ತದೆ. ಇದರ ಒಂದು ವೈಶಿಷ್ಟ್ಯವೆಂದರೆ ಪಾದಗಳ ಕೊನೆಯಲ್ಲಿ ಬರುವ ಅನುಕರಣವಾಚಕ ಶಬ್ದಗಳು ಹಾಡುವ ಸಮಯದಲ್ಲಿ ಈ ಶಬ್ದಗಳು ಸನ್ನಿವೇಶಕ್ಕೆ ತುಂಬ ಕಳೆಯನ್ನು ಸೇರಿಸುತ್ತವೆ. ಸನ್ನಿವೇಶಕ್ಕೆ ಹೊರಗಾಗದೆ ಔಚಿತ್ಯಪೂರ್ಣವಾಗಿ ಬರುವ ಈ ಶಬ್ದಗಳು ಭಾವವನ್ನು ಪುಷ್ಟೀಕರಿಸುತ್ತವೆ.

“ ಕಡ್ಡಿ ಕುದ್ದಾಂಗ ಕಳಳಳಾ
ಶಾಸ್ತ್ರ ಸಿಗದಕ ಕುಂತ ಅಳತಿ ಗಳಳಳಾ
ಏರಿದ ಹೊಳಿ ಇಳದ್ದಾಂಗ ಸಳಳಳಾ ”

* * *

“ ಕಾಣದೆ ಬಗಳ ಬೇಡ ಕಲಲಲಾ
ಬಾಯಿಲೆ ಅಂದ್ರ ಆಗೂದಿಲ್ಲ ಅಲಲಲಾ
ನೀರ ಚೆಲ್ಲಿದ್ದಾಂಗ ಪಲಲಲಾ ”

ಎಂಬ ಈ ದುಡಕಿ ಹಾಡುವಾಗ ನಾದದ ದೃಷ್ಟಿಯಿಂದ ಸಭೆಯಲ್ಲಿ ಎಷ್ಟು ಪರಿಣಾಮಕಾರಿಯಾಗಿ ಹೊರಹೊಮ್ಮುತ್ತದೆಂಬುದನ್ನು ಸ್ವತಃ ಅನುಭವಿಸಿ ತಿಳಿದು ಕೊಳ್ಳಬೇಕು. ಕರಡಿ ಮಜಲಿನಲ್ಲಿ, ಹಲಗೆ ಬಾರಿಸುವಲ್ಲಿ 'ದುಡುಕಿ' ಅನ್ನುವುದು ಒಂದು ಗತಿ. ಒಂದೇ ನಾದ ತಿರುಗಣಿಯು ಮಾಡದಂತೆ ರಿಂಗಣಗೊಂಡು ವಾತಾವರಣ ವನ್ನು ನಾದಲಹರಿಯಲ್ಲಿ ತೇಲಿಸಿಬಿಡುತ್ತದೆ. ಅಂಥವೇ ಒಂದು ಗತಿ ಇಲ್ಲಿಯೂ ಬಂದು ಪ್ರಾಸಾನುಪ್ರಾಸಗಳ ಅನುರಣನ ಸಂದರ್ಭವನ್ನು ಗಂಧರ್ವಲೋಕದತ್ತ ಸೆಳೆದೊಯ್ಯು ತ್ತದೆ.

ದುಯಿರಿ : ಕೆಲವೊಂದು ಲಾವಣಿಗಳಲ್ಲಿ ವೀಕ್ಷೆಯವನ್ನು ವರದಿಯಂತೆ ಒಪ್ಪಿಸುವ ಪ್ರಸಂಗ ಬರುತ್ತದೆ. ಅಂಥ ಸಂದರ್ಭದಲ್ಲಿ ಈ ದುಯಿರಿ ಅಥವಾ ' ಶ್ಲೋಕ ' ವೆಂಬ ಛಂದೋಪ್ರಭೇದವನ್ನು ಉಪಯೋಗಿಸುತ್ತಾರೆ. ಇಲ್ಲಿ ಹೇಳುವ ವಿಷಯ ಮುಖ್ಯ ವೆನ್ನುವದರಿಂದ ಕಾವ್ಯಾಂಶ ಕಡಿಮೆಯಾಗುತ್ತದೆ. ಸ್ಪಷ್ಟತೆಗಾಗಿ ಒಂದೆರಡು ದುಯಿರಿ ಗಳನ್ನು ನೋಡಬಹುದು.

“ಕೇಳರಿsss ತ್ರೇತಾಯುಗದಲ್ಲಿ ತ್ರಿಕರಣವೆಂಬ ಅವತಾರತ ಗೊಂಡಾಳ ಗಾಯತ್ರಿ। ಆ ಯುಗದ ಪ್ರಮಾಣ ಹನ್ನೆರಡ ಲಕ್ಷ ತೊಂಭತ್ತಾರ ಸಾವಿರ ವರುಷ ಆಯುಸೆ ಪ್ರಮಾಣಾ। ಆ ತ್ರೇತಾಯುಗದಲ್ಲಿ ಹದಿನಾಲ್ಕು ಮಳೆದ ಮನುಸೆರಿಗೆ ಇಪ್ಪತ್ತಸಾವಿರ ಆಯುಸೆ ಪ್ರಮಾಣಾ। ಆ ತ್ರೇತಾಯುಗದಲ್ಲಿ ಗ್ರಾಣ ಸಂಖ್ಯಾ ಕೇಳರಿ ಇಪ್ಪತ್ತ ಸಾವಿರ ಸರತೆ ಸೂರ್ಯಾ ಚಂದ್ರನ ಸುತ್ತ ಹಿಡಿತಿತ್ತ ನೇಮಾ । ”

ಮೇಲಿನ ಈ ದುಯಿರಿಯು ಗದ್ಯದಂತೆಯೇ ಹರಿದುಕೊಂಡು ಹೋಗಿರುವುದನ್ನು ಕಾಣುತ್ತೇವೆ. ಸಂಸ್ಕೃತ ಶ್ಲೋಕಗಳನ್ನು ಉಚ್ಚರಿಸುವಾಗಿನ ಧ್ವನಿಯೇ ಇಲ್ಲಿ ಹೊರಡು ವುದರಿಂದ ದುಯಿರಿಗೆ ಶ್ಲೋಕವೆಂಬ ಹೆಸರು ಪ್ರಾಪ್ತವಾಗಿರಬಹುದು. ಇನ್ನು ಕೆಲವು ದುಯಿರಿಗಳು ಪ್ರಾಸನ್ನು ಒಳಗೊಂಡಿರುತ್ತವೆ.

“ ಕೇಳರಿsss ಆವಾಗ ದುಶ್ಯಾಸನಾ
ಜುಪ್ಲಿ ಹಿಡದ ಜಗ್ಗಿ ತಂದಾನ ದ್ರೌಪತಿನಾ
ತೊಡಿ ಮೇಲೆ ಕೂಡ್ರು ಅಂತಾನ ದುರ್ಯೋಧನಾ
ಪತಿವ್ರತಾ ಮಾಡತಾಳ ರೋದನಾ ”

ಈ ಮುಯಿರಿ, ಚಾಲನ್ನೇ ಹೋಲುತ್ತದೆ. ಕಠಿದಾದ ಪಾದ, ಪ್ರಾಸಗಳಿಂದಾಗಿಚಾಲವೆನ್ನುವ ಸಂಶಯ ಬಂದರೂ ಪ್ರಾರಂಭಕ್ಕೆ ಬರುವ 'ಕೇಳರೀsss' ಎನ್ನುವ ಪದ ಶ್ಲೋಕದಲ್ಲಿ ಬರುವ ವಿಶಿಷ್ಟ ನಾದವನ್ನು ನೆನಪಿಗೆ ತಂದುಕೊಟ್ಟು ಸಂಶಯವನ್ನು ನಿವಾರಿಸುತ್ತದೆ.

ಕೂಡಪಲ್ಲ: ಚೌಕದ ಕೊನೆಯ ಹಂತವೇ 'ಕೂಡ' ಅಥವಾ 'ಕೂಡಪಲ್ಲ'. ಚಾಲ, ಮುಡಕಿ, ಮುಯಿರಿ ಯಾವುದಕ್ಕೂ ಅಂಟಿಕೊಳ್ಳದೆ ಇದು ಪ್ರತ್ಯೇಕವಾಗಿ ಲಾವಣಿಯ ಪ್ರಾರಂಭ(ಪಲ್ಲ)ದ ಪಲ್ಲನ್ನು ಅನುಸರಿಸುತ್ತದೆ. ಈ ಕೂಡುಪಲ್ಲು ಮುಗಿದ ತರುವಾಯ ಲಾವಣಿ ಹಾಡುಗಾರ ತಿರುಗಿ ಪಲ್ಲಿಗೆ ಹೋಗಿ ಬಿಡುವು ಅನುಭವಿಸುತ್ತಾನೆ. ಪ್ರತಿ ಕಸರತ್ತಿನ ತರುವಾಯ ಸ್ವಲ್ಪಾದರೂ ವಿಶ್ರಾಂತಿ ತೆಗೆದುಕೊಳ್ಳುವ ದೊಂಬರ ಹುಡುಗನಂತೆ ಚಾಲ, ಮುಡುಕಿ, ಮುಯಿರಿಗಳು ಹಿಂದುಮುಂದಾಗಬಹುದು. ಆದರೆ ಕೂಡುಪಲ್ಲಿನ ಸ್ಥಾನಮಾತ್ರ ಯಾವಾಗಲೂ ಚೌಕದ ಕೊನೆಯಲ್ಲಿಯೇ ಭದ್ರ. ಆ ಹೆಸರಿನಲ್ಲಿಯೇ ಅರ್ಥವಿದೆ. ಚೌಕದ ಈ ಪದಗಳು ಪಲ್ಲಿಗೆ ಹೋಗಿ 'ಕೂಡು'ವದರಿಂದ (ಪ್ರಾಸದ ಅರ್ಥದಲ್ಲಿ) 'ಕೂಡಪಲ್ಲ' ಎಂಬ ಹೆಸರು ಬಳಕೆಯಲ್ಲುಂಟು. ಸಾಮಾನ್ಯವಾಗಿ ಕೂಡಪಲ್ಲು ಪಲ್ಲಿನ ಅರ್ಥದಷ್ಟಿರುತ್ತದೆ.

> " ಸ್ಮರಣಿ ಮಾಡ ಸದ್ಗುರವಿಂದ ಮುಂಚೆ ಸುಮ್ಮನ್ಯಾಕ ಕುಂತಿ
> ಸನೆ ಬಂತ ಹೊತ್ತ ಮಣಗುಕ ತವನ್ಮಾ ಏಸ ದಿನಾ ಇರತಿ "

ಎಂಬುದು ಒಂದು ಅನುಭಾವ ಲಾವಣಿಯ ಪಲ್ಲು ಅನ್ನಿಸಿದರೆ ಈ ಹಾಡಿನ ಮೊದಲ ಚೌಕದ ಕೂಡುಪಲ್ಲು

> " ತಾಯಿ ತಂದಿ ಹೆಂಡರ ಮಕ್ಕಳ ಗರಕಿನ್ಯಾಗ ಬೆರತಿ ".

ಲಾವಣಿಯ ಕೊನೆಯಲ್ಲಿ ಲಾವಣಿಕಾರನ (ಕವಿ) ಹೆಸರು, ಊರು, ಅವನ ಗುರುವಿನ ಹೆಸರು ಬರುವುದುಂಟು. ಇದಕ್ಕೆ 'ಅಗಮು' ಎಂದು ಕರೆಯುವ ವಾಡಿಕೆ. ಈ ಅಗಮುವು ಚಾಲದಲ್ಲಿ ಬರಬಹುದು ಅಥವಾ ಕೂಡುಪಲ್ಲಿನಲ್ಲಿ ಬರಬಹುದು. ಕೆಳಗಿನ ಎರಡು ಅಗಮುಗಳನ್ನು ಗಮನಿಸಿದರೆ ಮೇಲಿನ ಮಾತು ಸ್ಪಷ್ಟವಾಗುತ್ತದೆ.

> " ದೇಶದೊಳಗ ನಮ್ಮ ಅಥಣಿ ಪರಗಾಣಿ ದರಗಾದೊಳಗ ಸುವಾಸ ಹವಾ
> ಹಗಲು ಇರುಳು ಆ ದರಗಾದ ಒಳಗ ಯಾದಿಲ್ಲಶಾಯಿ ಇರತಾನ ಬಾವಾ
> ಸಿದರಾಮುಭೈರಿ ನಮ್ಮ ವಸ್ತಾದಾ ಹೆಂತಾ ತಾಯಿ ಹಡದಾಳ ಅವಾ
> ಸಿದರಾಯಿ ಶಂಕರ ಹಿಂಗ ಹೇಳತಾನ ಚೆಲ್ಲ್ಯಾಡಿದಾಂಗ ಮಲ್ಲಿಗೆ ಹೂವಾ

ಕೂ। ಪ—ಭೀಮ ಸರ್ಜನ ಅಕ್ಷರ ಕೇಳಿ ವೈರಿ ಎದ್ಯಾಗ ಬಡದಾಂಗ ಬಾಲಿ.

* * *

ಚಾಲ— ಸಾದೂರ ಕೈಯಾಗಿನ ಗಿಂಡಿ। ಗೋಪಾಳ ದುರದುಂಡಿ।
ಮಾಡಿದ ಪದಗಳಾ
ಮನಾ ನಿಲಿಸಿ ನಿಜ ನಿರಂಬಳಾ

ಕೂ। ಪ— ಚತುರ ತುಕಾರಾಮ ಗೋಪಾಳ ದುರದುಂಡಿ ಸಾದು ಜನರಿಗೆಲ್ಲಾ ಸನಮಂತಾ।

ಮೊದಲನೆಯದರಲ್ಲಿ ಚೌಕದ ಪ್ರಾರಂಭದ ಸಾಲುಗಳು ಮತ್ತು ಕೂಡುಪಲ್ಲುಗಳಲ್ಲಿ ಅಗಮ ಸೇರಿಕೊಂಡಿದ್ದರೆ, ಎರಡನೆಯ ಅಗಮ, ಚಾಲ ಮತ್ತು ಕೂಡುಪಲ್ಲುಗಳಲ್ಲಿ ಸೇರಿಕೊಂಡಿದೆ.

ಇನ್ನು ಸಖಿಯಲ್ಲಾಗಲಿ, ಖ್ಯಾಲಿಯಲ್ಲಾಗಲಿ ಈ ರೀತಿಯ ವೈವಿಧ್ಯವನ್ನು ನಾವು ಕಾಣಲಾರೆವು. ನೇರವಾಗಿ ಭಾವಗೀತೆಯಂತೆ ಇವೆರಡು ಸೃಜನಗೊಳ್ಳುತ್ತವೆ.

ಕೇವಲ ಬರವಣಿಗೆಯಿಂದ ಲಾವಣಿಶಿಲ್ಪದ ಪೂರ್ಣ ಕಲ್ಪನೆ ಬಂದೀತೆಂಬ ಭರವಸೆ ನನಗಿಲ್ಲ. ಪ್ರತಿಯೊಂದು ಅಂಗದ ಪರಿಚಯಕ್ಕಾಗಿ ನಾವು ಪ್ರತ್ಯಕ್ಷ ಹಾಡು ಕೇಳಿ ಅನುಭವಿಸಬೇಕು. ಅಂದಾಗ ಆ ಶಿಲ್ಪದ ಸೊಗಸು ಮನದಟ್ಟಾಗುತ್ತದೆ, ಗೇಯಂತೆ ಹೃದಯ ತಟ್ಟುತ್ತದೆ. ●

ಬಸವಣ್ಣನವರ ಐದು ವಚನಗಳು

[ಒಂದು ವಿಶ್ಲೇಷಣೆ]

ಮಹಾಬಲೇಶ್ವರ

ಪ್ರಸ್ತುತ ಲೇಖನವಲ್ಲಿ ಬಸವಣ್ಣನವರ ವಚನಗಳಲ್ಲಿ ಕಣ್ಣಿಗೆ ಹೊಡೆಯುವ ಅಸಹಾಯಕತೆ, ಅನ್ಯತೆ ಹಾಗೂ ಸ್ವವಿಮರ್ಶೆಯನ್ನು ಗುರುತಿಸಿ, ಅನುಭವದ ಸಾಚಾತನವನ್ನು ಅದು ಒಳಗೊಂಡಿರುವ ಸಂಕೀರ್ಣತೆಯನ್ನು ಸರಳವಾಗಿ ಹೇಗೆ ಹೇಳಿದ್ದಾರೆ ಎಂಬುದನ್ನು ವಿವೇಚಿಸುವ ಒಂದು ಪ್ರಯತ್ನವನ್ನು ಕಾಣಬಹುದು.

* * * *

ಬಸವಣ್ಣ ಒಬ್ಬ ಧಾರ್ಮಿಕ ವ್ಯಕ್ತಿ ಎನ್ನುವುದಕ್ಕಿಂತ ಅವನು ನಿಜವಾಗಿ ಸಾಮಾಜಿಕ ಕ್ರಾಂತಿಪುರುಷ ಎಂದೇ ಗಣಿಸುವುದು ಸೂಕ್ತವಾಗುತ್ತದೆ. ನಮ್ಮ ವಚನ ಸಾಹಿತ್ಯ ಪ್ರೇಮಿಗಳು, ಇತರ ಇತಿಹಾಸಜ್ಞರು ಅವನ ಈ ಬಹುಮುಖ್ಯ 'ಮೈ'ಯನ್ನೇ ಪ್ರಜ್ಞಾಪೂರ್ವಕವಾಗಿಯೋ ಅಥವಾ ಅವಜ್ಞೆಯಿಂದಾಗಿಯೋ ಮರೆಮಾಚಿ, ಒಬ್ಬ ದೈವೀ ಪುರುಷನೆಂದು ಮಾತ್ರ ಹೊಗಳುತ್ತಾರೆ. ಇದು ನಿಜವಾಗಿ ಅವನನ್ನು ಪುನಃ ದುರಂತಕ್ಕೇರಿಸುವುದೇ ಹೊರತು ಬೇರೆಯಲ್ಲ ಎಂದೆನಿಸುತ್ತದೆ.

ಒಂದುಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಅರ್ಥಹೀನತೆ, ಬರುಡುತನದ ಬಗ್ಗೆ ರೋಸಿ ಹೊಂದಾಣಿಕೆಮಾಡಿಕೊಳ್ಳಲಾಗದ ವ್ಯಕ್ತಿ ಅದರ ವಿರುದ್ಧ ಒಂಟಿಯಾಗಿ ಇಲ್ಲವೆ ಸಾಮೂಹಿಕವಾಗಿ ಬಂಡೇಳತೊಡಗುತ್ತಾನೆ. ಇಲ್ಲಿ ಯಶ ಅಪಯಶ ಮುಖ್ಯವಲ್ಲ; ಬಂಡೆದ್ದು ಕ್ರಿಯೆಯಲ್ಲಿಯೇ ತೊಡಗುವುದು ಮುಖ್ಯವಾಗುತ್ತದೆ. ಇಂಥ ವ್ಯಕ್ತಿತ್ವಕ್ಕೆ ಬೇಕಾದ ಮನೋಸಿದ್ಧತೆ, ಪರಿಸರವು **mould** ಮಾಡಿದ ಸಂದರ್ಭದಲ್ಲಿ ಬಸವಣ್ಣನಿಗೆ ಇತ್ತು. ಅದಕ್ಕಾಗಿಯೆ ಅವರ ವಚನಗಳಲ್ಲಿ ತಮ್ಮೆಲ್ಲ ಆರ್ತತೆ, ಅನ್ಯತೆ, ತಹತಹವನ್ನು ಒರೆದುಕೊಂಡಿರುವುದು ಗೊತ್ತಾಗುತ್ತದೆ.

* * * *

ಇವನಾರವ ? ಇವನಾರವ ಇವನಾರವನೆಂದೆನಿಸದಿರಯ್ಯಾ
'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ನೆಂದೆನಿಸಯ್ಯಾ
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ.

* * *

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
‘ಅಂಬೇ’ ‘ಅಂಬೇ’ ಎಂದು ಕರೆಯುತ್ತಲಿದ್ದೇನೆ
‘ಅಂಬೇ, ಅಂಬೇ’ ಎಂದು ಒರಲುತ್ತಲಿದ್ದೇನೆ
ಕೂಡಲ ಸಂಗಮ ದೇವಾ ‘ಬಾಳು ಬಾಳೆಂಬನ್ನಕ್ಕ’.

ಈ ಎರಡು ವಚನಗಳಲ್ಲಿ ಒಂದು Psychological Crisis ನ್ನು ಇನ್ನೊಂದು ಬದುಕಿನಲ್ಲಿದ್ದೂ ಬದುಕಿನ ಹೊರಗೇ ಉಳಿದುಕೊಂಡು ‘ಒಂಟಿ’ ‘ಒಬ್ಬಂಟಿಗನಾದ ಒಂದು ಪರಿಸ್ಥಿತಿಯಲ್ಲಿ ಅನುಭವಿಸುತ್ತಿರುವ ಎರಡು ತೆರನಾದ ‘ಸ್ಥಿತಿ’ಯನ್ನು ತೋಡಿಕೊಂಡಿದ್ದಾರೆ. ಇಲ್ಲಿ ಆಧ್ಯಾತ್ಮಕವೆನ್ನಬಹುದಾದ ಅನುಭಾವ ಏನೇ ಇರಲಿ, ಆದರೆ **ಅನುಭವ ಗಮ್ಯ**ವಾದದ್ದನ್ನು ಪ್ರಾಮಾಣಿಕವಾಗಿ ತೀರ ಸಾಮಾನ್ಯನ ಮಾತುಗಳಲ್ಲಿ ಹೇಳಿ, serious ಆಗಿ ಚಿಂತಿಸುವಂತೆ ಮೆಲುಕುವಂತೆ ಮಾಡಿ ವಹನಕ್ರಿಯೆಯಲ್ಲಿ ಸಲಿಲತೆಯನ್ನು ತಂದುಕೊಡಲು ಯತ್ನಿಸಿ, ನೈಜ ಅನುಭವ ಓದುಗನಿಗೂ ಆಗುವಂತೆ ಮಾಡಿದ್ದಾರೆ. ಇಂಥಲ್ಲಿಯೇ ಅನೇಕರು ಪವಾಡತ್ವಕ್ಕೇರಿಸುವ ಬಸವಣ್ಣನ ಅನುಭವ ಸಾಮಾನ್ಯನಿಗೂ ನಿಜವಾಗುವುದು. ಅಂತೆಯೇ ಬಸವಣ್ಣ ನಮಗೆ ನಿಕಟ ಸಾಹಿತ್ಯಕಾರನೂ ಆಗುತ್ತಾನೆ.

ಇವನಾರವ? ಇವನಾರವ? ಇವನಾರವನೆಂದೆನಿಸದಿರಯ್ಯಾ– ಈ ಸಾಲಿನಲ್ಲಿ. ಗುಂಪಿನಲ್ಲೊಬ್ಬನಾಗಿ ಅಸ್ತಿತ್ವಹೊಂದಿದವನಾಗಿದ್ದರೂ ಪರಕೀಯನಾಗಿಯೇ ಉಳಿದಾಗ ಆ ಭಾವನೆ ತಾರವೆ ಒಮ್ಮನದಿಂದ ಇವನಾರೂ ಅಲ್ಲ, ‘ಇವ ನಿಮ್ಮವ. ಇವ ನಿಮ್ಮವ. ಇವ ನಿಮ್ಮವನೆಂದೆನಿಸಯ್ಯಾ’ ಎಂದು ಒರೆದುಕೊಳ್ಳುತ್ತಾರೆ. ಇವನಾರವ. ಇವನಾರವ, ಇವನಾರವ?...ಸಾಲಿನಲ್ಲಿ ಮೂರುಬಾರಿ ‘ ಇವನಾರವ ’ ಎಂಬುದನ್ನು ಪುನರಾವರ್ತನೆ ಮಾಡಿ ಪ್ರಶ್ನೆ ಕೇಳುವ ಕಳಕಳಿಯಲ್ಲಿ, ಅತೀವ ನೋವು ತುಂಬಿದ ಅನಾಥ ಪ್ರಜ್ಞೆಯಿದೆ. ಇದು ಕೇಳುಗನ ಅಥವಾ ಓದುಗನ ಅನುಭವ ಸ್ತರಗಳಲ್ಲಿ ಸರಳವಾಗಿ ಹೋಗುವಂತೆ. ಅನುಭವ ‘ನಿಜವಾಗು’ವಂತೆ ಮಾಡಿದ್ದೂ ಅಲ್ಲದೆ ಅಭಿವ್ಯಕ್ತಿ ಭಾವನಾತ್ಮಕವಾಗಿ ಅದೇ ತೀವ್ರತೆಯಲ್ಲಿ ಸಾರ್ಥಕ್ಯಪಡೆಯುವಂತೆ ಮಾಡಿದ್ದು: ವಚನ ಶೈಲಿ ಹೇಗೆ ಸರಳತೆಯಲ್ಲಿಯೇ ಸಂಕೀರ್ಣತೆಯನ್ನು ಸಾಧಿಸುತ್ತದೆ ಎಂಬುವದನ್ನು ತೋರಿಸುತ್ತದೆ.

‘ ಇವನಾರವ ಇವನಾರವ ಇವನಾರವ’ ಎಂದು ಮೂರುಬಾರಿ ಕೇಳುವಾಗಿನ ಆರ್ತತೆಯಲ್ಲಿನ ತೀವ್ರ ಸಂಕಟವನ್ನು ಹೆಚ್ಚಿಸುವದೊಂದೇ ಅಲ್ಲದೆ. ಇನ್ನೂ ಬೇರೆ ಕಾರಣವಿರಬೇಕು.* ‘ಇವನಾರವ’ ಎಂದು ಒಂದೇ ಬಾರಿ ಹೇಳಿದ್ದರೆ ಆಗುತ್ತಿತ್ತು. ಆದರೆ ವಿವಿಧ ತೆರನಾಗಿ ವ್ಯಕ್ತಿ ಪರಿಸರದೊಂದಿಗೆ ಹೊಂದಿಕೊಳ್ಳಬೇಕಾಗುವವರಿಂದ ಮುಖ್ಯವಾಗಿ ವಿಚಾರಗಳಲ್ಲಿ ಛಿನ್ನನಾದಾಗ ಈ ಪ್ರಶ್ನೆ ಬರುತ್ತದೆ. ಅಲ್ಲದೆ ಜನರೊಂದಿಗಿನ ಸಂಬಂಧ ಮತ್ತು ದೇವರೊಂದಿಗಿನ ಸಂಬಂಧಗಳ ಕುರಿತೂ ವ್ಯಕ್ತಿಗತ ಅಭಿಪ್ರಾಯ ಭೇದವಾಗಿ ದೂರವಾಗುಳಿದಾಗ ‘ಇವನಾರವ’ ಎಂದು ಕರೆಯಲ್ಪಡುತ್ತಾನೆ. ಬಹಿರಂಗವಾಗಿ ಛಿನ್ನನಾದಾಗ ಬೇರೆಯವರೊಂದಿಗೆ ಸಂಪರ್ಕ ಸಾಧ್ಯವಾಗದೆ ಹೀಗೆ

---

* ಈ ದಿಶೆಯಲ್ಲಿ ಚಿಂತಿಸುವಂತೆ ಸೂಚಿಸಿದವರು ಪ್ರೊ. ಜಿ. ಎಸ್. ಕಾಪಸೆ ಅವರು.

ಸಂದೇಹಿಸಲ್ಪಡುತ್ತಾನೆ. ಕೊನೆಯದಾಗಿ ತಾನು ನಂಬಿಕೊಂಡ ದೈವನಿಂದ ಭಿನ್ನ ಅಥವಾ ಅವನು ತನ್ನ ಭಕ್ತನನ್ನು ಒಳಕೊಳ್ಳದೆ ಇರುವಾಗ 'ಅನ್ಯತೆ' ಅನುಭವಿಸುತ್ತಾನೆ. ಅದಕ್ಕೆಂದೇ ಈ ಮೂರು ತೆರನ 'ಅನ್ಯತೆ'ಯನ್ನು ಅಭಿವ್ಯಕ್ತಿಯಲ್ಲಿ ಸಾಧಿಸಲು ಮೂರು ಬಾರಿ ಬಳಸಿದ ಕಾರಣ ವಚನದೊಡನೆ ತೀವ್ರ ವೇದನೆ ಮೈಗೂಡಿಕೊಂಡು ಬರುವುದಕ್ಕೆ ಸಾಧ್ಯವಾಗಿದೆ. ಈ ಪ್ರಶ್ನೆ ಹಾಕುವಿಕೆಯಲ್ಲಿ ಅಥವಾ ಸಂದೇಹಿಸುವಲ್ಲಿ ಅದೇ ಕರುಣಾ ಭರಿತ ಸ್ಥಿತಿಯಲ್ಲಿಯೇ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಸಮಕಾಲೀನರು ಅಥವಾ ಸಾರ್ವಕಾಲೀನರು ಬರಮಾಡಿಕೊಳ್ಳುತ್ತಾರೆ ಎಂಬ ಭರವಸೆ ಬಯಸಿದ್ದಾರೆ. ಈ ಕರೆಯುವಿಕೆಗೆ response ಸಹಾ ಅದೇ ತೀವ್ರತೆಯಲ್ಲಿಯೇ ಹುಟ್ಟಿಕೊಂಡು ಕೊನೆಗೆ 'ನಿಮ್ಮ ಮನೆಯ ಮಗನೆಂದೆನಿಸಯ್ಯಾ' ಎಂದು ಅನ್ನುವುದರ ಮೂಲಕ ನನ್ನನ್ನೂ ಪುನಃ ನಿಕಟವಾಗಿದ್ದು ಬೇರೆಯಾದ ಪರಿಸ್ಥಿತಿಯಿಂದ ನೋಡದೆ 'ಅಭಿನ್ನ'ನೇ ಎಂದು ತಿಳಿಯಿರಿ ಒಳಕೊಳ್ಳಿರಿ ಎಂದು ಅವರನ್ನು ಬಿನ್ನವಿಸಿಕೊಂಡಿದ್ದಾರೆ.

ವಚನದ ಒಟ್ಟು ಶಿಲ್ಪವನ್ನು ಗಮನಿಸಿದಾಗ ಅದು ಚೆಲ್ಲುವ ಬೆಳಕು ಸಮಸ್ಯೆಯ ಹರವನ್ನು ಸರಿಯಾಗಿ ಬೆಳಗಿಸಿದೆ. ಓದುಗರಿಂದ ಪ್ರತಿಕ್ರಿಯೆ ಸೂಚಿಸುವಂತೆ ಮಾಡುವ ಒಂದು ಆಕರ್ಷಕ ಶಕ್ತಿಯೇ ಭಾಷೆ-ಅಭಿವ್ಯಕ್ತಿ-ಸಾಚಾತನ-ವಸ್ತುಗಳ 'ಬಂಧ' ದಲ್ಲಿ ಹರಿದಿದೆ.

ಮೊದಲನೆಯ ವಚನದ ವಸ್ತು ಸಾಮಾನ್ಯೀಕರಣ ಹೊಂದಿದ್ದಾದರೆ ಎರಡನೆಯ ವಚನದ ವಸ್ತು ವೈಯಕ್ತಿಕ ಅನುಭವದ ಎಲ್ಲೆಗಳಲ್ಲಿ ಪದೇ ಪದೇ ಹಿಡಿತಕ್ಕೆ ಅಥವಾ ನೋವಿನ ಸೆಳೆತಕ್ಕೆ ಸಿಕ್ಕಾಗಿನ ಸಂದರ್ಭದಲ್ಲಿ ಬಂದದ್ದು.

ಒಂಟಿಯಾಗಿ, ಯಾರೂ ದಿಕ್ಕಿಲ್ಲದೆ ಇರುವಾಗ ಒಂದು ಬಗೆಯ ಲೋಕಾಂತರದ ಕಾಂಕ್ಷೆ, ಒಂದು ತೆರನ ಭಯ. ಜೀವ ಸಂಕಟದಲ್ಲಿರುವಾಗಿನ ಸ್ಥಿತಿಯಿಂದ ಮುಕ್ತನಾಗ-ಬೇಕೆನ್ನುವ ಹಂಬಲ ಇಲ್ಲಿ ಸಮರ್ಥವಾಗಿ ಅಭಿವ್ಯಕ್ತವಾಗಿದೆ.

ಅರಣ್ಯ ನಮ್ಮ ಸಾಹಿತ್ಯಕ ಪ್ರಪಂಚದಲ್ಲಿ ವಿಶಿಷ್ಟವಾಗಿ ಬಳಸಿಕೊಂಡಿರುವ ರೂಪಕ. ಮೂಲತಃ ಆಧ್ಯಾತ್ಮಿಕ ವಲಯಗಳಲ್ಲಿ ಹೇಳುವ ವ್ಯಾಖ್ಯೆಗಳನ್ನು ಸಮರ್ಥಿಸಲು ಇದನ್ನು ಉಪಯೋಗಿಸುವುದೂ ಹೆಚ್ಚು. ಪ್ರಪಂಚವೆಂಬುದು ದೊಡ್ಡ ಅರಣ್ಯ. ಅರಣ್ಯದ ನೆನಪಾದೊಡನೆ ನಮ್ಮ ಮುಂದೆ ನಿಲ್ಲುವ ಅನೇಕ ತೆರನ ಭಯಕ್ಕೆ ಮೂಲ ವಾಗುವ ಪ್ರಾಣಿಗಳು, ದಿಕ್ಕಿಲ್ಲದೆ ಅಲೆಯುವಂತಾಗುವ ಪರಿಸ್ಥಿತಿ ಹಾಗೂ ಅದು ಒಳಗೊಂಡಿರುವ ಭೀಕರ ಕತ್ತಲು. ಅಂಥ ಅನಾಲಜಿಯಿಂದ ಬಸವಣ್ಣ ಹೇಗೆ ತನ್ನ ಸ್ಥಿತಿ ಯನ್ನು ಮುಖ್ಯವಾಗಿ ಒಬ್ಬ empiricist ನ ತರಹ ನೋಡುತ್ತಾನೆ ಎಂಬುದನ್ನು ಅವಲೋಕಿಸಿದಾಗ ಅವರಿಗೆ ಪ್ರಪಂಚ ಒಂದು ಗಾಢಾಂಧಕಾರ ತುಂಬಿದೆ, ದುರ್ಗಮ ಹಾಗೂ ಯಾರಿಗೆ ಯಾರೂ ಹತ್ತಿರಬರದ, 'ಒಂಟಿ'ತನದ ಪರಮಾವಧಿ ಅನುಭವಿಸುವ ಒಂದು ಪ್ರದೇಶ. ಪ್ರಪಂಚದಲ್ಲಿ ಬಂದಿದ್ದೇನೆ, ಒಂಟಿಯಾಗಿದ್ದೇನೆ. ಹೇಗೆಂದರೆ 'ಅಡವಿ ಯೊಳಗೆ ಹೊಲಬುಗೆಟ್ಟ ಪಶುವಿನಂತೆ' ದಿಕ್ಕೇಡಿಯಾಗಿದ್ದೇನೆ. ಆರ್ತತೆಯನ್ನು ನೋಡಿ ಪಾರುಮಾಡುವರಿಲ್ಲದಾಗಿನ ಸ್ಥಿತಿ.

'ಅಂಬೇ ಅಂಬೇ' ಎಂದು ಕರೆಯುತ್ತಲಿದ್ದೇನೆ ಈ ಸಾಲು ಮೊದಲಿನ ಸಾಲಿಗೆ ತಕ್ಷಣ ಪೂರಕವಾಗಿ ಉಚಿತವಾಗಿ ಬಳಸಬೇಕಾದ ಪದ ಸಮುಚ್ಚಯ ಒಳಗೊಂಡೇ ಬಂದಿರುವುದಾಗಿರುವುದರಿಂದ, 'ಹೊಲಬುಗೆಟ್ಟ ಪಶು' ಅಂಥ ಸನ್ನಿವೇಶದಲ್ಲಿ ಮಾಡಲೇ ಬೇಕಾದ ಕಾರ್ಯ; ಶಕ್ತಿಮೀರಿ ದನಿ ಎತ್ತರಿಸಿ ದುಃಖಿತನಾಗಿ ಅಪ್ರಾಣಿಕ ಸಂವೇದನೆಯಿಂದ ಅಂದರೆ ಭಾವನೆಯ ಅತಿಗೆ ಹೋಗಿ ಕರೆಯುವುದು. ಇಲ್ಲಿ ಮೊದಲು ಯಾರನ್ನಾದರೂ ಕರೆಯಲು ತೊಡಗಿದೆ ಆ ಪಶು. ಮನುಷ್ಯ ಸಹಜವಾಗಿ ಮೊದಲಬಾರಿ ಇಂಥ ಸನ್ನಿವೇಶದಲ್ಲಿ ಯಾರಾದರೂ ಓಗೊಡಲೆಂದು, ಕೈನೀಡಲೆಂದು ತನ್ನ ಸ್ಥಿತಿ ನೋಡೀ... ಅಂಗಲಾಚುತ್ತಾನೆ.

'ಅಯ್ಯಾ ಅಯ್ಯಾ' ಎಂದು ಸಂಭೋದಿಸದೆ 'ಅಂಬೇ ಅಂಬೇ' ಎಂದು ಒರಲುವುದು ಅದರ ತೀಕ್ಷ್ಣತೆಯನ್ನು ಹೆಚ್ಚಿಸುವುದಲ್ಲದೆ ಅದರ ಕರೆಯುವಿಕೆಯಲ್ಲಿ ತೀರ ಸಾಮಿಪ್ಯ ತರಲು ಹಾಗೂ authenticity ಸಾಧ್ಯಮಾಡಲು ಯತ್ನಿಸಿದ್ದಾರೆ. ಕರು ತನ್ನ ತಾಯಿಗೆ ಕರೆಯುವಲ್ಲಿ ಬಳಸುವುದನ್ನೇ ಮಗನು ತನ್ನ ತಾಯಿಗೆ ಕರೆಯುವಾಗಲೂ ಬಳಸಿ ಪರಿಣಾಮಕಾರಿ 'ಸನ್ನಿವೇಶ'ದ ದರ್ಶನ ಸಾಧ್ಯವಾಗಿಸಿದ್ದಾರೆ ಉಳಿದೆಡೆ 'ಅಯ್ಯಾ' ಪ್ರಯೋಗ ಹೆಚ್ಚು ಬಳಕೆಯಾಗಿರುವುದನ್ನು ಇಲ್ಲಿ ಜ್ಞಾಪಿಸಬಹುದು. ಆದರೆ ಇಲ್ಲಿ ಇದರ ಧ್ವನಿ ವಿಶಿಷ್ಟವಾಗಿ ಹೊಮ್ಮಿದೆ.

ಮೂರನೆಯ ಸಾಲಿನಲ್ಲಿ ಈ ಮೊದಲಿನ ಪ್ರಜ್ಞಾಪೂರ್ವಕ ತೀವ್ರತೆ ದುಃಖದ ಭರಪೂರದಲ್ಲಿ ಕಳಚಿಹೋಗಿ ಧ್ವನಿ ಪ್ರಾಣಿಕವಾಗುತ್ತದೆ. ಭಾವನೆಯೇ ಜೀವವಾಗಿ, ಜೀವದ ತುಡಿತದಲ್ಲಿ 'ಒರಲು'ತ್ತಾನೆ.

ಯಾಕೆ ಹಾಗೆ ಒರಲುತ್ತಾನೆ, ಕರೆಯುತ್ತಾನೆ ವ್ಯಕ್ತಿ? ಈ ಒರಲುವಿಕೆ ಬರೀ ವೈಯಕ್ತಿಕ ಕ್ಷುಲ್ಲಕ ಕಾರಣಗಳಿಂದ ಬಂದದ್ದೆ? ಅಥವಾ ಸಾಮಾಜಿಕ ಪರಿಸ್ಥಿತಿಯಿಂದ ಸಿಡಿದದ್ದೆ? ಎಂಬ ಪ್ರಶ್ನೆಗಳ ಕೇಳುವಿಕೆ ಅನಿವಾರ್ಯವಾಗುತ್ತದೆ. ವ್ಯಕ್ತಿಗೆ ಸ್ಥಿತಿ ಪ್ರಜ್ಞೆಯಿಂದಾಗಿ ಎಲ್ಲರಿಂದ ತಾನು ದೂರ ಸಿಡಿಯುವಂತಾಗಿ ಇನ್ನೇನು ಜೀವಿಸುವ ಹಕ್ಕು ಕಳೆದುಕೊಂಡು 'ಹೊಲಬುಗೆಟ್ಟ ಪಶು'ವಾಗುವ ಒಂದು ಸಂದರ್ಭದಲ್ಲಿ ಜೀವಿಸುವ ಅದೂ ಪರಕೀಯತೆಯನ್ನೂ ದೂರಮಾಡಿಕೊಟ್ಟು ಜೀವಿಸುವ ನೈಜ ಹಕ್ಕನ್ನು ಪುನಃ ಸ್ಥಾಪಿಸಿಕೊಡಲು ಇತರರು ಮುಂದೆ ಬಂದಾಗ ಮಾತ್ರ ಅದಕ್ಕೆ ಒಂದು ನಿರುಂಬಳ ಸ್ಥಿತಿ ಸಾಧ್ಯವಾಗುತ್ತದೆ. ಆಗ ಅವನ ಕರೆಯುವಿಕೆ. ಅರಚುವಿಕೆಗೆ ಒಂದು ಪರಿಹಾರ ದೊರೆತಂತಾಗುತ್ತದೆ. ಇಲ್ಲದೇ ಹೋದರೆ ಬದುಕು ಅವನಿಂದ ದೂರ ಕಳಚಿ ಹೋಗುತ್ತದೆ. ಒಂದು ಮಹತ್ವದ ವಾದವನ್ನು ಬಸವಣ್ಣ ಮುಂದಿಡುತ್ತಾನೆ. ಅದೇ ಬದುಕುವ ಹಕ್ಕನ್ನು ಎಲ್ಲರೂ ಎಲ್ಲರಿಂದ ಸಮಾನವಾಗಿ ಉಳಿಸಿಕೊಂಡು ಮಾನವ ಜನಾಂಗದ ಅರ್ತರನ್ನು ಕಡೆಗಾಣದೆ ಸೌಹಾರ್ದದಿಂದ ಸಹಬಾಳ್ವೆ ನಡೆಸಲು ಅನುಕೂಲಮಾಡಿಕೊಡಬೇಕು ಎನ್ನುವುದು.

* * * *

ಉಡುವಿನ ಭಾವದಲ್ಲಿ ಪಡೆದರೆಮ್ಮವರು
ಊಸರವಳ್ಳಿಯಂತೆ ಎನ್ನಿರವು
ಬಾವುಲ ಬಾಳುವೆಯು ತೆರನಂತೆ !

ಹೊತ್ತಾರೆ ಎದ್ದ ಕುರುಡಂಗೆ
ಅಗಸೆಯಲ್ಲಿ ಅಸ್ತಮಾನವಾದಂತೆ
ಆನು ಭಕ್ತಿಯ ಬಯಸಿದರಹುದೆ
ಕೂಡಲ ಸಂಗಮದೇವಾ

ಮೊದಲ ಎರಡು ವಚನಗಳಲ್ಲಿ ಅನಾಥಪ್ರಜ್ಞೆಯನ್ನು ವೈಯಕ್ತಿಕ ಮಜಲಿನಲ್ಲಿ ಮತ್ತು ಸಾಮಾನ್ಯೀಕರಣಗೊಂಡ ಅನುಭವದಲ್ಲಿ ಹೇಳ ಹೊರಟ ಬಸವಣ್ಣನವರು ಇಲ್ಲಿ 'ಸ್ವ-ವಿಮರ್ಶೆ'ಯನ್ನು ಕೈಕೊಂಡಿದ್ದಾರೆ. ಹೊರಗಿನ ಪ್ರಪಂಚದಿಂದ ಹೊರಗಿನ ಜನ-ದನ-ಪಶುಪಕ್ಷಿ-ಮಣ್ಣು-ಕಲ್ಲು-ಇತ್ಯಾದಿಗಳಿಂದ ಭಿನ್ನ. ಒಂಟಿ ಎಂದು ಗುರುತಿಸಿಕೊಂಡ ಅವರು ಮುಂದೆ ತನ್ನಲ್ಲೇ ಕೇಂದ್ರೀಕರಿಸಿಕೊಂಡು ವಸ್ತುನಿಷ್ಠವಾಗಿ ನಿಂತು ವಿಮರ್ಶೆಗೆ ಒಡ್ಡಿಕೊಳ್ಳಲು ಯತ್ನನಡೆಸಿರುವುದು ಕಂಡುಬರುತ್ತದೆ.

ಯಾವ ಒಂದು ಸ್ವಾರ್ಥದ ಸೀಮಿತ ಉದ್ದೇಶದಿಂದ ಪಡೆದ ಮಗನು ತಾನಲ್ಲವೆಂದು ವಚನಕಾರ ಅರಿತುಕೊಂಡಿದ್ದರೂ ತನ್ನ ಸ್ಥಿತಿಯೇ ಬೇರೆಯಾಗಿದೆ. ಅಂದರೆ ಸಂಪೂರ್ಣವಾದ ವ್ಯತಿರಿಕ್ತ ' ಅಸ್ತಿತ್ವ 'ದಿಂದ ತೀರ ಸಂಕುಚಿತತೆಯ ಭಾವನೆ ಬಂದಿದೆ.

ಉಡುವಿನ ಭಾವದಲ್ಲಿ ಹಡೆದರೆಮ್ಮವರು
ಊಸರವಳ್ಳಿಯಂತೆ ಎನ್ನಿರವು

ಊಸರವಳ್ಳಿ split personality ಗೆ ಸಂಕೇತ. ಕ್ಷಣಕ್ಷಣಕ್ಕೆ ವ್ಯಕ್ತಿತ್ವ ಅಥವಾ ಹೊರ ರೂಪ ಬದಲಾಯಿಸುತ್ತಾ ಥಳಕು ಬೆಳಕಾಗುವ ಗತ್ತಿನ ಬದುಕು ಅವರದ್ದು. ಅಥವಾ ಅಂಥ ವ್ಯಕ್ತಿಯದು. ತನಗೇ ತಾನು ಸಾಚಾ ಆಗದೆ ಢಾಂಬಿಕನಾಗಿ ಜೀವಿಸುವವನದು.

ಊಸರವಳ್ಳಿಯ ಉಪಮೆ ಯಥಾರ್ಥವಾಗಿ ವ್ಯಕ್ತಿಯ ಮನಸ್ಸಿನ ಖಂಡ ಖಂಡವಾದ ಸ್ಥಿತಿ ಸೂಚಿಸಲು ಬಳಸಲಾಗಿದೆ. ಅವರ ಅನೇಕ ವಚನಗಳಲ್ಲಿ ಈ ಪ್ರಾಣಿಯು ಬಳಕೆಬಂದಿದ್ದರೂ ಈ ವಚನದ ಒಟ್ಟು 'ಬಂಧ'ದಲ್ಲಿ ಮಹತ್ವದ ಅರ್ಥ ಹೊಮ್ಮಿಸುತ್ತದೆ. ಮುಂದುವರಿದು ಬಸವಣ್ಣ ಇನ್ನೊಂದು ಪ್ರಾಣಿ ಬಾವಲಿಗೆ ಹೋಲಿಕೆ ನೀಡಿ ಅತ್ತ ಇತ್ತ ಸೇರದ ಒಂದು ಸಂಧಿಗ್ಧದ ಬದುಕು ಅನಿವಾರ್ಯವಾಗಿರುವುದನ್ನು ಹೇಳಿದ್ದಾರೆ. ಬಾವಲಿ ಇತ್ತ ಪ್ರಾಣಿ ಜಾತಿಗೂ ಅತ್ತ ಪಕ್ಷಿ ಜಾತಿಗೂ ಸೇರದ್ದು. ಹಾಗೂ ಕತ್ತಲಿನಲ್ಲಿಯೇ ಜೀವನ ವಿಚಿತ್ರ.

ಊಸರವಳ್ಳಿ, ಬಾವಲಿ ವ್ಯಕ್ತಿಯ ಪೊಳ್ಳುತನವನ್ನು ಇಬ್ಬಂದಿತನದಲ್ಲಿ ಸಿಕ್ಕ ಸ್ಥಿತಿಯನ್ನು ಹೇಳುತ್ತವೆ.

ನಂತರ ಇನ್ನೊಂದು ಅರ್ಥವತ್ತಾದ ಉದಾಹರಣೆ ತೆಗೆದುಕೊಂಡು ತಮ್ಮ ಇರವನ್ನು ಸರಿಯಾಗಿ ಕಂಡುಕೊಂಡು ಅಭಿವ್ಯಕ್ತಿಸಿದ್ದಾರೆ.

ಹೊತ್ತಾರೆ ಎದ್ದ ಕುರುಡಂಗೆ
ಅಗಸೆಯಲ್ಲಿ ಅಸ್ತಮಾನವಾದಂತೆ !

ಹೊತ್ತು ಮುಂಜೆಯೇ ಎದ್ದ ಕುರುಡನಿಗೆ ಅಗಸೆ ಬಾಗಿಲಲ್ಲೇ ಸೂರ್ಯ ಅಸ್ತಮಾನವಾದಂತೆ ಅನುಭವವಾಗುತ್ತದೆ. ಅದೇ ಬೆಳಕು ಹರಿದ ಸಮಯವಾದರೂ ಕುರುಡನಿಗೆ ಕತ್ತಲಾವರಿಸಿದಂತೆ ಆಗುತ್ತದೆ. ಅವನಿಗೆ ಯಾವಾಗಲೂ ಅಸ್ತಮಾನವೆ. ಅಸ್ತಮಾನವಾದಾಗ ಉದಯವಾದಾಗ ವಿರುದ್ಧ ಹೇಳಿಕೆಕೊಡುವುದು ಅವನ ಬಯಕೆ ಅಥವಾ ಅವನು ವಸ್ತುಪ್ರಪಂಚಕ್ಕೆ ಕುರುಡನಾದ ಕಾರಣ ಹಾಗೆ ಪ್ರತಿಕ್ರಿಯೆ ಕೊಡಲು ತೊಡಗುತ್ತಾನೆ.

ಅಂಥ ಕುರುಡನ ಸ್ಥಿತಿ ತನಗಾಗಿದೆ ಎನ್ನುತ್ತಾನೆ ಬಸವಣ್ಣ. ಆಗ 'ಭಕ್ತಿ' ಅಂದರೆ ಸಂಪೂರ್ಣ ಶರಣಾಗತಿ ಸಾಧ್ಯವೇ ಎಂದು ಅನುಮಾನಿಸಿ, ತನ್ನ ಸೀಳುವ್ಯಕ್ತಿತ್ವ ಈ ಸಂಕುಚಿತತೆಯಿಂದ, ಮಿತಿಯಲ್ಲಿಂದ ಸೀಮಾತೀತ ವ್ಯಕ್ತಿತ್ವಕ್ಕೆ ಜಿಗಿಯಲು ಸಾಧ್ಯವಾಗದು ಎನ್ನುತ್ತಾನೆ ಬಸವಣ್ಣ. ಯಾವುದೇ ಒಂದು ಅನುಭವ ಸಾಧ್ಯವಾಗಬೇಕಾದರೆ ವಸ್ತು–ವ್ಯಕ್ತಿಯ ನಡುವೆಯೇ ಆಗಿತಕದ್ದಾದರೂ mystic ಅಥವಾ ದ್ವಂದ್ವಾತೀತ ಅನುಭವದಲ್ಲಿ ಈ ನಡುವಿನ ಕಂದಕ ಭರತಿಯಾಗಬೇಕಾಗುತ್ತದೆ. ಆಗಲೇ ನಿರಪೇಕ್ಷ ಅನುಭವ ಅಥವಾ 'ಉಡುವಿನ ಭಾವ' ಬರುತ್ತದೆ.

ವೈಯಕ್ತಿಕ ಶೋಧನೆಯಲ್ಲಿಯೇ ಮಗ್ನನಾಗುವ ವ್ಯಕ್ತಿಗೆ ಇಂಥದು ಸಾಧ್ಯ. ಅದಕ್ಕೆ ಮೊದಲು, ಕೈಕೊಳ್ಳಬೇಕಾದ ತಯಾರಿ ಅಂದರೆ ತನ್ನ ಅಸ್ತಿತ್ವ 'ನಿಜ'ವೆಂದು ಮಾಡಿಕೊಳ್ಳುವುದು. ಆಗ ಭಕ್ತಿಯ ಬಯಕೆ ಸಾಧ್ಯವಾಗುತ್ತದೆ.

'ಮನೆ'–ಒಂದು ಸಾಮಾನ್ಯ ಹೋಲಿಕೆ. ಮನೆ–ಕುಟುಂಬ–ಅದರ ಯಜಮಾನ. ಎಲ್ಲರಿಗೂ ತಟ್ಟನೆ ಅರ್ಥವಾಗುತ್ತದೆ. ಬಾಹ್ಯವಾಗಿ ಇದರ ಅರ್ಥವನ್ನು ಬೇಗ ಗ್ರಹಿಸಿದರೂ ಅದನ್ನು ಸಾಂಕೇತಿಕವಾಗಿ ಅಂತರಂಗಕ್ಕೆ Refer ಮಾಡಿ ವಿಶಿಷ್ಟವಾಗಿ ಬಳಕೆಗೆ ತಂದಿರುವುದನ್ನು ನೋಡಿದಾಗ ಸಾಮಾನ್ಯ ಹೋಲಿಕೆಯು ಶಬ್ದಗಳಿಗೆ ಗಾರುಡಿಗ ಮಂತ್ರದಂತೆ ಅರ್ಥವಂತಿಕೆ ಹೆಚ್ಚಿಸಿಕೊಟ್ಟು ಅಭಿವ್ಯಕ್ತಿ ಮೂಲ ಅನುಭವಕ್ಕೆ ಸಮೀಪ ಸಮೀಪವಾಗುವಂತೆ ಮಾಡುವ ಪ್ರಯತ್ನ ಗಮನಾರ್ಹ.

ಮನೆ ಇಲ್ಲಿ ದೇಹ. ಮನೆಯ ಯಜಮಾನ ಆತ್ಮ ಎನ್ನಿ ಅಥವಾ ವಿವೇಕ ಬುದ್ಧಿ ಎನ್ನಿ. ಮೊದಲ ಸಾಲಿನಲ್ಲೇ ಸಮಸ್ಯೆಯು ಬಳಿಹೋಗಲು ಓದುಗರನ್ನು ತಮ್ಮತಮ್ಮ ಸ್ವಂತವನ್ನೇ 'ಸಂದೇಹ'ದಿಂದ ಕಾಣಲು ಹಚ್ಚುತ್ತಾರೆ. ಫ್ರೆಂಚ್ ತತ್ತ್ವಜ್ಞಾನಿ ಡೆಕಾರ್ತನು ತನ್ನ ತಾತ್ತ್ವಿಕ ಚಿಂತನೆಯನ್ನು ಆರಂಭಿಸುವಾಗ 'I think therefor I am' ಎಂದು ತನ್ನ ಅಸ್ತಿತ್ವ ಪ್ರಶ್ನಿಸಿ, ಹೀಗೆ ಗಟ್ಟಿ ನಿರ್ಧಾರವನ್ನು ಗಳಿಸಿಕೊಳ್ಳುತ್ತಾನೆ. ಇಲ್ಲಿ ಬಸವಣ್ಣ ಹಾಗೆ ತನ್ನ ಅಸ್ತಿತ್ವ ಸಾಧಿಸಲು ಹೊರಟಿಲ್ಲವಾದರೂ

ಇನ್ನೊಂದು ಅರ್ಥವಲ್ಲಿ ಮೊದಲು ಇದ್ದು ನಂತರ ಜಾಗಬಿಟ್ಟಿರಬಹುದಾದ ಸಾಧ್ಯತೆ–ಗಳನ್ನು ಆಲೋಚಿಸುವುದರಲ್ಲಿ ಮಾತ್ರ ತರ್ಕಕ್ಕೆ ಇಳಿದಿದ್ದಾನೆ ಎಂದೆನಿಸುತ್ತದೆ.

'ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ'? ಪ್ರಶ್ನೆ ಹಾಕಿಕೊಂಡು ಅದಕ್ಕೆ ಸಮರ್ಥನೆಗಳನ್ನು ಕೊಟ್ಟು 'ಮನೆಯೊಡೆಯನಿಲ್ಲ'ವಾದ ಕಳವಳವನ್ನು ಗಟ್ಟಿಯಾದ ಆಧಾರದ ಮೇಲೆ ನಿಲ್ಲಿಸುತ್ತಾರೆ.

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ.

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ ಕೂಡಲ ಸಂಗಮದೇವಾ.

'ಮನೆ' ಮನೆಯೊಡೆಯನಿಲ್ಲದೆ 'ಬಿಕೋ' ಎನ್ನಲಿಕ್ಕೆ ಕಾರಣ; ಮನೆಯೊಡೆಯ ನಿದ್ದರೆ ಸಸ್ಯಗಳ ಜೊತೆಗೇನೇ ಅಥವಾ ಸಹಜವಾಗಿ ಬೆಳೆದು ಅಂದಗೆಡಿಸುವ, ಮೂಲ ಸಸ್ಯಕ್ಕೆ ಕುಠಾರಪ್ರಾಯವಾಗುವ, ಹುಲ್ಲನ್ನು ಕಿತ್ತು ಅದು ಪುನಃ ಬಂದರೆ ಕೀಳುವ, ಬರಿಮಂತೆ ಕಾಯ್ದುಕೊಂಡು ಹೋಗುವ ಯೋಗಕ್ಷೇಮ ಕಾರ್ಯವನ್ನು ಮಾಡುತ್ತಿದ್ದೆ. ಮನೆಯ ಹೊರಗೆ ಹುಲ್ಲು ಬೆಳೆದು ಮುಳ್ಳು ತುಂಬಿರುವುದಲ್ಲದೆ ಮನೆಯಲ್ಲೂ 'ರಜ' ಇತ್ಯಾದಿ ತುಂಬಿ ಕೊಳಕು ಸೇರಿಕೊಂಡಿದೆ. ಎಲ್ಲ ಕ್ರಿಮಿಕೀಟಗಳ ಆವಾಸಸ್ಥಾನವಾಗಿದೆ.

'ರಜ' ಇಲ್ಲಿ ಮನಸ್ಸಿನ ಅನೇಕ ಕೆಟ್ಟ ಬಯಕೆಗಳು ಎಂದು ಬಸವಣ್ಣ ಸೂಚಿಸ ಬಯಸಿದ್ದಾನೆ. ಒಟ್ಟಾರೆ ಮನೆಯೊಳಗೆ ಮನೆಯೊಡೆಯನಿದ್ದರೆ ಇರಬಹುದಾಗಿದ್ದ ಸುವ್ಯವಸ್ಥೆ, ಸ್ವಚ್ಛತೆ, ಅಂದ ಇಲ್ಲ.

'ಮನೆ'ಯ ಹೋಲಿಕೆಯ ನಂತರ 'ದೇಹ' ರೂಪಕ ಬಂದು ಬಾಹ್ಯದಿಂದ ಅಂತರಂಗಕ್ಕೆ ಸಾಗಲು ಐದನೆಯ ಸಾಲಲ್ಲಿ ವಚನದ ಧ್ವನಿಯ ಅರ್ಥ ವಿಶಿಷ್ಟವಾಗಿ ಹೊಮ್ಮಿ ಅದರ ಪರಿಣಾಮ ಇಮ್ಮಡಿಯಾಗುತ್ತದೆ. ದೇಹ ನಾನಾ ತರಹದ ಕೆಲಸ ಗಳಿಗೆ ಒಡ್ಡಿಕೊಂಡದ್ದಾಗಿ 'ಹುಸಿ'ಯಾಗಿದೆ. ಇದು 'ಹುಸಿ'ಯಾಗಿದ್ದಾಗ ಮನದಲ್ಲಿ ವಿವಿಧ ಆಶೆ–ಆಕಾಂಕ್ಷೆಗಳು, ಹಂಬಲಗಳು–ಅವು ಮುಖ್ಯವಾಗಿ ಕೆಟ್ಟವು ಎಂಬ ಅರ್ಥದಲ್ಲಿ ತುಂಬಿದ್ದಾಗ ವಿವೇಕ ಬುದ್ಧಿಯ ಗೈರು ಹಾಜರಿ. ಈ ಬಯಕೆಗಳು ಸಾತ್ವಿಕವಾಗಿದ್ದರೆ ಮನೆಯೊಡೆಯ ನೆಲಸಬಹುದಾದ ಸಾಧ್ಯತೆಗಳಿದ್ದವು. ಅರಿಷಡ್ವರ್ಗತುಂಬಿದ ಮನ, ಹುಸಿ ತುಂಬಿದ ತನುಗಳಿರುವಾಗ ವಿಷಯಾಲೋಚನೆಗಳು ದರ್ಬಾರ ನಡೆಸಿರುತ್ತವೆ.

ಒಟ್ಟು ವಚನದ ಧ್ವನಿ. ನಾವೀಗ ಕರೆದುಕೊಳ್ಳುವ personal identiy ಗೆ ಮನೆಯೊಡೆಯನನ್ನು ಸಮೀಕರಿಸಿ ಹೇಳಿ, ಆಧುನಿಕ ಯುಗದಲ್ಲಿ ಎದುರಿಸಬೇಕಾದ ಸಮ ಸ್ಯೆಯನ್ನೇ ಎತ್ತಿಕೊಂಡಿದ್ದಾರಲ್ಲಾ ಎನಿಸುತ್ತದೆ. ಸ್ವಕೀಯ ಪ್ರಜ್ಞೆಯಿಂದ 'ಸ್ವಂತ

ಅಸ್ತಿತ್ವ'ವನ್ನು ತಿಳಿದುಕೊಳ್ಳುವ ಪ್ರಯತ್ನ ಈ ವಚನದ ಉದ್ದೇಶವಾಗಿದೆಯೆಂದು ಸ್ಪಷ್ಟವಾಗುತ್ತದೆ.

*　　　*　　　*　　　*

ವಿಶ್ಲೇಷಣೆಗೆ ಎತ್ತಿಕೊಂಡಿರುವ ೫ ವಚನಗಳಲ್ಲಿ ಕೊನೆಯದನ್ನು ಕೂಲಂಕಷವಾಗಿ ತಾತ್ವಿಕ ನಿಲುವು ತಾಳಲು ಆಲೋಚನೆಗೆ ತೊಡಗಿದರೆ ಇಂಥ ನಾಲ್ಕಾರು ವಚನಗಳ ಆಧಾರದ ಮೇಲೆ 'ಹೊಸ ತತ್ವ ನಿರೂಪಣೆ'ಯನ್ನೇ ಪತ್ತೆ ಹಚ್ಚಬಹುದು ಎನಿಸುತ್ತದೆ.

ಕುಲವನೋಡದೆ ಛಲವನೋಡದೆ ನಿಲವನೋಡದೆ
ಕೂಡಿದ ಬಳಿಕ ಅಲ್ಲಿ ಹೆಚ್ಚು ಕುಂದನರಸಲುಂಟೆ ?

ಮುಂದುವರಿದು ಜಂಗಮಕ್ಕೆ ನಿಮ್ಮ ಕಾರುಣ್ಯವನ್ನು ಉಪದೇಶಮಾಡಿದ ಬಳಿಕ

ಬಂದುದ ಬಂದಂತೆ ಸಮನಿಸಕೊಳ್ಳಬೇಕಲ್ಲದೆ
ಅಂತಿಂತೆನಬಾರದು ಕೇಳಯ್ಯಾ !

ನೀನು ನಿರಾಕಾರ–ಸಾಕಾರವೆಂಬೆರಡು ಮೂರ್ತಿಯ ಧರಿಸಿರ್ಪೆಯಾಗಿ,

ಒಂದ ಜರಿದು ಒಂದ ಹಿಡಿದಿಹೆನೆಂದರೆ ಅದೆ ಕೊರತೆ
ನೋಡಾ ಪ್ರಭುವೇ, ಕೂಡಲ ಸಂಗಮದೇವಾ.

ನಿರ್ಲಿಪ್ತ ಮನೋಭಾವದ ತಾತ್ತ್ವಿಕ ಚೌಕಟ್ಟಿನಲ್ಲಿ ಹೊಂದಾಣಿಕೆ ಕಂಡುಕೊಳ್ಳಲು ಯತ್ನಿಸಿರುವಾಗ ಭೇದಾಭೇದ ಕಲ್ಪನೆಗಳನ್ನು ಕಟ್ಟಿಟ್ಟು ಜೀವನವನ್ನು ಬಂದಂತೆ ಗುರು ಕಾರುಣ್ಯ ದೊರೆತ ನಂತರ ಆಹ್ವಾನಿಸಬೇಕು ಎಂದು ಹೇಳುವಾಗ ದ್ವಂದ್ವಾತೀತ ಮನಸ್ಕನ ವಿಚಾರಸರಣಿಯನ್ನು ಬಹಳ ಅರ್ಥಪೂರ್ಣವಾಗಿ ಅಷ್ಟೇ ಗಹನವಾಗಿ ಈ ವಚನದ ಮೈಯಲ್ಲಿ ಬಸವಣ್ಣ ತುಂಬಿದ್ದಾನೆ.

ಜನ್ಮದಿಂದ ಬಾರದ ಕುಲ, ಯಾವುದೋ ಒಂದು ಛಲ ಯಾವುದನ್ನೂ ಗಣಿಸದೆ ಇರುವಾಗ ಅಲ್ಲಿ ಬೇರೆ 'ಕುಂದು' ಎಣಿಸಬಾರದು. ಯಾಕೆಂದರೆ ಅವುಗಳನ್ನು ಆಗಲೇ ಕಡೆಗಣಿಸಿದ್ದೇವೆ. 'ಕೂಡಲು' ಅಡ್ಡಿಯಾಗಿದ್ದವುಗಳು ದೂರವಾದಾಗಲೇ ಅದು ಸಾಧ್ಯವಾಗಿದೆ.

ಹೀಗೆ ಕೂಡಿದ ಬಳಿಕ ಪ್ರಕ್ರಿಯೆಯ ಉದ್ದೇಶ ಅಥವಾ ವ್ಯಕ್ತಿಯ ಪಾಲಿಗೆ ಬಂದ ಕಾರುಣ್ಯ ಅಂದರೆ ತಾನು ಆಯ್ದುಕೊಂಡದ್ದು. ಅದಕ್ಕೆ ಅನುಗುಣವಾಗಿ ನಡೆಯಬೇಕಲ್ಲದೆ ಅದು ಹಾಗೆ ಇದು ಹೀಗೆ ಎನ್ನಬಾರದು. ಯಾಕೆಂದರೆ ಒಂದುಸಲ ನಿರ್ಣಯ ಕೈಕೊಂಡಾಗ ಬೇರೆ ಯೋಚನೆ ಮಾಡದೆ ಅದೇ ದಿಶೆಯಲ್ಲಿ ಸಾಗುವ ಒಂದು ಪ್ರಯತ್ನ ಮಾಡುತ್ತ ಇರಬೇಕಾದದ್ದು ನಿಯಮ. ಜಂಗಮವನ್ನೂ ಇಲ್ಲಿ process ಗೆ ಸಾಂಕೇತಿಕವಾಗಿ ಹಿಡಿದರೆ ವಿಕಾಸದ ಸ್ಥಿತಿಯಲ್ಲಿರುವ ಹಾಗೂ ಒಂದು ಉದ್ದೇಶದೆಡೆಗೆ ಪ್ರಯಾಣದ

ಹುಟ್ಟು–ಸಾವು ಎಲ್ಲವೂ ಸಾಗುತ್ತವೆ ಎಂದಾಗುತ್ತದೆ. ಆಗ ಆ ಒಂದು ಸಾಮಾನ್ಯ ಗುರಿಗಾಗಿ ಯಾವ ಭೇದಗಳನ್ನು ಕಾಣದೆ ಹೊಂದಿಕೊಂಡು ಬಂದಂತೆ ಅನುಭವಿಸಿ ಮುಂದೆ ನೋಡುವುದೇ ನ್ಯಾಯ ಹಾಗೂ ಅನಿವಾರ್ಯವಾಗುತ್ತದೆ. ಅಂಥ ಸಮಯ ದಲ್ಲಿ ವ್ಯತಿರಿಕ್ತತೆ ತೋರಬಾರದು.

ಇಿದೇ ವಾದವನ್ನು ಮುಂದುವರಿಸಿ ಬಸವಣ್ಣ, ಸತ್ಯವು ಅಮೂರ್ತ ಹಾಗೂ ಮೂರ್ತ ಎಂಬ ಎರಡೂ ರೀತಿಯ 'ಅಸ್ತಿತ್ವ' ಹೊಂದಿರುವುದರಿಂದ ಒಂದುಸಲ ಮೂರ್ತ ಇನ್ನೊಂದು ಸಲ ಅಮೂರ್ತ ಎಂದು ಎಳೆದಾಡಿದರೆ ಅದೇ ಕೊರತೆ ಎನ್ನು–ತ್ತಾನೆ. ಅಂತರಂಗ ಬಹಿರಂಗದಲ್ಲಿ ಏಕತೆ ತಂದು, ಅಲ್ಲಿ–ಇಲ್ಲಿ ಎಂಬ ಭೇದವಳಿದು ಇರುವಾಗ ಯಾವುದೇ ತರಹದ ತುಯ್ದಾಟವಿಲ್ಲದ ಮನಸ್ಸು ಇರುವುದಿಲ್ಲ. ಅದು ಹಾಗಿಲ್ಲದಿದ್ದರೆ ನಮ್ಮ ಉದ್ದೇಶಕ್ಕೆ ಭಂಗ ತರುತ್ತದೆ.

* * * *

ಸ್ಥೂಲವಾಗಿ ವಿವೇಚಿಸಿದ ಐದು ವಚನಗಳೂ ಹೇಳಬೇಕಾದ್ದನ್ನು ಅಲ್ಪ ಶಬ್ದ ಗಳಲ್ಲಿ ಅಷ್ಟೇ ಮಹತ್ತಿನ ಅರ್ಥವಂತಿಕೆಯೊಂದಿಗೆ ಹೇಳುವ ಬಸವಣ್ಣನ ಸಾಹಿತ್ಯ ಪ್ರಜ್ಞೆ ಅದರಲ್ಲೂ ಮಾಧ್ಯಮದ ಪ್ರಜ್ಞೆ ವಿಶಿಷ್ಟವಾದದ್ದು, ಜನಪದಕ್ಕೆ ಹತ್ತಿರ ವಾದದ್ದು. ಅಕ್ಕಮಹಾದೇವಿ ಮತ್ತು ಅಲ್ಲಮರೂ ಸಹ ಬಸವಣ್ಣನ ಗೇಯತೆ, ಸರಳ ತೆಯನ್ನು ತಮ್ಮ ವಚನಗಳ ಹರವಿನಲ್ಲಿ ಸಾಧಿಸುವರಾದರೂ ಉತ್ಕಟ ಭಕ್ತಿ ತುಂಬಿದ ಬಸವಣ್ಣ ಹೇಳುವ ರೀತಿ ಪ್ರತ್ಯೇಕ. ಅದು 'ಬಸವಣ್ಣ ಶೈಲಿ'. ಬಸವಣ್ಣ ನಮಗೆ ಹತ್ತಿರವಾಗಿದ್ದಾನೆ ಎಂದು ತಿಳಿಯಲು ಸಾಧ್ಯವಾಗುವುದು ಇಂಥ ವಚನಗಳನ್ನು ಓದಿ ದಾಗಲೇ. ಅವನು ಅನುಭವವನ್ನೂ ತಾಜಾ ಆಗಿ ಓದುಗನಿಗೆ ಮುಟ್ಟಿಸಬಲ್ಲನೆಂಬು ದಕ್ಕೆ ಉತ್ತಮ ನಿದರ್ಶನ ಈ ವಚನಗಳು.

* * * *

ಈ ವಚನಗಳ ವಿಶ್ಲೇಷಣೆ ಹೊಸ ತಿರುವನ್ನು ಕಂಡುಕೊಳ್ಳಲು ಯೋಗ್ಯವಾಗಿವೆ ಎಂದು ಸಾಧಿಸಿದಾಗ ಅವು ಒಳಗೊಂಡಿರುವ 'ವಿಶ್ವವ್ಯಾಪಿ' ಅನುಭವ ನಮ್ಮ ಕಣ್ಣು ಮುಂದೆ ಥಟ್ಟನೆ ನಿಲ್ಲಲು ಸಾಧ್ಯವಾಗಿರುವುದೇ ಆಗಿದೆ. ಅವುಗಳ ಅನುಭವ ಸಾಮಗ್ರಿ ಇಂದೂ ನಿಜವಾಗಲು ಕಾರಣ ಈ ಸಾರ್ವತ್ರಿಕಗುಣ. ಮೇಲುನೋಟಕ್ಕೆ ಸಮಕಾಲೀನ ಅನುಭವದೊಂದಿಗಿನ ಎಳೆಯನ್ನು ಗುರುತಿಸಿ ಪೋಣಿಸಿಕೊಂಡು ಹೋಗುವ ವಚನಗಳ ಈ ಪಾರದರ್ಶಕ ಗುಣ ವಚನಕಾರರಿಗೆ ವಿಶಿಷ್ಟ. ಅವರು ಆ ಕಾಲದಲ್ಲಿ ಸಾಧಿಸಿದ್ದು ಆಶ್ಚರ್ಯ ತರಿಸುತ್ತದೆ. ವೈಯಕ್ತಿಕ ಜರೂರಿನಿಂದ, ಸಾಮಾಜಿಕ ಪರಿಸರದ ಅನಿವಾರ್ಯ ಒತ್ತಾಯದಿಂದ ಹೊಮ್ಮಿದ ಅನುಭವದ ಅಭಿವ್ಯಕ್ತಿಯಾದ್ದರಿಂದ ಮತ್ತು ಸರಳ ಭಾಷೆ ಯಲ್ಲಿ ಸಾಮಾನ್ಯ ಉಪಮೆಗಳ ಬಂಡವಲಿನಿಂದ ರಚಿಸಲ್ಪಟ್ಟ ವಚನಗಳ ನಿರೀಕ್ಷಿತ ಪರಿ–

ಣಾಮ ತರುವಲ್ಲಿ ಯಶಸ್ವಿಯಾಗುತ್ತವೆ. ಹಾಗೂ ಸ್ಥಿತಿಸ್ಥಾಪಕ ಗುಣಹೊಂದಿ ಹೊಸ ಅರ್ಥದ ಗಂಟನ್ನು ಬಿಚ್ಚಿ ನಮ್ಮ ಮುಂದೆ ಬೆರಗಾಗುವಂತೆ ಇಡುತ್ತವೆ.

* * * *

ಒಂದುವೇಳೆ ಕನ್ನಡದಲ್ಲಿರುವ ಇವುಗಳು ತಮಿಳೊ ಇನ್ನಾವುದೋ ಭಾಷೆಯಲ್ಲಿ ಬಂದಿದ್ದರೆ ಜಗತ್ತಿಗೇ ಜಾಹೀರು ಆಗುತ್ತಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ. ಈಗ ಅವು ಸೀಮಿತವಲಯದ ಓದುಗರಿಂದ 'ಅಸೀಮ'ವಾಗುವುದು ಅಗತ್ಯವಿದೆ.

ಪ್ರಾಚೀನಕರ್ನಾಟಕದ ಪ್ರಾಕೃತಕವಿಗಳು

ವರದರಾಜ ಉಮಂರ್ಜಿ

ಪ್ರಾಕೃತ ಸಾಹಿತ್ಯ : ಪ್ರಾಚೀನ ಕಾಲದಲ್ಲಿ ಕರ್ನಾಟವು 'ಕಾವೇರಿಯಿಂದಮಾ ಗೋದಾವರಿವರಮಿರ್ದ' ನಾಡಾಗಿತ್ತು. ಅದು ಈಗಿನ ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳನ್ನು ಒಳಗೊಂಡಿತ್ತು. ಈ ವಿಶಾಲವಾದ ತಪ್ಪಲು ಪ್ರದೇಶದಲ್ಲಿ, ಅನೇಕ ಪ್ರಾಕೃತಶಾಸನಗಳೂ, ಕಾವ್ಯಗಳೂ ರಚಿತವಾದವು. ಅವುಗಳಲ್ಲಿ ಉಪಯೋಗಿಸಿದ ಭಾಷೆಗೆ-ಭಾಷೆಗಳಿಗೆ, ಸೌರಸೇನಿ, ಮಹಾರಾಷ್ಟ್ರಿ, ಅಪಭ್ರಂಶ ಗಳೆಂದು ಕರೆಯುವರಾದರೂ. ಅವೆಲ್ಲವುಗಳ ಬುಡಕಟ್ಟು ಪೈಶಾಚಿಕ ಅಥವಾ ಪಾಲಿಮಿಶ್ರ ಪೈಶಾಚಿಕವಾಗಿತ್ತು. ಅದಕ್ಕೆ ನಾವು ಕರ್ನಾಟಕ ಪ್ರಾಕೃತ ('ಕರ್ನಾಟೀ') ಎಂದು ಕರೆಯಬಹುದು. ಕರ್ನಾಟಕವು ಪೈಶಾಚಿಕ ದೇಶವೆಂದು ಮುಳಿಯ ತಿಮ್ಮಪ್ಪ ನವರು ಅಭಿಪ್ರಾಯಪಟ್ಟಿದ್ದಾರೆ (ನಾಡೋಜ ಪಂಪ). ಕರ್ನಾಟಕ (ತಮಿಳು) ಪ್ರದೇಶದಲ್ಲಿ ಎರಡು ಪೈಶಾಚಿಕ ಭಾಷೆಗಳು-ಪೈಶಾಚಿಕ-ಚೂಲಿಕಾ (ಚೋಳದೇಶ) ಪೈಶಾಚಿಕವೆಂಬವುಗಳು ಇದ್ದವೆಂದು ವಿದಿತವಾಗುವುದು (ನನ್ನ ಕನ್ನಡ ಲ್ಯಾಂಗ್ವೇಜ ಇಟ್ಸ ಓರಿಜನ್ ಅ್ಯಂಡ ಡೆವೆಲಪಮೆಂಟ. ಪೃ. ೮೪–೮೫ ನೋಡಿರಿ).

ಪ್ರಾಕೃತ ಶಾಸನ ಹಾಗೂ ಕಾವ್ಯಗಳಲ್ಲಿ ಸಾಹಿತ್ಯಕ ಅಂಶಗಳು ಒಡೆದುಕಾಣುವವು. ಕಥಾಸಾಹಿತ್ಯವಲ್ಲದೆ, ಶಾಸ್ತ್ರೀಯ ಸಾಹಿತ್ಯ, ತತ್ವಜ್ಞಾನಸಾಹಿತ್ಯ, ವಿಜ್ಞಾನಸಾಹಿತ್ಯ ಮತ್ತು ಧಾರ್ಮಿಕ ಸಾಹಿತ್ಯಗಳೂ ಪ್ರಾಕೃತಭಾಷೆಯಲ್ಲಿ ರಚಿತವಾಗಿವೆ. ಧಾರ್ಮಿಕ ಹಾಗೂ ಶಾಸ್ತ್ರೀಯ ಸಾಹಿತ್ಯಗಳಲ್ಲಿಯೂ ವಿವಿಧ ತತ್ವಗಳನ್ನು ವಿವರಿಸಲು, ಆಖ್ಯಾನ-ಉಪಖ್ಯಾನಗಳೂ ಬರುವವು. ಅವು ಸಾಹಿತ್ಯಕ ಗುಣಗಳುಳ್ಳವಾಗಿವೆ,

ಶಾಸನಗಳು : (ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ. ಶ. ೪ನೆಯ ಶತಮಾನ). ಅನೇಕ ಪ್ರಾಕೃತಶಾಸನಗಳು ಕರ್ನಾಟಕಪ್ರದೇಶದಲ್ಲಿ ಅಲ್ಲಲ್ಲಿ ದೊರೆಯುವವು, ಅವುಗಳು ಕ್ರಿ. ಪೂ. ೩ನೆಯ ಶತಮಾನದಿಂದ ಪ್ರಾರಂಭವಾಗಿ ಕ್ರಿ. ಶ. ೪ನೆಯ ಶತಮಾನದ ಕಾಲಾವಧಿಗೆ ಸೇರಿದವುಗಳಾಗಿವೆ.

---

೧ ಪ್ರಾಕೃತ ಕವಿಚರಿತೆಯು ಒಂದು ಸ್ವತಂತ್ರಗ್ರಂಥ. ಅಲ್ಲದೆ ಅದು ಕನ್ನಡ ಸಾಹಿತ್ಯದ ಹಿನ್ನೆಲೆಯನ್ನು ವಿವರಿಸುವುದರಿಂದ ಕರ್ನಾಟಕ ಕವಿಚರಿತೆಗೆ ಪೂರಕವೂ ಆಗುತ್ತದೆ.

ಅ. ಅಶೋಕನ ಶಿಲಾಶಾಸನಗಳು

ಜಿಲ್ಲೆ	ಸ್ಥಾನ	ಕಾಲ
ರಾಯಚೂರ	೧. ಮಸ್ಕಿ	ಕ್ರಿ. ಪೂ. ೩ನೆಯ ಶತಮಾನ
	೨. ಪಾಲ್ಕಿಗುಂಡ	,,
	೩. ಗವಿಮಠ ಕೊಪ್ಪಳ	
ಚಿತ್ರದುರ್ಗ	೪. ಬ್ರಹ್ಮಗಿರಿ	ಕ್ರಿ. ಪೂ. ೩ನೆಯ ಶತಮಾನ
	೫. ಸಿದ್ದಾಪುರ	,, ,,
,,	೬. ಜಟಿಂಗರಾಮೇಶ್ವರ	,, ,,

ಬ. ಉಳಿದ ಪ್ರಾಕೃತ ಶಾಸನಗಳು

ಬೆಳಗಾಂವ	೬. ವಡಗಾಂವಿ	ಕ್ರಿ. ಶ. ೧ನೆಯ ಶತಮಾನ
ಕಾರವಾರ	೭. ಬನವಾಸಿ	ಕ್ರಿ. ಶ. ೨ನೆಯ ಶತಮಾನ
ಶಿವಮೊಗ್ಗ	೮. ಮಳವಳ್ಳಿ	,, ,,
ಬಳ್ಳಾರಿ	೯. ಮ್ಯಾಕಡೋಣಿ	,, ,,
ಬಳ್ಳಾರಿ	೧೦. ಹಿರೇಹಡಗಲಿ (ತಾಮ್ರ ಪಟ)	ಕ್ರಿ. ಶ. ೩ನೆಯ ಶತಮಾನ
ಮೈಸೂರು	೧೧. ಚಂದ್ರವಳ್ಳಿ	ಕ್ರಿ. ಶ. ೪ನೆಯ ಶತಮಾನ

ಈ ಶಿಲಾಶಾಸನಗಳ ವಿಮರ್ಶೆ : ಮೇಲ್ಕಾಣಿಸಿದ ಶಿಲಾಶಾಸನಗಳಲ್ಲಿ ಅಲ್ಲಲ್ಲಿ ಲಿಪಿಕಾರರ ಹೆಸರುಗಳು ಬರುವವು. ಕವಿ ಯಾರು ? ಎಂಬುದು ಗೊತ್ತಾಗುವುದಿಲ್ಲ. ಶಾಸನಗಳಲ್ಲಿಯ ವಿಷಯಗಳು ವಿವಿಧವಾಗಿವೆ. ಅವುಗಳಲ್ಲಿ ರಾಜಕೀಯ ಚರಿತ್ರೆಗಳೂ ಆ ಆ ಕಾಲದ ಧಾರ್ಮಿಕ ರೀತಿ ನೀತಿಗಳೂ ಮಹತ್ವದ ಘಟನೆಗಳೂ ಕಂಡುಬರುವವು. ಅವುಗಳಲ್ಲಿ ಅನೇಕ ಶಾಸನಗಳು ದತ್ತಿಗೆ ಸಂಬಂಧಿಸಿವೆ. ದೇವಾಲಯ. ಕೆರೆ. ಕಾಲುವೆ. ಕಟ್ಟಿಸಿಕೊಟ್ಟ ಉಲ್ಲೇಖಗಳಿವೆ. ಶಾಸನಗಳ ಭಾಷೆ, ವ್ಯಾಕರಣ. ಬಂಧಗಳು ಪ್ರೌಢ ವಾಗಿವೆ. ಭಾಷಾಶೈಲಿ, ಕಥನಕ್ರಮ. ನಿರೂಪಣೆಯ ರೀತಿ ಮುಂತಾದವುಗಳು ಸಾಹಿತ್ಯ ಗುಣಗಳಿಂದ ಕೂಡಿವೆ. ಶಾಸನಗಳು– ಮುಖ್ಯವಾಗಿ ಅಶೋಕನ ಶಾಸನಗಳು, ನೀತಿ ಬೋಧಕವಾಗಿದ್ದು ಸಮಾಜವನ್ನು ಉದಾತ್ತ ಮಾರ್ಗದ ಕಡೆಗೆ ಒಯ್ಯಲು ಸಹಾಯಕ ವಾಗಿವೆ. ಜೀವನವನ್ನು ಉದಾತ್ತೀಕರಿಸುವುದು ಸಾಹಿತ್ಯ ಮಾಡಬೇಕಾದ ಕೆಲಸವಲ್ಲವೇ? ವಿಧಿರೂಪ ಉಪದೇಶ ಅವುಗಳಲ್ಲಿ ಕಂಡುಬರುವುದು.

ಗ್ರಂಥಸಾಹಿತ್ಯ

ಕರ್ನಾಟಕ ಪ್ರದೇಶದಲ್ಲಿ ಅನೇಕ ಪ್ರಾಕೃತ ಗ್ರಂಥಗಳು ರಚಿತವಾಗಿವೆ. ಅನೇಕ ಕವಿಗಳು ಕಥೆ ಹಾಗೂ ತತ್ವಗ್ರಂಥಗಳನ್ನು ರಚಿಸಿದ್ದಾರೆ. ಅವರಲ್ಲಿ ಮೊದಲನೆಯ ಕವಿ ಗುಣಾಢ್ಯ. (ಕರ್ನಾಟಕವೆಂಬ ಪ್ರದೇಶದಲ್ಲಿ ಕಾವ್ಯವನ್ನು ರಚಿಸಿದ ಕವಿಯೀತ. ಅವನು ಯಾವುದೇ ಪ್ರಾಕೃತ ಉಪಭಾಷೆಯಲ್ಲಿ ಕಾವ್ಯವನ್ನು ರಚಿಸಿರಲಿ ಕರ್ನಾಟಕ ಪ್ರಾಕೃತ ಕವಿಯೆಂದು ಇಲ್ಲಿ ಪರಿಗಣಿಸಲಾಗಿದೆ). ಗುಣಾಢ್ಯನಂತೂ ಕರ್ನಾಟಕದ ಮೂಲಪ್ರಾಕೃತ ಭಾಷೆಯಾದ ಪೈಶಾಚಿಕೆಯಲ್ಲಿ ಕಾವ್ಯವನ್ನು ರಚಿಸಿದ್ದಾನೆ.

೧. ಗುಣಾಢ್ಯ (ಕ್ರಿ. ಶ. ೧ನೆಯ ಶತಮಾನ)

ನವಭೂತಭಾಷೆಯಿಂ ಕುಱು
ಪುವೇೞ್ದು ತಾಮಡ್ಡಗವಿತೆಯಂ ಮಾಡಿ ಮಹಾ
ವ್ಯವಸಾಯಂ ಗೆಯ್ದು ಮರು
ಳ್ಗವಿಗಳ್ಪಾವೇಂ ಗುಣಾಢ್ಯರಂ ಮಸುಳಿಸರೇ ಗ.ಯು. ೪-೪೧

[ನವಭೂತಭಾಷೆ ಕನ್ನಡ; ಪುರಾಣಭೂತಭಾಷೆ (ಪೈಶಾಚಿಕ), ಅದು ಗುಣಾಢ್ಯನು ತನ್ನ ಕಾವ್ಯ ಬರೆದ ಭಾಷೆ].

ಕರ್ನಾಟಕ ಪ್ರದೇಶದ ಆದಿಕವಿ ಗುಣಾಢ್ಯ. ಅವನು ಪೈಶಾಚಿಕ ಪ್ರಾಕೃತದಲ್ಲಿ ತನ್ನ ಬೃಹತ್‌ಕಥಾ (ವಡ್ಡಕಹಾ[೨]) ಎಂಬ ಗ್ರಂಥವನ್ನು ರಚಿಸಿದ್ದಾನೆ. ಅವನ ಸಂಬಂಧವು ಸಾತವಾಹನರೊಡನೆ ಸ್ವೀಕೃತವಾಗಿದೆ. ಸಾತವಾಹನರು ಬೌದ್ಧಮತೀಯರಾದ್ದರಿಂದ ಗುಣಾಢ್ಯನೂ ಕೂಡ ಬೌದ್ಧಮತೀಯನು ಆಗಿರಬಹುದೇ? ಬೃಹತ್‌ಕಥೆಯು ಹುಟ್ಟು ಶೈವ ವಾತಾವರಣದಲ್ಲಿ— ಪಾರ್ವತಿಯ ಶಾಪದಿಂದ ಉಂಟಾಗುವುದರಿಂದ, ಅವನು ಶೈವನಾಗಿರಬಹುದೇನೋ ಎಂಬ ಸಂಶಯಬರುತ್ತದೆ. ಅವನು ಒಬ್ಬ ಹಗುರುಹೃದಯ (lighthearte)ದ ಶೃಂಗಾರರಸ (Romance) ಪ್ರಿಯ, ಸನಾತನ ವೈದಿಕ ಸಂಪ್ರದಾಯದ ಕಟ್ಟುನಿಟ್ಟುಗಳನ್ನು ಅನುಸರಿಸದ (ವ್ರಾತ್ಯ) ಕವಿಯೆಂದು ಕಂಡುಬರುವುದು. ಅವನು ಬಹು ಪ್ರತಿಭಾವಂತ ಕವಿ – ವಾಲ್ಮೀಕಿ – ವ್ಯಾಸರ ಮಟ್ಟದವನು; ಆದರೆ ಅವನು ಅವರಿಂದ ತೀರ ಭಿನ್ನ ವಿಚಾರ ಪ್ರಣಾಲಿಯುಳ್ಳವನು. ಅವನು ಸಾತವಾಹನರೊಡನೆ ಸಂಬಂಧವುಳ್ಳವನು ಎಂದು ಒಪ್ಪಿಕೊಂಡರೆ. ಅವನ ಕಾಲವು ಕ್ರಿ. ಶ. ೧ ನೆಯ ಶತಮಾನ ಮತ್ತು ಅವನ ಸ್ಥಳ ಗೋದಾವರೀ ತೀರದಲ್ಲಿರುವ ಪ್ರತಿಷ್ಠಾನವೆಂದು ಹೇಳಬಹುದು. ಆದರೆ ಕೆಲವರು ಅವನು ಕ್ರಿ.ಪೂ. ೬ನೆಯ ಶತಮಾನದವನೆಂದು ಅಭಿಪ್ರಾಯಪಡುತ್ತಾರೆ (ಮಹಾರಾಷ್ಟ್ರ ಜ್ಞಾನಕೋಶ ನೋಡಿರಿ) ಪರಂಪರಾಗತ ತಿಳಿವಳಿಕೆಗೆ ಅನುಗುಣವಾಗಿ ಅವನು ಪಾಕೃತ ಭಾಷೆಯ ಆದಿ

೨. ದುರ್ವಿನೀತನು ಬೃಹತ್‌ಕಥೆಯನ್ನು ವಡ್ಡಕಥಾ ಎಂದು ಹೆಸರಿಸಿ ಕಾವ್ಯವನ್ನು ಬರೆದಿದ್ದನೆಂದು ತಿಳಿದುಬರುತ್ತದೆ. 'ವಡ್ಡ' ಕಥಾ ಎಂಬ ಶಬ್ದಪ್ರಯೋಗ ಮಾಡಿದ್ದಾನೆ.

ಕವಿಯೆಂದು ಪರಿಗಣಿಸಲ್ಪಟ್ಟಿದ್ದಾನೆ. ಸಾತವಾಹನರು ಪ್ರಾಕೃತ ಪಕ್ಷಪಾತಿಗಳಾಗಿದ್ದು ಅವನಿಗೆ ಆಶ್ರಯ ಕೊಟ್ಟಿರಲು ಸಾಕು !

ಕಾವ್ಯ : ಅವನು ರಚಿಸಿದ ಕಾವ್ಯ "ಬೃಹತ್‌ಕಥಾ" (ದೊಡ್ಡ ಕಥೆ) ಮಹಾಭಾರತದಂತೆ. ಅದರ ನಾಯಕ ಪಾಂಡವ ವಂಶೀಯನಾದ 'ಉದಯನ' ಅವನ ಆಕರ್ಷಕ ಸಾಹಸಗಳಿಂದ ಬೃಹತ್‌ಕಥೆಯು ತುಂಬಿದೆ. ಬೃಹತ್‌ಕಥೆಯು ಈಗ ಉಪಲಬ್ಧವಿಲ್ಲ. ಬೃಹತ್‌ಕಥೆಯು ನಾಶವನ್ನು (ಪೈಶಾಚಿಕ ಪ್ರಾಕೃತ ಕಾವ್ಯವಾದದ್ದರಿಂದ ಶಿಷ್ಟರೆಂದು ತಿಳಿದುಕೊಂಡ ಪಂಡಿತರು ಅದನ್ನು ನಾಶಮಾಡಿರಬಹುದೆಂದು, ಗುಣಾಢ್ಯನ ಬಗ್ಗೆ ಪ್ರಚಲಿತವಿರುವ ದಂತಕಥೆಗಳಿಂದ ಸೂಚಿತವಾಗುವುದು.) ಕೆಲವುಮಟ್ಟಿಗೆ ಉಪಲಬ್ಧವಿರುವ ಸಂಸ್ಕೃತ ರೂಪಾಂತರಗಳಿಂದ ತುಂಬಲಾಗಿದೆ.

೧. ಬೃಹತ್‌ಕಥಾ ಶ್ಲೋಕಮಂಜರೀ (ಭುದ್ಧಸ್ವಾಮಿ ಕ್ರಿ. ಶ. ೮ನೆಯ ಶತಮಾನ).

೨. ಬೃಹತ್‌ಕಥಾಮಂಜರೀ (ನೇಪಾಳಿ ರೂಪಾಂತರ) ಕ್ಷೇಮೇಂದ್ರ ಸು. ಕ್ರಿ. ಶ. ೧೦೦೦).

೩. ಕಥಾಸರಿತ್‌ಸಾಗರ (ಕಾಶ್ಮೀರ ರೂಪಾಂತರ) ಸೋಮದೇವ ಸು. ಕ್ರಿ. ಶ. ೧೦೬೩).

ಬೃಹತ್‌ಕಥೆಯು 'ವಸುದೇವಹಿಂಡೀ'ಯಲ್ಲಿ ಪ್ರತಿಬಿಂಬಿತವಾದ್ದರಿಂದ ಗುಣಾಢ್ಯನ ಕಾವ್ಯದ ಸ್ವರೂಪವನ್ನು ತಿಳಿದುಕೊಳ್ಳಬಹುದು. ಕಾಶ್ಮೀರ ರೂಪಾಂತರಗಳಿಂದ, ಬೃಹತ್‌ಕಥೆಯು ಪದ್ಯರೂಪದಲ್ಲಿತ್ತೆಂದೂ ತಿಳಿದುಬರುತ್ತದೆ. ದಂಡಿಯ ಪ್ರಕಾರ ಅದು ಗದ್ಯರೂಪವಾಗಿತ್ತೆಂದೂ ಸೂಚಿತವಾಗುವದು.

ಬೃಹತ್ ಕಥೆಯ ಪ್ರಭಾವ : ಬೃಹತ್‌ಕಥೆಯು, ರಾಮಾಯಣ, ಮಹಾಭಾರತಗಳ ದರ್ಜೆಯ ಕಾವ್ಯವಾಗಿದ್ದು ಅದರ ಕರ್ತೃ(ಗುಣಾಢ್ಯ)ವು ಮಹಾ ಮೇಧಾವಿಯಾಗಿರಲು ಸಾಕು ! ಭಾರತೀಯ ಸಾಹಿತ್ಯದ ಮೇಲೆ ಬೃಹತ್‌ಕಥೆಯ ಪ್ರಭಾವವು ಬಹಳವಾಗಿದ್ದು, ಮಹಾಭಾರತದ ನಂತರ ಅದು ಬರುವುದು. ಅನೇಕ ಸಂಸ್ಕೃತ ಪ್ರಾಕೃತ, ದೇಶಿ (ಕನ್ನಡ ಮುಂತಾದವು) ನಾಟಕಗಳು ಮತ್ತು ಕಾವ್ಯಗಳು ಕಥಾವಸ್ತುವನ್ನು ಅದರಿಂದ ಪಡೆದಿವೆ. ಬೃಹತ್‌ಕಥೆಯು ಒಂದು ಮಹತ್ವದ ಆಕರ ಗ್ರಂಥವಾಗಿದೆ (ಅನೇಕಾನೇಕ ಶತಮಾನಗಳಿಂದ). ರಚನಾಕ್ರಮ (ಕಥೆಯಲ್ಲಿ ಕಥೆ) ಸಾಹಿತ್ಯತಂತ್ರ (ಶಾಪ) ಮುಂತಾದವುಗಳನ್ನು ಬೃಹತ್‌ಕಥೆಯ ಮಾದರಿಯ ಮೇಲೆ ಅವು ಉಪಯೋಗಿಸಿಕೊಂಡಿವೆ. ಬೃಹತ್‌ಕಥೆಯು ಬಹು ಜನಪ್ರಿಯ ಗ್ರಂಥ. ದುರ್ವಿನೀತನೆಂಬ ಗಂಗ ಅರಸನು "ದೇವಭಾರತೀ ನಿಬದ್ಧ ಬೃಹತ್‌ಕಥ" ಎಂದು ವಿಶೇಷಣ ಪಡೆದವನಾಗಿದ್ದು ಬೃಹತ್‌ಕಥೆಯನ್ನು ಸಂಸ್ಕೃತಕ್ಕೆ ರೂಪಾಂತರಿಸಿದನೆಂದು ಗೊತ್ತಾಗುವುದು. ಅಲ್ಲದೆ ಅವನು ಬೃಹತ್‌ಕಥೆಯನ್ನು 'ವಡ್ಡಕಥಾ' ಎಂಬ

ಹೆಸರಿನಿಂದ ಕನ್ನಡಿಸಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕನ್ನಡ ಕವಿ ದುರ್ಗಸಿಂಹ (ಕ್ರಿ. ಶ. ೧೧೪೫)ನು ತನ್ನ ಕನ್ನಡ ಪಂಚತಂತ್ರವು, ಗುಣಾಢ್ಯನ ಬೃಹತ್‌ಕಥೆಯಿಂದ ವಸುಧಾಭಟ್ಟನು ಆರಿಸಿ ರಚಿಸಿದ ಸಂಸ್ಕೃತ ಪಂಚತಂತ್ರವನ್ನು ಅವಲಂಬಿಸಿದೆಯೆಂದು ಹೇಳಿದ್ದಾನೆ. ಕನ್ನಡ ವಡ್ಡಾರಾಧನೆಯು ಬೃಹತ್‌ಕಥೆಯ ಜೈನ ರೂಪಾಂತರವಂತೆ ಇದ್ದು, ಗುಣಾಢ್ಯನ ಎಲ್ಲ ಸಾಹಿತ್ಯತಂತ್ರ (ಶಾಪ) ರಚನಾಕ್ರಮ (ಕಥೆಯಲ್ಲಿ ಕಥೆ)ಗಳನ್ನು ಅಲ್ಲಿ ಕಾಣಬಹುದು. ಕರ್ನಾಟಕ ದೇಶದ ಆದಿಕವಿ ಗುಣಾಢ್ಯನು ಅಖಿಲ ಹಿಂದುಸ್ಥಾನದ ಪ್ರಾಕೃತ ಕಾವ್ಯಗಳ ಪಿತಾಮಹನೆಂದೂ ಪರಿಗಣಿಸಲ್ಪಟ್ಟಿದ್ದಾನೆ. ಬೃಹತ್‌ಕಥೆಯು ನಮಗೆ ಗೊತ್ತಿರುವ ಮೊದಲನೆಯ ಪ್ರಾಕೃತ ಮಹಾಕಾವ್ಯ (ದೊಡ್ಡಕಾವ್ಯ).

೨. ಹಾಲ (ಕ್ರಿ. ಶ. ೨೧ ಅಥವಾ ೮೧)

“ಶ್ರೂಯತೇ ಚ ಕುಂತಲೇಷು ಸಾತವಾಹನೋ ನಾಮ ರಾಜಾ
ಯೇನ ಪ್ರಾಕೃತಾತ್ಮಕಮಂತಃಪುರಃ ಏವ ಪ್ರವರ್ತಿತೋನಿಯಮಃ”
—ಕಾವ್ಯಮೀಮಾಂಸಾ

ಕುಂತಲ (ಪ್ರಾಚೀನ ಕರ್ನಾಟಕ) ದೇಶದಲ್ಲಿ ಸಾತವಾಹನ (ಹಾಲ)ನೆಂಬ ಅರಸನು ಇದ್ದನು. ಅವನ (ಅರ) ಮನೆಯ ಮಾತು ಪ್ರಾಕೃತಾತ್ಮಕ (ಸಂಸ್ಕೃತ ಮಿಶ್ರ ದೇಶ್ಯ) ಪ್ರಾಚೀನ ಹಳೆಗನ್ನಡವಾಗಿತ್ತು (ಪಂಚಮುಖಿ–ಕರ್ನಾಟಕದ ಇತಿಹಾಸ Vol. I ಪು. ೮೯). ಅವನ ಸಪ್ತಶತಿಯಲ್ಲಿ ಪೊಟ್ಟ ತುಪ್ಪ. ತೀವ, ಪೆಟ್ಟು ಮುಂತಾದ ಕನ್ನಡ ದೇಶೀಶಬ್ದಗಳು ಕಂಡುಬರುವವು.

ಹಾಲ (ಸಾಲ < ಶಾಲ < ಶಾಲಿ(ವಾಹನ)ನು ಐತಿಹಾಸಿಕ ಕವಿ. ಗಾಥಾ ಸಪ್ತಶತಿಯ ಮೂರನೆಯ ಗಾಥಾದಲ್ಲಿ ಗ್ರಂಥಕರ್ತೃವು ಹಾಲನೆಂದು ಉಲ್ಲೇಖಿಸಿದೆ. ಕವಿವತ್ಸಲನಾದ ಹಾಲನು ಕೋಟಿ ಗ್ರಂಥಗಳಿಂದ ಆರಿಸಿದ, ಅಲಂಕಾರದಿಂದ ಕೂಡಿದ ಗಾಥಾಗಳ ಏಳು ಶತಕಗಳನ್ನು ರಚಿಸಿದನು. “ಸಾಲಾಹಣ–ನರೇಂದ್ರ” ಎಂಬ ಉಲ್ಲೇಖವು ೪೬೭ ನೆಯ ಗಾಥಾದಲ್ಲಿ ಬಂದಿದೆ. ಆದ್ದರಿಂದ ಅವನನ್ನು ಶಾಲಿವಾಹನ–ಶಾತಕರ್ಣಿ–ಶಾತವಾಹನ ವಂಶದಲ್ಲಿ ೧೭ ನೆಯ ಹಾಲಸಾತಕರ್ಣಿಯೊಡನೆ ಸಂಬಂಧಿಸಲಾಗಿದೆ. ಈ ರಾಜನು ಕ್ರಿ. ಶ. ೨೧ ಅಥವಾ ೮೧ ನೆಯ ವರ್ಷದಲ್ಲಿ ಆಗಿ ಹೋದನೆಂದು ಇತಿಹಾಸ್ಕ ಪ್ರಸಿದ್ಧವಿದೆ. ಮತ್ತೂ ಈ ಹಾಲನು ಗೋದಾವರಿ ತೀರದಲ್ಲಿರುವ ಪ್ರತಿಷ್ಠಾನ (ಪೈಠಣ)ದಲ್ಲಿ ರಾಜ್ಯವಾಳುತ್ತಿದ್ದನೆಂದು ವಜ್ಜಾಲಗ್ಗವೆಂಬ ಗ್ರಂಥದಲ್ಲಿ ಹೇಳಿದೆ. ಅವನು ಬೌದ್ಧಮತೀಯನೆಂದು ಪ್ರತೀತಿ ಇದೆ. ಅವನು ಜೈನನೆಂದೂ ಕೆಲವರು ಹೇಳುತ್ತಾರೆ, ಆದರೆ ಗಾಥಾಸಪ್ತಶತಿಯ ಮಂಗಳಾಚರಣ ಶ್ಲೋಕದಲ್ಲಿ ಪಶುಪತಿ(ಶಿವ)ನನ್ನು ಸ್ತುತಿಸಿದ್ದಾನೆ.

ಪಸವ ಇಣೋ ರೋಸಾರುಣ ಪಡಿಮಾಸಂಕಂತ ಗೋರಿಮುಹ ಅಂದಂ ।
ಗಹಿ ಅಗ್ಘ ಪಂಕ ಅಂ ವಿಯಂಸಝಾಸಲಿಲಾಂಜಲಿಂ ಣಮತ ॥

[ಕನ್ನಡ ಅನುವಾದ : ಸಿಟ್ಟಿನಿಂದ ಕೆಂಪಾದ ಪಾರ್ವತಿಯ ಮುಖವು ಪ್ರತಿಬಿಂಬ

ಭಾವ ಧರಿಸಿದ ಅರ್ಘ್ಯದ ಕಮಲದಂತೆ ಇರುವ ಪಶುಪತಿಯ ಸಂಧ್ಯಾವಂದನದ ನೀರಿನ ಬೊಗಸೆಯನ್ನು ನಮಸ್ಕರಿಸಿರಿ.]

ಈ ಶ್ಲೋಕದಿಂದ ಹಾಲನು ಉಪಯೋಗಿಸಿದ ಪ್ರಾಕೃತದ ಮಾದರಿಯೂ ಗೊತ್ತಾಗುವದು ಮತ್ತು ಕಾವ್ಯದ ಶೃಂಗಾರ ರಸ ಪ್ರಧಾನತ್ವವೂ ವಿದಿತವಾಗುವುದು. ಅವನು ಬೌದ್ಧನೋ, ಜೈನನೋ, ಶೈವನೋ ಎಂದು ಹೇಳಲಿಕ್ಕಾಗದಿದ್ದರೂ ಅವನು ಶೃಂಗಾರ ಭೂಯಿಷ್ಟ (ಅಶ್ಲೀಲವೆಂಬ ಮಟ್ಟಿಗೆ ಮುಟ್ಟಿರುವ ದೃಶ್ಯಗಳನ್ನು ತನ್ನ ಕಾವ್ಯದಲ್ಲಿ ವರ್ಣಿಸಿದ್ದರಿಂದ ಕಟ್ಟುನಿಟ್ಟುಗಳಿಲ್ಲದ) ಪ್ರಾಕೃತಕವಿಯೆಂದು ಧಾರಾಳವಾಗಿ ಹೇಳಬಹುದು. ಅವನ ಕಾವ್ಯದಲ್ಲಿ ಶೃಂಗಾರ ಭೂಯಿಷ್ಟ (Romantic) ದೃಶ್ಯಗಳು ಬಹು ರಂಜನೀಯವಾಗಿವೆ.

ಕಾವ್ಯ : ಹಾಲನಿಂದ ರಚಿತವಾದ (ಸಂಪಾದಿತವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ) ಗಾಥಾಸಪ್ತಶತಿ (ಗಾಹಾಸತ್ತಸ ಈ)ಯು ಭಾರತದಲ್ಲಿ ಉಪಲಬ್ಧವಿರುವ ಪ್ರಾಕೃತ ದೊಡ್ಡಕಾವ್ಯ. ಮಹಾರಾಷ್ಟ್ರಿ ಪ್ರಾಕೃತ (ಕರ್ನಾಟಕ ದೇಶದಲ್ಲಿ ಪ್ರಚಲಿತವಿದ್ದ ಪ್ರಾಕೃತ ವಿಶೇಷ)ದಲ್ಲಿ ಬರೆಯಲ್ಪಟ್ಟಿದೆ. ಅದರ ಮೊದಲನೆಯ ಹೆಸರು ಗಾಥಾ-ಕೋಶವಾಗಿತ್ತೆಂದೂ, ಅದರಲ್ಲಿ ಸುಮಾರು ೩೦೦-೪೦೦ ಶ್ಲೋಕಗಳು ಮಾತ್ರ ಇದ್ದವೆಂದೂ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಗಾಥಾಕೋಶದ ಕಾಲ, ಹಾಲಕಾಲೀನ ಅಂದರೆ ಕ್ರಿ.ಶ. ೨೧ ಅಥವಾ ೮೧ ಎಂದು ಸಿದ್ಧವಾಗುವುದು. ಆದರೆ ಈಗಿನ ಸಪ್ತಶತೀ (ಸತ್ತಸ ಈ) ಗಾಥಾಗಳ ಸಂಖ್ಯೆಯು ಬೆಳೆಯುತ್ತ ಹೋಗಿ ೭೦೦ಕ್ಕೆ ಬಂದಾಗ ಹತ್ತನೆಯ ಶತಮಾನವಾಗಿರಬಹುದೆಂದೂ ಹೇಳುವರು.

ಸಾಹಿತ್ಯದಲ್ಲಿ ಗಾಥಾಸಪ್ತಶತಿಯ ಸ್ಥಾನ : ಪ್ರಾಕೃತ ಸಾಹಿತ್ಯದಲ್ಲಿ ಗಾಥಾಸಪ್ತಶತಿಯ ಸ್ಥಾನವು ಅನನ್ಯ ಸಾಧಾರಣವಾಗಿದೆ. ವಾಙ್ಮಯ ದೃಷ್ಟಿಯಿಂದ ನೋಡಲಾಗಿ, ಅದು ಒಂದು ಅಪೂರ್ವ ಗ್ರಂಥವಾಗಿದೆ. ಇದು ಒಂದು ಪ್ರಪ್ರಥಮ (ಉಪಲಬ್ಧವಿರುವ) ಕಾವ್ಯಸಂಗ್ರಹವಾಗಿದೆ. ಅದರಲ್ಲಿ ಯಾವ ಕೃತ್ರಿಮಾತೆಯೂ ಕಂಡುಬರುವುದಿಲ್ಲ. ಸುಬಂಧುವಿನ ಸೇತುಬಂಧನ ಕಾವ್ಯದ ಕೀರ್ತಿಯು ಸೇತುವಿನ ಹಾಗೆ ಸಾಗರದ ತನಕ ಪಸರಿಸಿತ್ತಾದರೂ ಅದು ವಿದಗ್ಧ ಹಾಗೂ ದರಬಾರೀ ರಾಜಾಶ್ರಯ ಕಾವ್ಯವಾಗಿತ್ತು. ಅದರಲ್ಲಿ ಸಂಸ್ಕೃತ ರಚನೆಯ ಮತ್ತು ಕಾವ್ಯಶಾಸ್ತ್ರದಲ್ಲಿಯ ಕಾವ್ಯಗುಣಗಳು ವ್ಯಾಪಿಸಿದ್ದು ಸ್ಪಷ್ಟವಾಗಿದೆ. ಸಪ್ತಶತಿಯಲ್ಲಿ ಹಾಗಿರುವುದಿಲ್ಲ. ಕೃತ್ರಿಮತೆಯಿಂದ ಈ ಕಾವ್ಯವು ಮುಕ್ತವಾಗಿದ್ದು, ಕಾವ್ಯಲಕ್ಷಣಗಳು ಮತ್ತು ಕವಿ ಸಂಕೇತಗಳ ಪ್ರದರ್ಶನವು ಅಲ್ಪ ಪ್ರಮಾಣದಲ್ಲಿ ಕಂಡುಬರುವುದು. ಗಾಥಾಸಪ್ತಶತಿಯು ತನ್ನ ನೈಸರ್ಗಿಕ ಸುಗಮತೆಯಿಂದ ಮತ್ತು ಸೌಷ್ಟವಪೂರ್ಣ ಪ್ರಾಸಾದಿಕ ರಚನೆಯಿಂದ ಚಿತ್ತವನ್ನು ವೇಧಿಸುತ್ತದೆ. ಹಾಲನು ಶತಕಸಾಹಿತ್ಯದ ಪಿತಾಮಹನೆಂದು ಹೇಳಬಹುದು. ಕನ್ನಡದಲ್ಲಿ ಹರಿಹರನ ರಕ್ಷಾಶತಕ, ಸೋಮೇಶ್ವರ ಶತಕಗಳು ಸಪ್ತಶತಿಯ ಮಾದರಿಯ ಮೇಲೆ ರಚಿತವಾಗಿ ಅನಂತರ ಬಂದವು.

೩. ಕುಂದಕುಂದಾಚಾರ್ಯ (ಕ್ರಿ. ಶ. ೧ನೆಯ ಶತಮಾನ)

ದಿಗಂಬರ ಜೈನಾಚಾರ್ಯರ ಮಾಲಿಕೆಯಲ್ಲಿ ಕುಂದಕುಂದ (ಕೊಂಡಕೊಂಡ) ಆಚಾರ್ಯನಿಗೆ ಅದ್ವಿತೀಯ ಸ್ಥಾನವಿದೆ. ಮಹಾವೀರನ ತರುವಾಯ ಅವನ ಹೆಸರು ಮಹಾಪವಿತ್ರ ಹಾಗೂ ಪುಣ್ಯಸ್ಮರಣೀಯವಾಗಿದೆ. ಎಷ್ಟೋ ಜೈನಾಚಾರ್ಯರು ತಾವು ಕುಂದಕುಂದಾನ್ವಯದವರೆಂದು ಕರೆದುಕೊಳ್ಳಲು ಅಭಿಮಾನಪಡುತ್ತಾರೆ. ಕುಂದಕುಂದಾಚಾರ್ಯನಿಗೆ ಅನೇಕ ನಾಮಗಳಿವೆ. ಪದ್ಮನಂದಿ ಎಂಬುದು ಅವನ ಮೂಲ ಹೆಸರು. ಅವನನ್ನು ಏಲಾಚಾರ್ಯನೆಂದೂ ವಕ್ರಗ್ರೀವನೆಂದೂ ಗೃಧ್ರಪಿಂಛನೆಂದೂ ಕೆಲವು ಎಡೆಯಲ್ಲಿ ಕರೆದಿದ್ದಾರೆ. ನಂದಿಸಂಘದ ವಿಜಯನಗರದ ಶಾಸನ (ಕ್ರಿ. ಶ. ೧೩೮೬)ದಲ್ಲಿ ಅವನು ಮೂಲಸಂಘಕ್ಕೆ ಸೇರಿದ ದಿಗಂಬರ ಜೈನನೆಂದೂ ಭದ್ರಬಾಹುವಿನ ಶಿಷ್ಯನೆಂದೂ ಹೇಳಿದೆ. ಕುಂದಕುಂದಾಚಾರ್ಯನು ಎಲ್ಲಿಯವನು ಎಂದು ನಿಶ್ಚಿತವಾಗಿ ಹೇಳಲು ಆಧಾರಗಳಿಲ್ಲ. ಕೆಲವು ಸಂಪ್ರದಾಯಿಕ ಕಥೆಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ಒಂದು ಅವನು ದಕ್ಷಿಣದವನೆಂದು ಹೇಳುವುದು (ಪಂಚಾಸ್ತಿಕಾಯ – ಪ್ರೊ. ಚಕ್ರವರ್ತಿಯವರ ಪ್ರಸ್ತಾವನೆ. P.7.Vol. III). "ಕುಂದಕುಂದ ಗುರುಪರಂಪರಾಯಾಂ" "ಶ್ರೀಕುಂದಕುಂದಸಂತಾನಂ" "ಕುಂದಕುಂದಾಖ್ಯ ಮುನೀಂದ್ರವಂಶ" ಮುಂತಾದ ಪದಗಳ ದಕ್ಷಿಣ ಮತ್ತು ಮೈಸೂರು ಪ್ರಾಂತ ಜೈನರಲ್ಲಿ ಸಾಮಾನ್ಯವಾಗಿವೆ. ಅವನು ಮೂಲಸಂಘಕ್ಕೆ ಸೇರಿದ ದಿಗಂಬರ ಜೈನನಾಗಿದ್ದು, (ದಿಗಂಬರ ಜೈನರು ದಕ್ಷಿಣದೇಶದವರು) ಅವನು ದಕ್ಷಿಣದೇಶದವನಾಗಿದ್ದಾನೆ. ಅವನು ಹುಟ್ಟಿದ ಗ್ರಾಮ (ಪೊನ್ನೂರ–ದಕ್ಷಿಣದಲ್ಲಿ ಸೇಲಂ ಜಿಲ್ಲೆ ಪಾಂಡಿವಾಶದ ಹತ್ತಿರವಿದೆ)ಎಂದು ಒಂದು ಅಭಿಪ್ರಾಯ. ಹೇಮಗ್ರಾಮ(ಪೊನ್ನೂರ)ದ ಹತ್ತಿರ ನೀಳಗಿರಿ ಗುಡ್ಡವಿದೆ. ಗುಡ್ಡದ ಮೇಲೆ ಕುಂದಕುಂದಾಚಾರ್ಯನ ಪಾದುಕೆಗಳನ್ನು ಈಗಲೂ ಕಾಣಬಹುದು. (ಜೈನಧರ್ಮ ಹಾಗೂ ಕರ್ನಾಟಕ ಸಂಸ್ಕೃತಿ PP 66–67) ಪ್ರಾಚೀನ ಕರ್ನಾಟಕವು ಹೆಚ್ಚು ವಿಸ್ತಾರವಾಗಿದ್ದು ಮೈಸೂರು ದಕ್ಷಿಣದಲ್ಲಿರುವ ಸೇಲಂ ಜಿಲ್ಲೆಯವರೆಗೆ ಮುಟ್ಟಿತ್ತು. ಆದರೆ ಇಂದ್ರನಂದಿಯು ತನ್ನ ಶ್ರುತಾವತಾರದಲ್ಲಿ, ಅವನು ಕುಂದುಕುಂದಪುರದ ಆಚಾರ್ಯನೆಂದು ಹೇಳಿದ್ದಾನೆ. ಅವನಿಗೆ ಕುಂದಕುಂದಪುರದ ಆಚಾರ್ಯನೆಂದೂ ಜನಪ್ರಿಯ ಹೆಸರು ಬಂದಿರಬಹುದು. ಕರ್ನಾಟಕದಲ್ಲಿ ಊರುಗಳ ಹೆಸರಿನಿಂದ ಆಚಾರ್ಯರನ್ನು ಕರೆಯುವ ಉದಾಹರಣೆಗಳಿವೆ. ವಟ್ಟಕೇರ (ಬೆಟಗೇರಿ). ಶಿವಕೋಟ್ಯಾಚಾರ್ಯ ಮುಂತಾದವುಗಳು ಈ ರೀತಿಯ ಹೆಸರುಗಳಾಗಿವೆ. (ಮುಂದೆ ನೋಡಿರಿ) ಶ್ರುತಾವತಾರದಲ್ಲಿ ಇಂದ್ರನಂದಿಯು ಹೇಳಿದ ಕುಂದಕುಂದಪುರವು (ಕೊಂಡಕೊಂಡಪುರವು) ಈಗಿನ ಆಂಧ್ರಪ್ರದೇಶದಲ್ಲಿರುವ ಅನಂತಪುರ ಜಿಲ್ಲೆಯ ಗೂಟಿ ತಾಲೂಕು. ಆಗಿನ ಪ್ರಾಚೀನ ಕರ್ನಾಟಕದಲ್ಲಿರುವ ಪುರವು) ಕೋನಕುಂಡ್ಲ (ಅದರ ಕನ್ನಡ ರೂಪ ಕೊಂಡಕುಂದಿ)ವೆಂದು ಡಾ. ಪಿ. ಬಿ. ದೇಸಾಯಿಯವರು ಗುರುತಿಸಿದ್ದಾರೆ. (ಮಿಥಿಕ್ ಸೊಸಾಯಿಟಿ ಜರ್ನಲ್ (Vol.XLVI). ಕುಂದಕುಂದ (ಕುಂದ(ಣ)–ಹೇಮ, ಕುಂದ–ಗುಡ್ಡ)ವೂ ಹೇಮಗ್ರಾಮವೇ. ಮೂಲದಲ್ಲಿ

ಕುಂದಕುಂದ, ಅಂದ್ರಕೋಣಕುಂಡ್ಲ (ಕನ್ನಡ ರೂಪ ಕೊಂಡಕುಂದಿ ಎಂಬುದು ಜನರ ಬಾಯಿಮಾತಿನಲ್ಲಿದೆ)ದವನಾಗಿದ್ದು ತಾನು ಸಂಚಾರ ಮಾಡಿದಲ್ಲೆಲ್ಲ ಅದೇ ಹೆಸರಿನ ಉಪವಸತಿಗಳನ್ನು ಅಸ್ತಿತ್ವದಲ್ಲಿ ತಂದಿರಬಹುದು. ಸೇಲಂ ಜಿಲ್ಲೆಯ ಪೊನ್ನೂರ (ಹೇಮಗ್ರಾಮ)ವೂ ಇಂತಹ ಒಂದು ಉಪವಸತಿಯಾಗಿರಬಹುದಲ್ಲವೇ ? ಕುಂದ ಕುಂದಾಚಾರ್ಯನು ಕುಂದಕುಂದ(ಕೋಣಕುಂಡ್ಲ)ದವನಾಗಲಿ ಪೊನ್ನೂರದವನಾಗಲಿ. ಕರ್ನಾಟಕದವನೆಂಬುದು ನಿಶ್ಚಿತ.

ಅವನ ಜನ್ಮ ವರುಷ ಕ್ರಿ. ಶ. ಪೂ. ೫೨. ಅವನು ಸ್ವಾಮಿ ಪಟ್ಟವನ್ನು ಪಡೆದು ಕ್ರಿ.ಶ. ಪೂ. ೮. ಅವನು ಥೊಂಡಿಮುಂಡಳಿದವನು. ಪ್ರವಚನಸಾರ. ಪಯಮಸಾರ ಮುಂತಾದವುಗಳನ್ನು ತನ್ನ ರಾಜ ಶಿಷ್ಯನಾದ ಶಿವಕುಮಾರ ಮಹಾರಾಜನ ಉಪಯೋಗಕ್ಕಾಗಿ ಬರೆದನೆಂದು ಹೇಳುವರು. ಈ ಶಿವಕುಮಾರನು ಯಾರು ? ಎಂಬುದನ್ನು ನಿಶ್ಚಿತವಾಗಿ ಹೇಳಲಿಕ್ಕಾಗದು. ಅವನು ಕದಂಬವಂಶದ ಶಿವಮೃಗೇಶ ಮಹಾರಾಜನೆಂದು ಕೆ. ಬಿ. ಪಾಠಕರು ಅಭಿಪ್ರಾಯ ಪಡುತ್ತಾರೆ. (ಇಂಡಿಯನ್ ಆ್ಯಂಟಿಕ್ವರಿ Vol. XIV.p.15). ಕದಂಬರು ಮೈಸೂರ ಪಶ್ಚಿಮ ಭಾಗವನ್ನು ಮೂರನೆಯ ಶತಮಾನದಿಂದಲೂ ಆಳುತ್ತಿದ್ದರು. ಈ ಶಿವಕುಮಾರನು ಪಲ್ಲವ ಶಿವಸ್ಕಂಧವರ್ಮ ಮಹಾರಾಜನು ಎಂದೂ ಇನ್ನೊಂದು ಮತ. ಪಲ್ಲವರು ಪುರಾತನ ರಾಜರಾಗಿದ್ದು ಅಂಧ್ರ ಭೃತ್ಯರಿಗೆ ಸಂಬಂಧಿತರಾಗಿದ್ದರು. ಕುಂದಕುಂದಾಚಾರ್ಯನು ಕ್ರಿ.ಶ. ಪೂ. ೪೯ ಅಥವಾ ಕ್ರಿ.ಶ.ಪೂರ್ವ ಮೊದಲನೆಯ ಶತಮಾನಕ್ಕೆ ಸೇರಿದವನೆಂದು ಕರ್ನಾಟಕ ಪಟ್ಟಾವಲಿಯಿಂದ ಗೊತ್ತಾಗುವುದು (ಜೈನಧರ್ಮ ಹಾಗೂ ಕರ್ನಾಟಕ ಸಂಸ್ಕೃತಿ pp. 66–67). ಕುಂದಕುಂದನು ಕುಂದಕುಂದಪುರದವನಾಗಿದ್ದು ಉಪಲಬ್ಧವಿರುವ ಎಲ್ಲ ಆಧಾರಗಳ ಮೇಲಿಂದ ಅವನು ಕ್ರಿ.ಶ. ೧ನೆಯ ಶತಮಾನಕ್ಕೆ ಸೇರಿದವನೆಂದು ಇನ್ನೊಂದು ಅಭಿಪ್ರಾಯ (ಪ್ರವಚನಸಾರ ಉಪಾಧ್ಯೆಯವರ ಪ್ರಸ್ತಾವನೆ pp. XX ii-iii). ಅವನ ಗ್ರಂಥದಲ್ಲಿ ದೊರೆಯುವ ಪ್ರಾಕೃತ ಭಾಷೆಯ ರೂಪಗಳು ಇದನ್ನು ಸಮರ್ಥಿಸುತ್ತವೆ. ಯಾವ ಅಭಿಪ್ರಾಯವನ್ನು ಗಮನಿಸಿದರೂ ಅವನು ಕ್ರಿ.ಶ. ೧ನೆಯ ಶತಮಾನಕ್ಕೆ ಸೇರಿದವನೆಂದು ಹೇಳಲು ಅಡ್ಡಿಯಿಲ್ಲ.

ಕಾವ್ಯಗಳು : ಅವನು ವಿಪುಲ ಶಾಸ್ತ್ರೀಯ ಹಾಗೂ ಧಾರ್ಮಿಕ ಸಾಹಿತ್ಯ ಗ್ರಂಥಗಳನ್ನು ರಚಿಸಿದ್ದಾನೆ. ಗ್ರಂಥಗಳಲ್ಲಿ ಉಪಯೋಗಿಸಿದ ಭಾಷೆ ಶೌರಸೇನಿ. ಅವನು ರಚಿಸಿದ ಗ್ರಂಥಗಳ ಪಟ್ಟಿ.

೧) ಭಕ್ತಿಗಳು ೨) ೮೪ ಪಾಹುಡಗಳು ೩) ಷಟ್ಖಂಡಾಗಮಟೀಕಾ ೪) ಬಾರಸ ಅಣುವೇಕ್ಖಾ ೫) ಸಮಯಸಾರ ೬) ಪಂಚಾಸ್ತಿಕಾಯಸಾರ ೭) ಪ್ರವಚನಸಾರ, ಮುಂತಾದವು.

ಅವನು ರಚಿಸಿದ ಗ್ರಂಥಗಳಲ್ಲಿ ಪಂಚಾಸ್ತಿಕಾಯ. ಸಮಯಸಾರ ಮತ್ತು ಪ್ರವಚನಸಾರಗಳು ಬಹು ಮಹತ್ವವಾದವುಗಳು. ಅವುಗಳು ನಾಟಕತ್ರಯ ಅಥವಾ

ಪ್ರಾಭೃತ (ಪಾಹುಡ) ತ್ರಯಗಳೆಂದು ಗ್ರಹಿಸಲ್ಪಟ್ಟಿವೆ. ವೇದಾಂತ ತತ್ತ್ವಜ್ಞಾನದಲ್ಲಿ ಪ್ರಸ್ಥಾನತ್ರಯಗಳಿಗೆ ಇರುವ ಸ್ಥಾನಮಾನಗಳು, ಅವುಗಳಿಗೆ ಜೈನ ತತ್ತ್ವಜ್ಞಾನದಲ್ಲಿದೆ.

ಪ್ರಾಕೃತಸಾಹಿತ್ಯದಲ್ಲಿ ಕುಂದಕುಂದಾಚಾರ್ಯನ ಸ್ಥಾನ: ಪ್ರವಚನಸಾರ, ಪಂಚಾಸ್ತಿಕಾಯ, ಸಮಯಸಾರಗಳು ನಾಟಕತ್ರಯವೆಂದು ಕರೆಯಲ್ಪಟ್ಟಿವೆ. ಆದರೆ ಅವುಗಳಲ್ಲಿ ಸಮಯಸಾರಕ್ಕೆ ನಾಟಕವೆಂಬ ಪದವು ಅನ್ವರ್ಥಕವಾದದ್ದು. ಸಂಸಾರವೆಂಬ ನಾಟಕದಲ್ಲಿ ಜೀವ ಮತ್ತು ಅಜೀವಗಳು ಆಸ್ರವದ ರೂಪವನ್ನು ನಟಿಸುವ ಪಾತ್ರಗಳು. ಅಮೃತಚಂದ್ರನು ಈ ನಾಟಕವೆಂಬ ಪದವನ್ನು ಉಪಯೋಗಿಸಿರುವನೆಂದೂ ಕಂಡು ಬರುವುದು. ಪ್ರಾಸ್ತಾವಿಕ ಭಾಗಕ್ಕೆ ಪೂರ್ವರಂಗವೆಂದು ಕರೆದು ಗ್ರಂಥವನ್ನು ಅನೇಕ ಭಾಗಗಳಲ್ಲಿ ವಿಭಾಗಿಸಿದ್ದಾನೆ. ನಾಟಕ ಪಾರಿಭಾಷಿಕ ಶಬ್ದಗಳಾದ "ನಿಷ್ಕ್ರಾಂತಃ" "ಪ್ರವಿಶತಿ"ಗಳನ್ನು ಪ್ರತಿಯೊಂದು ಪ್ರಕರಣದ ಪ್ರಾರಂಭದಲ್ಲಿ ಮತ್ತು ತುದಿಯಲ್ಲಿ ಉಪಯೋಗಿಸಿದ್ದಾನೆ. ಜಿನಸೇನನೂ ಕೂಡ ತನ್ನ ಟೀಕೆಯಲ್ಲಿ ನಾಟಕೀಯ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಿದ್ದಾನೆ. ಆದರೆ ಅವನು ಭಾಗಗಳನ್ನು ಅಧಿಕಾರಗಳೆಂದೇ ಕರೆದಿದ್ದಾನೆ. ಕುಂದಕುಂದಾಚಾರ್ಯನ ಗ್ರಂಥಗಳಲ್ಲಿ ಕೆಲವು ಎಡೆಯಲ್ಲಿ ಕಥಾಂಶಗಳು ಸಿಗುವವು. ಅಲ್ಲದೆ ಈ ಕಥಾಂಶಗಳು ಸಾಹಿತ್ಯ ಗುಣಗಳಿಂದ ಕೂಡಿದ್ದು ಬೀಜರೂಪವಾಗಿ ಸಂಕ್ಷಿಪ್ತವಾಗಿವೆ. ಆದರೂ ಅವು ಮುಂದಿನ ಕಥಾಸಾಹಿತ್ಯಕ್ಕೆ ಮಾದರಿಯಾಗಿರಲು ಸಾಕು. ಕುಂದಕುಂದಾಚಾರ್ಯನ ಪ್ರಭಾವ ವರ್ಚಸ್ಸು ಜೈನ ತತ್ತ್ವಜ್ಞಾನ ಮತ್ತು ಧಾರ್ಮಿಕ ಗ್ರಂಥಗಳ ಮೇಲೆಯಷ್ಟೇಯಲ್ಲದೆ, ಪ್ರಾಕೃತ ಹಾಗೂ ಕನ್ನಡ ಸಾಹಿತ್ಯದ ಮೇಲೆ ಅಪಾರವಾಗಿದೆ. (ಮುಂದೆ ನೋಡಿರಿ) ನಾಟಕತ್ರಯಗಳ ಮೇಲೆ ಬಾಲಚಂದ್ರನು ಕನ್ನಡ ಟೀಕೆಯನ್ನು ರಚಿಸಿದ್ದಾನೆ. ಜಿನಸೇನನು ತನ್ನ ತಾತ್ಪರ್ಯವೃತ್ತಿಯನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ.

೪. ಸರ್ವನನ್ದಿ (ಕ್ರಿ. ಶ. ೫ನೆಯ ಶತಮಾನದ ಪೂರ್ವಭಾಗ)

ಸರ್ವನನ್ದಿಯು ಪ್ರಾಕೃತಕವಿ. ಮರ್ಕರಾ(ಮಡಕೇರಿ)ಶಾಸನದಲ್ಲಿ ಕುಂದಕುಂದಾನ್ವಯದ ಆರುಜನ ಜೈನಮುನಿಗಳ ಹೆಸರುಗಳಿವೆ. ಅವುಗಳಲ್ಲಿ, ಅಭಯನನ್ದಿ, ಜಯನನ್ದಿ, ಗುಣನನ್ದಿ, ಚಂದ್ರನನ್ದಿ ಎಂದು ನಾಲ್ಕು ನನ್ದ್ಯಂತ ಹೆಸರುಗಳಿವೆ. ಸರ್ವನನ್ದಿಯ ಹೆಸರೂ ಕೂಡ ಅಂತಹ ನನ್ದ್ಯಂತವೇ ಆಗಿದೆ. ಚಂದ್ರ ನನ್ದಿಯು ಯಾಪನೀಯ ಸಂಘದವನು; ಅದರಂತೆ ಸರ್ವನನ್ದಿಯು ಯಾಪನೀಯನೂ ಜೈನ ಮುನಿಯೂ ಆಗಿರಲು ಸಾಕು. ಅಲ್ಲದೆ ಕರ್ನಾಟಕದವನೂ ಆಗಿರಬೇಕು. ಯಾಕೆಂದರೆ ಯಾಪನೀಯ ಸಂಘವು ಕರ್ನಾಟಕಮೂಲವುಳ್ಳದ್ದು ಆಗಿದೆ. ಮತ್ತು ಅವನ ಕಾವ್ಯ ಲೋಕವಿಭಾಗವು ಕರ್ನಾಟಕದಲ್ಲಿಯೇ ರಚಿತವಾದದ್ದೆಂದು ಡಾ. ಎ. ಎನ್. ಉಪಾಧ್ಯಾಯರು ಅಭಿಪ್ರಾಯಪಟ್ಟಿದ್ದಾರೆ. (ಕರ್ನಾಟಕ ಥ್ರೂ ದಿ ಏಜಿಸ್ P. 475). ಚಂದ್ರನನ್ದಿಯು ಮರ್ಕರಾ ದಾನಪತ್ರ (ಶಕ.೩೮೮ ಅಂದರೆ ಕ್ರಿ.ಶ.೪೬೬)ದಲ್ಲಿ

ಉಕ್ತನಾದ್ದರಿಂದ ಅವನು ಕ್ರಿ. ಶ. ೫ನೆಯ ಶತಮಾನದ ಪೂರ್ವಭಾಗದಲ್ಲಿ ಇದ್ದಿರಬೇಕೆಂದು ವಿದಿತವಾಗುವುದು. ಅದರಂತೆ ಸರ್ವನನ್ದಿಯೂ ಸುಮಾರು ಅದೇ ಕಾಲದಲ್ಲಿದ್ದಿರಬೇಕು. ಸರ್ವನನ್ದಿಯ ಲೋಕವಿಭಾಗವು ಮರ್ಕರಾ ದಾನಪತ್ರಕ್ಕಿಂತ ೮ ವರುಷ ಮೊದಲು ರಚಿತವಾಗಿದೆ. (ನಾಥುಪ್ರೇಮಿ ಜೈನಧರ್ಮ ಔರ ಇತಿಹಾಸ P.2) ಅನರ ಕಾಲವು ಶಕ. ೩೮೦ (ಕ್ರಿ. ಶ. ೪೫೮) ಎಂದು ಉಳಿದ ವಿದ್ವಾಂಸರೂ ಅಭಿಪ್ರಾಯಪಡುತ್ತಾರೆ. ಆದ್ದರಿಂದ ಸರ್ವನನ್ದಿಯು ಕ್ರಿ. ಶ. ೫ನೆಯ ಶತಮಾನದ ಪೂರ್ವಭಾಗದ ಕವಿಯೆಂದು ಹೇಳಲು ಅಡ್ಡಿಯಿಲ್ಲ.

ಕಾವ್ಯ : ಅವನು ರಚಿಸಿದ ಪ್ರಾಕೃತಕಾವ್ಯ ಲೋಯುವಿಭಾಗ (ಲೋಕ ವಿಭಾಗ). ಒಂದು ಜೈನ ಮತಾನುಸಾರವಾಗಿ ಬರೆದ ಒಂದು ಸೃಷ್ಟಿಶಾಸ್ತ್ರ (Cosmography). ಅದು ಈಗ ಉಪಲಬ್ಧವಿಲ್ಲ.

ಸಾಹಿತ್ಯದಲ್ಲಿ ಸರ್ವನನ್ದಿಯ ಸ್ಥಾನ: ಸರ್ವನನ್ದಿಯ ಲೋಕವಿಭಾಗ (ಲೋಯುವಿಭಾಗ)ವು (ಯತಿವೃಷಭನ ತಿಲೋಯುಪಣತ್ತಿಯೊಡನೆ) ಜೈನ ಕರಣಾನುಯೋಗಶಾಸ್ತ್ರಗಳ ಅಸ್ತಿವಾರ ಹಾಕಿದೆಯೆಂದು ಹೇಳಬಹುದು. ನಂತರ ಪದ್ಮನನ್ದಿಯ ಜಂಬೂದ್ವೀಪಪಣತ್ತಿ ಮುಂತಾದ ಗ್ರಂಥಗಳು ಬಂದವು. ಹತ್ತನೆಯ ಶತಮಾನದಲ್ಲಿ ಚಾವುಂಡರಾಯನ ಗುರು ನೇಮಿಚಂದ್ರನು ತನ್ನ ತ್ರಿಲೋಕಸಾರವೆಂಬ ಗ್ರಂಥವನ್ನು ಲೋಕವಿಭಾಗವನ್ನು ಅನುಸರಿಸಿಯೇ ರಚಿಸಿದ್ದಾನೆ,

೫. ಯತಿವೃಷಭ (ಕ್ರಿ. ಶ. ೫ನೆಯ ಶತಮಾನದ ದ್ವಿತೀಯ ಭಾಗ)

ತಿಲೋಯಪಣತ್ತಿ (ತ್ರಿಲೋಕ ಪ್ರಜ್ಞಪ್ತಿ) ಯ ಕರ್ತೃವು ಯಾರು ಎಂಬ ಬಗ್ಗೆ ಸ್ಪಷ್ಟವಾದ ಉಲ್ಲೇಖಗಳಿಲ್ಲ. ಆದರೂ ತಿಲೋಯಪಣತ್ತಿಯಲ್ಲಿರುವ ೭೬ನೆಯ ಗಾಥಾದಲ್ಲಿ ಜಿನವರ ವೃಷಭ (ಪ್ರಥಮ ತೀರ್ಥಂಕರ)ನನ್ನು ನಮಸ್ಕರಿಸುವಾಗ ಅಲ್ಲಿ ಕೊಟ್ಟಿರುವ ವಿಶೇಷಣಗಳಿಂದ ತನ್ನ ಹೆಸರನ್ನು 'ಜತಿವಸಹ'(ಯತಿವೃಷಭ) ಎಂದು ಹೇಳಿದಂತೆ ಭಾಸವಾಗುತ್ತದೆ. ಮತ್ತು ಶ್ರುತಾವತಾರದಲ್ಲಿ ಇಂದ್ರನನ್ದಿಯು ಯತಿವೃಷಭನನ್ನು ತಿಲೋಯಪಣತ್ತಿಯ ಕರ್ತೃವೆಂದು ಉಲ್ಲೇಖಿಸಿದ್ದಾನೆ. ಮತದಿಂದ ಅವನು ಜೈನನಾಗಿದ್ದು ದಿಗಂಬರ ಸಂಪ್ರದಾಯಕ್ಕೆ ಸೇರಿದವನಾಗಿದ್ದಾನೆ. ಅವನು ದಾಕ್ಷಿಣಾತ್ಯನೂ. ಕರ್ನಾಟಕದವನೂ ಆಗಿರಲು ಸಾಕು. ಅವನ ತಿಲೋಯಪಣ-ತ್ತಿಯು ಕರ್ನಾಟಕದಲ್ಲಿಯೇ ರಚಿತವಾಗಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ (ಉಪಾಧ್ಯೆ. ಕರ್ನಾಟಕ ಥ್ರೂ ದಿ ಏಜಿಸ್ P. 475).

ಕಾವ್ಯ: ತಿಲೋಯಪಣತ್ತಿಯೆಂಬುದು ಅವನು ರಚಿಸಿದ ಒಂದು ಗ್ರಂಥ. ಅಲ್ಲದೆ ಅವನು ಕಷಾಯ ಪ್ರಾಭೃತವೆಂಬ ದ್ವಿತೀಯ ಶ್ರುತಸ್ಕಂಧರ ಚೂರ್ಣಿಕೆಯ ಕರ್ತೃವೆಂದೂ. ಇಂದ್ರನನ್ದಿಯು ತನ್ನ ಶ್ರುತಾವತಾರದಲ್ಲಿ ಹೇಳಿದ್ದಾನೆ. ಕರಣ ಸೂತ್ರ (ಈಗ ಉಪಲಬ್ಧವಿಲ್ಲ)ವು ಯತಿವೃಷಭನ ಗಣಿತ ಸಂಬಂಧಿ ಇನ್ನೊಂದು ಗ್ರಂಥ.

ಕರಣ ಸೂತ್ರವೆಂದರೆ ಗಣಿತ ಫಾರ್ಮುಲಾ(formula) — ಸಂಕ್ಷಿಪ್ತ ಸೂತ್ರ (ನಾಥುಪ್ರೇಮಿ–ಜೈನಧರ್ಮ ಔರ ಇತಿಹಾಸ P. 8).

ಯತಿವೃಷಭನ ತಿಲೋಯಪಣತ್ತಿಯ ವಿಮರ್ಶೆ : ತಿಲೋಯಪಣತ್ತಿಯು (ತನ್ನ ಹೆಸರಿನಂತೆ) ಮೂರು ಲೋಕಗಳ ಬಗ್ಗೆ ಮಾತ್ರವಾಗಿರದೆ, ಮೂರು ಲೋಕಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಒಳಗೊಂಡಿದೆ. ವೈದಿಕ ಸಂಪ್ರದಾಯದ ಲೋಕ ವಿಭಾಗಗಳ ಬಗ್ಗೆ ವರ್ಣನೆಯು ಭಾಗವತದ ಪಂಚಮಸ್ಕಂಧ(XVI ಅಧ್ಯಾಯ)ದಲ್ಲಿ ವಿಶದವಾಗಿ ಕೊಡಲ್ಪಟ್ಟಿದೆ. (ಭುವನಕೋಶ ಪರಿಭ್ರಮಣಂ ಎಂಬ ಅಧ್ಯಾಯವನ್ನು ನೋಡಿರಿ) ಅಲ್ಲದೆ ಅದೇ ಪಂಚಮಸ್ಕಂಧದಲ್ಲಿ ನಾಭಿ, ಋಷಭ, ಭರತ–ಈ ತ್ರಿಕೂಟವು ವೈಷ್ಣವ ಶಿರೋಮಣಿಯಾದ ಧ್ರುವನ ತಂದೆ ಉತ್ತಾನಪಾದರಾಜನ ಭ್ರಾತೃವಂಶದಲ್ಲಿ ಮೆರೆಯುವ, ಅದೇ ವೃಷಭದೇವನೇ ಜೈನರ ಆದಿತೀರ್ಥಂಕರನೆಂಬುದನ್ನು ಲಕ್ಷಿಸಬೇಕು. (ಜೈನಧರ್ಮ. ಪು. ೧೮).

ಸಾಹಿತ್ಯದ ಮೇಲೆ ಯತಿವೃಷಭನ ಪ್ರಭಾವ: ಸರ್ವನನ್ದಿಯ ಲೋಕವಿಭಾಗ ದಂತೆ ತಿಲೋಯಪಣತ್ತಿಯು ಕರಣಾನುಯೋಗ ಗ್ರಂಥವೆಂದು ಹಿಂದೆಯೇ ಹೇಳಿದ್ದೇವೆ. ಪ್ರಾಕೃತ ಗಾಥಾಬದ್ಧ ಮತ್ತು ದಿಗಂಬರ ಸಂಪ್ರದಾಯದಕ್ಕೆ ಸೇರಿದ, ಇಂತಹ ಎಷ್ಟು 'ಗ್ರಂಥ'ಗಳಿವೆಯೋ ಅವೆಲ್ಲವುಗಳು ಯತಿವೃಷಭನ ತಿಲೋಯಪಣತ್ತಿಯನ್ನು ಆಧಾರ ವಾಗಿಟ್ಟುಕೊಂಡು ರಚಿತವಾದವುಗಳು. ಮುಂದೆ ಹತ್ತನೆಯ ಶತಮಾನದಲ್ಲಿ ಚಾವುಂಡ ರಾಯನ ಗುರುವಾದ ನೇಮಿಚಂದ್ರನು ತನ್ನ ಗೊಮ್ಮಟಸಾರದಲ್ಲಿ ಜೀವ-ಕರ್ಮಗಳ ವಿಚಾರವನ್ನು ಸಂಕ್ಷೇಪವಾಗಿ ಕೊಟ್ಟು ಲೋಕಗಳ ವರ್ಣನೆಯನ್ನು, ಯತಿವೃಷಭನನ್ನು ಅನುಸರಿಸಿ ತನ್ನ ಲೋಕಸಾರದಲ್ಲಿ ಸಂಕ್ಷೇಪವಾಗಿ ಸಂಗ್ರಹರೂಪದಲ್ಲಿ ಕೊಟ್ಟಿದ್ದಾನೆ. (ಜೈನಧರ್ಮ. ಪು. ೬೨೬).

೬ ಶಿವಾರ್ಯ (ಶಿವಕೋಟ್ಯಾಚಾರ್ಯ)ಕ್ರಿ.ಶ. ೯–೧೦ನೆಯ ಶತಮಾನ

"ಈ ಪೇೞ್ದ ಪತ್ತೊಂಬತ್ತು ಕಥೆಗಳ್ ಶಿವಕೋಟ್ಯಾಚಾರ್ಯರ್ ಪೇೞ್ದ ವಡ್ಡಾರಾಧನೆಯ ಕವಚವು ಮಂಗಳಂ ಮಹಾಶ್ರೀ"

ವಡ್ಡಾರಾಧನೆ (೨) ಪ್ರತಿ[೧]

ಜಿನಸೇನನು ತನ್ನ ಆದಿಪುರಾಣ (I, 49)ದಲ್ಲಿ ಶಿವಾರ್ಯನ ಹೆಸರನ್ನು ತೆಗೆದು ಕೊಂಡಿದ್ದಾನೆ. ಶ್ರೀಚಂದ್ರನು ಕಥಾಕೋಶದಲ್ಲಿ ಇವನಿಗೆ ಶಿವಕೋಟಿಯೆಂದು ಕರೆದಿ ದ್ದಾನೆ. ಅವನನ್ನು ಶಿವಕೋಟ್ಯಾಚಾರ್ಯನೆಂದೂ ಕರೆಯುತ್ತಿದ್ದಂತೆ ಕಾಣುತ್ತದೆ. ಅವನಿಗೆ ಆರ್ಯಶಿವನೆಂದೂ ಶಿವಗುಪ್ತನೆಂದೂ ಬೇರೆಬೇರೆ ನಾಮಧೇಯಗಳು ಇದ್ದ ವೆಂದು ಕಂಡುಬರುವುದು. ಅವುಗಳಲ್ಲಿ ಶಿವನೆಂಬುದು ಅವನ ಸಂಕ್ಷಿಪ್ತ ನಾಮವೂ

೧. ಪರಿಷತ್ ಪತ್ರಿಕೆ—1939 ವಡ್ಡಾರಾಧನೆ—ಅಂಕ 1 ನೋಡಿರಿ.

ಆಗಿತ್ತು. ಶಿವಾರ್ಯನು 'ಪಾಣಿದಲಭೋಜಿ' (ಕೈಯಲ್ಲಿ ಅನ್ನವನ್ನು ತಿನ್ನುವವನು) ಎಂದು ಪ್ರಶಸ್ತಿಯನ್ನು ಪಡೆದಿದ್ದಾನೆ. ಅವನು ಜಿನನನ್ದಿ, ಸರ್ವಗುಪ್ತ ಮಿತ್ರನನ್ದಿ — ಇವರಲ್ಲಿ ಧರ್ಮಶಾಸ್ತ್ರವನ್ನು ಅಭ್ಯಾಸಮಾಡಿದನು. ಶಿವಾರ್ಯನು ಮೊದಲು ಶೈವನಿದ್ದು ಶಿವಲಿಂಗವು ಚಂದ್ರಪ್ರಭ ಮೂರ್ತಿಯಾಗಿ ಪರಿವರ್ತನ ಹೊಂದಿದ್ದನ್ನು ನೋಡಿ, ಜೈನಧರ್ಮಕ್ಕೆ ಮತಾಂತರ ಹೊಂದಿದನೆಂದು ಪ್ರಭಾಚಂದ್ರ ಕಥಾಕೋಶದಲ್ಲಿ ಹೇಳಿದೆ. ಎಲ್ಲ ಧಾರ್ಮಿಕ ಜ್ಞಾನವನ್ನು ಪಡೆದು ಜೈನ ಸನ್ಯಾಸಿಯಾಗಿ ಲೋಕಾಚಾರ್ಯನ ೮೪ಸಾವಿರ ಶ್ಲೋಕಗಳುಳ್ಳ 'ಆರಾಧನೆ'ಯನ್ನು ಸಂಕ್ಷೇಪಗೊಳಿಸಿ ಭಗವತೀಆರಾಧನೆಯನ್ನು ರಚಿಸಿದನೆಂದೂ ಗೊತ್ತಾಗುವುದು. ಭಗವತೀಆರಾಧನೆಯು ಆರಾಧನಾ ಸಾಹಿತ್ಯಪ್ರಕಾರಕ್ಕೆ ಸೇರಿದ ಗ್ರಂಥ. ಅದರಲ್ಲಿ ಜೈನಧರ್ಮ ಪ್ರಕ್ರಿಯೆಗಳೂ ಶಾಸ್ತ್ರೀಯ ವಿಷಯಗಳೂ ಬರುವವು. ಅವರಲ್ಲಿ ೧೭ ತರಹದ ಮರಣಗಳಲ್ಲಿ ಮೂರು ಮರಣಗಳು ಸ್ತುತಿಗೆ ಅರ್ಹವಾಗಿವೆಯೆಂದು ಮುಂತಾದ ವಿಷಯಗಳೂ ಬರುವವು. ಶಿವಾರ್ಯನು ಪಟ್ಟಕೇರ ಮತ್ತು ಅಪರಾಜಿತ ಪರಂಪರೆಯವನಾಗಿದ್ದು ಯಾಪನೀಯ ಸಂಘಕ್ಕೆ ಸೇರಿದ ದಿಗಂಬರ ಜೈನನಾಗಿದ್ದಾನೆ. (ನಾಥುಪ್ರೇಮಿ. ಜೈನಧರ್ಮ ಔರ ಇತಿಹಾಸ p. 68). ಅವನ ಕಾಲಾವಧಿಯನ್ನು ನಿಶ್ಚಯಿಸಲು ಸಾಕಷ್ಟು ಆಧಾರಗಳಿಲ್ಲ. ಆದರೂ ಇವನು ಜಿನಸೇನನಿಂದ ಆದಿಪುರಾಣದಲ್ಲಿ ನಿರ್ದೇಶಿಸಲ್ಪಟ್ಟಿದ್ದರಿಂದ ಜಿನಸೇನ (ಕ್ರಿ.ಶ. ೯ನೆಯ ಶತಮಾನದ ಆದಿಭಾಗ)ನಿಗಿಂತಲೂ ಮೊದಲು ಇವನು ಇರಬೇಕೆಂದು ಮಾತ್ರ ಹೇಳಬಹುದು. ಶಿವಕೋಟ್ಯಾಚಾರ್ಯನ (ಶಿವಾರ್ಯನ) ಭಗವತೀಆರಾಧನೆಯ ಮೇಲೆ ವಡ್ಡಾರಾಧನೆಯು (ಅದಕ್ಕೆ 'ವಡ್ಡಾರಾಧನೆ' (= ಮಹದಾರಾಧನೆ) ಎಂಬ ಹೆಸರೂ ಇತ್ತು) ಕನ್ನಡದಲ್ಲಿ ಕವಚಗ್ರಂಥವಾಗಿದೆ. ವಡ್ಡಾರಾಧನೆಯ ಕಾಲವು ಕ್ರಿ. ಶ. ೯–೧೦ನೆಯ ಶತಮಾನ ಆಗಿದ್ದುದರಿಂದ ಶಿವಾರ್ಯನು ೧ನೆಯ ಶತಮಾನದವನೆಂದು ಹೇಳಲುಅಡ್ಡಿಯಿಲ್ಲ. ವಡ್ಡಾರಾಧನೆಯು ಭಗವತೀಆರಾಧನೆಯ ಕನ್ನಡ ರೂಪಾಂತರವೆಂದೂ, ಭಗವತೀಆರಾಧನೆಯನ್ನು ರಚಿಸಿದ ಪ್ರಾಕೃತಕವಿಯೇ ಅದನ್ನು ಕನ್ನಡದಲ್ಲಿಬರೆದನೆಂದೂ ವಿದಿತವಾಗುವುದು (ನಾಥುಪ್ರೇಮಿ–ಜೈನಧರ್ಮ ಔರ ಇತಿಹಾಸ p.21-22) 'ವಡ್ಡಾರಾಧನೆ'ಯು 'ಭಗವತೀಆರಾಧನೆ'ಗೆ ಸಮನಾರ್ಥಕವಾಗಿದ್ದು 'ವಡ್ಡ' ಶಬ್ದವು "ಭಗವತ್" ಶಬ್ದದ ದೇಶೀ[೧] ಅಪಭ್ರಂಶ ಯಾಗಿರಬಹುದೇನೋ? ಹೇಮಚಂದ್ರನು ತನ್ನ ದೇಶೀಯ ನಾಮಮಾಲೆಯಲ್ಲಿ 'ವಡ್ಡ' ಇದು 'ದೇಶೀಯ'ವೆಂದು ಪರಿಗಣಿಸಿದ್ದಾನೆ. ವಡ್ಡಾರಾಧನೆಯಲ್ಲಿ ವಡ್ಡ ಶಬ್ದವು 'ಬೃಹತ್' = ಮಹತ್ (ದೊಡ್ಡ) ಇದರ ದೇಶೀ[೨]

---

೧. 'ಭಗವತ್' > ಬ್ರಅವತ್ > ವಅವತ > ವವತ್ > ವತ್ > ವಟ್ಟ > ವಡ್ಡ ಎಂದು ರೂಪಸಿದ್ಧಿಯನ್ನು ತೋರಿಸಬಹುದು.

೨. 'ಬೃಹತ್' > ಬಹತ್ > ವಹತ್ > ವಹಟ್ > ವಟ್ > ವಡ್ಡ ಎಂಬ ರೂಪಸಿದ್ಧಿಯೂ ಇದೆ. ಹರಿಷೇಣನು 'ಬೃಹತ್‌ಕಥೆ'ಯನ್ನು 'ವಡ್ಡಕಥಾ' ಎಂದು ಕರೆದು ತನ್ನ ಗ್ರಂಥವನ್ನು ರಚಿಸಿದ್ದಾನೆ.

ಯ ರೂಪವೂ ಆಗಿರಬಹುದು. ಭಗವತೀಆರಾಧನೆ ('ಭಗವದ್‌ಆರಾಧನಂ')ಯೆಂದರೆ ಪೂಜ್ಯವಾದ ಆರಾಧನೆ. ಅದರಂತೆ ವಡ್ಡಾರಾಧನೆ (ವಡ್ಡಾರಾಧನಂ) ಪೂಜ್ಯ (ವಾದ) ಅಥವಾ ಮಹಾ (ದೊಡ್ಡ) ಆರಾಧನೆಯೂ (ಮಹಾಸಮಾರಾಧನೆಯೂ) ಆಗಬಹುದು. ವಡ್ಡಾರಾಧನೆಯಲ್ಲಿಯ 'ವಡ್ಡ'[೬] (ಬೃಹತ್) (=ಮಹತ್) ಇದು ಬೃಹತ್‌ಕಥೆಯ ಜೈನಮತಾನುಸಾರ ರೂಪಾಂತರವಾಗಿರಬಹುದೇನೋ ಎಂಬ ಸಂಶಯವನ್ನು ಹುಟ್ಟಿಸುವಂತೆ ಇದೆ. ವಿದ್ವಾಂಸರು ವಿಚಾರಿಸಬೇಕು. ಶಿವಾರ್ಯನಿಗೆ ಶಿವಕೋಟ್ಯಾಚಾರ್ಯ ಎಂದು ಹೆಸರೂ ಇದ್ದಿತೆಂದು ಹಿಂದೆ ಹೇಳಿದ್ದೇವೆ. ಅವನು ಶಿವಕೋಟಿ ಊರಿನ ಆಚಾರ್ಯನಾಗಿರಬಹುದೋ? ಕರ್ನಾಟಕದಲ್ಲಿ ಶಿವಕೋಟಿ ಎಂಬ ಊರನ್ನು ಇಲ್ಲಿಯ ವರೆಗೆ ಗುರುತಿಸಲು ಸಾಧ್ಯವಾಗದಿದ್ದರೂ, ಶಿವಪುರ, ಶಿವಳ್ಳಿ ಎಂಬ ಊರುಗಳ ಹೆಸರುಗಳು ಅನೇಕವಿವೆ. ಭಗವತೀಆರಾಧನೆಯ ಕರ್ತೃವೂ ಮತ್ತು ವಡ್ಡಾರಾಧನೆಯ ಕರ್ತೃವೂ ಒಬ್ಬನೇ ಆಗಿದ್ದರೆ, ಶಿವಾರ್ಯನು ಕನ್ನಡ ಬಲ್ಲವನು ಮಾತ್ರವಲ್ಲ; ಕನ್ನಡಿಗನೂ ಆಗಿರಲು ಸಾಕು. ಅವನು ಉಭಯಭಾಷಾಪಂಡಿತನಾಗಿರಬೇಕು.

೭. ಜೋಇನ್ದು (ಕ್ರಿ.ಶ. ೬ನೆಯ ಶತಮಾನ)

ಕವಿಯ ಹೆಸರು ಯೋಗೀಂದು – ಪ್ರಾಕೃತರೂಪ ಜೋಇಂದು. ಅವನನ್ನು ಯೋಗಿಚಂದ್ರನೆಂದೂ ಕೆಲವೆಡೆಯಲ್ಲಿ ಯೋಗೀಂದ್ರನೆಂದೂ ಕರೆದಿರುವರು. ಅವನ ಚರಿತ್ರೆಯ ಬಗ್ಗೆ ಏನೂ ಗೊತ್ತಾಗುವುದಿಲ್ಲ. ಪರಮಾತ್ಮಪ್ರಕಾಶ (ಪರಮಪ್ಪಪಯಾಸು) ದಲ್ಲಿ ಅವನ ಹೆಸರನ್ನು 'ಜೋ ಇಂದು' ಎಂದು ಮಾತ್ರ ಕೊಟ್ಟಿದೆ. ಅದರಲ್ಲಿ ಬೇರೆ ಏನೂ ಬರುವುದಿಲ್ಲ. ಜಿನಸೇನನು ಪರಮಾತ್ಮಪ್ರಕಾಶದೊಳಗಿನ ಒಂದು ಶ್ಲೋಕದಲ್ಲಿ ಹೀಗೆ ಹೇಳಿದ್ದಾನೆ. "ತಥಾ ಯೋಗೀಂದ್ರ ದೇವೈರುಕ್ತಮ್" ಯೋಗೀಂದ್ರ ಎಂಬ ಸಂಸ್ಕೃತ ಹೆಸರು ಬಹು ಜನಪ್ರಿಯವಾದದ್ದೆಂದು ಮಾತ್ರ ಕಂಡುಬರುವುದು. ಅವನ ಕಾಲದ ಬಗ್ಗೆ ಏನನ್ನೂ ನಿಶ್ಚಿತವಾಗಿ ಹೇಳಲಿಕ್ಕಾಗದಿದ್ದರೂ, ಅವನ ಗ್ರಂಥಗಳಲ್ಲಿ ಮತ್ತು ಇತರ ಕಡೆಯಲ್ಲಿ ದೊರೆಯುವ ಆಧಾರಗಳ ಮೇಲಿಂದ ಅವನು ಬಹುತರವಾಗಿ

---

೬. 'ವಡ್ಡ' ಶಬ್ದದ ವ್ಯುತ್ಪತ್ತಿಯ ಬಗ್ಗೆ ಪರಿಷತ್ ಪತ್ರಿಕೆ ಏಪ್ರಿಲ್–ಜೂನ 1940 ಅಂಕೆ 2 P iii ನೋಡಿರಿ. ಅಲ್ಲಿ ಬೃಹತ್-ವಡ್ಡಗಳಲ್ಲಿ ಜನ್ಯಜನಕ ಸಂಬಂಧವಿಲ್ಲವೆಂದು ಪ್ರತಿಪಾದಿಸಿದ್ದು ಸಮಂಜಸವಲ್ಲ. ದೇಶೀಯಗಳು ಎರಡು ತರವಾಗಳು ೧. ದೇಶೀಯ(ತದ್ಭವ)ಶಬ್ದಗಳ ಸಂಬಂಧವನ್ನು ಸಂಸ್ಕೃತ ಶಬ್ದಗಳಿಗೆ ತೋರಿಸಲು ಬರುವ ಶಬ್ದಗಳು ಮೊದಲನೆಯ ವರ್ಗದವುಗಳು. ೨. ಕೆಲವು ದೇಶೀಯ ಶಬ್ದಗಳ (ತದ್‌ಭವಗಳ) ಸಂಬಂಧವನ್ನು ಸಂಸ್ಕೃತಕ್ಕೆ ತೋರಿಸಲು ಸುಲಭಸಾಧ್ಯವಿಲ್ಲದಿದ್ದರೂ ಅವುಗಳ ಸಂಬಂಧ ಸಂಸ್ಕೃತಕ್ಕೆ ಇಲ್ಲವೆಂದಲ್ಲ. ಅಂತಹ ದೇಶೀಯಗಳು ಎರಡನೆಯ ವರ್ಗದವು. (ಹೇಮಚಂದ್ರನ ದೇಶೀಯನಾಮಮಾಲಾ ಮತ್ತು ತ್ರಿವಿಕ್ರಮನ ಪ್ರಾಕೃತಶಬ್ದಾನುಶಾಸನಂ (III. 4. 72 ನೋಡಿರಿ. ಈ ವಿಷಯವನ್ನು ನಾನು ನನ್ನ Kannada language, its origin and development (p. 14) ದಲ್ಲಿ ವಿವರವಾಗಿ ಚರ್ಚಿಸಿದ್ದೇನೆ.

ಕ್ರಿ.ಶ. ೬ನೆಯ ಶತಮಾನದಲ್ಲಿ ಜೀವಿಸಿದ್ದನೆಂದು ತಾತ್ಪೂರ್ತಿಕವಾಗಿ ಹೇಳಬಹುದು (ಪರಮಪ್ಪಯಾಸು–ಉಪಾಧ್ಯೆಯವರ ಪ್ರಸ್ತಾವನೆ p.67). ಅವನು ವಾಸಿಸಿದ ಸ್ಥಾನವು ಯಾವುದು ಎಂಬುದನ್ನು ಹೇಳಲಿಕ್ಕೂ ಸಾಕಷ್ಟು ಆಧಾರಗಳಿಲ್ಲ. ಅವನು ಕರ್ನಾಟಕ ದೇಶಕ್ಕೆ ಸಂಬಂಧಿತನಾಗಿರಬೇಕು. ಏನಾದರೂ ಅವನು ಕರ್ನಾಟಕದಲ್ಲಿ ಬಹು ಜನಪ್ರಿಯ ನಾಗಿದ್ದು ಅವನ ಪ್ರಭಾವವು ಕರ್ನಾಟಕವಲ್ಲಿ ಸಾಕಷ್ಟು ಇತ್ತೆಂಬುದಕ್ಕೆ ಪರಮಾತ್ಮ ಪ್ರಕಾಶದ ಮೇಲೆ ಕನ್ನಡದಲ್ಲಿರುವ ಟಿಪ್ಪಣೆಯಿಂದ ಗೊತ್ತಾಗುವುದು.

ಕಾವ್ಯಗಳು : ಯೋಗೀಂದುವು ಕೆಳಗೆ ಕೊಟ್ಟ ಗ್ರಂಥಗಳನ್ನು ಬರೆದಿರುವನೆಂದು ಹೇಳುವರು.

೧ ಪರಮಪ್ಪಪಯಾಸು : ಇದರಲ್ಲಿ ಉಪಯೋಗಿಸಿದ ಭಾಷೆ ಅಪಭ್ರಂಶ. ಗ್ರಂಥದಲ್ಲಿ ಎರಡು ಅಧಿಕಾರಗಳಿದ್ದು ಅದು ಮಂಗಳಾಚರಣೆಯಿಂದ ಪ್ರಾರಂಭ ವಾಗುವುದು. ಮೊದಲನೆಯ ಅಧಿಕಾರದಲ್ಲಿ ೯೩ ದೋಹೆಗಳೂ ಎರಡನೆಯದರಲ್ಲಿ ೨೨೪ ದೋಹೆಗಳೂ ಇವೆ. ಮೂರು ಪ್ರಕಾರದ ಆತ್ಮಗಳ ಕಥನದ ಉಪದೇಶ, ಮೋಕ್ಷದ ಬಗ್ಗೆ ವಿವರಣೆ, ಮೋಕ್ಷದ ಫಲ ಇತ್ಯಾದಿ ವಿಷಯಗಳನ್ನು ಒಳಗೊಂಡಿದೆ.

೨. ಯೋಗಸಾರ : ಉಪಯೋಗಿಸಿದ ಭಾಷೆ ಅಪಭ್ರಂಶ. ಇದರಲ್ಲಿ ೧೦೮ ದೋಹೆಗಳಿವೆ. ಸಂಸಾರ ದುಃಖಗಳಿಂದ ಭಯಭೀತನಾದ ಯೋಗಿಚಂದ್ರ ಮುನಿ ಆತ್ಮಸಂಬೋಧನೆಯ ಸಲುವಾಗಿ ಏಕಾಗ್ರಮನಸ್ಸಿನಿಂದ ಈ ದೋಹೆಗಳನ್ನು ರಚಿಸಿದನು. ಯೋಗಸಾರದ ವಿಷಯ ಪರಮಾತ್ಮಪ್ರಕಾಶದಲ್ಲಿ ವರ್ಣಿತ ವಿಷಯವೇ ಆಗಿದೆ. ಎಲ್ಲ ವಸ್ತು ಉಪಾಧಿಯಿಂದ ರಹಿತವಾದ ಕೇವಲ ಆತ್ಮದ ಸಾಕ್ಷಾತ್ಕಾರವಾಗ ಬೇಕು. ಮೋಕ್ಷಾರ್ಥಿಗಳಿಗಾಗಿ ಯೋಗಸಾರವು ರಚಿತವಾಗಿದೆ.

೩. ನೌಕಾರ ಶ್ರಾವಕಾಚಾರ ಅಥವಾ ಸದ್ಧರ್ಮದೋಹಾ : ಗೃಹಸ್ಥರ ಕರ್ತವ್ಯಕರ್ಮಗಳನ್ನು ವಿವರಿಸುವ ಗ್ರಂಥ.

೪. ದೋಹಾ ಪಾಹುಡ : ಆತ್ಮಜ್ಞಾನವನ್ನು ಕುರಿತು ವಿವರಣೆಯನ್ನು ಕೊಡುವ ಗ್ರಂಥ.

೫. ಅಮೃತಾಸೀತಿ ಮತ್ತು ೬. ನಿಜಾತ್ಮಾಷ್ಟಕ : ಇವೆರಡೂ ನೀತಿಪರ ಉಪದೇಶವನ್ನು ಮಾಡುವ ಗ್ರಂಥಗಳು. ಭರ್ತೃಹರಿಯ ಶತಕಗಳಲ್ಲಿಯ ಕೆಲವು ಶ್ಲೋಕಗಳು ಇಲ್ಲಿ ಕಂಡುಬರುವವು.

ನಿಜಾತ್ಮಾಷ್ಟಕ: ಇದು ಸಿದ್ಧರ ಸ್ವರೂಪವನ್ನು ವರ್ಣಿಸುವ ಸ್ರಗ್ಧರಾವೃತ್ತ ದಲ್ಲಿರುವ ಪ್ರಾಕೃತ ಶ್ಲೋಕಗಳುಳ್ಳ ಕಾವ್ಯ (ಉಪಾಧ್ಯ–ಪರಮಪ್ಪಯಾಸು ಪ್ರಸ್ತಾವನೆ pp. 58-63).

ಪರಮಾತ್ಮಪ್ರಕಾಶದ ಜನಪ್ರಿಯತೆ : ಪ್ರಾಚೀನ ಕನ್ನಡ ಮತ್ತು ಸಂಸ್ಕೃತ ಟೀಕೆಗಳು ಪರಮಾತ್ಮಪ್ರಕಾಶದ ಜನಪ್ರಿಯತೆಯನ್ನು ತೋರಿಸುತ್ತವೆ. ಮೂಲಧಾರೆ

ಬಾಲಚಂದ್ರನು (ಕ್ರಿ. ಶ. ೧೩ ನೆಯ ಶತಮಾನದ ಪ್ರಾರಂಭ) ಕುಂದಕುಂದಾಚಾರ್ಯನ ನಾಟಕತ್ರಯದ ಮೇಲೆ ಟಿಪ್ಪಣಿಯನ್ನು ಬರೆದನಂತೆ. ಪರಮಾತ್ಮಪ್ರಕಾಶದ ಮೇಲೂ ಕನ್ನಡದಲ್ಲಿ ಟಿಪ್ಪಣಿಯನ್ನು ಬರೆದಿದ್ದಾನೆ. ಅಲ್ಲದೆ ಅನಾಮಧೇಯ ಇನ್ನೆರಡು ಕನ್ನಡ ಟಿಪ್ಪಣಿಗಳೂ ಇವೆ. ಬ್ರಹ್ಮದೇವ (ಕ್ರಿ. ಶ. ೧೩ ನೆಯ ಶತಮಾನ)ನ ಟೀಕೆ ಸಂಸ್ಕೃತದಲ್ಲಿದೆ. ಹೀಗೆ ಕನ್ನಡದಲ್ಲಿ ಪರಮಾತ್ಮಪ್ರಕಾಶದ ಮೇಲೆ ಮೂರು ಟೀಕೆಗಳು ದೊರೆಯುವುದು ಒಂದು ಗಮನಾರ್ಹ ವೈಶಿಷ್ಟ್ಯವೆಂದು ಹೇಳಬಹುದು. ಕರ್ನಾಟಕದಲ್ಲಿ ಅವನು ಚಿರಸ್ಥಾಯಿ ಪ್ರಭಾವವನ್ನು ಬೀರಿದ್ದರ ಸೂಚಕವೆಂದೂ ಕರ್ನಾಟಕದ ಕೂಡ ಅವನ ಅತ್ಯಂತ ನಿಕಟ ಸಂಬಂಧಸೂಚಕವೆಂದೂ ಒಪ್ಪಬೇಕಾಗುವುದು. ಅವನು ದಿಗಂಬರ ಜೈನಾಚಾರ್ಯನಾದ್ದರಿಂದ ದಾಕ್ಷಿಣಾತ್ಯನೆಂಬುದು ನಿಶ್ಚಿತವಾಗುವುದು, ಕರ್ನಾಟಕದವನೂ ಆಗಿರಲು ಸಾಕು.

೮. ವಟ್ಟಕೇರ (ಕ್ರಿ. ಶ. ೬ ಅಥವಾ ೭ನೆಯ ಶತಮಾನದ ನಂತರ)

ವಟ್ಟಕೇರನು ಒಬ್ಬ ಪ್ರಭಾವಿ ಜೈನ ಪ್ರಾಕೃತ ಗ್ರಂಥಕಾರನು. 'ವಟ್ಟ-ಕೇರ'ದ ಬದಲು "ವಟ್ಟಕೇರಿ" ಅಥವಾ ವಟ್ಟೇರಕ ಎಂತಲೂ ಕೆಲವು ಎಡೆಗಳಲ್ಲಿ ಹೆಸರುಗಳು ಬರುವವು 'ವಟ್ಟಕೇರ' ಎಂಬುದು 'ಭಟ್ಟಾರಕ' 'ವೃತ್ತಿಕಾರ' ಎಂಬುದರ ಪ್ರಾಕೃತ ರೂಪವೆಂದು ಕೆಲವರು ಹೇಳುವರು 'ವಟ್ಟಕೇರ' ಎಂಬುದರಲ್ಲಿ ಕೊನೆಯ ಪದವಾದ 'ಕೇರ' (ಕೆರೆ) ಅಥವಾ 'ಕೇರಿ'ಗೆ ಸಂಬಂಧಿತವಾಗಿದೆಯೆಂದೂ, ಅದರ ಆಧಾರದ ಮೇಲಿಂದ ಅವನು ಕರ್ನಾಟಕದವನೆಂದೂ ಪಂ. ಸುಖಲಾಲ್ಜಿಯವರು ನಿರ್ಣಯಿಸಿದ್ದಾರೆ. ನಾಥೂಪ್ರೇಮಿಯವರೂ ತಮ್ಮ ಜೈನಧರ್ಮ ಔರ ಇತಿಹಾಸ ಗ್ರಂಥದಲ್ಲಿ 'ವಟ್ಟಕೇರ' – 'ವಟ್ಟಕೇರಿ' 'ಬೆಟಗೇರಿ' ಎಂದು ಪ್ರಸ್ತಾಪಿಸಿ, ಅದು ಊರಿನ ಹೆಸರೆಂದೂ, ಊರಿನ ಹೆಸರುಗಳನ್ನು ಸ್ವನಾಮಧೇಯದ ಪೂರ್ವದಲ್ಲಿ ಹಚ್ಚಿಕೊಳ್ಳುವ ಪರಿಪಾಠವು ಕರ್ನಾಟಕದಲ್ಲಿ ಇದೆಯೆಂದೂ 'ವಟ್ಟಕೇರಿ' – ಈಗಿನ ಬೆಟಗೇರಿ – ಕರ್ನಾಟಕದ ಒಂದು ಊರು – ವಟ್ಟಕೇರನು ಆ ಊರಿನವನೆಂದೂ ಹೇಳಿದ್ದಾರೆ. ಕರ್ನಾಟಕದಲ್ಲಿ 'ಬೆಟಗೇರಿ' ಎಂಬ ಹೆಸರಿನ ಊರುಗಳು ಅನೇಕವಿವೆ. ಅವುಗಳಲ್ಲಿ ಯಾವುದು 'ವಟ್ಟಕೇರ'ನ ಊರು ಎಂದು ನಿಶ್ಚಿತವಾಗಿ ಗೊತ್ತುಪಡಿಸಲು ಸಾಧ್ಯವಾಗಿಲ್ಲ. ಉತ್ತರಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಬೆಟಗೇರಿ ಗ್ರಾಮವೂ ಇದೆ. ವಟ್ಟಕೇರನ ಊರು 'ವಟ್ಟಕೇರಿ' ವಟಕೇರಿ (ವಳಕೇರಿ)ಯಾಗಿರಬಹುದೇನೋ ? ಧಾರವಾಡ ಜಿಲ್ಲೆಯ ಬಂಕಾಪೂರ (ಜೈನ ಸಂಸ್ಕೃತಿ ಕೇಂದ್ರ)ದ ಹತ್ತರ 'ವಳಕೇರಿ' ಎಂಬ ಗ್ರಾಮ ವಿಭಾಗವಿದೆ. ಏನಾದರೂ ವಟ್ಟಕೇರನು ಕರ್ನಾಟಕದವನೆಂಬುದು ನಿಶ್ಚಿತ. ಅವನು ರಚಿಸಿದ ಗ್ರಂಥ ಮೂಲಾಚಾರ; ಅದು ಒಂದು ಗ್ರಂಥವಾಗಿರದೆ ಗ್ರಂಥ ಸಂಗ್ರಹವಾಗಿದ್ದು, ಸಿದ್ಧಸೇನನ ಸನ್ಮತಿಯಿಂದ (II ೪೦–೪೩) ನಾಲ್ಕು ಗಾಥೆಗಳನ್ನು ತೆಗೆದುಕೊಂಡು ಮೂಲಾಚಾರದ ಸಮಯಸಾರಾಧಿಕಾರದಲ್ಲಿ (೮೭–೯೦) ಸೇರಿಸಿದ್ದಾನೆಂದು

ಪಂ. ಸುಖಲಾಲ್ಜಿಯವರು ಅಭಿಪ್ರಾಯಪಡುತ್ತಾರೆ. ಸಿದ್ಧಸೇನನು ಕ್ರಿ. ಶ. ೬ ಅಥವಾ ೭ ನೆಯ ಶತಮಾನದವನಾಗಿರುವನು. ಆದ್ದರಿಂದ ವಟ್ಟಕೇರನ ಕಾಲ ಕ್ರಿ.ಶ. ೬ ಅಥವಾ ೭ ನೆಯ ಶತಮಾನವೆಂದು ಅವರು ತೀರ್ಮಾನಿಸಿದ್ದಾರೆ. (ಪಂ. ಸುಖಲಾಲ್ಜಿ ಯವರ ಗುಜರಾಥಿ ಗ್ರಂಥ 'ನವಕಾರ ಮಂತ್ರ ಯಾ ಪಂಚಪರಮೇಷ್ಠಿ ಅನೆ ಆವಶ್ಯಕ ಪ್ರತಿಕ್ರಮಣನೆ ರಹಸ್ಯ— ಅಹಮದಾಬಾದ ವಿಕ್ರಮಸಂವತ್ ೨೪೫೩ ನೋಡಿರಿ).

ಕಾವ್ಯ : ವಟ್ಟಕೇರನು ರಚಿಸಿದ ಕಾವ್ಯದ ಹೆಸರು 'ಮೂಲಾಚಾರ' ಮೂಲ ನಡವಳಿಕೆ (ವ್ರತ) ವಿಷಯವಾಗಿರುವುದರಿಂದ ಅದಕ್ಕೆ ಮೂಲಾಚಾರವೆಂದು ಹೆಸರು ಬಂದಿದೆ. ಅದರಲ್ಲಿ ಜೈನಮುನಿಗಳ ಚರಿತ್ರೆಗಳನ್ನು ವಿವರಿಸಲಾಗಿದೆ. ಅದು ಸೌರಸೇನಿ ಪ್ರಾಕೃತದಲ್ಲಿ ಬರೆಯಲ್ಪಟ್ಟಿದೆ.

೯. ಸ್ವಯಂಭು (ಕ್ರಿ. ಶ. ೭೦೦ ರಿಂದ ೭೮೩)

ಸ್ವಯಂಭು ಅಪಭ್ರಂಶ ಕಾವ್ಯಗಳ ಅತಿಪ್ರಾಚೀನ ಕವಿ. ಅವನು ಯಾಪನೀಯ ಸಂಘಕ್ಕೆ ಸೇರಿದವನು. ಯಾಪನೀಯ ಸಂಘದ ತೌರಮನೆಯು ಕರ್ನಾಟಕ ಸ್ವಯಂಭುವಿನ ಸಂಬಂಧಿಕರು ಅವ (–ಅಪ್ಪ) – ಇಯ(–ಅಯ್ಯ) ನಾಮಾಂತ್ಯ ಗಳು, ಅವನು ಕರ್ನಾಟಕದ ನಿಕಟಸಂಪರ್ಕವುಳ್ಳವನು ಮಾತ್ರವಲ್ಲ : ಅವನು ಕರ್ನಾಟಕದವನೇ–ಕನ್ನಡಿಗನೇ ಎಂಬುದನ್ನು ಸೂಚಿಸುತ್ತವೆ. ಅವನ ತಂದೆಯ ಹೆಸರು 'ಮಾರುಯ ಏವ' (ಮಾರುತದೇವ) ತಾಯಿಯ ಹೆಸರು 'ಪೆಉಮಿನಿ' (ಪದ್ಮಿನಿ) ಯೆಂದೂ ಹೇಳಿದ್ದಾನೆ. ಅವನಿಗೆ ಕನಿಷ್ಟಪಕ್ಷಕ್ಕೆ ಇಬ್ಬರು ಹೆಂಡಂದಿರು ಇದ್ದರು. ಒಬ್ಬಳ ಹೆಸರು 'ಅಮ ಇವ' (ಅಮೃತಾಂಬಾ) ; ಇನ್ನೊಬ್ಬಳ ಹೆಸರು 'ಆಇಚ್ಚಂಬ' (ಆದಿತ್ಯಾಂಬಾ). ಸ್ವಯಂಭುವಿಗೆ ಮೂರನೆಯ ಹೆಂಡತಿಯೂ ಇದ್ದಂತೆ ತೋರುತ್ತದೆ. ಅವಳ ಹೆಸರು 'ಸು ಅ ವ' (ಶಕಾಂಬಾ). ಅವಳ ಮಗನೇ ತ್ರಿಭುವನ ಸ್ವಯಂಭು. ಸ್ವಯಂಭುವು ಮೊದಲು 'ಧ ವ ಲ ಇ ಯ'(ಧವಲಯ್ಯನ) ಆಶ್ರಮದಲ್ಲಿಯೂ ಆಮೇಲೆ 'ವಂದ ಇಯ' (ವಂದಯ್ಯ)ನ ಆಶ್ರಯದಲ್ಲಿಯೂ ತನ್ನ ಕಾವ್ಯಗಳನ್ನು ರಚಿಸಿದನೆಂದು ತಿಳಿದುಬರುತ್ತದೆ. ಅವನು ಯಾಪನೀಯನಾದ್ದರಿಂದ ಉದಾರಮತೀ– ಯನೂ ಆಗಿದ್ದನು. ಸ್ವಯಂಭುವಿನ ಕಾಲ ನಿಶ್ಚಿತವಾಗಿ ಗೊತ್ತಾಗುವುದಿಲ್ಲ. ಅವನ ಕಾಲ ಕ್ರಿ. ಶ. ೬೭೭ ರಿಂದ ೭೮೩ ರ ಮಧ್ಯ ಆಗಿರಬಹುದು(ನಾಥೂಪ್ರೇಮಿ–ಜೈನ ಧರ್ಮ ಔರ ಇತಿಹಾಸ p 211). ಡಾ. ಹೀರಾಲಾಲ ಜೈನರು ಸ್ವಯಂಭುವಿನ ಕಾಲ ಕ್ರಿ. ಶ. ೭೦೦ ರಿಂದ ೭೮೩ ರ ನಡುವಿನದೆಂದು ನಿಶ್ಚಯಿಸಿದ್ದಾರೆ. (ಸ್ವಯಂಭು ಆ್ಯಂಡ ಹೀಜ ಟು ಪೋಯೆಮ್ಸ್ ಇನ್ ಅಪಭ್ರಂಶ– ನಾಗಪೂರ ಯುನಿವ್ಹರ್ಸಿಟಿ ಜರ್ನಲ್. ೧೯೩೬). ಈ ಕಾಲವು ಕ್ರಿ. ಶ. ೬೭೭ ರಿಂದ ೭೮೩ ರ ಅವಧಿಯಲ್ಲಿಯೇ ಬರುವುದ ರಿಂದ ಸ್ವಯಂಭುವು ೮ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದವನೆಂದು ಧಾರಾಳವಾಗಿ ಹೇಳಬಹುದು. ಅವನ ಆಶ್ರಯದಾತೃಗಳ ಹೆಸರುಗಳು ಮತ್ತು ಹೆಂಡಿರ ಹೆಸರು

ಗಳು. ಅವುಗಳೆ–ಇಯ(ಅಯ್ಯ) – ವ(ಅಪ್ಪ) ಅಂತ್ಯಗಳು ಕರ್ನಾಟಕದ ವೈಶಿಷ್ಟ್ಯ–ವೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಸ್ವಯಂಭು ಒಂದುವೇಳೆ ಹೊರಗಿ–ನಿಂದ (ಲಾಟದೇಶ – ಗುಜರಾತದಿಂದ) ಬಂದ ಮನೆತನಕ್ಕೆ ಸೇರಿದವನೆಂದು (ಡಾ. ಭಯಾಣಿಯವರು ತಮ್ಮ 'ಪಉಮಚರಿಉ' ಪ್ರಸ್ತಾವನೆಯಲ್ಲಿ ಸ್ವಯಂಭುವಿನ ಅಪಭ್ರಂಶವು ಪಶ್ಚಿಮದ ಅಪಭ್ರಂಶವೆಂದು ಕಾರಣ ತೋರಿಸಿ ಹೇಳುವಂತೆ) ಒಪ್ಪಿದರೂ, ಕರ್ನಾಟಕದ ಲಾತೂರ[೭] (ಪ್ರಾಚೀನ ಲತ್ತಾಲೂರು) (ಈಗಿನ ಬೀದರ ಜಿಲ್ಲೆ) ಪ್ರದೇಶದಲ್ಲಿ ಕಾವ್ಯವನ್ನೂ ರಚಿಸಿದ್ದರಿಂದ ಅವನು ಕರ್ನಾಟಕದ ಪ್ರಾಕೃತಕವಿಯೇ ಆಗುವನು. ಅವನು ಯಾಪನೀಯ ಸಂಘದವನಾದ್ದರಿಂದ ಕರ್ನಾಟಕವು ಅವನ ಮಾತೃಭೂಮಿಯಾಗಿರಬೇಕು.

ಕೃತಿಗಳು : ಸ್ವಯಂಭುವಿನ ಸಾಹಿತ್ಯಸೃಷ್ಟಿಯು ವಿವಿಧ ಸ್ವರೂಪವನ್ನು ಒಳಗೊಂಡಿದೆ. ಅವನು ಮಹಾಕಾವ್ಯ, ಛಂದಸ್ಸು, ವ್ಯಾಕರಣ ಮುಂತಾದವುಗಳನ್ನು ರಚಿಸಿದ್ದಾನೆ.

೧. **ಪಉಮಚರಿಉ** (ರಾಮಾಯಣ ಮಹಾಕಾವ್ಯ–Rama epic).
೨. ರಿಟ್ಠಣೇಮಿಚರಿಉ (**Krishna epic**)ಹರಿವಂಶಪುರಾಣವೆಂದೂ ಪ್ರಸಿದ್ಧವಿದೆ.
೩. **ಪಂಚಮಿಚರಿಉ** (ಉಪಲಬ್ಧವಿಲ್ಲ).
೪. ಸ್ವಯಂಭುಛಂದ.
೫. ಸ್ವಯಂಭುವ್ಯಾಕರಣ (ಉಪಲಭ್ಯವಿಲ್ಲ).

ಕೃತಿಗಳ ಭಾಷೆ : ಕರ್ನಾಟೀ ಅಪಭ್ರಂಶ. ಕರ್ನಾಟಕದಲ್ಲಿ ಒಂದು ತರದ ಅಪಭ್ರಂಶವಿತ್ತೆಂದು ಗೋತ್ತಾಗುವುದು (ಪ್ರಾಕೃತ ಚಂದ್ರಿಕಾ). ಕವಿಯು ಸ್ವತಃ ತನ್ನ ಕಾವ್ಯದ ಭಾಷೆ 'ದೇಶಿಭಾಸಾ' ಎಂದು ಕರೆದಿದ್ದಾನೆ. ಅದೇ ಭಾಷೆಗೆ ಅವನು ತನ್ನ ವ್ಯಾಕರಣದಲ್ಲಿ ಅಪಭ್ರಂಶವೆಂದು ಕರೆದಿದ್ದಾನೆ. ದೇಸೀ ಮತ್ತು ಅಪಭ್ರಂಶಗಳು ಒಂದೇ ಎಂದು ಅವನ ಅಭಿಪ್ರಾಯ. ಬೇರೆ ಅಪಭ್ರಂಶ ಕಾವ್ಯಗಳ ಕವಿಗಳ ಅಭಿಪ್ರಾಯವೂ ಅದೇ ಆಗಿದೆ. ಅದೇ(ಒಂದೇ)ಭಾಷೆಯನ್ನು ವ್ಯಾಕರಣದಲ್ಲಿ ಅಪಭ್ರಂಶವೆಂದೂ ಸಾಹಿತ್ಯದಲ್ಲಿ

---

೭. ಲಾತೂರು(ಲಾಟೂರು) ಲಾಟ-(ಗುಜರಾಥ)ದೇಶದ ಸಂಬಂಧವನ್ನು ಸೂಚಿಸುತ್ತದೆ. ಲಾಟೂರ ಪ್ರದೇಶದಲ್ಲಿ ಆಳಿದ ರಾಷ್ಟ್ರಕೂಟರು (ಮುಂದೆ ಮಾನ್ಯಖೇಟವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು) ಲಾಟ-ಲಾಟೂರು-ಲಾತೂರ ಗುಜರಾಥದಿಂದ-ಬಂದಿರಬಹುದು.

೮. ವಿದ್ಯಾಪತಿಯು ತನ್ನ ಅಪಭ್ರಂಶ ಕಾವ್ಯ–ಕೀರ್ತಿಲತಾ ಕಾವ್ಯದಲ್ಲಿ, ಅಪಭ್ರಂಶ ದೇಸೀ ಸಮಾನವೆಂದು ಹೇಳಿದ್ದಾನೆ. "ದೇಶಿಲ ವಚನಾ ಸವಜನ ಮಿಟ್ಠಾ। ತಂ ತೈಸನ ಜಲ್ಪಉ ಅವಹಟ್ಠಾ ॥

ಶ್ಲೋಕದ ಸಂಸ್ಕೃತ ರೂಪಾಂತರ—

"ದೇಶೀಯ ವಚನಾನಿ ಸರ್ವಜನಮೃಷ್ಟಾನಿ ।
ತಥ್ತಾ ದೃಶಂ ಜಲ್ಪೇ ಅಪಭ್ರಷ್ಟಮ್ "॥

ದೇಸಿಯೆಂದೂ ಕರೆಯುತ್ತಿದ್ದಾರೆ. ಡಾ. ಭಯಾಣಿಯವರು ಅವನ ಅಪಭ್ರಂಶ ಪಶ್ಚಿಮದ ಅಪಭ್ರಂಶವೆಂದು ಕರೆದಿರುವರು. ಹರಿವಂಶಪುರಾಣದಲ್ಲಿ ಬರುವ ಒಂದು ಕಡವಕದಲ್ಲಿ ಮಾತ್ರ 'ಢಕಾ ಭಾಸಾ' ಲಕ್ಷಣಗಳು ಕಂಡುಬರುವವು. ಉಳಿದ ಎಲ್ಲ ಅಂಶಗಳಲ್ಲಿ ಅಪಭ್ರಂಶದ ಸಾಮಾನ್ಯ ಲಕ್ಷಣಗಳಿವೆ. ಅದು ಕರ್ನಾಟೀ ಅಪಭ್ರಂಶದ 'ಢಕಾ' ರೂಪಾಂತರವೆಂದು ಹೇಳಬಹುದು.

ಸಾಹಿತ್ಯದಲ್ಲಿ ಸ್ವಯಂಭುವಿನ ಸ್ಥಾನ: ಕರ್ನಾಟಕ (ಅಪಭ್ರಂಶ) ಭಾಷಾ ಕ್ಷೇತ್ರದಲ್ಲಿ ಸ್ವಯಂಭುವಿನ ಕಾವ್ಯಗಳು ಒಂದು ತರಹದ ಮೈಲುಗಲ್ಲುಗಳು. ಅದರಂತೆ ಅಖಿಲಭಾರತ ಭಾಷಾಕ್ಷೇತ್ರದಲ್ಲಿಯೂ ಕೂಡ. ಅವನ ಕಾವ್ಯಗಳ ವರ್ಚಸ್ಸು ಅಪಭ್ರಂಶ ಕಾವ್ಯಗಳ ಮೇಲೆ; ಅದರಂತೆ ದೇಶೀಯ ಕಾವ್ಯಗಳ ಮೇಲೂ ಬಹಳಷ್ಟು ಆಗಿರಲು ಸಾಕು. ಕನ್ನಡ ದೇಶೀಯ ಕಾವ್ಯಗಳ ಮೇಲೆ ಮಾತ್ರವಲ್ಲ ಅಖಿಲಭಾರತ ದೇಶೀಯ ಕಾವ್ಯಗಳ ಮೇಲೂ ಅವನ ವರ್ಚಸ್ಸುಸಾಕಷ್ಟು ಬಿದ್ದಿದೆ. ರಾಹುಲಸಾಂಕೃತ್ಯಾಯನರು ತಮ್ಮ "ಹಿಂದೀ ಕಾವ್ಯಧಾರಾ" ಎಂಬ ಗ್ರಂಥದಲ್ಲಿ ಸ್ವಯಂಭುವನ್ನು ದೇಶೀಕಾವ್ಯಗಳ ಮೊದಲನೆಯ ಕವಿಯೆಂದೂ ಸ್ವೀಕರಿಸಿದ್ದಾರೆ. ಸ್ವಯಂಭವು (ಗುಣಾಢ್ಯನು ಪ್ರಾಕೃತ ಕಾವ್ಯಗಳ ಪಿತಾಮಹನಿರುವಂತೆ) ಹಿಂದುಸ್ಥಾನದ ಅಪಭ್ರಂಶ–ದೇಶೀಯ ಕಾವ್ಯಗಳ ಪಿತಾಮಹನೂ ಆಗಿದ್ದಾನೆಂದೂ. ಅವನ ಕಾವ್ಯಗಳು ಎಲ್ಲ ದೇಶೀಯ ಭಾಷೆಗಳ (ಹಿಂದೀ, ಮರಾಠಿ, ಗುಜರಾಥಿ ಮುಂತಾದ) ಸಾಹಿತ್ಯಕ್ಕೆ ಇರುವಂತೆ ಕನ್ನಡ ಸಾಹಿತ್ಯಕ್ಕೆ ಮೂಲ ಸಾಹಿತ್ಯರೂಪವೆಂದೂ ಪರಿಗಣಿಸಲ್ಪಡುತ್ತದೆ. ಆ ದೃಷ್ಟಿಯಿಂದ ನೋಡಿದರೆ. ಸ್ವಯಂಭುವು (ಗುಣಾಢ್ಯನಂತೆ) ಕರ್ನಾಟಕ ಕವಿಯಾದರೂ. ಅಖಿಲಭಾರತದ ದೇಶೀಯ ಸಾಹಿತ್ಯದ ಪಿತಾಮಹನೆಂದೂ ಅಮರಕವಿಯೆಂದೂ ಗೊತ್ತಾಗುವುದು.

೧೦. ಕುತೂಹಲ (ಕೋಊಹಲ) (ಕ್ರಿ. ಶ. ೮೦೦)

ಕುತೂಹಲನು ತನ್ನ ವಂಶವನ್ನು ಬಹಳವಾಗಿ ಕೊಂಡಾಡಿಕೊಂಡಿದ್ದಾನೆ. ಕವಿಯ ಅಜ್ಜನ ಹೆಸರು ಬಹುಮಾದಿತ್ಯ. ತಂದೆಯ ಹೆಸರು ಭೂಷಣಭಟ್ಟ. ತನ್ನ ವಂಶದ ಜನರಲ್ಲಿ ಅವನ ಬಗ್ಗೆ ಬಹಳ ಆದರವಿತ್ತು. ಬ್ರಹ್ಮನ ನಾಲ್ಕು ಮುಖಗಳಿಂದ ಹೊರಟ ನಾಲ್ಕು ವೇದಗಳನ್ನು. ಭೂಷಣ ಭಟ್ಟನು ತನ್ನ ಒಂದೇ ಮುಖದಿಂದ ಪಠಿಸುತ್ತಿದ್ದನು. ಅವನ ಮಗನು ಕುತೂಹಲನು. ಕವಿಯು ತನ್ನನ್ನು ಮಾತ್ರ 'ಅಸಾರಮತಿ' ಎಂದು ಕರೆದುಕೊಂಡಿದ್ದಾನೆ (ಲೀಲಾವತಿ. ಉಪಾಧ್ಯಾಯರ ಪ್ರತಿ. ಪು. ೭ . ಅದು ಅವನ ವಿನಯವನ್ನು ತೋರಿಸುತ್ತದೆ. ಅವನ ಹೆಂಡತಿಯ ಹೆಸರು ಸಾವಿತ್ರಿ. ಭೂಷಣಭಟ್ಟನ ಮಗನಾದ ಕುತೂಹಲನೆಂಬ ಬ್ರಾಹ್ಮಣನಿಂದ (ವಿಪ್ರನಿಂದ) ತನ್ನ ಹೆಂಡತಿಯ ವಿಜ್ಞಾಪನೆಯ ಮೇರೆಗೆ ಕವಿತೆಯನ್ನು ರಚಿಸಿದನು ಎಂದು ಟೀಕಾಕಾರನು ಹೇಳಿದ್ದಾನೆ (ಲೀಲಾವತಿ. ಪು. ೭). ಕವಿಯು ವಿಪ್ರನೆಂದು ನಿರ್ದೇಶಿಸಲ್ಪಟ್ಟದ್ದರಿಂದ. ಅವನು ಜಾತಿಯಿಂದ ಬ್ರಾಹ್ಮಣನು ಹಾಗೂ ಹಿಂದೂ ಮತಾ

ವಲಂಬಿಯು. ಕವಿಯ ಹೆಂಡತಿಯು ಸುಹೃದಯಳೂ, ಸುಸಂಸ್ಕೃತಳೂ ಆಗಿರಬೇಕು. ಕವಿಯು ತನ್ನ ಕಾವ್ಯವನ್ನು ಯಾವಾಗ ಬರೆದನೆಂಬ ಬಗ್ಗೆ ಉಲ್ಲೇಖಗಳಿಲ್ಲ. ಕಾವ್ಯದಲ್ಲಿ ಬರುವ ವಿಷಯಗಳ ಆಧಾರದ ಮೇಲಿಂದ ಅವನು ಕ್ರಿ.ಶ. ೮೦೦ ದವನೆಂದು ತಿಳಿದುಬರುವುದು (ಲೀಲಾವತಿ–ಉಪಾಧ್ಯೆಯವರ ಪ್ರಸ್ತಾವನೆ, ಪು. ೭೫). ಲೀಲಾವತಿ–ಕಾವ್ಯದ ಕರ್ತೃವು ಹರಿಭದ್ರ (ಕ್ರಿ. ಶ. ೭೫೦)ನ ಮತ್ತು ಆನಂದವರ್ಧನ (ಕ್ರಿ. ಶ. ೮೫೦–೯೭೦)ನ ಕಾಲದ ಮಧ್ಯದವನೆಂದು ಹೇಳಬಹುದು. ಹರಿಭದ್ರ (ಕ್ರಿ. ಶ. ೭೫೦)ನ 'ಸಮರಾ ಇಚ್ಚಾಕಹಾ' ಮತ್ತು 'ಲೀಲಾವತಿ'ಗಳಲ್ಲಿ ಅನೇಕ ಶಬ್ದಸಾಮ್ಯಗಳಿವೆ. ಆನಂದವರ್ಧನ (ಕ್ರಿ.ಶ. ೮೫೦)ನ ಕಾವ್ಯದಲ್ಲಿ ಲೀಲಾವತಿಯೊಡನೆ ಹೋಲುವ ಅನೇಕ ಸಂದರ್ಭಗಳು ಬರುವವು. ಈ ಕಾವ್ಯ (ಲೀಲಾವತಿ)ದಲ್ಲಿ ಬರುವ ರಾಷ್ಟ್ರಕೂಟ ಮತ್ತು ಚಾಲುಕ್ಯರ ವಿಷಯಗಳಿಗೂ ಅವು ಅನುಗುಣವಾಗುವವು. ಅವನು ವಾಸಿಸಿದ ಸ್ಥಳ, ಪ್ರತಿಷ್ಠಾನ ಅಥವಾ ಅದರ ಸುತ್ತಮುತ್ತಲಿನ ಪ್ರದೇಶವಾಗಿರಬೇಕು. ಇದು ಲೀಲಾವತಿಯಲ್ಲಿ ಬರುವ ಕೆಲವು ಮಹಾರಾಷ್ಟ್ರ ದೇಶೀಯ ಪದಗಳಿಂದ ಗೊತ್ತಾಗುವುದು.

ಕಾವ್ಯದ ಭಾಷೆ : ಕಾವ್ಯವನ್ನು ರಚಿಸಿದ ಭಾಷೆ "ಮರಹಟ್ಟ ದೇಸಿ"ಯೆಂದು ಕವಿಯೇ ಹೇಳಿಕೊಂಡಿದ್ದಾನೆ (ಲೀಲಾವತಿ, ಪು. ೧೯೭) ಮರಹಟ್ಟದೇಸಿ'ಯವೆಂದರೆ ಮರಾಠಿ ಭಾಷೆಯಲ್ಲ. ಅದು ಒಂದು ಪ್ರಾಕೃತ ಭಾಷೆಯ ಪ್ರಕಾರ. ಮಹಾರಾಷ್ಟ್ರಿ ಪ್ರಾಕೃತವೆಂದು ತೀರ್ಮಾನಿಸಿದ್ದಾರೆ (ಉಪಾಧ್ಯೆ ಪ್ರಸ್ತಾವನೆ p 80). ಪ್ರಾಚೀನ ಕಾಲದಲ್ಲಿ ಕರ್ನಾಟಕವು ಈಗಿನ ಮಹಾರಾಷ್ಟ್ರವನ್ನು ಒಳಗೊಂಡಿತ್ತು ಎಂಬುದನ್ನು ಸ್ಮರಿಸಿ–ಕೊಳ್ಳಬೇಕು. ಮಹಾರಾಷ್ಟ್ರಿಯವು ಕರ್ನಾಟೀ ಪ್ರಾಕೃತದ ಒಂದು ಪ್ರಕಾರ.

ಸಾಹಿತ್ಯದ ಮೇಲೆ ಕುತೂಹಲನ ಪ್ರಾಕೃತ ಲೀಲಾವತಿ ಪ್ರಭಾವ : ಕಥಾ ಸಾಹಿತ್ಯದಲ್ಲಿ ಬೃಹತ್‌ಕಥೆಯ ನಂತರ ಬರುವ ಪ್ರಭಾವಶಾಲಿ ಮೇರುಕೃತಿ. ಕುತೂಹಲನ ಪ್ರಾಕೃತ 'ಲೀಲಾವ ಈ'. ವರ್ಧಮಾನ ಸೂರಿ (ಕ್ರಿ.ಶ. ೧೦೩೫)ಯು ನಿರ್ವಾಣ ಲೀಲಾವತಿಯ ಕಥೆಯನ್ನು ಬರೆದನು. ನೇಮಿಚಂದ್ರ(ಕ್ರಿ. ಶ. 1170)ನೆಂಬ ಪ್ರಾಚೀನ ಕವಿಯು ಕನ್ನಡ ಲೀಲಾವತಿಯೆಂಬ ಸಾಹಿತ್ಯ ಕೃತಿಯನ್ನು ರಚಿಸಿದನು. ಕನ್ನಡ ಲೀಲಾ-ವತಿಯ ಕಥಾವಸ್ತುವು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಪ್ರಾಕೃತ ಲೀಲಾವತಿ ಯಂತೆಯೇ ಇದೆ.

೧೧. ವೀರಸೇನ ೧೨. ಜಿನಸೇನ ೧೩. ಗುಣಭದ್ರ ೧೪. ಕುಮುದೇಂದು

ದಿಗಂಬರ ಜೈನಸಂಪ್ರದಾಯದಲ್ಲಿ ವೀರಸೇನ, ಜಿನಸೇನ ಮತ್ತು ಗುಣಭದ್ರ – ಈ ಮೂವರೂ ಪ್ರಸಿದ್ಧ ಜೈನಾಚಾರ್ಯರಾಗಿದ್ದಾರೆ. ವೀರಸೇನನ ಶಿಷ್ಯನು ಜಿನಸೇನನು ; ಜಿನಸೇನನ ಶಿಷ್ಯನು ಗುಣಭದ್ರನು. ಈ ಮೂವರೂ ಆಚಾರ್ಯರು ಮೂಲಸಂಘದ ಸೇನಾನ್ವಯದ ಆಚಾರ್ಯರಾಗಿದ್ದಾರೆ. ಮೂವರೂ ಕರ್ನಾಟಕದಲ್ಲಿಯೇ ಬದುಕಿಬಾಳಿದರು. ಕರ್ನಾಟಕದ ಪ್ರಸಿದ್ಧ ರಾಜನಾದ ರಾಷ್ಟ್ರ

ಕೂಟ ನೃಪತುಂಗನ ಆಶ್ರಯದಲ್ಲಿ ಮತ್ತು ಆಳಿಕೆಯಲ್ಲಿ ತಮ್ಮ ಅಮೂಲ್ಯ ಗ್ರಂಥಗಳನ್ನು ರಚಿಸಿದರು. ಈ ಚಾರ್ಯತ್ರಯರನ್ನು ಒಂದೇ ಗುಂಪಾಗಿಸಲು ಇನ್ನೊಂದು ಕಾರಣ ವಿದೆ. ಒಬ್ಬ ಆಚಾರ್ಯನ ಅಪೂರ್ಣ ಕೃತಿಯನ್ನು ಇನ್ನೊಬ್ಬ ಆಚಾರ್ಯನು ಪೂರ್ಣ ಗೊಳಿಸಿದ್ದಾನೆ. ಅಲ್ಲದೆ ಅವರೆಲ್ಲರೂ ತಮ್ಮದೇ ಆದ ವಿಶಿಷ್ಟ ತರಹದ ಪ್ರಾಕೃತ (ಪ್ರಾಕೃತ ಮಿಶ್ರ ಸಂಸ್ಕೃತ–ಸಮಸಂಸ್ಕೃತ)ದಲ್ಲಿ ಬರೆದಿದ್ದಾರೆ. ವೀರಸೇನನ ಶಿಷ್ಯನೆಂದು ಹೇಳಿಕೊಳ್ಳುವ ಕುಮುದೇಂದ್ರುವಿನ ಕೃತಿಯು ವಿವರಣೆಯಿಲ್ಲದೆ ವೀರಸೇನ ಗುರುಪರಂಪ ರೆಯ ವಿವರಣೆಯು ಪೂರ್ಣವಾಗುವದಿಲ್ಲ. ಆದ್ದರಿಂದ ಅವನನ್ನು ಈ ಗುಂಪಿನಲ್ಲಿ ಸೇರಿಸಲಾಗಿದೆ. ಅಲ್ಲದೆ ಅವನ ಕೃತಿಗೂ, ಪ್ರಾಕೃತ ಭಾಷೆಗೂ ಒಂದು ರೀತಿಯಿಂದ ಹೊಂದಿಕೆಯಾಗುವುದು. ಈ ಎಲ್ಲ ಕವಿಗಳು ಮಾನ್ಯಖೇಟದ ರಾಷ್ಟ್ರಕೂಟ ಅರಸ ನೃಪತುಂಗನ ಕಾಲಾವಧಿಯಲ್ಲಿ ಜೀವಿಸಿದ್ದರು. ಆಚಾರ್ಯ ಜೀನಸೇನನು ಪುನ್ನಾಟ ಸಂಘದವನು. ಪುನ್ನಾಟ[೯]ವೆಂಬುದು ಕರ್ನಾಟಕದ ಪ್ರಾಚೀನ ಹೆಸರು. ಎರಡೂ ಸಮಾ ನಾರ್ಥಕವಾಗಿವೆ.

ವೀರಸೇನನು ಧವಲಾಟೀಕೆ[೧೦]ಯನ್ನು ರಚಿಸಿದನು. ಇದು ಗುಣಧರನ ಕಾಷಾಯ ಪ್ರಾಭೃತದ ಮೇಲೆ ಟೀಕೆಯಾಗಿದ್ದು ಅದರಲ್ಲಿ ೬೦ ಸಾವಿರ ಶ್ಲೋಕಗಳಿವೆ. ಅದರಲ್ಲಿ ಮೊದಲನೆಯ ೨೦ ಸಾವಿರ ಶ್ಲೋಕಗಳನ್ನು ವೀರಸೇನನು ರಚಿಸಿದ್ದಾನೆ, ಉಳಿದ ೪೦ ಸಾವಿರ ಶ್ಲೋಕಗಳನ್ನು ಜೀನಸೇನನು ರಚಿಸಿದ್ದಾನೆ. ಅದಕ್ಕೆ ಜಯಧವಲಾ ಎಂದು ಹೆಸರಿಟ್ಟನು. ಅಲ್ಲದೆ ಜಿನಸೇನನು ಆದಿಪುರಾಣ ಮತ್ತು ಪಾರ್ಶ್ವಾಭ್ಯುದಯ ಗ್ರಂಥಗಳನ್ನು ರಚಿಸಿದ್ದಾನೆ. ಜಿನಸೇನನ ಮಹಾಪುರಾಣದ ಪ್ರಾರಂಭೋತ್ಸವವು ರಾಷ್ಟ್ರಕೂಟ ಅರಸನ ಅಧ್ಯಕ್ಷತೆಯಲ್ಲಿ ವಟಗ್ರಾಮ ಜಿನಾಲಯದಲ್ಲಿ ಆಯಿತು. ಪುರಾಣಮಹೋತ್ಸವವಾದ ವಟಗ್ರಾಮವುಯಾವುದು? ಬಂಕಾಪುರದಲ್ಲಿ ಪ್ರಾರಂಭೋತ್ಸವವಾಯಿತೆಂದು ಇಲ್ಲಿಯವರೆಗೆ ವಿದ್ವಾಂಸರು ಅಭಿಪ್ರಾಯಪಟ್ಟಿದ್ದರು. ಆದರೆ ಪ್ರೊ. ಅಲ್ತೇಕರರು ವಟಗ್ರಾಮವು ಬಡೋದೆ ವಟೋದರಾಯೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ಸರಿಯಲ್ಲ, ವಟ ಗ್ರಾಮವು ಬಂಕಾಪೂರದಲ್ಲಿ ಸಮಾವೇಶಗೊಂಡ ಮತ್ತು ಬಂಕಾಪೂರ ಕೋಟೆಯಿಂದ ೪ ಮೈಲು ದೂರದಲ್ಲಿರುವ ಈಗಿನ ಒಳಕೇರಿ(ವಳಕೇರಿ)ಯೇ (ಈಗ ಅದು ಬೇಚರಾಕ ಹಳ್ಳಿಯಾಗಿದೆ) ಆಗಿರಲು ಸಾಕು. ಬಂಕಾಪೂರದಲ್ಲಿಯ ವಳಕೇರಿ (ವಟಕೇರಿ)ಯ ಹತ್ತರ ಮಾಗಿಕೇರಿ ಎಂಬ ಒಂದು ಓಣಿಯೂ ಇದೆ. (೩೪ ಹಳ್ಳಿಗಳು ಕೂಡಿ ಬಂಕಾಪೂರ ವಾಗಿದ್ದು, ಅದರಲ್ಲಿ ವಳಕೇರಿ(ವಟಕೇರಿ)ಯಾಗಿ ಕೇರಿಗಳೊ ಬರುವವು. ಮಾಗಿಕೇರಿ

೯. 'ಕರ (ದೊಡ್ಡ–ಸಂಸ್ಕೃತ' 'ಕೃ 'ಧಾತುವಿನಿಂದ ಬಂದದ್ದು) + ನಾಟ (ನಾಡು. = ಪುರ್ (–ದೊಡ್ಡ ಸಂಸ್ಕೃತ 'ಪೃ'ಧಾತುವಿನಿಂದ ಬಂದದ್ದು) ನಾಟ-ನಾಡು. ಕರ್ನಾಟಕ = ಪುನ್ನಾಟ.

೧೦. ಜಯಧವಲಾ–ಧವಲಾ ಟೀಕೆಗಳೆಂಬ ಹೆಸರುಗಳು, ತಮ್ಮ ಶಿಷ್ಯನಾದ ನೃಪತುಂಗನನ್ನು ಅಮರ ವಾಗಿಸಲು ಇಟ್ಟ ಹೆಸರುಗಳು. ನೃಪತುಂಗನಿಗೆ. 'ಧವಲ'ನೆಂಬ ಹೆಸರೂ ಇತ್ತು.

ಯೆಂದರೆ ಮಹಾವೀರಕೇರಿ (ಅಲ್ಲಿ ಒಂದು ದೊಡ್ಡ ಮಹಾವೀರನ ಪ್ರತಿಮೆ ಇದೆ) ಅದರಂತೆ ಒಳಕೇರಿ(ವಟಕೇರಿ)ಯಲ್ಲಿ ಒಂದು ದೊಡ್ಡ ಬಾವಿಯಿದ್ದು ಅದರ ಮಗ್ಗಲಿಗೆ ದೊಡ್ಡ ಆಲಯ(ಮಂದಿರ–Hall)ಗಳಿದ್ದು ಚೌಕಟ್ಟಿನಲ್ಲಿ ವೃಷಭ, ಸಿಂಹ ಮುಂತಾದ ಜೈನ ಸಂಪ್ರದಾಯದ ಪ್ರತಿಮೆಗಳನ್ನು ಕೊರೆದಿದ್ದಾರೆ. ಅದು ಒಂದು ಜಿನಾಲಯದ ಹಾಗೆ ಇದ್ದು, ಅದರಲ್ಲಿ ಪುರಾಣ ಪ್ರವಚನಗಳು ನಡೆಯುವಷ್ಟು ಸ್ಥಳಾವಕಾಶವಿದೆ. ವಟಗ್ರಾಮ – ವಳಗ್ರಾಮ – ವಳಕೇರಿ ಎಂಬ ರೂಪಸಿದ್ಧಿಯೂ ಅನುಕೂಲವಾಗಿದೆ. ಗ್ರಾಮಗಳು ಬಂಕಾಪೂರದಲ್ಲಿ ಸಮಾವೇಶಗೊಂಡಾಗ, ಗ್ರಾಮಗಳು ಕೇರಿಗಳಾಗಿ ಪರಿಣಮಿಸಿದವು. ವಟಗ್ರಾಮವೆಂದರೆ (ವಟ–ವಾಟ) ತೋಟ–ಇಲ್ಲವೆ ಮಂದಿರದ ಊರು. ಈ ಎಲ್ಲ ಪರಿಸರವು ಒಳಕೇರಿ (ವಟಕೇರಿ–ವಟುಗ್ರಾಮಕ್ಕೆ ಅನ್ವಯಿಸುತ್ತದೆ. ಅಲ್ಲದೆ ಬಡೋದೆಯ ರಾಷ್ಟ್ರಕೂಟ (ಲಾಟ ದೇಶದ) ಅರಸರು ಉತ್ತರದ ರಾಷ್ಟ್ರಕೂಟ ಅರಸರು. (ವೀರಸೇನ) ಜಿನಸೇನ ಆಚಾರ್ಯರು ಪುನ್ನಾಟ ಸಂಘದವರು (ಕರ್ನಾಟಕ ಸಂಘದವರು). ಮಾನ್ಯಖೇಟದ(ದಕ್ಷಿಣದ)ರಾಷ್ಟ್ರಕೂಟ ಅರಸರ ಅಧ್ಯಕ್ಷತೆಯಲ್ಲಿ ನಡೆದ ಮಹಾಪುರಾಣ ಪ್ರಾರಂಭೋತ್ಸವವು ಬಂಕಾಪೂರದ (ಒಳಕೇರಿ–ವಟಕೇರಿ) ವಟಗ್ರಾಮದಲ್ಲಿಯೇ ಆಗಿರಲು ಸಾಕು.

ಗುಣಭದ್ರನು ರಚಿಸಿದ ಎರಡು ಕೃತಿಗಳಿವೆ. ೧. ಉತ್ತರ ಪುರಾಣ ೨. ಆತ್ಮಾನುಶಾಸನ. ಆತ್ಮಾನುಶಾಸನ(ಅಧ್ಯಾತ್ಮಗ್ರಂಥ).ದಲ್ಲಿ ೨೭೨ ಶ್ಲೋಕಗಳಿದ್ದು ಭರ್ತೃಹರಿಯ ವೈರಾಗ್ಯ ಶತಕದಂತೆ ಬಹು ವರ್ಚಸ್ವಿ ಗ್ರಂಥವಾಗಿದೆ. ಗುಣಭದ್ರನು ಉತ್ತರಪುರಾಣವನ್ನು ರಚಿಸಿ, ಜಿನಸೇನನು ಪ್ರಾರಂಭಿಸಿದ ಮಹಾಪುರಾಣವನ್ನು ಪೂರ್ಣಗೊಳಿಸಿದನು. ಜಿನಸೇನನು ಮಹಾಪುರಾಣದ ಮೊದಲು ಭಾಗವಾಗಿ ಆದಿಪುರಾಣವನ್ನು ಬರೆದು ತೀರಿಕೊಂಡನು.

ಆಚಾರ್ಯತ್ರಯರ ಗ್ರಂಥಗಳು ಭಾಷಾದೃಷ್ಟಿಯಿಂದ ಬಹುಮಹತ್ವದ ಸ್ಥಾನವನ್ನು ಪಡೆದಿವೆ. ಗ್ರಂಥಗಳ ಭಾಷೆಯು ಸಂಸ್ಕೃತವೆಂದು ಹೇಳುವದಾದರೂ ಪ್ರಾಕೃತ ಪ್ರಬಂಧಗಳು ಉದಾಹೃತವಾಗಿವೆ. ಸಾಮಾನ್ಯವಾಗಿ. ಸಂಸ್ಕೃತ ವ್ಯಾಕರಣ ನಿಯಮಗಳನ್ನು ಉಲ್ಲಂಘಿಸಿ, ಸರಳ ಸಂಸ್ಕೃತದಲ್ಲಿ–ಸಮಸಂಸ್ಕೃತದಲ್ಲಿ ಬರೆಯಲಾಗಿದೆ. ಆದ್ದರಿಂದ ಪಾಮರರಿಗೂ ಜೈನಧರ್ಮ ತತ್ವಗಳನ್ನು ತಿಳಿಸಲು ಸಾಧ್ಯವಾಯಿತು: ಸಾಹಿತ್ಯವು ಜನಸಾಮಾನ್ಯರ ಮಟ್ಟಕ್ಕೆ ಬರುವಂತಾಯಿತು.

ಕುಮುದೇಂದುವು ತಾನು ಅಮೋಘವರ್ಷ ನೃಪತುಂಗನ ಗುರುವೆಂದು ಹೇಳಿಕೊಂಡಿದ್ದಾನೆ. ಅವನು ರಚಿಸಿದ ಗ್ರಂಥದ ಹೆಸರು "ಸಿರಿಭೂವಲಯ". ಅದನ್ನು ಅವನು ೧೮ ಮಹಾಭಾಷೆ ಮತ್ತು ೭೦೦ ಲಿಪಿರಹಿತ (ಉಪ)ಭಾಷೆಗಳಲ್ಲಿ ಸರಿಹೋಗುವಂತೆ, ಕಾವ್ಯವನ್ನು ಬರೆದಿದ್ದೇನೆಂದು ಹೇಳಿದ್ದಾನೆ. ಅವುಗಳಲ್ಲಿ ಪ್ರಾಕೃತವೂ ಒಂದಾಗಿದೆ. 'ಸಿರಿಭೂವಲ'ಯದಲ್ಲಿಯ ಶ್ಲೋಕಗಳ ಅಕ್ಷರಗಳನ್ನು ಅನುಲೋಮ ಪ್ರತಿಲೋಮ, ಹಂಸಪಾದಬಂಧ ಮುಂತಾದವುಗಳಿಂದ ಓದಿದರೆ ಬೇರೆಬೇರೆ ಭಾಷೆಗಳ ಪದ್ಯಗಳಾ

ಗುತ್ತವೆ. ಮೊದಲನೆಯ ಅಧ್ಯಾಯದಲ್ಲಿಯ ಪ್ರತಿಯೊಂದು ಶ್ಲೋಕದ ಮೊದಲನೆಯ ಅಕ್ಷರಗಳನ್ನು ಕ್ರಮವಾಗಿ ಕೂಡಿಸಿದಾಗ ಕೆಳಗಿನ ಪ್ರಾಕೃತಶ್ಲೋಕವು ಉಂಟಾಗುವುದು.

> "ಅಟ್ಠವಿಹಕಮ್ಮ ವಿಮುಲಾ ಣಿಟ್ಠಿಯ ಕಜ್ಜಾ
> ಪಣಟ್ಠ ಸಂಸಾರಾ ದಿಟ್ಠಸಯಲತ್ಥಂ ಸಾರಾಸಿದ್ಧಾ ಸಿದ್ಧಿಂಮಮದಿಸಂತು"

ಕಾವ್ಯದ ವಿಷಯ ಗಣಿತವೆಂದು ತೋರುವುದು. ಕವಿಯು ತಾನೇ ಹೇಳಿದಂತೆ, "ಸಿರಿ ವೀರಸೇನಾಚಾರ್ಯರ ಉಪದೇಶವನ್ನು ಆಧರಿಸಿ ಶ್ರೀದಯಾಧರ್ಮಸಮನ್ವಯ 'ಗಣಿತದ' ಮೋದದ ಕಥೆಯನು ಅಲಿಪರು" (ಅಧ್ಯಾಯ ೧೦). ಅದು ಒಂದು ಅಚ್ಚರಿಪಡುವಂತಹ ಕೃತಿಯಾಗಿದೆ. ಕುಮುದೇನ್ದುವಿನ ಶಬ್ದದಲ್ಲಿಯೇ ಹೇಳುವದಾದರೆ "ಬರೆಯಬಾರದು, ಬರೆದರೂ ಓದಬಾರದು ಸಿರಿಭೂವಲಯ" ಎಂದು ಹೇಳಬಹುದು. ಈ ಕಾವ್ಯವು ಗಣಿತದ ರೂಪದಲ್ಲಿ ಅಂಕಿಗಳಿಂದ ಅಕ್ಷರವಾಗಿ, ಸಾಹಿತ್ಯವಾಗಿ ಹುಟ್ಟುವ ಒಗಟು ಸಾಹಿತ್ಯ (Puzzle)ಗಳಂತೆ ಇದೆ. ಅಂಕಾಕ್ಷರ ಲಿಪಿಜ್ಞಾನವು ಅದರಲ್ಲಿದೆ. ಜಗತ್ತಿಗೆ ಒಂದೇ ಒಂದು ಭಾಷೆಯಾಗಬಹುದಾದ ಗಣಿತ (ಅಂಕ) ಭಾಷೆಗೆ ಸಿರಿಭೂವಲಯವು ಮಾರ್ಗದರ್ಶಕವಾಗಿದೆ. ಜಗತ್ತಿಗೆ ಒಂದೇ ಭಾಷೆಯಾಗಬೇಕೆಂಬುವವರು, ಅದರಲ್ಲಿ ಅನೇಕ ಸಲಹೆ ಸೂಚನೆಗಳನ್ನು ಕಾಣಬಹುದು. ಸಾಮಾನ್ಯರಿಗೆ ಕುಮುದೇನ್ದುವಿನ ಸಿರಿಭೂವಲಯವು ಒಂದು ಶುಷ್ಕಶಾಸ್ತ್ರೀಯ ಕೃತಿಯಾಗಿದೆ.

೧೫. ನೇಮಿಚಂದ್ರ (ಕ್ರಿ. ಶ. ೧೦ನೆಯ ಶತಮಾನ)

ನೇಮಿಚಂದ್ರನು ದೇಶೀಯ ಗಣಕ್ಕೆ ಸೇರಿದ ಜೈನಾಚಾರ್ಯನು. ನೇಮಿ-ಚಂದ್ರನನ್ನು ಚಾವುಂಡರಾಯನು ಆದರಿಸುತ್ತಿದ್ದನೆಂದು ಮೈಸೂರು (ಕರ್ನಾಟಕ) ರಾಜ್ಯದ ಶಿವಮೊಗ್ಗ ಜಿಲ್ಲೆಯ ನಗರ ತಾಲೂಕಿನ ಪದ್ಮಾವತಿ ಮಂದಿರದಲ್ಲಿಯ ಶಿಲಾಶಾಸನ(ಕ್ರಿ. ಶ. ೧೫೩೦)ದಿಂದ ಗೊತ್ತಾಗುತ್ತದೆ. (ಎಪಿಗ್ರಾಫಿಕಾ ಕರ್ನಾಟಿಕಾ vol. vii ನಗರ ತಾಲೂಕ ನಂ. 46). ನೇಮಿಚಂದ್ರನು ಚಾವುಂಡರಾಯ ಮತ್ತು ಅವನ ತಾಯಿಯೊಂದಿಗೆ ಪೌದನಪುರದಲ್ಲಿರುವ ಗೊಮ್ಮಟೇಶ್ವರನ ಮೂರ್ತಿ (ಪ್ರತಿಮೆ)ಯನ್ನು ಸಂದರ್ಶಿಸುವ ಸಲುವಾಗಿ ಹೊರಟಿದ್ದನು. ಆದರೆ ಗೊಮ್ಮ-ಟೇಶ್ವರನ ಪ್ರತಿಮೆಯು ವಿಂಧ್ಯಗಿರಿಯ ಮೇಲೆಯೇ ಇದೆಯೆಂದು ಕನಸು ಕಂಡನು. ಗೊಮ್ಮಟೇಶ್ವರನ ಮೂರ್ತಿಯು ಸ್ಥಾಪಿತವಾಯಿತು. ಪ್ರತಿನಿತ್ಯದ ಪೂಜೆಗಾಗಿ ಮತ್ತು ಉತ್ಸವವನ್ನು ನಡೆಸುವುದರ ಸಲುವಾಗಿ ೯೬ ಸಾವಿರ ನಾಣ್ಯಗಳ ಉತ್ಪನ್ನ ಕೊಡುವ ಹಳ್ಳಿಗಳನ್ನು ನೇಮಿಚಂದ್ರನಿಗೆ ಚಾವುಂಡರಾಯನು ಕೊಟ್ಟಿದ್ದಾನೆಂದು-ಮುಂತಾದಾಗಿ ಬಾಹುಬಲಿ ಚರಿತ್ರೆಯಲ್ಲಿ ದೊರೆಯುತ್ತದೆ. ನೇಮಿಚಂದ್ರನು ತನ್ನ ಗೊಮ್ಮಟಸಾರವೆಂಬ ಗ್ರಂಥದಲ್ಲಿ 'ಚಾವುಂಡರಾಯ (ಚಾಮುಂಡರಾಯ)-ರಾಜನನ್ನು ಗೊಮ್ಮಟರಾಯ ಅಥವಾ ಕೇವಲ 'ರಾಯ' ಎಂದು ಕರೆದಿದ್ದಾನೆ. ಗೊಮ್ಮಟರಾಯ ನೆಂಬುದು ಚಾಮುಂಡರಾಯನ (ರಾಜನ) ಇನ್ನೊಂದು ಹೆಸರು. ಚಾವುಂಡರಾಯ

(ಗೊಮ್ಮಟರಾಯನು) ವಿಂಧ್ಯಗಿರಿಯ ಮೇಲೆ ಗೊಮ್ಮಟೇಶ್ವರ(ಬಾಹುಬಲಿ)ನ ಮೂರ್ತಿಯನ್ನು ಮಾಡಿಸಿ ಪ್ರತಿಷ್ಠಾಪಿಸಿದನೆಂದು ಶ್ರವಣಬೆಳಗೊಳದ ಶಿಲಾಲೇಖದಿಂದ ಗೊತ್ತಾಗುತ್ತದೆ. ಬಲಗಡೆಯ ಬಂಡೆಗಲ್ಲಿನ ಮೇಲೆ ಕನ್ನಡ ಲಿಪಿಯಲ್ಲಿ 'ಚಾಮುಂಡರಾಯಂ ಮಾಡಿಸಿದಂ' ಎಂದು ಇದೆ. ಮತ್ತು ಎಡಗಡೆಯ ಕಲ್ಲಿನ ಮೇಲೆ **श्री चामुंड राजे करविले** ಎಂದು ದೇವನಾಗರಿಯಲ್ಲಿ ಇದೆ. (ಇದು ಮರಾಠಿ ಭಾಷೆಯ ಮೊದಲನೆಯ ವಾಕ್ಯವೆಂದು ಪರಿಗಣಿಸಲಾಗುತ್ತದೆ). ನೇಮಿಚಂದ್ರನು ಚಾವುಂಡರಾಯನ ಸಮಕಾಲೀನನು. ಚಾವುಂಡರಾಯನು ತನ್ನ ಚಾವುಂಡರಾಯ ಪುರಾಣವನ್ನು ಶಕ ೯೦೦ (ಕ್ರಿ. ಶ. ೯೭೫)ರಲ್ಲಿ ರಚಿಸಿದನೆಂದು ಗೊತ್ತಾಗುವುದು. ಚಾವುಂಡರಾಯನು ಗಂಗ ಅರಸು ಮಾರಸಿಂಹನ ಸುಪ್ರಸಿದ್ಧ ಮಂತ್ರಿಯಾಗಿದ್ದನು ಮತ್ತು ಮಾರಸಿಂಹನು ಕ್ರಿ. ಶ. ೯೭೫ ರಲ್ಲಿ ಬಂಕಾಪೂರದಲ್ಲಿ ಸಲ್ಲೇಖನವ್ರತದಿಂದ ಪ್ರಾಣತ್ಯಾಗ ಮಾಡಿದನು. ನೇಮಿಚಂದ್ರನು ಚಾವುಂಡರಾಯನ ಸಮಕಾಲೀನನಾದ್ದರಿಂದ ಅವನು ೧೦ ನೆಯ ಶತಮಾನಕ್ಕೆ ಸೇರಿದವನೆಂದು ಹೇಳಬಹುದು.

ಕಾವ್ಯಗಳು : ಅವನು ರಚಿಸಿದ ಗ್ರಂಥಗಳು ಕೆಳಗಿನಂತೆ ಇವೆ.

೧. ದ್ರವ್ಯಸಾರಸಂಗ್ರಹ
೨. ಗೊಮ್ಮಟಸಾರ
೩. ಲಬ್ಧಿಸಾರ
೪. ಕ್ಷಪಣಸಾರ
೫. ತ್ರಿಲೋಕಸಾರ
೬. ಪ್ರತಿಷ್ಠಪಥ

ಅವನು ರಚಿಸಿದ ಎಲ್ಲ ಗ್ರಂಥಗಳು ಶಾಸ್ತ್ರೀಯ ವಿಷಯ ಹಾಗೂ ಧಾರ್ಮಿಕ ವಿಷಯಗಳನ್ನು ಒಳಗೊಂಡಿವೆ.

ನೇಮಿಚಂದ್ರನ ಸಾರಸಂಗ್ರಹ ಸಾಹಿತ್ಯದ ಸ್ಥಾನ: ನೇಮಿಚಂದ್ರನ ಗ್ರಂಥಗಳಿಗೆ ವಿಶಿಷ್ಟಸ್ಥಾನವಿದೆ, ಜೈನಸಾಹಿತ್ಯದಲ್ಲಿ. ಅವನು ಬರೆದ ದ್ರವ್ಯಸಾರಸಂಗ್ರಹ, ಗೊಮ್ಮಟಸಾರ ಮುಂತಾದವುಗಳು ಜೈನತತ್ವಶಾಸ್ತ್ರ 'ಸಾರಸಂಗ್ರಹ' (digest) ಗ್ರಂಥಗಳಾಗಿದ್ದು, ಜೈನಧರ್ಮ ಹಾಗೂ ತತ್ವಜ್ಞಾನಗಳ ಕೈಪಿಡಿಗಳಾಗಿವೆ. ಗೊಮ್ಮಟಸಾರದಲ್ಲಿ ಜೀವ ಹಾಗೂ ಕರ್ಮಗಳ ವಿಚಾರವನ್ನು ಸಂಗ್ರಹರೂಪವಾಗಿ ಹೇಳಿದ್ದಾನೆ. ಧವಲಾ, ಜಯಧವಲಾ ಬೃಹತ್ ಟೀಕಾಗ್ರಂಥಗಳ ಸಾರವನ್ನು ಸಂಗ್ರಹಿಸಿ, ಸಾಮಾನ್ಯರಿಗೂ ಹಾಗೂ ಶ್ರಾವಕರಿಗೂ ಉಪಯೋಗಿಸಲು ಅನುಕೂಲವಾಗುವಂತೆ ಬರೆದಿದ್ದಾನೆ. ಅವನ ಸಾರಸಂಗ್ರಹ (digest) ಗ್ರಂಥಗಳ ಮೇಲಿರುವ ಅನೇಕ ಟೀಕೆ-ಟಿಪ್ಪಣಿಗಳು ಅವುಗಳ ಜನಪ್ರಿಯತೆಯನ್ನು ಸಮರ್ಥಿಸುತ್ತವೆ. ದ್ರವ್ಯಸಾರಸಂಗ್ರಹದ ಮೇಲೆ ಬ್ರಹ್ಮದೇವನು ಟೀಕೆಯನ್ನು ಬರೆದಿದ್ದಾನೆ. ಗೊಮ್ಮಟಸಾರದ ಮೇಲೆ ಅಭಯಚಂದ್ರನ ಟೀಕೆಯಿದೆ. ಅಲ್ಲದೆ ಗೊಮ್ಮಟಸಾರದ ಮೇಲೆ 'ವೀರಮಾರ್ತಾಂಡೀ' ಎಂಬ ಚಾವುಂಡರಾಯ(ವೀರಮಾರ್ತಾಂಡ ಎಂದು ಅವನ ಬಿರು-

ದಿತ್ತು)ನು ರಚಿಸಿದ ಕನ್ನಡ ಟೀಕೆಯಿದೆ. ನೇಮಿಚಂದ್ರನ ಶಿಷ್ಯನಾದ ಮಾಧವಚಂದ್ರ ತ್ರೈವಿದ್ಯ--ಇವನು ತ್ರಿಲೋಕಸಾರದ ಮೇಲೆ ಟೀಕೆಯನ್ನು ಬರೆದಿದ್ದಾನೆ. ನೇಮಿಚಂದ್ರನು ಚಾವುಂಡರಾಯನಿಗೆ ತಿಳಿಸುವುದರ ಸಲುವಾಗಿ ಈ ಗ್ರಂಥವನ್ನು ರಚಿಸಿದನೆಂದು ಮಾಧವಚಂದ್ರನು ತನ್ನ ಟೀಕೆಯಲ್ಲಿ ಹೇಳಿದ್ದಾನೆ. ತ್ರಿಲೋಕಸಾರವು ಒಂದು ವಿಶಿಷ್ಟ ಗ್ರಂಥ. ಜೈನಸಂಪ್ರದಾಯದ ವಿಶ್ವದ ಕಲ್ಪನೆ (cosmography) ಯು ಅದರಲ್ಲಿದೆ. ಅಲ್ಲದೆ ಗ್ರಹ ಹಾಗೂ ನಕ್ಷತ್ರಗಳ ಪರಿಭ್ರಮಣ ಕಕ್ಷ, ಪೃಥ್ವಿಯ ಪರಿಭ್ರಮಣದಿಂದ ಹಗಲು ರಾತ್ರಿಗಳು ಹೇಗೆ ಉಂಟಾಗುತ್ತವೆಂಬ ಆಧುನಿಕ ವಿಚಾರಗಳು ಅದರಲ್ಲಿ ಬರುವವು. 'ಪ್ರತಿಷ್ಠಾಪಥ'ವು ಮೂರ್ತಿಶಿಲ್ಪಶಾಸ್ತ್ರವಾಗಿದ್ದು ಮೂರ್ತಿಗಳನ್ನು ಪ್ರತಿಷ್ಠಾಪಿಸುವ ವಿಧಿವಿಧಾನಗಳ ಬಗ್ಗೆ ವಿವರಣೆಯಿದೆ.

೧೬. ಪುಷ್ಪದಂತ (ಕ್ರಿ. ಶ. ೧೦ನೆಯ ಶತಮಾನ)

ಪುಷ್ಪದಂತನ ಇನ್ನೊಂದು ಹೆಸರು 'ಖಂಡ' ಎಂದು ಇತ್ತು. ಖಂಡ ಎಂಬುದು ಸಂಸ್ಕೃತ 'ಸ್ಕಂದ' ಶಬ್ದದ ಪ್ರಾಕೃತ ರೂಪ. (ನಾಥುಪ್ರೇಮಿ-ಜೈನ ಧರ್ಮ ಔರ ಇತಿಹಾಸ ಪು. ೨೩೦). ಕವಿಯು ಕಾಶ್ಯಪ ಗೋತ್ರದಲ್ಲಿ ಹುಟ್ಟಿದ್ದ ತಂದೆಯ ಹೆಸರು ಕೇಶವಭಟ್ಟ ಮತ್ತು ತಾಯಿಯ ಹೆಸರು ಮುಗ್ಧಲಾದೇವಿ. ಗೋತ್ರ ಹಾಗೂ ತಂದೆಯ ಹೆಸರ ಮೇಲಿಂದ ಅವನು ಜಾತಿಯಿಂದ ಬ್ರಾಹ್ಮಣನಾಗಿದ್ದನೆಂದು ವಿದಿತವಾಗುವುದು. ಅವನು ಮೊದಲು ಶೈವನಾಗಿದ್ದು ಆ ಮೇಲೆ ಜೈನ ಧರ್ಮಕ್ಕೆ ಮತಾಂತರ ಹೊಂದಿ, ಜೈನ ಸಂನ್ಯಾಸ ವ್ರತವನ್ನು ಪಡೆದು ಮೃತನಾದನು. ಅವನು ಜೈನವಿದ್ಯೆಯಲ್ಲಿ ಪ್ರವೀಣನಾಗಿರುವಂತೆ, ಬ್ರಾಹ್ಮಣವಿದ್ಯೆಯಲ್ಲಿಯೂ ಪ್ರವೀಣನಾಗಿದ್ದನು. ಅವನು ಹುಟ್ಟಿದ ಸ್ಥಳವು ಯಾವುದು? ಅವನು ಯಾರಲ್ಲಿ ಅಧ್ಯಯನ ಮಾಡಿದನು? ಎಂಬುದು ಗೊತ್ತಾಗುವದಿಲ್ಲ. ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ(ಮಳಖೇಡ)ಕ್ಕೆ ಬರುವ ಪೂರ್ವದಲ್ಲಿ ಅವನು ಯಾರ ಆಶ್ರಯದಲ್ಲಿದ್ದನೆಂಬುದು ಹೇಳಲು ನಿಶ್ಚಿತ ಆಧಾರಗಳಿಲ್ಲ. ದಿಗಂಬರ ಜೈನಧರ್ಮ ಪ್ರಚಾರದಲ್ಲಿರುವ ದಕ್ಷಿಣದಿಂದ ಬಂದನೆಂದು ಕೆಲವರು ವಾದಿಸುತ್ತಾರೆ. ಅವನು ಮಾನ್ಯಖೇಟ ರಾಷ್ಟ್ರಕೂಟ ಅರಸು ೩ನೆಯ ಕೃಷ್ಣನ ಮಂತ್ರಿಯಾದ ಭರತನ ಆಶ್ರಯದಲ್ಲಿದ್ದನು. ಅವನು ಮಹಾಪುರಾಣವನ್ನು ಕ್ರಿ. ಶ. ೯೬೫ ರಲ್ಲಿ ರಚಿಸಿದನು. ಮುಂದೆ ಭರತನ ಮರಣದ ನಂತರ ಅಂದರೆ ಕ್ರಿ. ಶ. ೯೬೬ ರಲ್ಲಿ ಭರತನ ಪುತ್ರನಾದ 'ನನ್ನ'ನ ಆಶ್ರಯದಲ್ಲಿದ್ದು 'ಜಸಹರ-ಚರಿಉ' ಮತ್ತು 'ಣಾಯಕುಮಾರಚರಿಉ' ಎಂಬ ಕಾವ್ಯಗಳನ್ನು ರಚಿಸಿದನು. (ಣಾಯಕುಮಾರ I ೩-೪ ಮತ್ತು ಜಸಹರ ಪ್ರಶಸ್ತಿ IV. ೩೧. ೭-೧೦ ನೋಡಿರಿ). 'ನನ್ನ' ಹಾಗೂ ಅವನ ಮಕ್ಕಳು (ಗುಣವಮ್ಮ ಮತ್ತು ಸೋಹಣ) 'ಣಾಯಕುಮಾರ ಚರಿಉ'ವನ್ನು ಬರೆಯಲು ಪ್ರೇರಿಸಿದರು. ಅವೆಲ್ಲವುಗಳ ಮೇಲಿಂದ ಕವಿಯು ನಿಶ್ಚಿತ ಕಾಲವನ್ನು ಹೇಳಲಿಕ್ಕಾಗದಿದ್ದರೂ ೧೦ನೆಯ ಶತಮಾನದವನೆಂದು ಹೇಳಬಹುದು.

ಕಾವ್ಯಗಳು ಹಾಗೂ ವಿಷಯ : ಪುಷ್ಪದಂತನು ಮೂರು ಮಹಾಕಾವ್ಯಗಳನ್ನು ರಚಿಸಿದನು.

೧. ಮಹಾಪುರಾಣ(ಕ್ರಿ. ಶ. ೯೬೫) : ಇದಕ್ಕೆ ತ್ರಿಷಷ್ಟಿಮಹಾಪುರುಷ ಅಲಂಕಾರವೆಂದು ಇನ್ನೊಂದು ಪೆಸರೂ ಇರುವುದು. ಇದರಲ್ಲಿ ೬೩ ಮಹಾಪುರುಷರ ಚರಿತ್ರೆಗಳಿವೆ. ಇದು ಕಥನ ಸಾಹಿತ್ಯಕ್ಕೆ ಸೇರಿದ್ದು ಆಗಿದೆ.

೨. ಣಾಯಕುಮಾರಚರಿಉ (ಕ್ರಿ. ಶ. ೯೬೭) : ಇದರಲ್ಲಿ ಶ್ರೀ ಪಂಚಮೀ ಉಪವಾಸದ ಪರಿಣಾಮ ಕುರಿತು ಕಥೆಯಿದೆ. ಈ ಕಾವ್ಯದ ನಾಯಕ ನಾಗಕುಮಾರ. ಅವನು ತನ್ನ ಪೂರ್ವಜನ್ಮದಲ್ಲಿ ಶ್ರೀ ಪಂಚಮೀ ವ್ರತವನ್ನು ಆಚರಿಸಿದ್ದರಿಂದ ಅವನಿಗೆ ಅಪ್ರತಿಮವಾದ ಸೌಂದರ್ಯವು ಲಭಿಸಿತು. ಅವನು ೨೪ ಕಾಮದೇವರಲ್ಲಿ ಒಬ್ಬನೆಂದು ಜೈನರಿಂದ ಪರಿಗಣಿತವಾಗಿದೆ. ಆದ್ದರಿಂದ ಪುಷ್ಪದಂತನು ಕಾಮನ ಪರ್ಯಾಯ ನಾಮಗಳಾದ ಅನಂಗ, ಝಷಕೇತು ಮುಂತಾದ ಹೆಸರುಗಳಿಂದ ಅವನನ್ನು ವರ್ಣಿಸಿದ್ದಾನೆ.

೩. ಜಸಹರ ಚರಿಉ (ಕ್ರಿ. ಶ. ೯೬೮-೯೭೨) : ಇದೊಂದು ಕಥಾಸಾಹಿತ್ಯ. ಇದರಲ್ಲಿ ಯಶೋಧರನ ಚರಿತ್ರೆಯು ಇದೆ. ಕಥೆಯು ಹೀಗೆ ಪ್ರಾರಂಭವಾಗುವುದು :

'ಉಜ್ಜಯಿನೀ ರಾಜಧಾನಿಯಾಗಿರುವ ಭರತವರ್ಷದಲ್ಲಿರುವ ಅವಂತೀ ದೇಶದಲ್ಲಿ ಯಶೋಧವಲನೆಂಬ ರಾಜನಿದ್ದನು, ಅವನ ಮಗನಾದ ಯಶೋಹಾರನು ತಂದೆಯ ತರುವಾಯ ಪಟ್ಟವೇರಿದನು. ಅವನು ಅಜಿತಾಂಗದ ಅರಸನ ಮಗಳಾದ ಚಂದ್ರಮತಿಯನ್ನು ಲಗ್ನವಾದನು. ಆ ಈರ್ವರ(ದಂಪತಿಗಳ) ಮಗನು ನಾನು, ನನ್ನ ಹೆಸರು ಯಶೋಧರ (ಜಸಹರ)" ಎಂದು ಕಥೆ ಮುಂದೆ ಸಾಗುವುದು—ಮಹಾಕಾವ್ಯ (epic poem) ದ ರೀತಿಯಲ್ಲಿ. ಕಥೆಯ ಉದ್ದಿಷ್ಟ ಪರಿಣಾಮ ಎಲ್ಲ ಜೈನ ಕಥೆಗಳಲ್ಲಿಯಂತೆ ಸನ್ಯಾಸ ಸ್ವೀಕಾರ ಹಾಗೂ ಸ್ವರ್ಗಪ್ರಾಪ್ತಿ...ಕೊನೆಯಲ್ಲಿ ಅಭಯರುಚಿ ಮತ್ತು ಅಭಯಮತಿಗಳೂ ಧಾರ್ಮಿಕ ಜೀವನವನ್ನು ಆಚರಿಸಿ ಸನ್ಯಾಸವನ್ನು ಸ್ವೀಕರಿಸಿ ಸ್ವರ್ಗದಲ್ಲಿ ದೇವತೆಗಳಾಗಿ ಹುಟ್ಟುವರು ಎಂದು ಕಥೆಯು ಮುಕ್ತಾಯವಾಗುವುದು.

೧೭. ಕನಕಾಮರ (ಕ್ರಿ. ಶ. ೧೦ ಅಥವಾ ೧೧ನೆಯ ಶತಮಾನದ ಆದಿಭಾಗ)

ಕನಕಾಮರಮುನಿ ಸಂನ್ಯಾಸಿಯಾಗಿದ್ದನು. ಅವನು ಚಂದ್ರಗೋತ್ರದ ಬ್ರಾಹ್ಮಣವಂಶದಲ್ಲಿ ಹುಟ್ಟಿದ್ದು ಕೋತಿಲಗಣಕ್ಕೆ ಸೇರಿದವನಾಗಿದ್ದನು. (ಕರಕಂಡ ಚರಿಉ-ಹೀರಾಲಾಲ ಜೈನರ ಪ್ರಸ್ತಾವನೆ P. 34). ಅವನ ಕಾಲ ಹಾಗೂ ಸ್ಥಳಗಳು ವಿವಾದಾಸ್ಪದವಾಗಿವೆ. ಪ್ರಾಸ್ತಾವಿಕ ಶ್ಲೋಕಗಳಲ್ಲಿ ಮಹಾಪುರಾಣ ಕರ್ತೃವಾದ ಪುಷ್ಪದಂತನನ್ನು ಸೇರಿಸಿದ್ದರಿಂದ, ಅವನು ಕ್ರಿ. ಶ. ೯೬೫ರ ನಂತರದವನೆಂದು ಅಂಗೀಕರಿಸಬಹುದು. (ಹೀರಾಲಾಲ, ಪ್ರಸ್ತಾವನೆ P. 35) ಕನಕಾಮರಮುನಿ

ಕರಕಂಡಚರಿತೆಯನ್ನು 'ವಿಜಯಪಾಲ'ನ ಆಶ್ರಯದಲ್ಲಿರುವ ಭೂಪಾಲನ ಚಿತ್ತವನ್ನು ಆಕರ್ಷಿಸಿದ ಮತ್ತು ಕನ್ನನ ಹೃದಯವನ್ನು ಆಹ್ಲಾದಗೊಳಿಸಿದ, ಮಂತ್ರಿ(ಸನ್ನ)ಯ ಅಪರಾರ್ಥವಾಗಿ ಕಾವ್ಯವನ್ನು ಆಸಿಇಯ[೧೧] (ಆಶ್ರಿತ) ಪಟ್ಟಣದಲ್ಲಿ ರಚಿಸಿದನೆಂದು ಕವಿಯು ಪ್ರಶಸ್ತಿಯಲ್ಲಿ ಹೇಳಿಕೊಂಡಿದ್ದಾನೆ. ಅಲ್ಲಿ ಹೇಳಿದ 'ಆಸಿ ಇಯ' ಯಾವುದು ಎಂಬುದನ್ನು ನಿಶ್ಚಯವಾಗಿ ಹೇಳಲು ಆಧಾರಗಳಿಲ್ಲ. ಔರಂಗಾಬಾದ ಜಿಲ್ಲೆಯ 'ಭೊಕರ್ದನ್' ತಾಲೂಕಿನ, ಈಗ ಸಣ್ಣ ಹಳ್ಳಿಯಾಗಿರುವ "ಅಸ್ಸಯಿ" (Assayi—ಮರಾಠರು ವೆಲ್ಲಸ್ಲಿಯ ಕೂಡ ಯುದ್ಧಮಾಡಿದ ಸ್ಥಳ) ಆಗಿರಬಹುದೇ? ಅಲ್ಲಿ ಹೇಳಿದ 'ಕನ್ನ'ನು (ಕೃಷ್ಣನು) ಯಾರು. ರಾಷ್ಟ್ರಕೂಟ ೩ನೆಯ ಕೃಷ್ಣನನ್ನು ಪುಷ್ಪದಂತನು 'ಕಣ್ಹ'ನೆಂದು ಕರೆದಿದ್ದಾನೆ. ಅಸ್ಸಯೀ ಗ್ರಾಮವು ಖಂಡಿತವಾಗಿ ರಾಷ್ಟ್ರಕೂಟ ರಾಜ್ಯಕ್ಕೆ ಸೇರಿತ್ತು. ಅಸ್ಸಯಿ ಗ್ರಾಮವು ತೇರಾಪುರ ಗುಹೆಗಳಿಂದ ಬಹಳ ದೂರದಲ್ಲಿಲ್ಲ. ಕನಕಾಮರನು ತೇರಾಪುರ(ಸಂಧಾರಾಶಿವ) ಗುಹೆಗಳನ್ನು ನೋಡಿ ಸ್ಫೂರ್ತಿಗೊಂಡು ಕರಕಂಡಚರಿತೆಯನ್ನು ಬರೆದಂತೆ ಕಾಣುತ್ತದೆ. ತೇರಾಗ್ರಾಮವು ಹಿಂದಿನ ಹೈದ್ರಾಬಾದ ಸಂಸ್ಥಾನ (ಈಗಿನ ಆಂಧ್ರಪ್ರದೇಶ)ದ ಉಸ್ಮಾನಿಯಾಬಾದ ಜಿಲ್ಲೆಯಲ್ಲಿ ಇದೆ. ಐತಿಹಾಸಿಕ ತಗರವೇ ತೇರಾ (ಹೀರಾಲಾಲರ ಪ್ರಸ್ತಾವನೆ P. 42). ಮೇಲಿನ ಗ್ರಹಿಕೆಗಳು ನಿಜವಾಗಿದ್ದರೆ ಕನಕಾಮರನನ್ನು ಹತ್ತನೆಯ ಶತಮಾನದ ತುದಿಯಲ್ಲಿ ಇಲ್ಲವೆ ಹನ್ನೊಂದನೆಯ ಶತಮಾನದ ಆದಿಯಲ್ಲಿ ಸೇರಿಸಬಹುದು. ಅಪಭ್ರಂಶ ಕಾವ್ಯದೃಷ್ಟಿಯಿಂದ ಪುಷ್ಪದಂತನ ತರುವಾಯದವನು. ಅದ್ದರಿಂದ ಪುಷ್ಪದಂತನ ಮಾಲಿಕೆಯಲ್ಲಿ ಸೇರಿಸಲಾಗಿದೆ.

ಕಾವ್ಯ ಹಾಗೂ ಅದರ ವಿಷಯ : ಕನಕಾಮರ ಕವಿಯ ಕಾವ್ಯದ ಹೆಸರು 'ಕರಕಂಡಚರಿಉ'(ಕರಕಂಡ ಚರಿತ್ರೆ). ಕರಕಂಡನೆಂದರೆ ಕೈಯಲ್ಲಿ ಚಿಕ್ಕೆ(ಇಸಬು) ಯುಳ್ಳವನು. ಅದ್ದರಿಂದ ಅವನಿಗೆ ಆ ಹೆಸರು ಬಂತು. ಅವನು ಪೂರ್ವಜನ್ಮದಲ್ಲಿ ಕೆಸರಿನಿಂದ ಕೂಡಿದ ಹೂವಿನಿಂದ ಪೂಜಿಸಿದ್ದರಿಂದ ಅವನ ಕೈಮೇಲೆ ಚಿಕ್ಕೆ(ಇಸಬು) ಉಂಟಾಯಿತು. ಕರಕಂಡ ರಾಜನ ಸಾಹಸದ ಕೃತ್ಯಗಳು—ಯುದ್ಧಗಳು, ಗವಿಗಳಲ್ಲಿ ಜಿನಮಂದಿರಗಳ ನಿರ್ಮಾಣ, ವಿರಕ್ತಿ, ಸಂನ್ಯಾಸಸ್ವೀಕಾರ ಮುಂತಾದ ವಿಷಯಗಳು ಅದರಲ್ಲಿ ಬರುವವು.

೧೮. ತ್ರಿವಿಕ್ರಮ (ಕ್ರಿ. ಶ. ೧೩ನೆಯ ಶತಮಾನದ ಪೂರ್ವಾರ್ಧ ಅಂತ್ಯ)

ತ್ರಿವಿಕ್ರಮನು ದಿಗಂಬರ ಜೈನನಾದ್ದರಿಂದ, ದಾಕ್ಷಿಣಾತ್ಯನು — ಕರ್ನಾಟಕದವನು. ವೀರಸೇನ, ಜಿನಸೇನರ ಧವಲಾ-ಜಯಧವಲಾ ಟೀಕೆಗಳ ಅಭ್ಯಾಸವು ಅವನನ್ನು ಪ್ರಾಕೃತವ್ಯಾಕರಣ ರಚಿಸಲು ಪ್ರೇರಿಸಿತು. (ಉಪಾಧ್ಯೆ-ಕರ್ನಾಟಕ

---

೧೧. 'ಆಸಿ ಇಯ'—'ಆಶ್ರಿತ'. ಚಕ್ರವರ್ತಿ ಶಾಲಿವಾಹನರ ರಾಜಧಾನಿ ಪ್ರತಿಷ್ಠಾನವು ಪ್ರತಿಷ್ಠಿತವಾದರೆ, ಆಶ್ರಿತರಾಜರ ರಾಜಧಾನಿ 'ಆಶ್ರಿತ'ವಾಗಿರಬಹುದಲ್ಲವೇ ?

ಫ್ರೊ ದಿ ಏಜೆಸ್). ಅವನು ಕರ್ನಾಟಕದಲ್ಲಿ ಪ್ರಚಲಿತವಾದ ಪ್ರಾಕೃತದ ಮೇಲೆ ತನ್ನ ವ್ಯಾಕರಣವನ್ನು ರಚಿಸಿರಲು ಸಾಕು. ತ್ರಿವಿಕ್ರಮನ ಕಾಲವನ್ನು ನಿಶ್ಚಿತವಾಗಿ ಹೇಳಲು ಆಧಾರಗಳಿಲ್ಲ. ವೈದ್ಯರು ಸಾಧಕ–ಬಾಧಕ ಪ್ರಮಾಣಗಳನ್ನು ವಿವೇಚಿಸಿ ತ್ರಿವಿಕ್ರಮನ ಕಾಲವನ್ನು ಕ್ರಿ. ಶ. ೧೩ನೆಯ ಶತಮಾನದ ಅರ್ಧಭಾಗದ ಅಂತ್ಯದಲ್ಲಿ ಹೊಂದಿಸಬಹುದೆಂದು ನಿರ್ಣಯಿಸಿದ್ದಾರೆ. (ಪ್ರಾಕೃತ ಶಬ್ದಾನುಶಾಸನಮ್–ವೈದ್ಯರ ಪ್ರಸ್ತಾವನೆ P. xxxiii). ತ್ರಿವಿಕ್ರಮನು ತನ್ನ ಪ್ರಾಕೃತ ವ್ಯಾಕರಣವನ್ನು ಕ್ರಿ. ಶ. ೧೨೩೬ರಲ್ಲಿ ರಚಿಸಿದನೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. (ಉಪಾಧ್ಯೆ–ಕರ್ನಾಟಕ ಥ್ರೂ ದಿ ಏಜೆಸ್ P. 478).

ಪ್ರಾಕೃತ ಶಬ್ದಾನುಶಾಸನದ ವಿಮರ್ಶೆ : ತ್ರಿವಿಕ್ರಮನು ರಚಿಸಿದ ಪ್ರಾಕೃತ ವ್ಯಾಕರಣದ ಹೆಸರು–'ಪ್ರಾಕೃತ ಶಬ್ದಾನುಶಾಸನಮ್'. ಅದರ ಮೇಲೆ ಸ್ವೋಪಜ್ಞವೃತ್ತಿ ಎಂಬ ತನ್ನದೇ ಆದ ಟೀಕೆಯನ್ನು ಜೋಡಿಸಿದ್ದಾನೆ. ಹೇಮಚಂದ್ರ ಮೊದಲಾದ ಪ್ರಾಕೃತ ವ್ಯಾಕರಣಕಾರರಂತೆ ಪ್ರಾಕೃತ ಪ್ರಕಾರಗಳನ್ನು(ಪ್ರಭೇದಗಳನ್ನು) ವಿವರಿಸಿ, ದೇಶೀಯಗಳ ಬಗ್ಗೆ ೬ (ಆರು) ವಿಶಿಷ್ಟ ಸೂತ್ರಗಳನ್ನು ಜೋಡಿಸಿದ್ದಾನೆ. ಐದು ಸೂತ್ರಗಳ ಕೆಳಗೆ ಬರುವ ದೇಶ್ಯಗಳನ್ನು ಸಂಸ್ಕೃತಕ್ಕೆ ಸಂಬಂಧಿತವಾಗಿವೆಯೆಂದು ತೋರಿಸಿ, ಆರನೆಯ ಸೂತ್ರ (III-4072—ಋಡಗಾಸ್ತು ದೇಶ್ಯಾಃ ಸಿದ್ಧಾಃ)ದ ಕೆಳಗೆ ಬರುವ ದೇಶ್ಯಗಳು ಬಹಳ ವಿಕೃತವಾದ್ದರಿಂದ ಅವುಗಳಿಗೆ ಸಂಸ್ಕೃತದ ಸಂಬಂಧ-ವನ್ನು ತೋರಿಸುವುದು ಕಠಿಣಸಾಧ್ಯವೆಂದು ಹೇಳಿದರೂ, ಅವುಗಳ ಸಂಬಂಧವು ಸಂಸ್ಕೃತಕ್ಕೆ ಇರುವುದನ್ನು ಅಲ್ಲಗಳೆಯುವಂತೆ ಇಲ್ಲ ಎಂದು ಅಭಿಪ್ರಾಯವುಳ್ಳವ-ನಾಗಿದ್ದಾನೆ. ಹೇಮಚಂದ್ರನೂ ಕೂಡ ಅದೇ ಅಭಿಪ್ರಾಯವನ್ನು ತನ್ನ ದೇಶೀಯ ನಾಮಮಾಲೆಯಲ್ಲಿ ('ವಡ್ಡ' ಎಂಬುದು ಇಂತಹದೊಂದು ದೇಶೀಯ ಶಬ್ದ. ಅದರ ಸಂಬಂಧವನ್ನು ನಾವು 'ಭಗವತ್' ಇಲ್ಲವೆ 'ಬೃಹತ್'ಕ್ಕೆ ತೋರಿಸಿದ್ದೇವೆ.) ವ್ಯಕ್ತ ಪಡಿಸಿದ್ದಾನೆ. ಕನ್ನಡ (ದ್ರಾವಿಡ) ವ್ಯಾಕರಣಕಾರರೂ ಕೂಡ (ಪಾಶ್ಚಾತ್ಯ ಪಂಡಿತರು ಹೀಗೇ ಅಭಿಪ್ರಾಯಪಡಲಿ) ಕನ್ನಡ ಮೊದಲಾದ ದೇಶೀಯಗಳು ಸಂಸ್ಕೃತಕ್ಕೆ ಸಂಬಂಧಿತ ವಾಗಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ.

ತ್ರಿವಿಕ್ರಮನ ಸ್ಥಾನ : ತ್ರಿವಿಕ್ರಮನು ದಕ್ಷಿಣಭಾರತದ ಪ್ರಾಕೃತ ವ್ಯಾಕರಣ ಕಾರರಲ್ಲಿ ಅಗ್ರಸ್ಥಾನ ಪಡೆದಿದ್ದಾನೆ. ಅವನ ವ್ಯಾಕರಣವು ಅಖಿಲ ದಕ್ಷಿಣ–ಭಾರತದ ಅಧಿಕೃತ ವ್ಯಾಕರಣವೆಂದು ಪರಿಗಣಿತವಾಗಿದೆ. (ಉಪಾಧ್ಯೆ–ಕರ್ನಾಟಕ ಥ್ರೂ ದಿ ಏಜೆಸ್ P. 471). ಅವನ ವ್ಯಾಕರಣದ ಮೇಲೆ (ತನ್ನ ಸ್ವೋಪಜ್ಞ ವೃತ್ತಿಯಲ್ಲದೆ) ಮೂರು ಪ್ರಸಿದ್ಧ ಟೀಕೆಗಳಿದ್ದು, ಪ್ರಾಕೃತ ರೂಪಾವತಾರ (ಸಿಂಹರಾಜ-ಜೈನ) ಷಡ್ಭಾಷಾಚಂದ್ರಿಕಾ (ಲಕ್ಷ್ಮೀಧರ – ಬ್ರಾಹ್ಮಣ) ಪ್ರಾಕೃತಮಣಿದೀಪ (ಅಪ್ಪಯ್ಯದೀಕ್ಷಿತ–ಬ್ರಾಹ್ಮಣ) ಎಂಬವು ಸ್ವತಂತ್ರವ್ಯಾಕರಣವಷ್ಟೇ ಪ್ರಸಿದ್ಧವಾಗಿದ್ದು

ಅವನ ವ್ಯಾಕರಣವು ಜಾತಿ, ಮತ, ಪಂಥ ಭೇದವಿಲ್ಲದೆ ಸ್ವೀಕೃತವಾಗಿ ಅವು ತ್ರಿವಿಕ್ರಮನ ಜನಪ್ರಿಯತೆಯನ್ನು ತೋರಿಸುತ್ತವೆ.

ಪ್ರಾಕೃತ(ಅಪಭ್ರಂಶ)ಸಾಹಿತ್ಯ ಕರ್ನಾಟಕದಲ್ಲಿ ವಿವಿಧ ರೂಪಗಳಲ್ಲಿ, ಸುಮಾರು ೧೫೦೦ ವರುಷಗಳ ವರೆಗೆ (ಗುಣಾಢ್ಯನಿಂದ ತ್ರಿವಿಕ್ರಮನ ವರೆಗೆ) ನಡೆದುಬಂದ ದಾರಿಯ ವಿವರಣೆಯಿದು. ಕನ್ನಡಭಾಷೆ ಹಾಗೂ ಸಾಹಿತ್ಯಗಳ ಮೇಲೆ ಅದ ಅವುಗಳ ಪ್ರಭಾವವೂ ಇದರಿಂದ ಗೋಚರಿಸುತ್ತದೆ.

ಅನ್ಯಭಾಷಾಬೋಧನೆ

೪. ಭಾಷಾ ವೈಜ್ಞಾನಿಕ ಪದ್ಧತಿ

ವಿಲ್ಯಂ ಮಾಡ್ತ

ಭಾಷಾಧ್ಯಾಪನದ ಇತಿಹಾಸವನ್ನು ಗಮನಿಸಿದಾಗ ಈ ವರೆಗಿನ ಪದ್ಧತಿಗಳಲ್ಲಿ ಹಲವಾರು ಲೋಪದೋಷಗಳು ಕಂಡುಬರುತ್ತವೆ. ಇವುಗಳನ್ನು ನಿವಾರಿಸಲು ಎಲ್ಲ ದೃಷ್ಟಿಯಿಂದಲೂ ಸಮಂಜಸವಾದ ಭಾಷಾ ಅಧ್ಯಾಪನಾ ಪದ್ಧತಿಯೊಂದರ ಆವಶ್ಯಕತೆಯಿತ್ತು. ಭಾಷಾ ವಿಜ್ಞಾನಿಗಳು ಈ ದೆಸೆಯಲ್ಲಿ ಮಾಡಿದ ಸತತ ಪ್ರಯತ್ನದ ಫಲವಾಗಿ ಭಾಷಾ ವೈಜ್ಞಾನಿಕ ಪದ್ಧತಿ ಈ ಶತಮಾನದ ಆದಿಯಲ್ಲಿ ಹುಟ್ಟಿತು. ಅನ್ಯ ಭಾಷೆಯನ್ನು ಸ್ವಭಾಷೆಯಂತೆ ಲೀಲಾಜಾಲವಾಗಿ ಬಳಸುವ ಸಾಮರ್ಥ್ಯವನ್ನು ಒದಗಿಸುವುದೇ ಪ್ರಸ್ತುತ ಪದ್ಧತಿಯ ಗುರಿ.

ಪ್ರಾರಂಭದಲ್ಲಿ ಭಾಷೆಯ ಮೂಲ ವಾಕ್ಯಗಳನ್ನು ಕಂಠಪಾಠ ಮಾಡಿಸುವುದರ ಮೂಲಕ ಭಾಷಾಬೋಧನೆ ನಡೆಯುತ್ತದೆ. 'ನಾನು ಊಟ ಮಾಡುತ್ತೇನೆ' 'ನಾನು ತಿಂಡಿ ತಿನ್ನುತ್ತೇನೆ'. 'ನಾನು ಹಾಲು ಕುಡಿಯುತ್ತೇನೆ' ಮುಂತಾದ ಚಿಕ್ಕ ನಿಜಾರ್ಥಕ ನೇರ ವಾಕ್ಯಗಳು ಮೂಲ ವಾಕ್ಯಗಳೆನಿಸುತ್ತವೆ. ತಕ್ಕುದಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಈ ವಾಕ್ಯಗಳ ರೂಢೀಕರಣ ನಡೆಯುತ್ತದೆ. ಈ ರೂಢೀಕರಣ ಆಟ ಕಲಿಕೆಯ ರೂಪದಲ್ಲಿ ನಡೆಯುವುದರಿಂದ ಕಲಿತ ವಿಷಯ ವಿದ್ಯಾರ್ಥಿಗೆ ಮನದಟ್ಟಾಗುವುದು. ಈ ರೀತಿಯ ರೂಢೀಕರಣ ಪ್ರಸ್ತುತ ಪದ್ಧತಿಯ ವೈಶಿಷ್ಟ್ಯಗಳಲ್ಲೊಂದು.

ಮೂಲ ವಾಕ್ಯಗಳ ರೂಢೀಕರಣದ ಮಾದರಿ :

ಅಧ್ಯಾಪಕ :	ನಾನು ಊಟ ಮಾಡುತ್ತೇನೆ
ವಿದ್ಯಾರ್ಥಿ :	ನಾನು ಊಟ ಮಾಡುತ್ತೇನೆ.
ಅಧ್ಯಾಪಕ :	ನಾನು ಕಾಫಿ ಕುಡಿಯುತ್ತೇನೆ.
ವಿದ್ಯಾರ್ಥಿ :	ನಾನು ಕಾಫಿ ಕುಡಿಯುತ್ತೇನೆ.
ಅಧ್ಯಾಪಕ :	ನಾನು ಪಾಠ ಓದುತ್ತೇನೆ
ವಿದ್ಯಾರ್ಥಿ :	ನಾನು ಪಾಠ ಓದುತ್ತೇನೆ.
ಅಧ್ಯಾಪಕ :	ನಾನು ಕನ್ನಡ ಬರೆಯುತ್ತೇನೆ
ವಿದ್ಯಾರ್ಥಿ :	ನಾನು ಕನ್ನಡ ಬರೆಯುತ್ತೇನೆ.

ವಿದ್ಯಾರ್ಥಿ ದೈನಂದಿನ ಜೀವನದಲ್ಲಿ ಬಳಸುವಂತಹ ಹಲವಾರು ಮೂಲ ವಾಕ್ಯಗಳನ್ನು ಚೆನ್ನಾಗಿ ಕಲಿತ ಬಳಿಕ ಅವನಿಗೆ ರೂಪಾಂತರ ತಂತ್ರವನ್ನು ಕಲಿಸಿ ನಾನಾ ವಿಧದ ವಾಕ್ಯಗಳನ್ನು ಉತ್ಪಾದಿಸುವಂತೆ ತರಬೇತಿಯನ್ನು ಕೊಡುತ್ತಾರೆ.

ರೂಪಾಂತರ ಮಾದರಿ :

ಕೆಳಗಿನ ವಾಕ್ಯಗಳಲ್ಲಿಯ ನಾಮಪುಂಜಗಳು ತೃತೀಯ ಪುರುಷಾರ್ಥದಲ್ಲಿವೆ.[1]

ಪ್ರಶ್ನೆ–ರೂಪಾಂತರ :

ಪ್ರಶ್ನೆ ——> ನಿಜಾರ್ಥಕ ವಾಕ್ಯ + — { ಓ / ಆ / ಏ }

ಮೂಲವಾಕ್ಯ :

ಅವನು ಪ್ರವಾಸಕ್ಕೆ ಹೋಗುತ್ತಾನೆ

ಪ್ರಶ್ನೆ : ಅವನು ಪ್ರವಾಸಕ್ಕೆ ಹೋಗುತ್ತಾನೊ ?
ಅವನು ಪ್ರವಾಸಕ್ಕೆ ಹೋಗುತ್ತಾನಾ ?
ಅವನು ಪ್ರವಾಸಕ್ಕೆ ಹೋಗುತ್ತಾನೆಯೇ ?

ನಿಷೇಧ ರೂಪಾಂತರ :

ನಿಷೇಧ ——> ನಿಜಾರ್ಥಕ ವಾಕ್ಯ + ಸಂಯೋಜನಾತ್ಮಕ ಕ್ರಿಯಾಪ್ರತ್ಯಯ + { ಇಲ್ಲ / ಆರ }

ಮೂಲ ವಾಕ್ಯ: ಅವನು ಕಾಫಿ ಕುಡಿಯುತ್ತಾನೆ.

ನಿಷೇಧ : ಅವನು ಕಾಫಿ ಕುಡಿಯಲಿಲ್ಲ
ಅವನು ಕಾಫಿ ಕುಡಿಯಲಾರ

ಇದೇ ರೀತಿಯಲ್ಲಿ ತರ ತಮ[2] ಮೊದಲಾದ ರೂಪಾಂತರ ವೈವಿಧ್ಯಗಳನ್ನು ಕಲಿಸುವುದರಿಂದ ವಿದ್ಯಾರ್ಥಿಗೆ ಅತಿ ಶೀಘ್ರದಲ್ಲಿ ವಿವಿಧ ವಾಕ್ಯಗಳನ್ನು ಉತ್ಪಾದಿಸುವ ಸಾಮರ್ಥ್ಯ ಬಂದೊದಗುತ್ತದೆ.

ಭಾಷೆಯನ್ನು ಧ್ವನ್ಯಾತ್ಮಕ. ಧ್ವನಿಮಾತ್ಮಕ. ಆಕೃತಿಮಾತ್ಮಕ ಮತ್ತು ವಾಕ್ಯಾತ್ಮಕ ಹಂತಗಳನ್ನಾಗಿ ವಿಶ್ಲೇಷಿಸಿ ಪ್ರತಿಯೊಂದು ಹಂತದ ಬಗ್ಗೆ ವಿಪುಲವಾದ ಚರ್ಚೆ ನಡೆಯಿಸುವುದು ಈ ಪದ್ಧತಿಯ ಇನ್ನೊಂದು ವೈಶಿಷ್ಟ್ಯ. ಅನ್ಯ ಭಾಷೆಯ ಧ್ವನಿಗಳ ವಿವರಣೆ–

---

೧. ನೋಡಿ : ವಿಲ್ಯಂ ಮಾಡ್ತ, "ಕನ್ನಡದಲ್ಲಿ ಪ್ರತ್ಯಯಗಳು" **ಕರ್ನಾಟಕ ಭಾರತಿ** ೫:೧. (೧೯೭೨). ಅ. ೬. ೫. ಪು. ೨೩.

೨. ವಿಲ್ಯಂ ಮಾಡ್ತ 'ಕನ್ನಡ ವಾಕ್ಯ' **ಅದೇ.** ೩:೩. (೧೯೭೩) ಪು. ೬೫–೭೭,

ಯನ್ನು ಕೊಟ್ಟು ಅದನ್ನು ಉಚ್ಚರಿಸುವ ರೀತಿಯನ್ನು ಕಲಿಸಿ ಬೇಕಾದ ತರಬೇತಿಯನ್ನು ಕೊಡುತ್ತಾರೆ.[೨]

ಧ್ವನಿ ಕಲಿಸುವಿಕೆಯ ಮಾದರಿ :

ಇ— ಇದು ಉನ್ನತ ಪೂರ್ವ ಅವೃತ್ತ ಹ್ರಸ್ವಸ್ವರ, ಇದನ್ನು ಉಚ್ಚರಿಸಲು ಜಿಹ್ವಾಗ್ರವನ್ನು ತಾಳುವಿನ ಕಡೆಗೆ ಆದಷ್ಟು ಉನ್ನತ ಸ್ಥಾನಕ್ಕೆ ಏರಿಸಬೇಕು. ತುಟಿಗಳನ್ನು ಅವೃತ್ತ ರೀತಿಯಲ್ಲಿ ಚಾಚಬೇಕು. ಧ್ವನಿಪಟಲಗಳು ಕಂಪಿತಗೊಳ್ಳಬೇಕು.

ಉಚ್ಚರಣಾ ಅಭ್ಯಾಸ :

ಆದಿ	ಮಧ್ಯ	ಅಂತ್ಯ
ಇದು	ಬಾಗಿಲು	ಕುಡಿ
ಇಲ್ಲ	ಬಿಸಿಲು	ಬಾಯಿ
ಇರುವೆ	ದಿನ	ತುಟಿ
ಇವನು	ಗಿಳಿ	ಕಿವಿ

ಈ ಮಾದರಿಯಲ್ಲಿ ಎಲ್ಲ ಧ್ವನಿಗಳ ಅಭ್ಯಾಸ ನಡೆಯಿಸಿದ ಬಳಿಕ ಧ್ವನಿಮಾತ್ಮಕ ಹಂತವನ್ನು ಕಲಿಸುತ್ತಾರೆ. ಇಲ್ಲಿ ಕನಿಷ್ಟತಮಯುಗ್ಮಗಳ ಮುಖಾಂತರ ಧ್ವನಿಗಳ ವಿರೋಧ ಪ್ರಸಾರವನ್ನು ತೋರಿಸಿ ರೂಢೀಕರಣ ನಡೆಯುತ್ತದೆ. ಉದಾಹರಣೆಗೆ–

ಇ/ಎ	ಈ/ಏ	ಎ/ಅ	ಏ/ಆ	ಉ/ಒ	ಊ/ಓ
ಬಿಳಿ	ಬೀಗ	ಮೆರೆ	ಬೇಳೆ	ಹುಳಿ	ಊದು
ಬೆಳೆ	ಬೇಗ	ಮರ	ಬಾಳೆ	ಹೊಳೆ	ಓದು
ಕತ್ತಿ	ಬೀಡು	ಕೆರೆ	ಏರು	ಹುಲಿ	ಊಟ
ಕತ್ತೆ	ಬೇಡು	ಕರೆ	ಆರು	ಹೊಲಿ	ಓಟ

ಇತ್ಯಾದಿ. ಅಂತೆಯೇ :

ಇ/ಈ	ಎ/ಏ	ಅ/ಆ	ಒ/ಓ	ಉ/ಊ
ಬಿಸಿ	ಕೆಡು	ಬಲ	ಒಲೆ	ಉರಿ
ಬೀಸಿ	ಕೇಡು	ಬಾಲ	ಓಲೆ	ಊರಿ
ಬಿಡು	ಬೆಳೆ	ಬಳೆ	ಕೊರೆ	ಕುಡಿ
ಬೀಡು	ಬೇಳೆ	ಬಾಳೆ	ಕೋರೆ	ಕೂಡಿ

೨. ಕನ್ನಡ ಧ್ವನಿ ವಿವರಣೆಗೆ ನೋಡಿ : U. P. Upadhyaya *Kannada Phonetic Reader*, Mysore : Central Institute of Indian Languages, (1972).
ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷೆಗಳು (ಅಚ್ಚಿನಲ್ಲಿ).

ಪ್/ಬ್	ತ್/ದ್	ಟ್/ಡ್	ಕ್/ಗ್	ಚ್/ಜ್	ಮ್/ನ್
ಪೇಟೆ	ತಾಟು	ಮಾಟ	ಕೆರೆ	ಚಿಗಿ	ಮಾಡು
ಬೇಟೆ	ದಾಟು	ಮಾಡು	ಗೆರೆ	ಜಿಗಿ	ನಾಡು
ಕಪ್ಪು	ಮತ್ತು	ದಟ್ಟಿ	ಅಕ್ಕ	ಅಚ್ಚಿ	ಅಮ್ಮ
ಕಬ್ಬು	ಮದ್ದು	ದಡ್ಡ	ಅಗ್ಗ	ಅಜ್ಜಿ	ಅನ್ನ

ಇತ್ಯಾದಿ.

ವ್ಯಾಕರಣವನ್ನು ಇದೇ ರೀತಿಯಲ್ಲಿ ವಿಶ್ಲೇಷಣಾ ಪದ್ಧತಿಯನ್ನನುಸರಿಸಿ ಕಲಿಸುತ್ತಾರೆ. ಈ ಅಂಶಗಳೆಲ್ಲವೂ ಬಿಡಿಬಿಡಿಯಾಗಿ ಬರುವುದರ ಬದಲು ಸಂಯೋಜಿತ ಪಾಠಗಳಲ್ಲಿಯೇ ಬರುತ್ತವೆ.[೪] ಈ ಪಾಠಗಳು ಸುಲಭತೆಯಿಂದ ಕ್ಲಿಷ್ಟತೆಯತ್ತ ಸಾಗುತ್ತವೆ. ಪಾಠದ ಕೊನೆಯಲ್ಲಿ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಲಾಗುತ್ತದೆ. ಉದಾಹರಣೆಗಾಗಿ 'ಬರು' ಎಂಬ ಕ್ರಿಯಾಪದದ ಭೂತಕಾಲದ ರೂಪ ಅನ್ಯಭಾಷಿಗನಿಗೆ ಸಮಸ್ಯೆಯೇ ಸರಿ. ಕಾರಣ ಪಾಠದ ಅಂತ್ಯಕ್ಕೆ ಅದನ್ನು ಹೀಗೆ ವಿವರಿಸಬಹುದು.

ಕ್ರಿಯಾಪ್ರಕೃತಿ	ವರ್ತಮಾನ	ಭೂತ
ಬರು	ಬರ್ + ಉತ್ತ್ + ಆನೆ	ಬರ್ + ನ್ದ್ + ಅನು
	= = = > ಬರುತ್ತಾನೆ	= = = > ಬಂದನು

ತಮಿಳು ಭಾಷಿಗನು ಕನ್ನಡ ಕಲಿಯುವಾಗ ಪ್ ÷ ಬ್ ವ್ಯತ್ಯಾಸ ಅವನಿಗೆ ತೊಂದರೆಯನ್ನು ಕೊಡುತ್ತದೆ. ಆಗ ಕನಿಷ್ಠತಮ ಯುಗ್ಮಗಳ ರೂಢೀಕರಣದಿಂದ ಅವನ ಸಮಸ್ಯೆಯನ್ನು ನಿವಾರಿಸಬೇಕಾಗುತ್ತದೆ.

ಭಾಷಾ ವೈಜ್ಞಾನಿಕ ಪದ್ಧತಿ ಅವಿಭಾಜಕ ಧ್ವನಿಮಾಗಳ ಬಗ್ಗೆ ಬಹಳ ಜಾಗರೂಕತೆಯನ್ನು ವಹಿಸುತ್ತದೆ. ಕನ್ನಡದ ಹೇಮಲತಾ ಎಂಬುದಕ್ಕೂ ಹೇ + ಮಲ + ತಾ ಎಂಬುದಕ್ಕೂ ವ್ಯತ್ಯಾಸವಿದೆ. ಅಂತೆಯೇ ನೀನಾರಿಗಾದೆಯೊ ಎಲೆ ಮಾನವ ಎಂಬುದಕ್ಕೂ ನೀನಾರಿಗಾದಯೋ+ಎಲೆ+ಮಾನವ ಎಂಬುದಕ್ಕೂ ವ್ಯತ್ಯಾಸವಿದೆ. ಕಾರಣ ಇಂತಹ ಪ್ರಸಂಗಗಳನ್ನು ಎತ್ತಿ ಹಿಡಿದು ವಿರಾಮದ ಪ್ರಾಮುಖ್ಯತೆಯನ್ನು ಅಧ್ಯಾಪಕ ತಿಳಿಸಬೇಕಾಗುತ್ತದೆ. ಪ್ರಸ್ತುತ ಪದ್ಧತಿಯಲ್ಲಿ ಇಂತಹ ಸೂಕ್ಷ್ಮ ವಿಚಾರಗಳಿಗೆ ಬಹಳ ಮಹತ್ವ ಇದೆ.

ಬಾಷಾ ಹಂತಗಳನ್ನು ಕಲಿಸುವುದರಿಂದ ವ್ಯಾಕರಣ ಪರಿಭಾಷೆಯಿಲ್ಲದೆ ಭಾಷಾ-ಜ್ಞಾನ ವಿದ್ಯಾರ್ಥಿಗೆ ಬರುತ್ತದೆ.

---

೪. ನೋಡಿ William Madtha *An Intermediary Kannada Reader* (Cyclostyled) Mysore : C. I. I. L.

ರಾಮ ಬಂದನು
ಸೀತೆ ಬಂದಳು
ನಾಯಿ ಬಂತು__

ಎಂಬ ಈ ಮೂರು ವಾಕ್ಯಗಳನ್ನು ಕಲಿಸುವಲ್ಲಿ ವಾಕ್ಯದಲ್ಲಿಯ ನಾಮಪುಂಜ ಪುಲ್ಲಿಂಗ ವಾದರೆ ಕ್ರಿಯಾಪುಂಜದ ರೂಪವೇನು ? ನಾಮಪುಂಜ ಸ್ತ್ರೀ ಅಥವಾ ನಪ್‌ಲಿಂಗದಲ್ಲಿ ದ್ದರೆ ಕ್ರಿಯಾಪುಂಜದಲ್ಲಿ ಯಾವ ತರಹದ ಬದಲಾವಣೆಯಾಗುತ್ತದೆ ಎಂಬ ವಿಷಯ ವಿದ್ಯಾರ್ಥಿಗೆ ಸಹಜವಾಗಿ ತಿಳಿದುಬಿಡುತ್ತದೆ.

ಸೂಕ್ತ ಮಾದರಿಗಳ ಮುಖಾಂತರ ಈ ಪದ್ಧತಿಯಲ್ಲಿ ಅಧ್ಯಾಪನ ನಡೆಯುತ್ತದೆ. ಆ ಮಾದರಿಯಲ್ಲಿ ಕೆಲವು ಅಂಶಗಳನ್ನು ಬದಲಾಯಿಸಿ ಅಥವಾ ಕೆಲವೊಂದನ್ನು ಸೇರಿಸಿ ವಾಕ್ಯ ರಚನೆಗಳನ್ನು ಕಲಿಸುತ್ತಾರೆ.

ಅಧ್ಯಾಪಕ : ನನಗೆ ರೊಟ್ಟಿ ಬೇಕು
ವಿದ್ಯಾರ್ಥಿ : ನನಗೆ ರೊಟ್ಟಿ ಬೇಕು.
ಅಧ್ಯಾಪಕ ; ಪಲ್ಯ
ವಿದ್ಯಾರ್ಥಿ : ನನಗೆ ಪಲ್ಯ ಬೇಕು
ಅಧ್ಯಾಪಕ : ಹಣ್ಣು
ವಿದ್ಯಾರ್ಥಿ : ನನಗೆ ಹಣ್ಣು ಬೇಕು.
ಅಧ್ಯಾಪಕ : ಬೇಡ
ವಿದ್ಯಾರ್ಥಿ : ನನಗೆ ಹಣ್ಣು ಬೇಡ

ಅಥವಾ

ಅಧ್ಯಾಪಕ : ನನಗೆ ಕಾಫಿ ಬೇಕು
ವಿದ್ಯಾರ್ಥಿ : ನನಗೆ ಕಾಫಿ ಬೇಕು
ಅಧ್ಯಾಪಕ : ತುಂಬಾ
ವಿದ್ಯಾರ್ಥಿ : ನನಗೆ ತುಂಬಾ ಕಾಫಿ ಬೇಕು
ಅಧ್ಯಾಪಕ : ಬಿಸಿ
ವಿದ್ಯಾರ್ಥಿ : ನನಗೆ ಬಿಸಿ ಕಾಫಿ ಬೇಕು
ಅಧ್ಯಾಪಕ : ತುಂಬಾ ಬಿಸಿ
ವಿದ್ಯಾರ್ಥಿ : ನನಗೆ ತುಂಬಾ ಬಿಸಿ ಕಾಫಿ ಬೇಕು

ಈ ರೀತಿಯ ಮಾದರಿಗಳ ರೂಢೀಕರಣದಿಂದ ವಿದ್ಯಾರ್ಥಿಗಳು ವಾಕ್ಯ ರಚನೆ ಗಳನ್ನು ಕಲಿಯುವುದರ ಜೊತೆಗೆ ಶಬ್ದಸಂಪತ್ತನ್ನೂ ವ್ಯಾಕರಣ ಜ್ಞಾನವನ್ನೂ ಬೆಳೆಯಿಸಿ ಕೊಳ್ಳುತ್ತಾರೆ; ತತ್ಫಲವಾಗಿ ಅತಿ ಶೀಘ್ರದಲ್ಲಿ ಭಾಷೆಯನ್ನು ಕರಗತ ಮಾಡಿಕೊಳ್ಳುತ್ತಾರೆ.

ಭಾಷಾ ಪ್ರಯೋಗ ಶಾಲೆ, ಸ್ಲೈಡು, ಸಿನೆಮಾ ಮೊದಲಾದ ಅತ್ಯಾಧುನಿಕ ಭಾಷಾ ಬೋಧನಾ ಸಲಕರಣೆಗಳನ್ನು ಭಾಷಾ ವಿಜ್ಞಾನ ಪದ್ಧತಿಯಲ್ಲಿ ಬಳಸಿಕೊಳ್ಳಲು ಅನುಕೂಲವಿದೆ. ಓದುವಿಕೆ ಹಾಗೂ ಬರಹಗಳಿಗೆ ಇಲ್ಲಿ ಸರಿಸಮಾನ ಸ್ಥಾನವಿದೆ. ಹೀಗೆ ಭಾಷೆಯ ಎಲ್ಲ ಕೌಶಲಗಳನ್ನೂ ಯಶಸ್ವಿಯಾಗಿ ಕಲಿಸಲಾಗುತ್ತದೆ. ಕಾರಣ ಪ್ರಸ್ತುತ ಪದ್ಧತಿ ಇತರ ಎಲ್ಲ ಭಾಷಾಘೋಧನಾ ಪದ್ಧತಿಗಳಿಗಿಂತ ಮಿಗಿಲಾದುದು ಹಾಗೂ ಪರಿಣಾಮಕಾರಿಯಾದುದು.

(ಮುಂದುವರಿಯುವುದು)

ಕನ್ನಡ ಗೀತಿಕೆಯ ಸ್ವರೂಪ

ಕ. ಪು. ಸೀತಾರಾಮ ಕೆದಿಲಾಯ

ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಅಂಶಗಣ ನಿಯಮದ ದೇಶಿಯ ಛಂದಸ್ಸುಗಳು ಪ್ರಯೋಗಗೊಂಡಿವೆ. ಅವುಗಳಲ್ಲಿ ಗೀತಿಕೆಯೂ ಒಂದು. ಇತರ ದೇಶಿಯ ಛಂದಸ್ಸುಗಳ ವಿವೇಚನೆಯನ್ನು ಅನೇಕ ವಿದ್ವಾಂಸರು ಬರೆದಿರುವರು. ಆದರೆ ಗೀತಿಕೆಯ ವಿಮರ್ಶೆಯನ್ನು ಯಾರೂ ಮಾಡಲಿಲ್ಲ.

ಗೀತಿಕೆಯ ಪ್ರಯೋಗವು ಅತಿ ಪ್ರಾಚೀನ ಗ್ರಂಥಗಳಲ್ಲಿಯೇ ಕಂಡುಬರುವುದು. ಸುಮಾರು ಕ್ರಿ.ಶ. ೯ನೆಯ ಶತಮಾನದಲ್ಲಿ (೮೧೫ ರಿಂದ ೮೭೭ರ ವರೆಗೆ ರಾಜ್ಯವನ್ನಾಳಿದ) ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಕಾಲದಲ್ಲಿ ಶ್ರೀವಿಜಯ ಕವಿ ರಚಿಸಿದ ಕವಿರಾಜಮಾರ್ಗದಲ್ಲಿ ಚತ್ತಾಣದ ಲಕ್ಷಣವನ್ನು ಸೂಚಿಸುವ ಒಂದು ಪದ್ಯವಿದೆ.

ಕಂದಂಗಳ್ ಪಲವಾಗಿರೆ
ಸುಂದರ ವೃತ್ತಂಗಳಕ್ಕರಂ ಚೌಪದಿ ಮ
ತ್ತಂ ದಲ್ ಗೀತಿಕೆ ತಿವದಿಗ
ಳಂದಂ ಚಿತ್ತೆಸೆಯೆ ಪೇೞ್ದೊಡದು ಚತ್ತಾಣಂ ॥

ಚತ್ತಾಣ ಕಾವ್ಯದಲ್ಲಿ ಗೀತಿಕೆಯ ಪ್ರಯೋಗವಿತ್ತೆಂದೂ ಕವಿರಾಜಮಾರ್ಗಕ್ಕಿಂತ ಪೂರ್ವದಲ್ಲಿಯೇ ಅದು ಪ್ರಚಾರದಲ್ಲಿತ್ತೆಂದೂ ನಿರ್ಧರಿಸಬಹುದು.

ಆ ಕವಿರಾಜಮಾರ್ಗದಲ್ಲಿ ಕೆಲವು ಗೀತಿಕೆಗಳಿವೆ. ಆದುದರಿಂದ ಪೂರ್ವಕಾವ್ಯಗಳಲ್ಲಿಯೂ ಇದೇರೀತಿಯ ಗೀತಿಕೆಗಳಿದ್ದುವೆಂದು ಎಣಿಸಬಹುದು.

ಸುಮಾರು ಕ್ರಿ.ಶ. ೧೧೫೦ ರಲ್ಲಿ ಇದ್ದ ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಕೆಲವು ಗೀತಿಕೆಗಳಿವೆ. ಸಂಸ್ಕೃತ, ಪ್ರಾಕೃತ ಗ್ರಂಥಗಳಲ್ಲಿ ಗೋಚರಿಸುವ ಮಾತ್ರಾನಿಯಮದ ಗೀತಿ. ಗೀತಿಕೆಗಳ ಛಂದೋನಿಯಮವು ಈ ಗೀತಿಕೆಗಳಿಗೆ ಅನ್ವಯಿಸುವುದಿಲ್ಲ. ಆದರೆ ಮಾತ್ರಾಗಣದ ಗೀತಿ, ಗೀತಿಕೆಗಳಂತೆ ಪ್ರಥಮ ತೃತೀಯ ಗಣಗಳು ಕಿರಿದಾಗಿವೆ. ದ್ವಿತೀಯ ಚತುರ್ಥ ಗಣಗಳು ಹಿರಿದಾಗಿವೆ. ಈ ಗೀತಿಕೆಗಳು ಕನ್ನಡದ ಅಂಶಗಣ ನಿಯಮಕ್ಕೆ ಹೊಂದುವ ಛಂದೋಬಂಧಗಳೆಂದು ಭಾವಿಸಬೇಕಾಗುವುದು.

ಮಾತ್ರಾಬದ್ಧ ಗೀತಿಕೆಯನ್ನು ನೋಡಿ ಕನ್ನಡಕವಿಗಳು ಇದನ್ನು ಸೃಷ್ಟಿಸಿರಬಹುದು. ಒಂದನೆಯ ನಾಗವರ್ಮನು ಬರೆದ ಛಂದೋಂಬುಧಿಯಲ್ಲಿಯೂ ಜಯಕೀರ್ತಿ ಬರೆದ ಛಂದೋನುಶಾಸನದಲ್ಲಿಯೂ ಅಂಶಗಣ ನಿಯಮದ ಗೀತಿಕೆಯ ಲಕ್ಷಣವನ್ನು ನಿರ್ದೇಶಿಸುವ ಲಕ್ಷ್ಯಪದ್ಯಗಳಿವೆ. ಇದನ್ನು ವಿಮರ್ಶಿಸುವ ಮೊದಲು ಕನ್ನಡದ ಅಂಶಗಣಗಳ ಭೇದವನ್ನು ತಿಳಿದುಕೊಳ್ಳಬೇಕಾಗುವುದು.

ಕನ್ನಡದ ಅಂಶಗಣಗಳಲ್ಲಿ ಮೂರುವಿಧ. ಒಂದನೆಯ ನಾಗವರ್ಮನು ಅವುಗಳಿಗೆ ಬ್ರಹ್ಮ, ವಿಷ್ಣು, ರುದ್ರ ಗಣಗಳೆಂದೂ, ಜಯಕೀರ್ತಿ, ಮೂರನೆಯ ಸೋಮೇಶ್ವರ, ಶಾರ್ಙ್ಗದೇವರು ರತಿ, ಮದನ, ಬಾಣ ಗಣಗಳೆಂದೂ ಹೆಸರಿಟ್ಟಿರುವರು. ಜಯಕೀರ್ತಿ ಅವುಗಳಿಗೆ ರ ಲ ಧ ಎಂಬ ಸಂಜ್ಞಾ ನಾಮಗಳನ್ನೂ ಕೊಟ್ಟಿರುವನು.

ಕೆಳಗೆ ಅವುಗಳ ಗುರು ಲಘು ವಿನ್ಯಾಸವನ್ನು ಕೊಡಲಾಗಿದೆ. ಗುರುವಿಗೆ — ಈ ಚಿಹ್ನೆಯನ್ನೂ ಲಘುವಿಗೆ ∪ ಈ ಚಿಹ್ನೆಯನ್ನೂ ಸೂಚಿಸಲಾಗಿದೆ.

ಬ್ರಹ್ಮಗಣ	=	**ರತಿಗಣ**	=	**ರ ಗಣ ೪**
— —		∪ ∪ —		—∪, ∪ ∪ ∪
ವಿಷ್ಣುಗಣ	=	**ಕಾಮಗಣ**	=	**ಲ ಗಣ ೮**
— — —		∪∪ — —		—∪—, ∪∪∪—
— — ∪		∪ ∪—∪		—∪∪, ∪∪∪∪
ರುದ್ರಗಣ	=	**ಬಾಣಗಣ**	=	**ಧ ಗಣ ೧೬.**
— — — —		∪ ∪ — — —		— ∪ — —
∪ ∪ ∪ — —		— — ∪		∪ ∪ ಲ —
— ∪ ∪ —		∪ ∪ ∪ ∪ —		— — — ∪
∪ ∪ — — ∪		— ∪ — ∪		∪ ∪ ∪ — ∪
— — ∪ ∪		∪ ∪ — ∪ ∪		— ∪ ∪ ∪
∪ ∪ ∪ ∪				

ಅಂಶಗಣದ ಗೀತಿಕೆಯ ಲಕ್ಷಣವನ್ನು ನಾಗವರ್ಮನು ಹೀಗೆ ನಿರೂಪಿಸಿರುವನು:

ಎರಡಱೊಳಾಱೆಂಬ ಸಂಖ್ಯೆಯೊಳ್
ಬರೆ ಪದ್ಮಭವನುಱಿದುವು ಮೆಚ್ಚುವ ತೆಱದಿಂ
ದಿರೆ ಮುಂದಣ ಪದಂ ಮುನ್ನಿನಂ
ದಿರೆ ಕರಂ ಗೀತಿಕೆಯಂತಕ್ಕುಂ ಸಖೀ

ಇದರ ಮೂರನೆಯ ಮತ್ತು ನಾಲ್ಕನೆಯ ಪಾದಗಳ ಪಾಠಾಂತರಗಳು ಹೀಗಿವೆ.

೧. ದಿರೆ ಬಟಿಕಿನ್ನೆರಡುಂ ಮುನ್ನಿನಂತೆ
ಕರವೆಸೆದೊಪ್ಪುವ ಗೀತಗಣಂ
೨. ದಿರೆ ಬಳಿಕಂ ಗಣಮುಂ ಮುನ್ನಿನಂತೆ
ಕರವೆಸೆದೊಪ್ಪುವ ಗೀತಿಕೆಗೇಳು ಗಣಮುಕ್ಕುಂ

ಮೇಲಿನ ಇಡೀ ಗೀತಿಕೆಯ ಬದಲು ಇನ್ನೊಂದು ಪಾಠಾಂತರವಿದೆ

ಎರಡಾಱನಿಪ ಸಂಖ್ಯೆಯೊಳ್
ಬರೆ ಬ್ರಹ್ಮನುಳಿದೆಡೆಗಳೊಳು ವಿಷ್ಣು ಮುಂ
ದಿರೆ ಮುಂದಣ ಪದಂ ಮುನ್ನಿನಂ
ತುರುತರ ಗೀತಿಕೆಗಿಂತಕ್ಕುಂ ಸಖೀ

ರೆವರೆಂಡ್ ಕಿಟ್ಟೆಲ್ ಅವರು ಈ ಗೀತಿಕೆಯ ವಿವಿಧ ಪಾಠಗಳೆನ್ನು ಸಂಪಾದಿಸಿ ಬರೆದಿರುವರು. ಆದರೆ ಅವರು ಇವರ ವಿವರಣೆಯನ್ನು ಸರಿಯಾಗಿ ಬರೆಯಲಿಲ್ಲ.

"The 6th foot of every second line is to be a Brahma (Padma bhava) the other feet are not ordered" ಎಂದು ಸೂಚಿಸಿರುವರು. ಅವರು ಮಾಡಿದ ಗಣವಿಭಜನೆಯೂ ಸರಿಯಿಲ್ಲ.

ಕನ್ನಡ ಕೈಪಿಡಿಯಲ್ಲಿ ಟಿ. ಶ್ರೀನಿವಾಸ ರಾಘವಾಚಾರ್ಯರು ಮತ್ತು ಬಿ. ಎಂ. ಶ್ರೀಕಂಠಯ್ಯನವರು ಗೀತಿಕೆಯ ಲಕ್ಷಣವನ್ನು ನಿರೂಪಿಸಲು ಯತ್ನಿಸಿರುವರು. ಅವರು ನಾಗವರ್ಮನ ಗೀತಿಕೆಯ ಗಣವಿಭಜನೆಯನ್ನು ಕೆಳಗಿನಂತೆ ಮಾಡಿರುವರು.

"ಎರಡಱೊ । ಳಾಱಂ । ಬ ಸಂಖ್ಯೆಯೊಳ್ । (ಬಾ ?)
ಬರೆ ಪದ್ಮ । ಭವನುೞಿದುವು ಮೊ । ಚ್ಚುವ ತೆಱದಿಂ ॥
ದಿರೆ ಮುಂ । ದಣ ಪ । ದಂ ಮುನ್ನಿನಂ ।
ತಿರೆ ಕರಂ ಗೀತಿಕೆ । ಯಿಂತ । ಕ್ಕುಂ ಸಖೀ ॥

ಎರಡನೆಯ ಪಾದದಲ್ಲಿ 'ಬರೆ ಬ್ರಹ್ಮನುಳಿದೆಡೆಗಳೊಳು ವಿಷ್ಣುಮುಂ' ಎಂದೂ ಮೂರನೆಯ ಪಾದದಲ್ಲಿ 'ಒಪ್ಪುವ ಗೀತಗಣಂ' 'ಗೀತಿಕೆಗೇಳು ಗಣಮುಕ್ಕುಂ' ಎಂದೂ ಪಾಠಾಂತರಗಳಿವೆ. ಇದ್ದಹಾಗೆ ನೋಡಿದರೆ

೨
ವಿ | ಬ್ರ | ರು

೬
ವಿ | ವಿ | ಬ್ರ | ರು |

೨
ಬ್ರ | ಬ್ರ | ರು

೬
ವಿ | ವಿ | ಬ್ರ | ವಿ (ರು ?)

ಏಳೇಳು ಗಣದ ಎರಡು ಪಾದ ಮಾತ್ರ. ನಾಲ್ಕನೆಯ ಗಣದಲ್ಲಿ ಒಳಪ್ರಾಸ ಕಡೆಯಲ್ಲಿ ರುದ್ರ, ಎಕ್ಕ ಕಡೆ ವಿಷ್ಣು. (ರುದ್ರ ಪರ್ಯಾಯಗಣ) ೨–೬ ರಲ್ಲಿ ಬ್ರಹ್ಮಗಣ ಎಂದು ಹೇಳಬಹುದೇ? ಗೀತಿಕೆ ಎಂಬುದರಿಂದ ಸಾಂಗತ್ಯ ಸಂಬಂಧಿಯಾಗಿರಬಹುದೇ?” ಹೀಗೆ ಸಂದೇಹ ವ್ಯಕ್ತಪಡಿಸಿರುವರು. ಶ್ರೀ ಸೇಡಿಯಾಪು ಕೃಷ್ಣಭಟ್ಟರು ಗೀತಿಕೆಗೆ ಅಂಶ ಗಣ ನಿಯಮವು ಹೊಂದುವುದಿಲ್ಲವೆಂದು ಭಾವಿಸಿರುವರು.

"ಗೀತಿಕೆಗೆ ಅಕ್ಷರ, ಮಾತ್ರಾ, ತ್ರಿಮೂರ್ತಿಗಳೆಂಬ ಯಾವ ಗಣಗಳೂ ಸಮಂಜಸವಾಗಿ ಅನ್ವಯಿಸುವುದಿಲ್ಲ. ಇದು ಯಾವ ಛಂದೋಗಣಬಂಧಕ್ಕೂ ಸೇರದೆ ಕೇವಲ ತಾಳಕ್ಕೆ ಸರಿಯಾಗಿ ಇಷ್ಟಬಂದಂತೆ ಹೇಳಲಿರುವ ಬಂಧ. ಎಲ್ಲವೂ ಹಾಡುಗಳೇ ಆಗಿರುವಾಗ ವಿಶೇಷವಾಗಿ ಸಂಗೀತದ ಸೊತ್ತು ಎಂದು ತೋರಿಸುವುದಕ್ಕೆಂಬಂತೆ ಇದಕ್ಕೆ ಗೀತಿಕೆ ಎಂಬ ಹೆಸರಿದೆ.” ಎಂದು ತಮ್ಮ ಕನ್ನಡ ಛಂದಸ್ಸು ಲೇಖನದಲ್ಲಿ ಬರೆದಿರುವರು. ನಾಗವರ್ಮನ ಗೀತಿಕೆಯನ್ನು ಅವರು ಕೆಳಗಿನಂತೆ ವಿಭಾಗಿಸಿರುವರು.

ಎರಡ । ರೊಳಾ । ರೆಂಬ । ಸಂಖ್ಯೆ । ಯೊಳ್ ।
ಬರೆ । ಪದ್ಮ । ಭವ । ನುಳಿ । ದುವು ಮೆ । ಚ್ಚುವ ತೆಱ । ದಿಂ ॥
ದಿರೆ ಮುಂ । ದಣ । ಪದಂ । ಮುನ್ನಿ । ನಂ ।
ತಿರೆ । ಕರಂ । ಗೀ । ತಿಕೆ । ಯಿಂತ । ಕ್ಕುಂ ಸಖೀ ॥

ವಿಭಾಗಕ್ಕೊಂದು ಪೆಟ್ಟು ಹೊಡೆದು ಇದರ ಗತಿಯನ್ನು ತಿಳಿದುಕೊಳ್ಳಬಹುದು. ಆಗ ಇದಕ್ಕೆ ೨೪ ಕಾಲ ಖಂಡಗಳಾಗಿ ಚತುರಸ್ರತೆ ಬರುವುದು. ಎಂದು ಅವರು ಸೂಚಿಸಿರುವರು. ಹೀಗೆ ತಾಳ ಗಣನೆಗೆ ಮಾತ್ರವೇ ಗೀತಿಕೆ ಒಡಂಬಡುವುದಾದರೆ ನಾಗವರ್ಮನು ಗಣಗಳ ವಿಚಾರವನ್ನೇ ಸೂಚಿಸುತ್ತಿರಲಿಲ್ಲ. ರಗಳೆಯ ವಿಚಾರವನ್ನು ನಾಗವರ್ಮನು ಹೇಳುವಾಗ "ತಾಳದ ಗಣನೆಗೊಡಂಬಟ್ಟೊಡದುವೆ ರಘಟಾಬಂಧಂ" ಎಂದು ತಾಳದ ಹೆಸರನ್ನು ಎತ್ತಿರುವನು. ತಾಳಕ್ಕೆ ಮಾತ್ರವೇ ಇದು ಹೊಂದುವುದಾದರೆ ಹಾಗೆಯೇ ನಿರೂಪಿಸುತ್ತಿದ್ದನು, ಅಂಶಗಣದ ಹೆಸರನ್ನು ಅವನು ಹೇಳುತ್ತಿರಲಿಲ್ಲ. ಗೀತಿಕೆ ಹಾಡಲಿಕ್ಕಾಗುವ ತಾಳ ಗಣನೆಗೆ ಸೇರುವ ಅಂಶಗಣ ನಿಯಮದ ಛಂದೋಬಂಧವೆಂದು ತೋರುವುದು.

ಡಾ. ಡಿ. ಎಸ್. ಕರ್ಕಿಯವರು ಕನ್ನಡ ಛಂದೋವಿಕಾಸದಲ್ಲಿ ಗೀತಿಕೆಯ ವಿಮರ್ಶೆಯನ್ನು ಸರಿಯಾಗಿ ಮಾಡಲಿಲ್ಲ. ಗೀತಿಕೆಯ ದೃಷ್ಟಾಂತವನ್ನು ಕೊಟ್ಟು ಗಣವಿಭಜನೆ ಮಾಡದಿರುವುದು ಆಶ್ಚರ್ಯ. "ಗೀತಿಕೆಯ ಲಕ್ಷಣವು ನಿರ್ದಿಷ್ಟವಾಗಿ ನಿರೂಪಿಸಲ್ಪಟ್ಟಿಲ್ಲ. ಅದರ ಗಣಯೋಜನೆ ಖಚಿತವಾಗಿದ್ದಂತೆ ತೋರುವುದಿಲ್ಲ. ಅರ್ಧಸಮಚತುಷ್ಪದಿಯಂತೆ ಕಾಣುವ ಈ ಮಟ್ಟಿನ ಪ್ರತಿ ಅರ್ಧದಲ್ಲಿ ಆರನೆಯ ಗಣವು ಬ್ರಹ್ಮಗಣವಾಗಿದ್ದು ಉಳಿದ ಗಣಗಳು ಮೆಚ್ಚುಗೆಯಾಗುವಂತೆ ಹೊಂದಿಕೊಂಡರೆ ಸಾಕೆಂದು ನಾಗವರ್ಮನು ಅನಿರ್ದಿಷ್ಟವಾದ ರೀತಿಯಲ್ಲಿ ಗೀತಿಕೆಯನ್ನು ಲಕ್ಷಿಸಿ ಕೈ ಬಿಡುತ್ತಾನೆ. ಗೀತಿಕೆಯ ಚರಣಗಳ ಸಂಖ್ಯೆ ಅವುಗಳ ಗಣಯೋಜನೆ ಇವೇ ಮೊದಲಾದ ವಿವರಗಳ

ಬಗೆಗೆ ಅವನು ಜಾಣತನದಿಂದ ಮೌನತಾಳಿದ್ದಾನೆಂದು ಕಾಣುತ್ತದೆ. ಅವನು ರಚಿಸಿದ ಲಕ್ಷಣ, ಲಕ್ಷ್ಯ ಪದ್ಯವನ್ನು ರಾಗರಂಜನೆಯಾಗುವಂತೆ ಓದುವುದು ಕಷ್ಟ. ಇನ್ನು ಜಯ ಕೀರ್ತಿ ಹೇಳುವ ಗೀತಿಕೆಯ ಲಕ್ಷಣದಲ್ಲಿ ಒಂದಿಷ್ಟು ವಿವರಗಳು ಕಾಣುವುದೇನೋ ನಿಜ. ಆದರೆ ಅಲ್ಲಿಯೂ ಲಯದ ಸುಳಿವು ಸಂಪೂರ್ಣವಾಗಿ ಸಿಕ್ಕುವುದಿಲ್ಲ. ಗೀತಿಕೆಯ ಪ್ರತಿ ಅರ್ಧದ ೨ ನೆಯ ಮತ್ತು ೬ ನೆಯ ಗಣಗಳು ಬ್ರಹ್ಮಗಣಗಳಾಗಿರಬೇಕೆಂದೂ ಉಳಿದ ಗಣಗಳು ಲಯಕ್ಕೆ ಹೊಂದಿಕೆಯಾಗುವಂತೆ ವಿಷ್ಣು ಅಥವಾ ರುದ್ರ ಗಣಗಳಾಗಿ ಸೇರಿರಬೇಕೆಂದೂ ಅವನು ಅಭಿಪ್ರಾಯಪಡುತ್ತಾನೆ. ಅಂತು ಜಯಕೀರ್ತಿಯೂ ಗೀತಿಕೆಯ ಕಲ್ಪನೆಯನ್ನು ಸ್ಪಷ್ಟವಾಗಿ ಕೊಟ್ಟಿಲ್ಲವೆಂದೇ ಹೇಳಬೇಕು"– ಎಂದು ಅವರು ಅಭಿಪ್ರಾಯಪಟ್ಟಿರುವರು.

ಡಾ. ಎಂ. ಚಿದಾನಂದ ಮೂರ್ತಿಯವರು ಸಂಶೋಧನ ತರಂಗದಲ್ಲಿ ಹೀಗೆ ಬರೆದಿರುವರು :

"ಗೀತಿಕೆಯ ಲಕ್ಷಣ ಇಂದೂ ಸ್ಪಷ್ಟವಾಗಿಲ್ಲ. ಅನೇಕ ಪಾಠಾಂತರಗಳ ಗೊಂದಲ ವಿರುವ ನಾಗವರ್ಮನ ಲಕ್ಷಣ ಪದ್ಯವನ್ನು ಬಿಟ್ಟರೂ ಜಯಕೀರ್ತಿಯ ಲಕ್ಷಣ ಸ್ಪಷ್ಟ ವಾಗಿದೆ. ಅದನ್ನು ಸ್ಥೂಲವಾಗಿ ಹೀಗೆ ಹೇಳಬಹುದು—ಮೊದಲ ಮತ್ತು ಮೂರನೆಯ ಪಾದಗಳಲ್ಲಿ ೪ ಗಣಗಳು. ಪ್ರತಿ ಅರ್ಧದಲ್ಲಿ೨ನೆಯ ಮತ್ತು ೬ನೆಯ ಗಣಗಳು ಬ್ರಹ್ಮ ಗಣಗಳಾಗಿರಬೇಕು. ಉಳಿದ ಗಣಗಳು ಯಾವುದಾದರೂ ಆಗಿರಬಹುದು, ಹೀಗೆ ಗೀತಿಕೆಯ ಲಕ್ಷಣ ಅನಿರ್ದಿಷ್ಟವಾಗಿರುವುದರಿಂದಲೇ ಕವಿರಾಜಮಾರ್ಗ ಮತ್ತು ಕಾವ್ಯಾ ವಲೋಕನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೊರೆತಿರುವ ಗೀತಿಕೆಗಳನ್ನು ಓದುವ ಧಾಟಿ ಯೂ ತಿಳಿಯದು. ಗಣವಿಭಾಗವಂತೂ ಸಮಸ್ಯಾತ್ಮಕ." ಎಂದು ಅವರು ಬರೆದಿದ್ದಾರೆ. ಅವರು ಗೀತಿಕೆಯ ಲಕ್ಷಣವನ್ನು ಸರಿಯಾಗಿ ಬರೆದರೂ ಗಣವಿಭಜನಾ ಕ್ರಮವನ್ನು ಸೂಚಿಸಿಲ್ಲ.

ನಾಗವರ್ಮನ ಗೀತಿಕೆಯಲ್ಲಿ ಲಕ್ಷಣ ನಿರೂಪಣೆ ವಿವರವಾಗಿ ಕಾಣುವುದಿಲ್ಲ. ವಿವಿಧ ಪಾಠಗಳನ್ನು ಅವಲೋಕಿಸಿ ನಿರ್ವಾಹವಿಲ್ಲದೆ ಒಂದು ಪಾಠವನ್ನು ನಿಷ್ಕರ್ಷಿಸ ಬೇಕಾಗುವುದು. ಅವನ ಗೀತಿಕೆಯನ್ನು ಕೆಳಗಿನಂತೆ ಪರಿಷ್ಕರಿಸಬಹುದು.

ಎರಡಱಿಯೊಳಾ—ಱಿಂಬ—ಸಂಖ್ಯೆಯೊಳ್
ಬರೆ ಪದ್ಮ-ಭವನುಱಿ-ದುವು ಮೆ-ಚ್ಚುವ ತೆಱದಿಂ
ದಿರೆ ಮುಂದಣ-ಪಾದಂ-ಮುನ್ನಿನಂ
ತಿರೆ ಕರಂ-ಗೀತಿಕೆ-ಯಿಂತ-ಕ್ಕುಂ ಸಖೀ ॥
(ತಿರೆ ಕರಂ-ಗೀತಿಕೆ-ಗೀರೇಳ್-ಗಣಮಕ್ಕುಂ)

ಹೀಗೆ ತಿದ್ದುವುದು ಉಚಿತ.

ಎರಡನೆಯ ಮತ್ತು ಆರನೆಯ ಸ್ಥಾನದಲ್ಲಿ ಬ್ರಹ್ಮಗಣಗಳಿದ್ದು ಉಳಿದೆಡೆಗಳಲ್ಲಿ ಯಾವುದಾದರೂ ಮೆಚ್ಚುಗೆಯಾಗುವಂತೆ ಬಂದು [ಇಲ್ಲಿ ವಿಷ್ಣು ಅಥವಾ ರುದ್ರಗಣವೆಂದು ತಾತ್ಪರ್ಯ] ಮುಂದಣ ಪಾದವೂ ಹಿಂದಿನ ರೀತಿಯಲ್ಲಿಯೆ ಇದ್ದರೆ ಗೀತಿಕೆಯಾಗುವುದು. ಆದರೆ ಇದರಲ್ಲಿ ಒಟ್ಟು ಎಷ್ಟು ಗಣಗಳೆಂದು ಸ್ಪಷ್ಟವಾಗಿ ನಿರೂಪಿಸಿದಂತಾಗುವುದಿಲ್ಲ. ಆದುದರಿಂದ ಮೇಲೆ ಆವರಣದಲ್ಲಿ ಕೊಟ್ಟಂತೆ ತಿದ್ದಿಕೊಂಡರೆ ಲಕ್ಷಣ ನಿರೂಪಣೆ ಸ್ಪಷ್ಟವಾಗುವುದು. ಜಯಕೀರ್ತಿ ಗೀತಿಕೆಯ ಲಕ್ಷಣವನ್ನು ಹೀಗೆ ನಿರೂಪಿಸಿರುವನು.

ರಗಣೋ ದ್ವಿತೀಯೋ ಷಷ್ಠೇ ಚ
ಲಗಣೋ ಧಗಣೋ ವಾನ್ಯತ್ರ ಪಂಚಸ್ವಥ ಯೋಶ್ಚ
ತ್ರಿಗಣೋಽಯುಕ್ ಸಮಪಾದೋಽಬ್ಧಿಗಣೇ
ನಿಗದಿತಾ ಗೀತಿಕಾಲಂಕಾರೇ ಪ್ರಭುಸೇನೀಯೈಃ ॥

[ಛಂದೋಽನುಶಾಸನ ೭—೨೦]

"ಗೀತಿಕೆಯ ಅರ್ಧಭಾಗದಲ್ಲಿ ದ್ವಿತೀಯ ಷಷ್ಠಸ್ಥಾನಗಳಲ್ಲಿ ರಗಣ(ರತಿಗಣ) ಬರಬೇಕು. ಉಳಿದ ಐದು ಸ್ಥಾನಗಳಲ್ಲಿ ಲಗಣ(ಕಾಮಗಣ) ಅಥವಾ ಧಗಣ (ಬಾಣಗಣ) ಬರಬೇಕು. ವಿಷಮ ಪಾದಗಳಲ್ಲಿ ಮೂರು ಗಣಗಳೂ ಸಮಪಾದಗಳಲ್ಲಿ ನಾಲ್ಕು ಗಣಗಳೂ ಇರಬೇಕು. ಇದು ಪ್ರಭುಸೇನಿಯದಲ್ಲಿ ಪ್ರಯೋಗಗೊಂಡಿದೆ" ಎಂದು ಜಯಕೀರ್ತಿ ಸೂಚಿಸಿರುವನು. ಜಯಕೀರ್ತಿಯ ಲಕ್ಷಣ ನಿರೂಪಣೆ ನಾಗವರ್ಮನಿಗಿಂತ ಸ್ಪಷ್ಟವಾಗಿದೆ. ಗೀತಿಕೆಯನ್ನು ಹಾಡುವಾಗ ವಿಷ್ಣುಗಣವಿರುವಲ್ಲಿ ವಿಲಂಬೋಚ್ಚಾರವನ್ನು ಮಾಡಿ ರುದ್ರಗಣಕ್ಕೆ ಸರಿಯಾಗುವಂತೆ ಓದಬೇಕೆಂದು ತೋರುವುದು.

ಗೀತಿಕೆಯ ಲಕ್ಷಣವನ್ನು ಕರ್ಣಾಟಕ ಛಂದೋದರ್ಪಣದಲ್ಲಿ ಹೀಗೆ ಬರೆದಿರುವನು.

ಸರಸಿಜಸಂಜಾತಂ ಕರ ರಸಕೆ
ಹರನಥವಾಹರಿಯೈದೆಡೆಗೆಸೆಯೆ ವಿಷಮಾಂಘ್ರಿಯೊಳ್
ಪುರಗಣಂ ಯುಗ್ಮಾಂಘ್ರಿಗಬ್ಧಿಗಣಂ
ಬರೆ ತನ್ನುಭಯಾರ್ಧದೊಳ್ ವರಗೀತಿಕೆಯಕ್ಕುಂ ॥

[ಅಪ್ರಕಟಿತ ಕರ್ಣಾಟಕ ಛಂದೋದರ್ಪಣಂ]

ಪೂರ್ವಕವಿಗಳ ಕೆಲವು ಗೀತಿಕೆಗಳಲ್ಲಿ ಮೇಲಿನ ಲಕ್ಷಣವು ಕಂಡುಬರುವುದು. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಕೆಲವು ಗೀತಿಕೆಗಳಿವೆ.

ಇಂತಿರೆ ಶಬ್ದಂ ಸಂದೇಹ
ಧ್ವಾಂತೌಘಂಪಿಂಗಿರೆ ಜಲಕನಾಗೆ ಬುಧ
ಸಂತತಿಗಪ್ಪಂತು ಪೇಟ್ದನಿದಂ
ಶಾಂತಮನಂ ಕವಿತಾಗುಣೋದಯಂ ॥ ೫೨ ॥

ಇದು ಸರಿಯಾಗಿದೆ

ಈ ಪೇೞ್ದ ಮಾೞ್ಕೆಯಿಂ ದೋಷಾ
ಲೇಪಂ ಪೊರ್ದದಂತಿರೆ ಸನ್ನಿಬಂಧ
ವ್ಯಾಪೃತನಕ್ಕೆ ಗುಣವದರ್ಥಂ
ವ್ಯಾಪಕಮಾಗೆ ಕವಿತ್ವ ತತ್ವದೊಳ್ ॥ ೪೯೫ ॥

ಪದ್ಯಾರ್ಧದ ಕೊನೆಯ ಗಣವು ಬ್ರಹ್ಮಗಣವಾಗಿದೆ. "ಸನ್ನಿಬಂಧನ" ಎಂದು ತಿದ್ದಿದರೆ ಸರಿಯಾಗುವುದು.

ಈ ತೆಱದಿಂದರ್ಥಾಲಂಕೃತಿ
ಯೋತು ವಿಭೇದಮನಾದಮೆಲ್ಲಮಂ
ನೂತನ ಮಾರ್ಗಮೆಸೆಯೆ ಪೇೞ್ದಂ
ಖ್ಯಾತಯಶಂ ಕವಿತಾಗುಣೋದಯಂ ॥ ೭೭೮ ॥

ಇದು ಸರಿಯಾಗಿದೆ.

ಇಂತು ಕವೀಂದ್ರ ಸಮಯಮಂ ಚೈ
ರಂತನ ಮಾರ್ಗದೊಳೊಂದೆ ತಿಳಿಯೆ ಪೇೞ್ದಂ
ಭ್ರಾಂತಿನಿಸುಂ ಪೊರ್ದದಲ್ಲಿ ತಾನೆಂ
ಬಂತಿರೆ ತಿರ್ದಿ ವಿವೇಕಿ ನಾಕಿಗಂ ॥ ೯೫೯ ॥

ಇದು ಸರಿಯಾಗಿದೆ.

ಕೆಳಗಿನ ಒಂದು ಗೀತಿಕೆಯ ಪಾಠ ಕೆಟ್ಟಿದೆ.

ರೀತಿಯುಂ ರಸವಿಭಾಗಮುಮಂ ವಿ
ಖ್ಯಾತಿಯನಾಂತ ವೃತ್ತಿಗಳಂ ಪ್ರಾ
ತೀತಕಮಾಗೆ ತಿಳಿಯೆ ಪೇೞ್ದನಿಂತೀ
ಭೂತಳದೊಳ್ ಸಲೆ ನಾಗವರ್ಮಂ ॥ ೮೪೨ ॥

ಇದರ ಬದಲು ಪಾಠಾಂತರವಾಗಿ ಕಂದ ಪದ್ಯವಿದೆ.

ರೀತಿ ರಸಭಾಗಮಂ ವಿ
ಖ್ಯಾತಿಯನಾಂತಮಳ ವೃತ್ತಿ ವೃತ್ತಂಗಳುಮಂ
ಪ್ರಾತಿಕಮಾಗಿರೆ ಪೇೞ್ದಂ
ಭೂತಳದೊಳಗೆಸೆಯೆ ನಾಗವರ್ಮ ಕವೀಂದ್ರಂ

ಇಲ್ಲಿ ಗೀತಿಕೆಯ ಪಾಠವು ಅಶುದ್ಧವಾಗಿದ್ದುದರಿಂದ ಪ್ರತೀಕಾರರು ಕಂದವಾಗಿ ಮಾರ್ಪಡಿಸಿರಬಹುದು. ಗೀತಿಕೆಯಾದರೆ ಕೆಳಗಿನಂತೆ ಇದ್ದಿರಬಹುದು.

ರೀತಿಯುಂ ರಸವಿಭಾಗಮಂ ವಿ
ಖ್ಯಾತಿಯನಾಂತಮಳ ವೃತ್ತಿ ವೃತ್ತಂಗಳಂ
ಪ್ರಾತೀತಕಮಾಗೆ ಪೇೞ್ದನಿಂತೀ
ಭೂತಳದೊಳ್ ಸಲೆ ತಿಳಿಯೆ ನಾಗವರ್ಮಂ

ಕವಿರಾಜಮಾರ್ಗದಲ್ಲಿ ಕೆಲವು ಗೀತೆಕೆಗಳಿವೆ. ಎಲ್ಲಾ ಗೀತಿಕೆಗಳನ್ನು ಪರಿಷ್ಕರಿಸ ಬೇಕಾದರೂ ಕೆಲವು ಗೀತಿಕೆಗಳಲ್ಲಿ ಪಾಠದೋಷವಿರುವುದರಿಂದ ತಿದ್ದಲಸಾಧ್ಯ. ಕೆಲವು ಗೀತಿಕೆಗಳನ್ನು ಸ್ವಲ್ಪ ತಿದ್ದಿದರೆ ಲಕ್ಷಣಕ್ಕೆ ಸರಿಯಾಗುವುದು.

ಕಾಣನೇಗೆಯ್ದುಂ ತನ್ನ ದೋಷಮಂ
ಕಾಣದಂತೆಂದು ಕಣ್ಗಳ್ ತಮ್ಮ ಕಾಡಿಗೆಯಂ
ಪೂಣಿಗನಾದುದಱಿಂ ಪೆಱರಿಂ
ಜಾಣರಿನೋದಿಸಿ ಪೇೞ್ವುದು ಕಬ್ಬಮಂ [೧-೪೫]

"ಕಾಣನೇಗೆಯ್ದುಂ" ಎಂಬುದರ ಬದಲು "ಕಾಣೆಗೆಯ್ದುಂ" ಎಂಬ ಪಾಠಾಂತರ ವಿದೆ. ಛಂದಸ್ಸಿನ ದೃಷ್ಟಿಯಿಂದ ಈ ಪಾಠವು ಸರಿಯಾಗುವುದು. ಮೇಲಿನ ಪಾಠವನ್ನೇ ಇರಿಸಿಕೊಳ್ಳುವುದಾದರೆ "ತನ್ನ" ಎಂಬುದರ ಬದಲು "ತನ್ನಯ" ಅಥವಾ "ತನ್ನಾ" ಎಂದು ವ್ಯತ್ಯಾಸಮಾಡಬೇಕು. ತೃತೀಯ ಪಾದದಲ್ಲಿ "ಪೆಱರಿಂ" ಎಂಬುದನ್ನು "ಪೆಱರಿಂದಂ" ಎಂದು ತಿದ್ದಬೇಕು. ಚತುರ್ಥ ಪಾದವನ್ನು "ಜಾಣರಿನೋದಿಸಿ ಪೇೞ್ಗೆ ಕಬ್ಬಮಂ" ಅಥವಾ "ಜಾಣರಿನೋದಿಸಿ ಪೇೞ್ವುದು ಬಱಿಕಂ ಕಬ್ಬಮಂ" ಎಂದು ಬರೆಯಬಹುದು. "ಜಾಣರಿನೋದಿಸಿ ನೋಡಿ ಪೇೞ್ವುದು ಕಬ್ಬಮಂ" ಎಂಬ ಪಾಠಾಂತರವಿದೆ. "ಜಾಣರಿನೋದಿಸಿ ನೋಡಿ ಪೇೞ್ಗೆ ಕಬ್ಬಮಂ" ಎಂದು ತಿದ್ದ ಬೇಕಾಗುವುದು.

ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿರ್ಕುಮಣಂ ಕೃತಿವಧುವಂ
ಪೇಸದೆ ದುರ್ಜನದೊಳಾದ ಪರಿಚಯು
ಮಾಸಿಸಿ ಕೆಡಿಸುವವೊಲೊಪ್ಪುವ ಕುಲವಧುವಂ [೧-೧೧೨]

ಇದರ ತೃತೀಯ ಪಾದವನ್ನು "ಪೇಸದ ದುರ್ಜನದ ಪರಿಚಯಂ" ಎಂದು ತಿದ್ದ ಬಹುದು "ಸ್ವಲ್ಪಮಾನೊಡಂ" ಎಂಬಲ್ಲಿ "ಸ್ವಲ್ಪಮುಮಾನೊಡಂ" ಎಂದೂ "ವೊಲೊಪ್ಪುವ" ಎಂಬಲ್ಲಿ "ವೊಲೆಸೆವ" ಎಂದೂ ತಿದ್ದಿದರೆ ಸರಿಯಾಗುವುದು. ದ್ವಿತೀಯ ಪಾದದಲ್ಲಿ ಒಂದು ಪದವೇ ಕಡಿಮೆಯಾಗಿದೆ. "ಮಾಸಿಸಿ ಕೆಡಿಸುತಿರ್ಕುಮಣಂ ಕೃತಿ ವಧುವಂ" ಎಂದು ತಿದ್ದಿದರೆ ಸರಿಯಾಗಬಹುದು.

ಇಂತು ಕಾರಕಂಗಳೊಳ್
ಸಂತಮಱಿಯೆ ಪೇೞ್ದ ಗುಣಮಂ ದೋಷಮುಮಂ
ಚಿಂತಿಸಿ ಪೆಱವುವಿನ್ನಪ್ಪುವಂ
ಭ್ರಾಂತಿಲ್ಲದಱಿದುಕೊಳ್ಗೆ ಕವಿಗಳ್ ಕೃತಿಗಳೊಳ್ [೧-೧೩೫]

"ಇಂತು" ಎಂಬ ಬ್ರಹ್ಮಗಣಕ್ಕೆ ಬದಲು ಒಂದು ಅಕ್ಷರ ಸೇರಿಸಿ ವಿಷ್ಣು

ಗಣವನ್ನಾಗಿ ಅಥವಾ ಎರಡು ಅಕ್ಷರ ಸೇರಿಸಿ ರುದ್ರಗಣವನ್ನಾಗಿ ಮಾಡಿದರೆ ಈ ಗೀತಿಕೆ ಸರಿಯಾಗುವುದು. "ಇಂತಾಱು" ಅಥವಾ "ಇಂತಿರ್ಪ" ಎಂದು ವಿಷ್ಣುಗಣವಾಗಿ ಬರೆಯಬಹುದು. "ಇಂತುವರ" ಅಥವಾ "ಇಂತುಪೇೞ್ದ" ಎಂದು ರುದ್ರಗಣವಾಗಿ ಬರೆಯಬಹುದು. ಮೇಲಿನ ಯಾವುದಾದರೊಂದು ರೀತಿಯ ತಿದ್ದುಪಡಿಯನ್ನು ಮಾಡುವುದು ವಿಹಿತ.

ಅಱಿದು ಪೀನಂ ಮಾರ್ಗಗತಿಯಂ
ತಱಿಸಲಾಗದಾರ್ಗಂ ಬಹು ವಿಕಲ್ಪದೊಳ್
ಕುಱಿತು ಪೂರ್ವಶಾಸ್ತ್ರ ಪದವಿಧಿಯಂ
ತೆಱೆದಿರೆ ಪೇೞ್ವೆನಿನಿಸಂ ಕನ್ನಡದೊಳ್ [೨-೪೬]

ಪ್ರಥಮ ಪಾದದಲ್ಲಿ "ಗತಿಯಂ" ಎಂಬಲ್ಲಿ "ಗತಿಗಳಂ" ಎಂದು ತಿದ್ದಬಹುದು. ಚತುರ್ಥ ಪಾದದಲ್ಲಿ "ಪೇೞ್ವೆನಿನಿಸಂ" ಎಂಬುದನ್ನು "ಪೇೞ್ವೆನಿನ್ನಿನಿಸಂ" ಎಂದು ತಿದ್ದಬಹುದು. "ತಱಿಸಲಾಗದಾರ್ಗಂ" ಎಂಬಲ್ಲಿ "ತಱಿಸಲಲಾಗದಾರ್ಗಂ" ಎಂದು ಇರುವ ಪಾಠಾಂತರವನ್ನು ಸ್ವೀಕರಿಸುವುದು ವಿಹಿತ.

ಬಗೆದು ಮಾರ್ಗದ್ವಿತಯ ಗತಿಗಳಂ
ಪ್ರಗುಣ ಗುಣಗಣೋದಯರ್ಕಳ್ ವಿತರ್ಕದಿಂ
ಸೊಗಯಿಸುವಂತು ವಚನರಚನೆಯಿಂ
ನೆಗೞ್ದಿರೆ ಜರಿಸಿ ಪೇೞ್ಗೆ ರಸವಿಶೇಷಮಂ [೨-೯೮]

"ಪ್ರಗುಣ ಗುಣ ಗಣೋದಯರ್ಕಳ್" ಎಂಬಲ್ಲಿ "ಪ್ರಗುಣಗಣೋದಯರ್ಕಳ್" ಎಂಬ ಪಾಠಾಂತರವನ್ನು ಸ್ವೀಕರಿಸುವುದು ವಿಹಿತ. "ಸೊಗಯಿಸುವಂತು" ಎಂಬಲ್ಲಿ "ಸೊಗಯಿಪಂತು" ಎಂದು ಬರೆಯಬಹುದು. ಆಗ ಲಕ್ಷಣಕ್ಕೆ ಸರಿಯಾಗುವುದು.

ಅನುಗತಂ ಪೂರ್ವಕವಿಗಳ್
ನೆನೆದಿನ್ನುಂ ಪೇೞ್ದಂ ದುಷ್ಕರೋಕ್ತಿಯ
ನ್ನನುಗತ ಕ್ರಮದೆ ಬಗೆದು ಹೇಳಿಕೆಯೊಳ್
ಜನಿತ ವಿಭೇದಮುಮಂ ಪೇೞ್ವೆಂ ಕಿಱಿದಂ [೨-೧೪೩]

"ಕವಿಗಳ್ ನೆನೆದಿನ್ನುಂ" ಎಂಬಲ್ಲಿ "ಕವಿಗಳ ನೆನವಿನಂ" ಎಂಬ ಪಾಠಾಂತರವಿದೆ. ತೃತೀಯ ಪಾದದಲ್ಲಿರುವ "ಬಗೆದು" ಎಂಬ ಪದವನ್ನು ಬಿಟ್ಟು ಅದನ್ನು ದ್ವಿತೀಯ ಪಾದದಲ್ಲಿ "ನೆನವಿನಿಂ" ಎಂಬ ಪದದ ಅನಂತರ ಸೇರಿಸಬಹುದು.

ಅನುಗತಂ ಪೂರ್ವಕವಿಗಳ
ನೆನವಿನಿಂ ಬಗೆದು ಪೇೞ್ದಂ ದುಷ್ಕರೋಕ್ತಿಯ

ಸನುಗತ ಕ್ರಮದೆ ಹೇಳಿಕೆಯೊಳ್
ಜನಿತವಿಭೇದಮುಮಂ ಪೇೞ್ವಿಂ ಕಿಱಿದಂ

ಹೀಗೆ ತಿದ್ದಿದರೆ ಲಕ್ಷಣಕ್ಕೆ ಸರಿಯಾಗುವುದು.

ಪ್ರತಿಪದಾರ್ಥ ತತ್ವಭೇದದೊಳ್
ಪ್ರತಿಷೇಧಮಂ ನೆಗೞ್ಗುಮನಿತೆ ಮಾೞ್ಕೆಯಿಂ
ದತಿಶಯಾಕ್ಷೇಪ ಗಣನಾವೃತಿ
ಗತಿ ನೃಪತುಂಗದೇವ ಮಾರ್ಗದೊಳ್ [೩-೧೦೭]

ಚತುರ್ಥ ಪಾದದಲ್ಲಿ "ಗತಿ" ಎಂಬ ಪದದ ಅನಂತರ ಎರಡು ಅಥವಾ ಮೂರು ಅಕ್ಷರಗಳ ಒಂದು ಪದವನ್ನು ಸೇರಿಸಿದರೆ ಲಕ್ಷಣಕ್ಕೆ ಸರಿಯಾಗುವುದು. "ಗತಿ ನೃಪ ನೃಪತುಂಗ" ಅಥವಾ "ಗತಿ ಪರಮ ನೃಪತುಂಗ" ಎಂದು ಬರೆಯಬಹುದು. ಅಲ್ಲದಿದ್ದರೆ ತೃತೀಯ ಪಾದದಲ್ಲಿ "ಪರಿಗಣನಾ" ಎಂದೂ ಚತುರ್ಥಪಾದದಲ್ಲಿ "ವೃತಿಗತಿ ನೃಪತುಂಗ ದೇವ ಮಾರ್ಗದೊಳ್ ಭಾವಮೆಂಬುದಕ್ಕುಂ ಕವಿಗಳಾ" ಎಂದೂ ಬರೆಯಬಹುದು.

ಭಾವಿಸಿ ಮನದ ಬಗೆಯೊಂದಿದರ್ಥಂ
ಕೇವಲಮುದಱೊಳಳಂಕೃತಿ
ಭಾವಿಕ ಮೆಂಬುದಕ್ಕುಂ ನೃಪತುಂಗದೇವ ಮತದಿಂ [೩-೨೦೭]

ಈ ಪದ್ಯ ಕೆಳಗಿನಂತೆ ಇದ್ದರೆ ಸರಿಯಾಗುತ್ತಿತ್ತು.

ಭಾವಮೆಂಬುದಕ್ಕುಂ ಕವಿಗಳಾ
ಭಾವಿಸಿ(ದ) ಮನದ ಬಗೆಯೊಂದಿದೊಂದರ್ಥಂ
ಕೇವಲಮುದಱೊಳ(ಮುದಱ)ಳಂಕೃತಿ
ಭಾವಿಕ ಮೆಂದಕ್ಕುಂ ನೃಪತುಂಗದೇವ ಮತಂ
(ಭಾವಿಕಮುಕ್ಕುಂ ನೃಪತುಂಗದೇವ ಮತಂ)
(ಭಾವಿಕಮುಕ್ಕುಮಿದು ನೃಪತುಂಗದೇವ ಮತಂ)

ಹೀಗೆ ತಿದ್ದಬಹುದು.

ಇಂತು ಮಿಕ್ಕ ವರ್ಣನೆಗಳ್
ಸಂತತಮೊಂದಾಗಿ ಪೇೞ್ದ ಕಾವ್ಯಂ ಧರೆಯೊಳ್
ಸಂತತಿ ಕಿಡದೆ ನಿಲ್ಕುಮಾಕ
ಲ್ಪಾಂತಂಬರಮಮೋಘವರ್ಷ ಯಶಂಬೊಲ್ ॥

(೩-೨೧೭)

ಇದರ ಪ್ರಥಮ ಪಾದದಲ್ಲಿ ಇರುವ "ಇಂತು" ಎಂಬ ಬ್ರಹ್ಮಗಣಕ್ಕೆ ಬದಲಾಗಿ ವಿಷ್ಣು ಗಣ ಅಥವಾ ರುದ್ರಗಣವನ್ನು ಇಟ್ಟು ಬರೆದರೆ ಆ ಪಾದವು ಸರಿಯಾಗುವುದು. "ಇಂತು ಮಿಕ್ಕಖಿಳ" ಅಥವಾ "ಇಂತು ಮಿಕ್ಕ ಸಕಲ" ಎಂದು ಬರೆಯಬಹುದು. ಧರೆ

ಯೊಳ್ ಎಂಬಲ್ಲಿ "ಧರಣಿಯೊಳ್" ಎಂದೂ ಅಂತ್ಯದ "ಯಶಂಬೋಲ್" ಎಂಬಲ್ಲಿ "ಯಶವವೊಲ್" ಎಂದು ತಿದ್ದಿದರೆ ಸರಿಯಾಗುವುದು.

ಕೆಳಗಿನ ಒಂದು ಗೀತಿಕೆಯ ಪಾಠವು ಅಶುದ್ಧವಾಗಿದೆ. ಛಂದೋನಿಯಮವೂ ಸರಿಯಾಗಿಲ್ಲ.

> ಪಾರ್ಥಿವ—ಲೋಕ—ನಪ್ಪನೆಂದುಂ **ಕವಿವರ್ಣಕಂ**
> ಸಾರ್ಥಚಯಂ—ನುತ ಸರಸ್ವತೀ
> ತೀರ್ಥಾವ—ತಾರ-ಮಾರ್ಗನೆಸಕಂ
> ... ... [೩-೨೨೫]

ಇದರ ಚತುರ್ಥ ಪಾದವು ಲುಪ್ತವಾಗಿದೆ. "ಸಾರ್ಥಮಪ್ಪಂತು ಚಿಂತಿತ ಕಾರ್ಯತತ್ಪರಂ" ಎಂದು ಶ್ರೀ ಎಂ. ವಿ. ಸೀತಾರಾಮಯ್ಯನವರು ಈ ಪಾದಪೂರಣ ಮಾಡಿದ್ದಾರೆ. ಈ ಗೀತಿಕೆಯನ್ನು ತಿದ್ದುವುದು ಕಷ್ಟ. ಅದಕ್ಕಾಗಿ ಮೊದಲು ಅದರ ಭಾವಾರ್ಥವನ್ನು ಊಹಿಸಿಕೊಳ್ಳಬೇಕಾಗುವುದು. ಇದಕ್ಕೆ ದಿ. ಮುಳಿಯ ತಿಮ್ಮಪ್ಪಯ್ಯನವರು ಹೀಗೆ ಅರ್ಥ ಮಾಡಿರುವರು. "ಕ್ಷತ್ರಿಯ ಸಮಾಜಕ್ಕೆ ಸೇರಿದವನಾದ ಈ ಕವಿ ಸರಸ್ವತೀ ತೀರ್ಥಾವತಾರನೆಂಬ ಬಿರುದನ್ನೊಂದಿದ ನೃಪತುಂಗನ ಕಾರ್ಯ(ಎಸಕಂ)ವೆಲ್ಲ ಪುರುಷಾರ್ಥ ಸಹಿತವಾದುದು ಅಥವಾ ಸಾರ್ಥಚಯಂ ಎಂದು ಬಣ್ಣಿಸುತ್ತಾನೆ." ಎಂದು ಬರೆದಿರುವರು.

ಶ್ರೀ ಎಂ. ವಿ. ಸೀತಾರಾಮಯ್ಯನವರು ಬೇರೆ ರೀತಿಯಲ್ಲಿ "ಎಂದುಂ ವರ್ಣಕುಂ (=ಹೀಗೆಂದೂ ವರ್ಣಿಸುತ್ತಾರೆ). ನೃಪತುಂಗ ಸಭಾಸದನು— "ಪಾರ್ಥಿವ ಲೋಕನಪ್ಪಂ (=ಕ್ಷತ್ರಿಯ ಪ್ರಪಂಚಕ್ಕೆ ಸೇರಿದವನು.......) ಕವಿ; ಸಾರ್ಥಚಯಂ (=ಸಂಪದ್ಯುಕ್ತನು); ನುತ ಸರಸ್ವತೀ ತೀರ್ಥಾವತಾರ ಮಾರ್ಗನ (=ನೃಪತುಂಗನ) ಎಸಕು (=ಕಾರ್ಯವು) ಸಾರ್ಥಮಪ್ಪಂತು ಚಿಂತಿತ ಕಾರ್ಯತತ್ಪರಂ (=ಸಾರ್ಥಕವಾಗುವ ರೀತಿಯಲ್ಲಿ ಆಲೋಚಿಸಿದ ಕಾರ್ಯದಲ್ಲಿ ನಿರತನಾದವನು)" ಎಂದು ಪ್ರತಿಪದಾರ್ಥವನ್ನು ವಿವರಿಸಿರುವರು. ಗೀತಿಕೆಯ ಅಪಪಾಠವನ್ನು ನೋಡಿ ಈ ವಿದ್ವಾಂಸರು ವಿಭಿನ್ನ ರೀತಿಯಲ್ಲಿ ಅರ್ಥಮಾಡಿದರು. ಈ ಗೀತಿಕೆಯ ಶುದ್ಧಪಾಠವನ್ನು ಊಹಿಸುವುದು ಕಷ್ಟವಾಗಿದೆ. ಆದರೆ ಅದನ್ನು ಸ್ವಲ್ಪ ವ್ಯತ್ಯಾಸಗೊಳಿಸಿ ತಿದ್ದಬಹುದು.

ಪ್ರಥಮ ಪಾದದಲ್ಲಿ "ಕವಿ ವರ್ಣಕುಂ" ಎಂಬ ಒಂದು ರುದ್ರಗಣವು ಹೆಚ್ಚಾಗಿದೆ. ದ್ವಿತೀಯ ಪಾದದಲ್ಲಿ ಒಂದು ಗಣವು ಕಡಿಮೆಯಾಗಿದೆ. ಪ್ರಥಮ ಪಾದದಲ್ಲಿರುವ "ಕವಿ ವರ್ಣಕುಂ" ಎಂಬುದನ್ನು ದ್ವಿತೀಯ ಪಾದಕ್ಕೆ "ಸಾರ್ಥಚಯುಂ" ಎಂಬ ಪದದ ಅನಂತರ ಸೇರಿಸಿದರೆ ಎರಡು ಪಾದಗಳೂ ಸರಿಯಾಗುವವು. ಪ್ರಾಯಶಃ ಪ್ರತಿಕಾರರು ದ್ವಿತೀಯ ಪಾದದಲ್ಲಿ ಬಿಟ್ಟುಹೋದ "ಕವಿ ವರ್ಣಕುಂ" ಎಬ ಪದಗಳನ್ನು ಹಂಸ—

ಪಾದ ಚಿಹ್ನೆಹಾಕಿ ಮೇಲೆ ಬರೆದುದರಿಂದ ಪ್ರಥಮ ಪಾದಕ್ಕೆ ಸೇರಿಸಬಹುದು. ತೃತೀಯ ಪಾದದಲ್ಲಿ ಮೂರನೆಯ ಗಣವು ರುದ್ರಗಣವನ್ನು ಮೀರುವುದು. "ನುತ ಸರಸ್ವತೀ ತೀರ್ಥಾವತಾರ ಮಾರ್ಗನೆಸಕಂ'' ಎಂಬ ವಾಕ್ಯಭಾಗವೇ ಇರಲಾರದು. ನೃಪತುಂಗನಿಗೆ 'ಸರಸ್ವತೀ ತೀರ್ಥಾವತಾರ' ಎಂಬ ಬಿರುದು ಕಂಡುಬರುವುದು. ಕವಿರಾಜಮಾರ್ಗದ ತೃತೀಯ ಪರಿಚ್ಛೇದಾಂತ್ಯದಲ್ಲಿ "ಇದು ಪರಮ ಸರಸ್ವತೀ ತೀರ್ಥಾವತಾರ ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್ ಅರ್ಥಾಲಂಕಾರ ಪ್ರಕರಣಂ ತೃತೀಯ ಪರಿಚ್ಛೇದಂ" ಎಂದು ಬರೆಯಲಾಗಿದೆ.

"ಸರಸ್ವತೀ ತೀರ್ಥಾವತಾರ ಮಾರ್ಗ" ಎಂದರೆ ನೃಪತುಂಗ ಎಂಬ ಅರ್ಥ ಬರಲಾರದು; ಕವಿರಾಜಮಾರ್ಗ ಎಂಬ ಅರ್ಥ ಬರುವುದು. "ನುತ ಸರಸ್ವತೀ ತೀರ್ಥಾವತಾರ ಮಾರ್ಗ" ಎಂಬುದಕ್ಕೆ ಶ್ರೇಷ್ಠವಾದ ಕವಿರಾಜಮಾರ್ಗವೆಂದೂ ಕವಿರಾಜಮಾರ್ಗದಲ್ಲಿ ಸ್ತುತಿಸಲ್ಪಟ್ಟವನು ಎಂದೂ ಅರ್ಥಮಾಡಬಹುದು. "ನುತ ಸರಸ್ವತೀ ತೀರ್ಥಾವತಾರ ಮಾರ್ಗಮುಂ" ಎಂದು ಮೂಲಪಾಠವಿದ್ದರೆ ಶ್ರೇಷ್ಠವಾದ ಕವಿರಾಜಮಾರ್ಗ ಎಂಬ ಅರ್ಥವನ್ನು ಮಾಡಬಹುದು. ಇನ್ನೊಂದು ರೀತಿಯಲ್ಲಿ "ನುತ ಸರಸ್ವತೀ ತೀರ್ಥಾವತಾರನೆಸಕಮುಂ" ಎಂದು ಇದ್ದರೆ, "ಶ್ರೇಷ್ಠನಾದ ನೃಪತುಂಗನ ಕಾರ್ಯವನ್ನು" ಎಂದು ಅರ್ಥಮಾಡಬಹುದು. "ನುತ ಸರಸ್ವತೀತೀರ್ಥಾವತಾರಮಾರ್ಗನಂ" ಎಂದು ಇದ್ದರೆ ಆಗ ಕವಿರಾಜಮಾರ್ಗದಿಂದ ಸ್ತುತಿಸಲ್ಪಟ್ಟವನನ್ನು ಎಂದು ಅರ್ಥಮಾಡಬಹುದು. ಮೇಲಿನ ಪಾಠಗಳಲ್ಲಿ ಯಾವುದಾದರೊಂದನ್ನು ಉಳಿಸಿಕೊಳ್ಳಬೇಕಾಗುವುದು. ಚತುರ್ಥಪಾದದಲ್ಲಿ ಸ್ವಲ್ಪ ವ್ಯತ್ಯಾಸವಾಗಿ, ಶ್ರೀ ಎಂ. ವಿ. ಸೀತಾರಾಮಯ್ಯನವರ ಸೂಚನೆಯಂತೆ ಪಾದಪೂರಣ ಮಾಡಬಹುದು.

"ಚಿಂತಿತಕಾರ್ಯ" ಎಂಬಲ್ಲಿ "ಪ್ರಭುಕಾರ್ಯ" "ವರಕಾರ್ಯ" "ಸತ್ಕಾರ್ಯ" ಇವುಗಳಲ್ಲಿ ಯಾವುದಾದರೊಂದನ್ನು ಬರೆದರೆ ಸರಿಯಾಗುವುದು. ಆಗ ಗೀತಿಕೆ ಕೆಳಗಿನಂತೆ ಇರಬೇಕಾಗುವುದು.

ಪಾರ್ಥಿವ–ಲೋಕ–ನಪ್ಪನೆಂದುಂ
ಸಾರ್ಥಚಯಂ-ಕವಿವರ್ಣಕುಂ-ನುತಸರಸ್ವತೀ
ತೀರ್ಥಾವತಾರ-ಮಾರ್ಗಮುಂ (ನೆಸಕಮುಂ)
(ಮಾರ್ಗನಂ)
ಸಾರ್ಥ[ಕ]ಮಪ್ಪಂತು-ಪ್ರಭುಕಾರ್ಯ (ವರಕಾರ್ಯ)
(ಸತ್ಕಾರ್ಯ) ತತ್ಪರಂ ॥

"ಕ್ಷತ್ರಿಯ ಸಮಾಜಕ್ಕೆ ಸೇರಿದವನೂ ಸಂಪದ್ಯುಕ್ತನೂ ರಾಜಕಾರ್ಯ (ಸತ್ಕಾರ್ಯ)ತತ್ಪರನೂ ಆದ ಕವಿಯು ಶ್ರೇಷ್ಠವಾದ ಕವಿರಾಜಮಾರ್ಗವನ್ನು (ಶ್ರೇಷ್ಠನಾದ ನೃಪತುಂಗನ ಕಾರ್ಯವನ್ನು) ವರ್ಣಿಸಿರುವನು" ಎಂದು ಮೇಲಿನ

ಗೀತಿಕೆಯ ತಾತ್ಪರ್ಯವಾಗುವುದು. ಈ ಗೀತಿಕೆಯನ್ನು ಹೀಗೆ ತಿದ್ದಿದರೂ ಇದರ ಪರಿಷ್ಕರಣವು ಸಮರ್ಪಕವೆಂದು ಹೇಳಲು ಸಾಧ್ಯವಿಲ್ಲ. ಕವಿರಾಜಮಾರ್ಗದಲ್ಲಿ ಗೀತಿಕೆಗಳೆಂದು ಬರೆದ ಇತರ ಪದ್ಯಗಳು ಬೇರೆ ಛಂದಸ್ಸುಗಳಿಗೆ ಸೇರಿದ ಪದ್ಯಗಳಾಗಿರಬಹುದು. ಆದರೆ ಅವುಗಳ ಶುದ್ಧಪಾಠವನ್ನು ನಿರ್ಧರಿಸದೆ ಯಾವ ಛಂದೋಬಂಧಗಳೆಂದು ನಿರ್ಣಯಿಸಲು ಅಸಾಧ್ಯ. ಕೆಲವು ಪದ್ಯಗಳಾದರೂ ಅಕ್ಕರ, ಛಂದೋವತಂಸ, ಮದನವತಿ ಛಂದಸ್ಸುಗಳಿಗೆ ಸೇರಿದ ಕರ್ಣಾಟವಿಷಯಜಾತಿಗಳಾಗಿರಬಹುದು. ಕೆಲವು ಮಾತ್ರಾ ನಿಯಮದ ಚತುಷ್ಪದಿಗಳಾಗಿರಬಹುದು. ಕೆಲವು ಅರ್ಧಸಮಚತುಷ್ಪದಿಗಳಾಗಿರಬಹುದು. ಕೆಲವು ವರ್ಣವೃತ್ತಗಳಾಗಿರಬಹುದು. ವಿದ್ವಾಂಸರು ಈ ಪದ್ಯಗಳ ಶುದ್ಧಪಾಠವನ್ನು ನಿರ್ಣಯಿಸುವುದು ಹಿತ. ಗೀತಿಕೆಯನ್ನು ಹಾಡುವ ಕ್ರಮ : ಗೀತಿಕೆಯಲ್ಲಿ ಲಯದ ಸುಳಿಹು ಕಾಣುವುದಿಲ್ಲವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಅದರ ಗಣಗಳನ್ನು ಬೇಕಾದಲ್ಲಿ ಹಿಗ್ಗಿಸಿ ವಿಲಂಬಿಸಿ ಓದಬೇಕೆಂದು ತೋರುತ್ತದೆ.

ಅಂಶಗಣದಲ್ಲಿ ಮೂಲಾಂಶವನ್ನು ಬಿಟ್ಟು ಮುಂದಿನ ಅಕ್ಷರವನ್ನು ಹಿಗ್ಗಿಸಿ ಓದುವ ರೂಢಿ ಇದೆ. ಇದು ಅಂಶಗಣದ ವೈಶಿಷ್ಟ್ಯ; ಗೀತಿಕೆಯ ಎರಡನೆಯ ಮತ್ತು ಆರನೆಯ ಸ್ಥಾನಗಳಲ್ಲಿ ಬ್ರಹ್ಮಗಣಗಳಿದ್ದು ಉಳಿದೆಡೆಗಳಲ್ಲಿ ರುದ್ರಗಣಗಳೇ ಬಂದರೆ ಅಂಶಗಣದ ನಿಯಮಕ್ಕೆ ಸರಿಯಾಗಿ ಓದಿದರೆ ಲಯವು ತಪ್ಪುವುದಿಲ್ಲ. ವಿಷ್ಣುಗಣಗಳು ಬಂದರೆ ಅವುಗಳನ್ನು ವಿಲಂಬಿಸಿ ರುದ್ರಗಣಗಳಿಗೆ ಸರಿಹೊಂದುವಂತೆ ಓದಬೇಕಾಗುವುದು. ಆಗ ಎರಡು ಬ್ರಹ್ಮಗಣಗಳ ಲಯ ಉಂಟಾಗುವುದು. ಹೀಗಾಗಿ ಎರಡನೆಯ ಮತ್ತು ಆರನೆಯ ಸ್ಥಾನದ ಬ್ರಹ್ಮಗಣಗಳ ಲಯಕ್ಕೆ ರುದ್ರಗಣಗಳ ಲಯವೂ ಹೊಂದಿಕೊಳ್ಳುವುದು. ತ್ರಿಪದಿ. ಅಕ್ಕರಗಳಲ್ಲಿ ಪಾದಗಳ ಎಡೆಯಲ್ಲಿ ಬರುವ ಬ್ರಹ್ಮಗಣವನ್ನು ವಿಷ್ಣುಗಣಕ್ಕೆ ಸರಿಯಾಗುವಂತೆ ವಿಲಂಬಿಸಿ ಅಥವಾ ನಿಲ್ಲಿಸಿ ಓದುವ ಕ್ರಮವಿದೆ. ತ್ರಿಪದಿ, ಅಕ್ಕರ, ಸಾಂಗತ್ಯಗಳಲ್ಲಿ ವಿಷ್ಣುಗಣವಿರಬೇಕಾದಲ್ಲಿ ಬ್ರಹ್ಮಗಣ ಪ್ರಯೋಗವಿದ್ದರೆ ಅದನ್ನು ವಿಷ್ಣುಗಣಕ್ಕೆ ಸರಿಯಾಗಿ ವಿಲಂಬಿಸಿ ಓದಬೇಕು. ಗೀತಿಕೆಯಲ್ಲಿ ವಿಷ್ಣುಗಣ ಬಂದರೆ ರುದ್ರಗಣಕ್ಕೆ ಸರಿಯಾಗುವಂತೆ ವಿಲಂಬಿಸಿ ಓದಬೇಕಾಗುವುದು. ಇದನ್ನು ಅವಲೋಕಿಸಿದರೆ ಇದರಲ್ಲಿ ಬ್ರಹ್ಮಗಣದ ಲಯವೇ ಪ್ರಧಾನವೆಂದು ಭಾವಿಸಬೇಕಾಗುವುದು. ಅಂತೂ ಇದನ್ನು ಚತುರ್ಮಾತ್ರಾಗಣದ ಲಯಕ್ಕೆ ಸರಿಯಾಗುವಂತೆ ರಾಗಾಲಾಪನೆಮಾಡಿ ಹಾಡಬೇಕು. ಕೆಳಗೆ ಗೀತಿಕೆಯನ್ನು ಚತುರ್ಮಾತ್ರಾ ಲಯಕ್ಕೆ ಹೊಂದುವಂತೆ ಬರೆಯಲಾಗಿದೆ. s ಈ ಚಿಹ್ನೆಯನ್ನು ಹೊಂದಿರುವ ಅಕ್ಷರ ೩ ಮಾತ್ರೆಗಳವರೆಗೂ s s ಈ ಚಿಹ್ನೆಗಳನ್ನು ಹೊಂದಿರುವ ಅಕ್ಷರವನ್ನು ೪ ಮಾತ್ರೆಗಳವರೆಗೂ ಹಿಗ್ಗಿಸಿ ಓದಬೇಕು.

ಎರಡs, ಬಿsರೂsಳಾs, ಬಿsಂಬs, ಸಂಚೆs, ಯೊಳ್ss
ಬರೆ ಪs, ದ್ಮss, ಛಸನುs, ಲಿsss, ದುನ ಮೊ, ಚ್ಚುನ ತೆs, ಜs, ದಿಂ ॥

ದಿರೆ ಮುಂ, ದS ಣS, ಪಾದಂ, ಮುನ್ನಿS, ನಂS,
ತಿರೆ ಕS, ರಂSS, ಗೀತಿS, ಕೇS, ಯಿಂ, ತS, ಕ್ಕಂ ಸS, ಜೀSS ॥
ತಿರೆ ಕS, ರಂSS, ಗೀತಿS, ಕೆSS, ಗೀರೇಳ್, ಗಣಮುS, ಕ್ಕಂSS ॥

ಹೀಗೆ ಓದಿದರೆ ಪ್ರಥಮ ಹಾಗೂ ತೃತೀಯ ಪಾದಗಳಲ್ಲಿ ೫ ಚತುರ್ಮಾತ್ರೋಚ್ಚಾರ ಗಣಗಳು ಬರುವವು. ದ್ವಿತೀಯ ಮತ್ತು ಚತುರ್ಥ ಪಾದಗಳಲ್ಲಿ ೭ ಚತುರ್ಮಾತ್ರೋಚ್ಚಾರ ಗಣಗಳು ಬರುವವು. ಈ ರೀತಿಯಲ್ಲಿ ಹಾಡಿದರೆ ತಾಳಲಯಕ್ಕೆ ಹೊಂದಿಕೊಳ್ಳುವುದು. ಸಂಗೀತಕ್ಕೆ ಅಳವಡುವಂತೆ ಹಾಡಲು ಅನುಕೂಲವಾಗುವುದರಿಂದಲೇ ಇದಕ್ಕೆ ಗೀತಿಕೆ ಎಂಬ ಹೆಸರು ಬಂದಿರಬಹುದು. ●

ಹುನಗುಂದದ ಬಾದಾಮಿಚಾಲುಕ್ಯರ ಅವಶೇಷಗಳು

ಎಸ್. ಶೆಟ್ಟರ

ವಿಜಾಪುರ ಜಿಲ್ಲೆಯ ಹುನಗುಂದ ನಗರದಲ್ಲಿರುವ ರಾಮಲಿಂಗೇಶ್ವರ ದೇವಾ–ಲಯದತ್ತ ಇತಿಹಾಸಕಾರರ ಗಮನವಿನ್ನೂ ಸೆಳೆದಿಲ್ಲ.[೧] ಬಹುಪುರಾತನವಾದ ಈ ದೇವಾಲಯವನ್ನು ಇತ್ತೀಚೆ ಜೀರ್ಣೋದ್ಧಾರ ಮಾಡಿದ್ದರೂ ಅದಿನ್ನೂ ಹಾಳು ಸ್ಥಿತಿಯಲ್ಲಿ ಇದ್ದಂತೆ ಕಾಣುವುದು. ಒಳ–ಹೊರ ಭಾಗಕ್ಕೆಲ್ಲ ಸುಣ ಬಳಿಯಲಾಗಿ ರುವುದರಿಂದ ಅದರ ಕಲಾಸಂಪತ್ತೂ ಅಡಗಿಕೊಂಡುಬಿಟ್ಟಿದೆ.

ಈ ದೇವಾಲಯದ ಸಭಾಮಂಟಪದ ಭುವನೇಶ್ವರಿಯಲ್ಲಿಯ ಶಾಸನವನ್ನು ಈ ಮೊದಲು ಗುರುತಿಸಿ, ಪ್ರಕಟಿಸಲಾಗಿದೆ. (SII XI, Pt. I., No. 113 of 1074) ಅರಸರ ಬಸದಿಗೆ ದತ್ತಿ ಕೊಟ್ಟ ಬಗ್ಗೆ ಇಲ್ಲಿ ಉಲ್ಲೇಖ ಬರುವುದರಿಂದ, ಈ ಶಾಸನಕ್ಕೂ ಮತ್ತು ರಾಮಲಿಂಗೇಶ್ವರ ದೇವಾಲಯಕ್ಕೂ ಸಂಬಂಧವಿಲ್ಲ ಎನ್ನುವ ಮಾತು ಸ್ಪಷ್ಟ.

ದಿನಾಂಕ ೧೨–೨–೭೪ರಂದು ನಾನು ಈ ದೇವಾಲಯವನ್ನು ನೋಡಿದಾಗಅದು ಬಾದಾಮಿಚಾಲುಕ್ಯರ ಕಾಲಕ್ಕೆ ಸೇರಿದುದೆಂದು ತಿಳಿದು ಆಶ್ಚರ್ಯಗೊಂಡೆ. ಈ ದೇವಾ-ಲಯದ ಕಾಲ ನಿರ್ಣಯಿಸಲು (ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಾಲದ ಸುಮಾರಿಗೆ ಸೇರಿದ್ದು, ಎನ್ನಲು) ಮಂಟಪದ ಚೌಕಾಕಾರದ ಕಂಬಗಳು ಹಾಗೂ ಭುವನೇಶ್ವರಿಯಲ್ಲಿಯ ಉಬ್ಬು ಶಿಲ್ಪಗಳು ಸಾಕ್ಷಿ ನೀಡುವುವು. ಮಂಟಪವನ್ನು ಉಳಿದ ಚಾಲುಕ್ಯ ದೇವಾಲಯಗಳಂತೆ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮಧ್ಯ ಅಂಗಳದ ಭುವನೇಶ್ವರಿಯಲ್ಲಿ ಮೂರು ಉಬ್ಬುಚಿತ್ರ ಹೊಂದಿದ ಫಲಕಗಳಿವೆ. ಮೊದಲನೆಯ ಫಲಕದಲ್ಲಿ (ಪ್ರವೇಶಮಾಡಿದ ಕೂಡಲೇ ಕಾಣುವುದು) ನಂದಿ-ಯನ್ನೇರಿದ ಶಿವ–ಪಾರ್ವತಿಯರ ಚಿತ್ರವಿದೆ. ನಂದಿಯ ಹಿಂಭಾಗದಲ್ಲಿ ಶಿವನೆಡೆಗೆ

೧. ಗೆಜೆಟ್ಟೀರ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ, ಬಿಜಾಪುರ, XXIII, (1884), ಪು. 653ರಲ್ಲಿ ಹುನಗುಂದದ ಬಗ್ಗೆ ಒಂದು ಟಿಪ್ಪಣಿ ಇದೆ. ಅಲ್ಲಿ ರಾಮಲಿಂಗೇಶ್ವರದ ಬಗ್ಗೆ ಉಲ್ಲೇಖವಿದೆ. ಆದರೆ ಅದರ ಕಾಲನಿರ್ಣಯವಾಗಲೀ ಹಾಗೂ ಶಿಲ್ಪಶೈಲಿಯ ವಿವರವಾಗಲೀ ಇಲ್ಲ. ಅಲ್ಲಿ ಕೊಟ್ಟಿರುವ ರಾಮಲಿಂಗೇಶ್ವರ ದೇವಾಲಯದ ವರ್ಣನೆಯನ್ನಿಂದು ನಾವು ಹುನುಗುಂದದಲ್ಲಿ ಕಾಣುವುದಿಲ್ಲ.

ಮುಖವಾದಿ. ಅಭಿಪ್ರಾಗಿ ಸುಖಾಸನದಲ್ಲಿ ಪಾರ್ವತಿ ಕುಳಿತಿರುವಳು: ಅವಳ ಎಡಗೈಯಲ್ಲಿ ಪದ್ಮವಿದೆ. ಚತುರ್ಭುಜನಾದ ಶಿವ, ಎರಡು ಕೈಗಳಲ್ಲಿ ತಂಬೂರಿಯನ್ನು, ಇನ್ನುಳಿದ ಎರಡರಲ್ಲಿ ಡಮರು ಮತ್ತು ತ್ರಿಶೂಲಗಳನ್ನು ಹಿಡಿದಿರುವನು. ಅವನೂ ಸುಖಾಸನದಲ್ಲಿರುವನು. ಸುತ್ತಲೂ ಗಣಧರರಿರುವರು. ನಂದಿಯು ಹಿಂದಿನ ಪಾದದ ಬಳಿ ನವಿಲನ್ನೇರಿದ ಕಾರ್ತಿಕೇಯನಿರುವನು. ಇವರ ಮತ್ತು ಶೈಲಿಯಲ್ಲಿ ಇದು ನಾಗನಾಥ ದೇವಾಲಯದ ಭುವನೇಶ್ವರಿಯ ಶಿಲ್ಪಗಳನ್ನು ಹೋಲುವುದು. ಭುವ- ನೇಶ್ವರಿಯ ಮಧ್ಯಭಾಗದ ಎರಡು ಚಿತ್ರಗಳು ಹಾಳಾದಂತೆ ಕಂಡುಬರುವುದು. ನಂತರ ಇರುವ ಶಿಲ್ಪ ಗರುಡವನ್ನೇರಿದ ಚತುರ್ಭುಜ ವಿಷ್ಣುವಿನದಾಗಿದೆ. ವಿಷ್ಣುವಿನ ಹಸ್ತದಲ್ಲಿ ಚಕ್ರ, ಗದೆ, ಶಂಖ ಮತ್ತು ಪದ್ಮಗಳಿವೆ. ಸುತ್ತಲೂ ಮುನಿವೃಂದ ಹಾಗೂ ಗಣವೃಂದ ಇವೆ. ಈ ಶಿಲ್ಪ ಚಾಲುಕ್ಯರ ಕಾಲದ ವಿಷ್ಣುವಿನ ಸಾಂಪ್ರದಾಯಿಕ ಶಿಲ್ಪವನ್ನು ಜ್ಞಾಪಕಕ್ಕೆ ತರುವುದು.[೨]

ನಂತರ ಅಂಧಕಾಸುರನ ದೇಹದ ಮೇಲೆ ನಿಂತು ನಟಿಸುವ ನಟರಾಜನ ಶಿಲ್ಪವಿದೆ ಅಷ್ಟಭುಜನಾದ ಶಿವನ ಬಲಗೈಗಳಲ್ಲಿ ಅಕ್ಷಮಾಲಾ, ಫಲಕ (ಡಾಲು), ತ್ರಿಶೂಲ ಮತ್ತು ಖಡ್ಗ: ಎಡಗೈಗಳಲ್ಲಿ ಡಮರು. ಲೋಲಮುದ್ರ ನಾಗ ಮತ್ತು ಪಾತ್ರೆಗಳಿವೆ. ಅವನ ಹಿಂಭಾಗದಲ್ಲಿ ನಂದಿಯೂ ಮತ್ತು ಪಾದಭಾಗದಲ್ಲಿ ನರ್ತಿಸುವ ಕಾರ್ತಿಕೇಯ ಮತ್ತು ಗಣೇಶನ ಚಿತ್ರಗಳೂ ಇವೆ.

ಮಂಟಪದ ಕಂಬಗಳು ಚೌಕಾಕಾರವಾಗಿದ್ದು, ಚಂದ್ರಾಕೃತಿಯ ಉಬ್ಬು ಹೊಂದಿವೆ.

ಈ ಎಲ್ಲ ಕುರುಹುಗಳಲ್ಲದೆ ಹೊರಭಾಗದಲ್ಲಿರುವ ನಾಗಗಳನ್ನು ಹಿಡಿದಿರುವ ಗರುಡನ ಉಬ್ಬುಶಿಲ್ಪ ಹಾಗೂ ಇನ್ನುಳಿದ ಗಣಗಳ ಶಿಲ್ಪಗಳಿಂದ. ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ್ದೆಂದು ಸುಲಭವಾಗಿ ಗ್ರಹಿಸಬಹುದಾಗಿದೆ.

ಗರ್ಭಗುಡಿ ಮತ್ತು ಸುಕನಾಸಿಗಳು ಮಂಟಪಕ್ಕಿಂತ ಕೆಳಮಟ್ಟದಲ್ಲಿವೆ. ಸುಕ- ನಾಸಿಯಲ್ಲಿ ದುಂಡುಸ್ತಂಭಗಳೆರಡು ಕಂಡುಬರುವುವು. ದೇವಸ್ಥಾನದ ಈ ಭಾಗ ನಂತರ ಮಾರ್ಪಾಟು ಹೊಂದಿರುವುದರಲ್ಲಿ ಅನುಮಾನವಿಲ್ಲ. ಮೂಲದಲ್ಲಿ ಈ ದೇವಾಲಯದ ಗರ್ಭಗುಡಿಯ ಮೇಲೆ ಮತ್ತೊಂದು ಗರ್ಭಗುಡಿ ಇದ್ದ ಬಗ್ಗೆ ಇಂದಿಗೂ ಇರುವ ಮೇಲಂತಸ್ತಿನಿಂದ ಊಹಿಸಬಹುದಾಗಿದೆ,

ಹುನುಗುಂದ (ಪೊನ್ನುಗುಂದ)ವು ಬಾದಾಮಿ ಚಾಲುಕ್ಯರ ಕಾಲದಲ್ಲಿ ಪ್ರಮುಖ ಕೇಂದ್ರವಾಗಿರಬೇಕು. ಈ ಊರಿನಲ್ಲಿ ಅನೇಕ ಬಸದಿಗಳಿದ್ದ ಬಗ್ಗೆ ತಿಳಿದುಬಂದಿದೆ.

---

೨. ಈ ಲೇಖನದೊಡನೆ ಇರುವ ರೇಖಾಚಿತ್ರಗಳನ್ನೆಲ್ಲಾ ಬಿಡಿಸಿಕೊಟ್ಟಿದ ನನ್ನ ಸಂಶೋಧನ- ವಿದ್ಯಾರ್ಥಿನಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಕು. ಡೋರಿಸ್ ಛಾವಮ ಅವರಿಗೆ ನನ್ನ ಅಭಿಮಾನಪೂರ್ಣ ವಂದನೆಗಳು.



ಉಮಾಮಹೇಶ್ವರ-ಕಾರ್ತಿಕೇಯ ಮತ್ತು ಗಣ ವೃಂದ



ಗರುಡವಾಹನ ಚತುರ್ಭುಜ ವಿಷ್ಣು



ಅಂಧಕಾಸುರ—ನಟರಾಜ

"ಮೇಗುಡಿ" ಬಸದಿಯನ್ನು ಬೆಟ್ಟದ ಮೇಲೆ ಕಟ್ಟಲಾಗಿತ್ತು. ಅದರ ಅವಶೇಷಗಳಿನ್ನೂ ಉಂಟು. ಕ್ರಿ. ಶ. ೧೮೭೦ರಲ್ಲಿ ಶ್ರೀ ದೊಡ್ಡಪ್ಪನವರು ನಾಗರಾಳ ಅವರು ಕಟ್ಟಿಸಿದ ಬಾವಿಯಲ್ಲಿ ಈ ದೇವಾಲಯದ ಸುಂದರವಾದ ಉಬ್ಬುಶಿಲ್ಪಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿಯ ಯಕ್ಷ, ಗಂಧರ್ವ ಹಾಗೂ ಗಣಗಳ ಉಬ್ಬುಶಿಲ್ಪಗಳು ಪಟ್ಟದಕಲ್ಲು, ಐಹೊಳೆ ಮುಂತಾದೆಡೆಯಲ್ಲಿ ಕಂಡುಬರುವ ಶಿಲ್ಪಗಳಷ್ಟೇ ಉತ್ತಮವಾಗಿವೆ.

ಈ ಊರಿನಲ್ಲಿಯು ಮತ್ತು ಅದರ ಪರಿಸರದಲ್ಲಿಯೂ ಐತಿಹಾಸಿಕ ಅವಶೇಷಗಳ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ. ●

ಒರೆಗಲ್ಲು

ಸೂಕ್ತಿಸುಧಾರ್ಣವದ ಒಂದು ಕಂದ :

ಕೊರೆವಳ್ ಪಲ್ಲಿಂ ಬಲ್ಸ್ಸೈ
ಗರೆವಳ್ ಕನವರಿಸಿ ಬಳ್ಳುಗರೆವಳ್ ಬಾಯಿಂ
ಸುರಿವುದು ನೊರೆ ಕೇಳ್ಪಟ್ಟ
× × × ಳೊರ್ವಳ್ ಕೆಯ್ತ್ತಕಂಜಿಪೊಜಿವುಟ್ಟಿದರ್ಂ (೮-೪೪೯)

ಮೇಲೆ ಉದ್ಧರಿಸಿರುವ ಕಂದಪದ್ಯ ಮಲ್ಲಿಕಾರ್ಜುನ (ಕ್ರಿ. ಶ. ೧೨೪೫)ಸಂಕಲಿತ ಕೃತಿ 'ಸೂಕ್ತಿ ಸುಧಾರ್ಣವ'ದಲ್ಲಿನ 'ಚಂದ್ರೋದಯ ವರ್ಣನಂ' ವಿಭಾಗದಲ್ಲಿದೆ. ಪ್ರಕಟಿತ ರೀತಿಯಲ್ಲಿ ನಾಲ್ಕನೆಯ ಸಾಲಿನಲ್ಲಿ ಗ್ರಂಥಲೋಪವಿದೆ.

ಈ ಮೇಲ್ಕಂಡ ಪದ್ಯ 'ಕಾವ್ಯಸಾರ'* ಎಂಬ ಕೃತಿಯಲ್ಲಿ ಪೂರ್ಣವಾಗಿ ದೊರೆಯುತ್ತದೆ. ಅದರಂತೆ ಮೂರು ಹಾಗು ನಾಲ್ಕನೆಯ ಸಾಲುಗಳು ಈ ರೀತಿ ಇವೆ.

ಸುರಿವುದು ನೊರೆ ಕೇಳ್ಪಟ್ಟಿ
ದಿರ್ರುಳೊರ್ವಳ ಕೈತಕಂಜಿಪೊಜಿವುಟ್ಟಿದರ್ಂ (೧೦-೮೬)

'ಕೇಳ್ಪಟ್ಟಿದಿರ್ರುಳೊರ್ವಳೆ...' ಎಂಬ ಭಾಗಕ್ಕೆ ಕೇಶಿರಾಜನ 'ಶಬ್ದಮಣಿದರ್ಪಣ'ದ ಸೂತ್ರ ೬೫, ಪ್ರಯೋಗ ೭ ರಿಂದ ಪಾಠಾಂತರವೊಂದು ಲಭಿಸುತ್ತದೆ.

ಒತ್ತಿಟ್ಟಿರುಳೀಕೆಯ ಕೈತವಕಂಜಿಪೊಜಿವುಟ್ಟಿದರ್ಂ

ಈ ಪಾಠಭೇದವನ್ನು ಮೇಲಿನ ಕಂದದಲ್ಲಿ ಗ್ರಂಥಸಂಪಾದನಶಾಸ್ತ್ರಕ್ಕನುಗುಣವಾಗಿ ಈ ರೀತಿ ತೋರಿಸಬಹುದು.

ಕೇ⁽¹ಳ್ಪಟ್ಟಿ
ದಿರ್ರುಳೊರ್ವಳ್ ಕೈತ⁽¹ಕಂಜಿಪೊಜಿವುಟ್ಟಿ⁽²ದರ್ಂ⁾²

ಎಸ್. ಶಿವಣ್ಣ

---

* K. 217/5 (ಗರಿ ೭೫); ಕನ್ನಡ ಅಧ್ಯಯನ ಕೇಂದ್ರ(ಬೆಂಗಳೂರು)ದ ಸಂಗ್ರಹ
ಸೂಕ್ತಿಸುಧಾರ್ಣವಂ — ಸಂ. ಎನ್. ಅನಂತರಂಗಾಚಾರ್ (೧೯೪೭)
ಶಬ್ದಮಣಿದರ್ಪಣ — ಸಂ. ಡಿ. ಎಲ್. ನರಸಿಂಹಾಚಾರ್ (೧೯೫೯)

೧ ಒತ್ತಿ।ಟ್ಟಿರುಳೀಕೆಯ ಕೈತವ (ಶಬ್ದಮಣಿದರ್ಪಣ)

೨ ದರ್ಂ (ಶಬ್ದಮಣಿದರ್ಪಣ)

ಬಸವಣ್ಣನವರ ವಿಗ್ರಹ:

ವೀರಶೈವ ಶರಣರಿಗೆ ಸಂಬಂಧಿಸಿದ ಶಾಸನ ಮತ್ತು ವಿಗ್ರಹಗಳೆನ್ನು ಗುರುತಿಸುವ ಕಾರ್ಯ ಇತ್ತೀಚೆ ಆಶಾದಾಯಕವಾಗಿ ನಡೆದಿದೆ. ಈ ಅವಧಿಯಲ್ಲಿ ಬಸವಣ್ಣನವರ ಶಾಸನಗಳ ಬಗ್ಗೆ ಬರೆಯುತ್ತ ಶ್ರೀ ಗೋವಿಂದ ಪೈಗಳು ೧೯೫೯ ರಲ್ಲಿ ಸೊರಟೂರ ಶಾಸನದ (ಶಿವಾ ೧೪-೨) "ಶ್ರೀ ಹಂದಿಗನೂರ ಸಿದೇನಾಯಕರ ಮುತಾಲಿಕನ ಗುಬ್ಬಿ ನಾಯಕನು ಸೊರಟೂರ ಹಾಳೆನೋೀದೇವಾಲ್ಯವನ್ನು ಜೀರ್ಣೋದ್ಧಾರವನೂ ಮಾಡಿ ಬಸವೇಶ್ವರ ದೇವರನೂ ಪ್ರತಿಷ್ಠೆ ಮಾಡಿದನು" ವಾಕ್ಯವನ್ನು ಗಮನಿಸಿ "ಈ ಕಾಲಕ್ಕೆ (ಕ್ರಿ.ಶ. ೧೩೫೭) ಹಿಂದಿನಿಂದಲೇ ಬಸವೇಶ್ವರನ ವಿಗ್ರಹಮಾಡಿ ಪೂಜಿಸುತ್ತಿದ್ದರೆಂದು ಇವರಿಂದ ಸ್ಪಷ್ಟವಾಗಿ ತಿಳಿಯುತ್ತದೆ" ಎಂದು ಹೇಳಿದ್ದರು. ಆದರೆ "ಬಸವಣ್ಣನವ–ರನ್ನು ಕುರಿತ ಶಾಸನಗಳು" ಪುಸ್ತಿಕೆಯಲ್ಲಿ ಇದು ಬಸವಣ್ಣನವರ ವಿಗ್ರಹವಾಗಿರದೆ ನಂದಿಯ ವಿಗ್ರಹವಾಗಿರುವ ಸಂಭವ ಹೆಚ್ಚು, ಅದಕ್ಕಾಗಿ ಸಬಲವಾದ ಆಧಾರಗಳಿಲ್ಲದ ಈ ಶಾಸನ ಬಸವಣ್ಣನವರನ್ನು ಕುರಿತುದಾಗಿರಲಿಕ್ಕಿಲ್ಲ" ಎಂದು ಹೇಳಿ ಶ್ರೀಯುತರ ಅಭಿಪ್ರಾಯವನ್ನು ಅಲ್ಲಗಳೆಯಲಾಗಿದ್ದಿತು.

ಇತ್ತೀಚೆ ಪ್ರಕಟವಾದ SII. XVI ಶಾಸನ ಸಂಪುಟ ಬಸವಣ್ಣನವರ ವಿಗ್ರಹದ ಬಗ್ಗೆ ಒಂದು ಸೂಚನೆಯನ್ನು ಕೊಡುವಂತೆ ತೋರುತ್ತದೆ.

ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಹುಟ್ಟಿದ ೩೩೫ ತೆಲುಗು ಶಾಸನಗಳನ್ನೊಳಗೊಂಡಿದೆ ಈ ಸಂಪುಟ. ಕರ್ನೂಲ ಜಿಲ್ಲೆಯ ನಂದಿಕೋಟೂರ ತಾಲೂಕಿನ ನಾಗಲೂಟಿ ಗ್ರಾಮಕ್ಕೆ ಸಂಬಂಧಿಸಿದ ಈ ಶಾಸನದ ಕಾಲ ಕ್ರಿ.ಶ. ೧೬೨೪. ಅಳಿಯ ರಾಮರಾಯನ ಆಳಿಕೆಯಲ್ಲಿ ಹುಟ್ಟಿದ ಇದು ನಾಗಶೆಟ್ಟಿಯೆಂಬವನ ಪುಣ್ಯಕಾರ್ಯಗಳನ್ನು ವಿವರಿಸುತ್ತ "ಶ್ರೀಶೈಲ ಸಿಧಾಪುರಂ ಲಾಂಗ್ಗಲೂಟಿ ವೀರಭದ್ರುನಿದೇವುಳ ಪ್ರಾಕಾರಮಂದು ತೂ(ರ್ಪು)ನ ಗೋಪುರಮುನ್ನು ಆ ಸಮೀಪಮಂದು ಶಿಲಾಮಂಟ್ಟಪಮುನ್ನುಗಟ್ಟಿಂಚಿ ಕಾಶೀವಿಶ್ವೇಶ್ವರುನಿ ಕಲ್ಯಾಣ ಬಸ[ವೇ*]ಶ್ವರುನಿ ಪ್ರ[ತಿ*]ಷ್ಟ–ಜೇಸಿ..." ಎಂದು ಹೇಳುತ್ತದೆ. ಸಂಪಾದಕರು ಈ ಶಾಸನದ ತಲೆಯ ಮೇಲಿನ ಟಿಪ್ಪಣಿಯಲ್ಲಿ "It registers the Construction of gōpur towards the east and a manṭapa near it in the prakār of the temple of Vīrabhadra Lā–nggūti in the region of Shrishail-Sidhāpuram, the Consecreation of the images of Kāsi–Visvēsvara and Kalyāna Basavesvara in it" ಎಂದು ವಿವರಿಸಿದ್ದಾರೆ. ಇವರು ಹೇಳುವಂತೆ ಇದು ವಿಗ್ರಹವಾಗಿದ್ದ ಪಕ್ಷದಲ್ಲಿ ೧೭ನೇ ಶತಮಾನದವರ ದೃಷ್ಟಿಯಲ್ಲಿದ್ದ ಬಸವಣ್ಣನವರ ಭಾವಚಿತ್ರದ ಅಪರೂಪ ಸಂಶೋಧನೆಯಾಗುತ್ತದೆ. ಲಿಂಗವಾಗಿದ್ದ ಪಕ್ಷದಲ್ಲಿ ಬಸವಣ್ಣನವರ ಬಗ್ಗೆ ಜನರಿಗಿದ್ದ ಭಕ್ತಿ ವೇದ್ಯವಾಗುತ್ತದೆ. ನಂದಿಯನ್ನು ಸ್ಥಾಪಿಸಿ ಹೀಗೆ ಹೇಳಿದ್ದರೆ ಬಸವಣ್ಣ–ನಂದಿಗಳ ಅವತಾರ

ಸಂಬಂಧದ ಬಗ್ಗೆ ಜನರ ದೃಷ್ಟಿಯೇನೆಂಬುದು ತಿಳಿದುಬರುತ್ತದೆ. ಈ ಮೂರು ಶಕ್ಯತೆಗಳಲ್ಲಿ ಸತ್ಯವಾದುದನ್ನು ಅರಿಯಲು ಆ ಸ್ಥಳಕ್ಕೆ ಹೋಗಿ ಶೋಧಿಸುವುದು ಅವಶ್ಯವಿದೆ.

ಗುಂಡಬ್ರಹ್ಮಯ್ಯಗಳ ವಿಗ್ರಹ :

ವೀರಶೈವ ಶರಣಪರಂಪರೆಯಲ್ಲಿ ಜಗದೇವ, ಮಲ್ಲಿಬೊಮ್ಮಣ್ಣಗಳಂತೆ ಕೇಳಿಬರುವ ಇನ್ನೊಂದು ಅಖಂಡನಾಮ ಗುಂಡಬ್ರಹ್ಮಯ್ಯಗಳದು. ಜಗದೇವ ಮತ್ತು ಮಲ್ಲಿ ಬೊಮ್ಮಣ್ಣಗಳೇ ಗುಂಡಯ್ಯ ಮತ್ತು ಬ್ರಹ್ಮಯ್ಯಗಳಾಗಿ ಹುಟ್ಟಿದವರೆಂದು ಈ ಎರಡೂ ಜೋಡಿಗಳಿಗೆ ಅವತಾರದ ಕೊಂಡಿ ಹಾಕಿದ್ದಾನೆ ವಿರೂಪಾಕ್ಷಪಂಡಿತ. ಕಾವ್ಯ, ಯಕ್ಷಗಾನ, ಸ್ಥಳೆವದಂತಿಗಳಲ್ಲಿ ಸಿಗುವ ಇವರ ಚರಿತ್ರೆ ಹೀಗಿದೆ :

ಬಿಜ್ಜಳನನ್ನು ಕೊಂದ ಜಗದೇವ, ಮಲ್ಲಿಬೊಮ್ಮಣ್ಣಗಳು ಶಿವನಾಜ್ಞೆಯಂತೆ ಓರುಗಲ್ಲು ಪಟ್ಟಣದಲ್ಲಿ ಗುಂಡಯ್ಯ ಬ್ರಹ್ಮಯ್ಯಗಳಾಗಿ ಹುಟ್ಟುತ್ತಾರೆ. ಇವರ ಭಕ್ತಿ ಪರೀಕ್ಷೆಗಾಗಿ ಶಿವನು ಕಳ್ಳನ ವೇಷಧರಿಸಿ ಕಾಕತೀಯ ಗಣಪತಿರಾಯನ ಮನೆಗೆ ಕನ್ನವಿಕ್ಕಿ ಓಡಿಬಂದು ಈ ಗುಂಡಬ್ರಹ್ಮಯ್ಯರ ಮೊರೆಹೋಗುತ್ತಾನೆ. ಮೊರೆ ಹೊಕ್ಕವರನ್ನು ರಕ್ಷಿಸುವ ಕರ್ತವ್ಯಕ್ಕೆ ಕಟ್ಟುಬಿದ್ದ ಗುಂಡಬ್ರಹ್ಮಯ್ಯಗಳು ರಾಜಾಜ್ಞೆಯಂತೆ ಶೂಲ ವೇರುವಲ್ಲಿ ಶಿವ ಪ್ರತ್ಯಕ್ಷನಾಗುತ್ತಾನೆ. ಇದು ಕಥೆಯ ಮುಖ್ಯ ಸ್ವರೂಪ.

ಬನವಾಸಿ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಯಲ್ಲಿ ಕೆತ್ತಲಾದ ಶರಣರ ವಿಗ್ರಹಗಳ ಜೊತೆ ಗುಂಡಬ್ರಹ್ಮಯ್ಯಗಳ ವಿಗ್ರಹವಿದ್ದುದಾಗಿ ಹದಿನೈದು ವರುಷಗಳ ಹಿಂದೆ ಡಾ. ಗದ್ದಗಿಮಠ ಅವರು ಹುಡುಕಿ ಹೇಳಿದ್ದರು.[೧] ಇತ್ತೀಚೆ ಡಾ. ಎ. ಶಿವಾನಂದ ಅವರು ಸಂಪಾದಿಸಿದ 'ಗುಂಡಬ್ರಹ್ಮಯ್ಯನ ಸುಳ್ಳಿ' ಯಲ್ಲಿ ಗುಂಡೇನಹಳ್ಳಿಯಲ್ಲಿರುವ ಗುಂಡಬ್ರಹ್ಮಯ್ಯಗಳ ವಿಗ್ರಹದ ಚಿತ್ರವೊಂದು ಪ್ರಕಟವಾಗಿದೆ. ಕೆಳಗೆ ಹೆಸರು ಕೆತ್ತಿರದಿದ್ದರೂ ಜನತೆ ಪರಂಪರಾಗತವಾಗಿ ಕರೆಯುವ ಹೆಸರು, ಆಚರಿಸುವ ಜಾತ್ರೆ, ಹೇಳುವ ದಂತಿಗಳಿಂದಾಗಿ ಇದು ಗುಂಡಬ್ರಹ್ಮಯ್ಯಗಳ ವಿಗ್ರಹವೆಂಬುದು ಸತ್ಯ.[೨] ಶಿಲ್ಪವಿನ್ಯಾಸದಲ್ಲಿ ಇದನ್ನು ಹೋಲುವ ಇನ್ನೊಂದು ವಿಗ್ರಹ ಚಿತ್ರದುರ್ಗ ಸಂಪಗೆಸಿದ್ಧೇಶ್ವರ ದೇವಾಲಯದಲ್ಲಿದೆ ಎಂದು ಅವರೇ ಸೂಚಿಸಿದ್ದಾರೆ. ಹಾಗಿದ್ದರೆ ಇವುಗಳಲ್ಲಿ ಬನವಾಸಿ ವಿಗ್ರಹದ ಶಿಲ್ಪವಿನ್ಯಾಸ ಒಂದು ವರ್ಗಕ್ಕೆ ಗುಂಡೇನ

---

೧. ಈ ವಿಗ್ರಹದ ಚಿತ್ರವನ್ನು ಕ. ಭಾ. ೬-೩ ರಲ್ಲಿ ನೋಡಬಹುದು. (ಬನವಾಸಿ ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು —ಡಾ. ಎ. ಶಿವಾನಂದ).

೨. ಡಾ. ಎ. ಶಿವಾನಂದ : ಗುಂಡಬ್ರಹ್ಮಯ್ಯಗಳ ಚರಿತ್ರೆ. ೧೯೭೩ ಪು. ೨೩.



ಗುಂಡಬ್ರಹ್ಮಯ್ಯಗಳ ವಿಗ್ರಹ

ಕೃಪೆ : ಡಾ. ಬಿ. ಎಸ್. ಕುಲಕರ್ಣಿ, ಡೈರೆಕ್ಟರ್ ಕೆ.ಆರ್.ಆಯ್.

ವೆ. ಚಿತ್ರದುರ್ಗ ವಿಗ್ರಹಗಳ ಶಿಲ್ಪವಿನ್ಯಾಸ ಇನ್ನೊಂದು ವರ್ಗಕ್ಕೆ ಒಳಪಡುತ್ತವೆ. ಇಲ್ಲಿ ಗುಂಡೇನಹಳ್ಳಿ, ಚಿತ್ರದುರ್ಗ ವರ್ಗಕ್ಕೆ ಸಂಬಂಧಪಡುವ ಹೊಸ ವಿಗ್ರಹವನ್ನು ಸೂಚಿಸಬಯಸುತ್ತೇನೆ.

ನಾಲ್ಕು ವರ್ಷಗಳ ಹಿಂದೆ 'ಶಾಸನಗಳಲ್ಲಿ ಶಿವಶರಣರು' ಪುಸ್ತಕವನ್ನು ಬರೆಯುವಾಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ "ಎರಡು ವ್ಯಕ್ತಿಗಳು ಕೈಯಲ್ಲಿ ಇಷ್ಟಲಿಂಗ ಹಿಡಿದ ಮೂರ್ತಿ"ಯೊಂದು ನನ್ನ ಗಮನವನ್ನು ಬಲವಾಗಿ ಸೆಳೆಯಿತು. ಇದು ಗುಂಡಬ್ರಹ್ಮಯ್ಯಗಳ ಮೂರ್ತಿಯೆಂದೂ ಇಂತಹ ಮೂರ್ತಿಗಳು ಬೇರೆಬೇರೆ ಊರುಗಳಲ್ಲಿವೆಯೆಂದೂ ಅಂದು ಕ್ಯೂರೇಟರರಾಗಿದ್ದ ಡಾ. ಎಂ. ಎಸ್. ನಾಗರಾಜರಾವ್‌ರು ಹೇಳಿದರು. ಕೆಳಗೆ ಹೆಸರುಗಳಿಲ್ಲದ ಕಾರಣ ಅಂದು ನನಗೆ ನಂಬಿಕೆ ಹುಟ್ಟಲಿಲ್ಲ. ಆದರೆ ಗುಂಡೇನಹಳ್ಳಿ ಮೂರ್ತಿಯನ್ನು ಯಥಾವತ್ತಾಗಿ ಹೋಲುವ ಈ ಮೂರ್ತಿಯೂ ಗುಂಡಬ್ರಹ್ಮಯ್ಯ[೩]ಗಳದೆಂದು ಇಂದು ನಿಸ್ಸಂದೇಹವಾಗಿ ಹೇಳಬಹುದು.

ಈ ಮೂರ್ತಿ ಮೂಲತಃ ಹಾವೇರಿಯ ವೀರಭದ್ರ ದೇವಾಲಯದ ಹಿಂದೆ ಮರದ ಕೆಳಗೆ ಇದ್ದುದು ೪ ವರ್ಷಗಳ ಹಿಂದೆ ಡಾ. ಶ್ರೀನಿವಾಸ ರಿತ್ತಿ ಅವರ ಮೂಲಕ ಕನ್ನಡ ಸಂಶೋಧನ ಸಂಸ್ಥೆಗೆ ಬಂದಿತು.

ಒಟ್ಟಿನಲ್ಲಿ ೧. ಗುಂಡೇನಹಳ್ಳಿ ೨. ಚಿತ್ರದುರ್ಗ ೩. ಕನ್ನಡ ಸಂಶೋಧನ ಸಂಸ್ಥೆ ಈ ಮೂರು ಮೂರ್ತಿಗಳು ಒಂದು ವರ್ಗಕ್ಕೆ, ಬನವಾಸಿ ವಿಗ್ರಹ ಇನ್ನೊಂದು ವರ್ಗಕ್ಕೆ ಸೇರುತ್ತದೆ. ಈ ನಾಲ್ಕು ವಿಗ್ರಹಗಳಲ್ಲದೆ ದೊಡ್ಡಾಣೆಗೆರೆಯಲ್ಲಿ ಗುಂಡಬ್ರಹ್ಮಯ್ಯನ ದೇವಾಲಯ, ಶೂಲ(ಇಷ್ಟಲಿಂಗ ಹಿಡಿದ ಮೂರ್ತಿಗೆ ಬದಲು ಈಶ್ವರಲಿಂಗ)ಗಳಿವೆಯೆಂಬುದನ್ನು ಇಲ್ಲಿ ಗಮನಿಸಬೇಕು.

ಎಂ. ಎಂ. ಕಲಬುರ್ಗಿ

ಮಡಿವಳ ಮಾಚಿದೇವನ ವಿಗ್ರಹಗಳು :

ಶಿವಶರಣರ ಸಮಕಾಲೀನ ಇಲ್ಲವೆ ಅವರ ಕಾಲಕ್ಕೆ ಸಮೀಪದ ವಿಗ್ರಹಗಳು ಅಪರೂಪ. ಅವರಲ್ಲಿಯೂ ಅವರು ಮಾಡಿದ ಪವಾಡಗಳನ್ನು ದ್ಯೋತಿಸುವ ವಿಗ್ರಹಗಳು ಒಂದೆರಡು ಮಾತ್ರ ಈವರೆಗೆ ಕಂಡುಬಂದಿವೆ. ಅಬ್ಬಲೂರಿನಲ್ಲಿದ್ದ ಏಕಾಂತದ ರಾಮಯ್ಯನ ವಿಗ್ರಹ ಇವುಗಳಲ್ಲಿ ಒಂದಾಗಿದೆ.

ಇಲ್ಲಿ ಮಡಿವಳ ಮಾಚಿದೇವನ ಎರಡು ವಿಗ್ರಹಗಳ ಬಗ್ಗೆ ವಿವೇಚಿಸುತ್ತೇನೆ. ಒಂದು ಅಮ್ಮಿನಭಾವಿಯಲ್ಲಿ ದೊರೆತದ್ದು; ಇನ್ನೊಂದು ಮುಳಗುಂದದಲ್ಲಿದ್ದುದು. ಅಮ್ಮಿನಭಾವಿಯ ವಿಗ್ರಹದ ಕೆಳಗೆ ಮೂರು ಸಾಲಿನ ಶಾಸನವಿದೆ.

---

೩. ಡಾ. ವಿ. ಶಿವಾನಂದ: ಗುಂಡಬ್ರಹ್ಮಯ್ಯಗಳ ಚರಿತ್ರೆ, ಪೀಠಿಕೆ–೨೧.

ಅಮ್ಮಿನಭಾವಿ ಗ್ರಾಮವು ಧಾರವಾಡ ತಾಲೂಕಿನಲ್ಲಿ ಧಾರವಾಡದಿಂದ ಉತ್ತರಕ್ಕೆ ಸುಮಾರು ಆರು ಮೈಲುಗಳ ಅಂತರದಲ್ಲಿದೆ. ಇಲ್ಲಿಯ ಪಂಚಗೃಹ ಹಿರೇಮಠದ ಹಿತ್ತಲದಲ್ಲಿರುವ ಗೌಳಿಗುಡಿಯ ಹತ್ತಿರದ ಈ ವಿಗ್ರಹ ಮೊದಲು ನನ್ನ ಗಮನ ಸೆಳೆಯಿತು. ಕೆಲವು ದಿವಸಗಳ ಹಿಂದೆ ಇದನ್ನು ಕನ್ನಡ ಅಧ್ಯಯನ ಪೀಠದಲ್ಲಿ ತಂದಿಡಲಾಗಿದೆ.[೧]

ಆನೆಯನ್ನು ಪ್ರತಿಭಟಿಸುತ್ತಿರುವ ಮಡಿವಳ ಮಾಚಿದೇವನ ಈ ವಿಗ್ರಹದ ಬಗ್ಗೆ ಡಾ. ಎಂ. ಎಸ್. ಸುಂಕಾಪುರ ಅವರ ಮುಂದೆ ಪ್ರಸ್ತಾಪಿಸಿದಾಗ ತಮ್ಮ ಗ್ರಾಮವಾದ ಮುಳಗುಂದದಲ್ಲಿಯೂ ಇಂತಹ ವಿಗ್ರಹವಿದೆಯೆಂದು ಅವರು ಹೇಳಿದರು. ಅವರ ಜೊತೆಯಲ್ಲಿ ಮುಳಗುಂದಕ್ಕೆ ಹೋಗಿ ಅಮ್ಮಿನಭಾವಿ ವಿಗ್ರಹವನ್ನು ಸರಿಯಾಗಿ ಹೋಲುವ ವಿಗ್ರಹವನ್ನು ಗಮನಿಸಿದೆನು. ಆದರೆ ಈ ಮೂರ್ತಿಯ ಕೆಳಗೆ ಶಾಸನವಿಲ್ಲ. ಮೇಗಿನಮಠದ ಮುಂದಿನ ಭಾವಿಯ ಪಕ್ಕದ ಒಂದು ಚಿಕ್ಕ ಗುಡಿಯ ಮುಂದೆ ಈ ಮೂರ್ತಿಯನ್ನು ನಿಲ್ಲಿಸಲಾಗಿದೆ.

ಈ ಉಭಯ ವಿಗ್ರಹಗಳಲ್ಲಿ ಪ್ರಮುಖವಾಗಿ ಎರಡು ಸಂಗತಿಗಳು ಕಾಣುತ್ತವೆ. ಮೊದಲನೆಯದು : ಮಾಚಿದೇವನ ಜೊತೆಯಲ್ಲಿ ನಿಂತ ಆತನ ಸತಿಯ ಪ್ರತಿಕೃತಿ. ಎರಡನೆಯದು : ಆನೆಯನ್ನು ನೆಲಕ್ಕೆ ತುಳಿಯುತ್ತಿರುವ ಮಾಚಿದೇವನ ಆಕೃತಿ. ವಿರಾವೇಶದಿಂದ ಆನೆಯ ಸೊಂಡಿಲನ್ನು ತನ್ನ ಕೈಯಿಂದ ಹಿಡಿದು ಅದರ ಹಿಂಗಾಲಿನ ಮೇಲೆ ತನ್ನ ಎಡಗಾಲನ್ನು ಊರಿ ಅದನ್ನು ನೆಲಕ್ಕೆ ಮೆಟ್ಟಿದ ಈ ಭಂಗಿ ಅಮ್ಮಿನಭಾವಿ ವಿಗ್ರಹದಲ್ಲಿ ಚೆನ್ನಾಗಿ ಮೂಡಿಬಂದಿದೆ. ದುರ್ದೈವದಿಂದ ಈ ವಿಗ್ರಹವಲ್ಲಿ ಮಾಚಿದೇವನ ಮುಖ ಒಡೆದುಹೋಗಿದೆ.

ಶಾಸನದ ಪಾಠ

೧. ತಾರಣ ಸಂವತ್ಸರದ ವೈಶಾಖ ಸು ೧೫ ಅಲು ಅಂಮೆನಭಾವಿ–

೨. ಯಲಿ ಮಡಿವಾಳರು ವೀರ ಮಡಿವಾಳ ಮಾಚಿ[ದೇ] . . . . . .

೩. ಯಗ (?) [ಪ್ರ]ತಿಷ್ಟೆಯಂ [ಮಾಡಿ]ದರು ಮಂಗ[ಳ]. . . . .

೪. . . . .

ಶಾಸನದ ಸಾರಾಂಶ : ಉಕ್ತವಾದ ತಿಥಿಯಲ್ಲಿ ಅಮ್ಮಿನಭಾವಿಯಲ್ಲಿ ಮಡಿವಳರು ವೀರ ಮಡಿವಳ ಮಾಚಿದೇವ(ವಿಗ್ರಹದ)ಪ್ರತಿಷ್ಠೆಯನ್ನು ಮಾಡಿದರು.

---

೧. ವಿಗ್ರಹವನ್ನು ದಯಪಾಲಿಸಿದವರು ಪೂಜ್ಯ ಮಠಾಧಿಪತಿಗಳು. ಪ್ರಯತ್ನಪಟ್ಟು ತಂದವರು ಡಾ. ಆರ್. ಸಿ. ಹಿರೇಮಠ, ಡಾ. ಎಂ. ಆಯ್. ಸವದತ್ತಿ ಮತ್ತು ಡಾ. ಎಂ. ಎಂ. ಕಲಬುರ್ಗಿ ಅವರು.



ಮಡಿವಳ ಮಾಚಿದೇವನ ವಿಗ್ರಹ, ಅಮ್ಮಿನಭಾವಿ



ಮಡಿವಳ ಮಾಚಿದೇವನ ವಿಗ್ರಹ, ಮುಳಗುಂದ

ಶಾಸನದ ತಿಥಿ : "ತಾರಣ ಸಂವತ್ಸರದ ವೈಶಾಖ ಸು. ೧೫ ಅಲು" ಎಂದು ಮಿತಿ ಹೇಳಲಾಗಿದೆ; ಶಕವರ್ಷ ಹೇಳಿಲ್ಲ. ಅಕ್ಷರಗಳ ಸ್ವರೂಪವನ್ನು ಗಮನಿಸಿದರೆ ಇದು ೧೩ ನೆಯ ಶತಮಾನದ ಶಾಸನವೆಂದು ವಿದಿತವಾಗುತ್ತದೆ. ತಾರಣ ಸಂವತ್ಸರಕ್ಕೆ ಸರಿ ಹೋಗುವ ಎರಡು ಶಕವರ್ಷಗಳು ಈ ಶತಮಾನದಲ್ಲಿ ಬರುತ್ತವೆ. ಮೊದಲನೆಯದು ೧೧೪೬ (ಕ್ರಿ.ಶ. ೧೨೨೪);ಎರಡನೆಯದು ೧೨೦೬ (ಕ್ರಿ. ಶ. ೧೨೮೪). ಶಾಸನದಲ್ಲಿಯ 'ಳ' ಅಕ್ಷರ ೧೨–೧೩ ನೆಯ ಶತಮಾನಗಳಿಗೆ, 'ಭ' ಅಕ್ಷರ ೧೩–೧೪ ನೆಯ ಶತಮಾನಗಳಿಗೆ ಹೊಂದುವ ಕಾರಣ ನಾವು ಈ ಶಾಸನದ ತಿಥಿ ಹದಿಮೂರನೆಯ ಶತಮಾನದ ಅಂತ್ಯವೆಂದು ಭಾವಿಸಿ ಕ್ರಿ.ಶ. ೧೨೮೪ ಶಾಸನದ ನಿಜವಾದ ವರ್ಷವೆಂದು ಗ್ರಹಿಸಬಹುದು. ಇದರಿಂದ ಶಾಸನದ ತಿಥಿ ಶಕವರ್ಷ ೧೨೦೬ ತಾರಣ ಸಂವತ್ಸರದ ವೈಶಾಖ ಶುದ್ಧ ಪೂರ್ಣಿಮೆಯೆಂದು ಸಿದ್ಧವಾಗಿ ಅದಕ್ಕೆ **ಕ್ರಿ. ಶ. ೧೨೮೪ ಮೇ ೧, ಸೋಮವಾರ** ಸರಿಹೊಂದುತ್ತದೆ.

ಆರ್. ಎನ್. ಗುರವ

ಗ್ರಂಥಾವಲೋಕನ

ಸರ್ವಜ್ಞಮೂರ್ತಿಯ ವಚನಗಳು : ಸಂ. ಜಿ. ಎಂ. ಉಮಾಪತಿಶಾಸ್ತ್ರಿ.
ಪ್ರ : ಶಾರದಾಭವನ ಪ್ರಕಾಶನ, ಬಾಗಲಕೋಟೆ. ಬೆಲೆ: ರೂ. ೫, ಪುಟ: ೨೦೩.

'ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ' ಎಂದು ಹೇಳಿದ ಸರ್ವಜ್ಞ, ಕನ್ನಡಿಗರ ಅಚ್ಚುಮೆಚ್ಚಿನ ಕವಿ. ಆತನ ವಚನಗಳು ಇಂದು ನಾಡಿನತುಂಬ ಜನರ ನಾಲಗೆಯ ಮೇಲೆ ನಲಿಯುತ್ತಿವೆ. ಕನ್ನಡ ಛಂದಸ್ಸಿನ ಗಂಗೋತ್ರಿಯಂತಿರುವ ತ್ರಿಪದಿಯನ್ನು ವಾಹಕವಾಗಿಟ್ಟುಕೊಂಡು ಹಲವು ವಿಷಯಗಳ ತವನಿಧಿಯನ್ನಾಗಿ ಮಾಡಿ, ಕನ್ನಡಿಗರ ಮನಸ್ಸನ್ನು ಅರಳಿಸಿ ಹೃದಯವನ್ನು ಬೆಳೆಸಿರುವುದು ಅವನ ಜನಪ್ರಿಯತೆಗೆ ಮುಖ್ಯ ಕಾರಣ. ಆಡು ಮುಟ್ಟದ ಗಿಡವಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲವಾದ್ದರಿಂದ ಆತನು ಸರ್ವ ಕನ್ನಡಿಗರ ತವನಿಧಿ, ಸರ್ವ ಜನರ ಅಚ್ಚುಮೆಚ್ಚು. ಕೆಲವು ಜನ ಕೃತಕ ವಚನಗಳನ್ನು ರಚಿಸಿ ಸರ್ವಜ್ಞಸಾಹಿತ್ಯದಲ್ಲಿ ಸೇರಿಸಿದರು. ಇದರಿಂದ ಲಾಭಕ್ಕಿಂತ ಹಾನಿಯೇ ಅಧಿಕವಾಯಿತು. ಪ್ರಕಾಶಕರ ಲಾಭದೃಷ್ಟಿ, ಲೇಖಕರ ಅವೈಜ್ಞಾನಿಕ ತಿದ್ದುಪಡೆ, ಇವುಗಳಿಗೆ ತುತ್ತಾಗಿ ಸರ್ವಜ್ಞನ ವಚನಗಳು ಯಾವುವು? ಅವುಗಳ ಮೂಲರೂಪವೇನು ? ಎಂಬುದನ್ನು ತಿಳಿಯುವುದೇ ದುಸ್ತರವಾಯಿತು. ಅವನ್ನೆಲ್ಲ ಸೋಸಿತೆಗೆಯುವ ಮೊಟ್ಟಮೊದಲನೆಯ ವೈಜ್ಞಾನಿಕ ಪ್ರಯತ್ನ ನಡೆದುದು ಶ್ರೀಯುತ ಉತ್ತಂಗಿ ಚನ್ನಪ್ಪನವರಿಂದ. ಅವರು ಸುಮಾರು ನಾಲ್ವತ್ತುಸಾವಿರ ಸಲ ತಾಳೆವೋಲೆ, ಹಸ್ತಪ್ರತಿ ಮೊದಲಾದವುಗಳನ್ನೂ ಓದಿ ೨೦೦೦ ವಚನಗಳನ್ನು ಸಂಗ್ರಹಿಸಿದರು. ಅದಕ್ಕೆ ಮುನ್ನುಡಿ, ಹಿನ್ನುಡಿ, ಸುಸಂದೇಶ, ಅರ್ಥಕೋಶ, ಅಕಾರಾದಿಗಳನ್ನು ಸೇರಿಸಿ ಆ ಗ್ರಂಥ ಅತ್ಯಂತ ಸಶಾಸ್ತ್ರೀಯವೂ ಸರ್ವಜನಾದರಣೀಯವೂ ಆಗುವಂತೆ ಮಾಡಿದರು.

ಅವರ ತರುವಾಯ ಈ ದಿಸೆಯಲ್ಲಿ ಶಾಸ್ತ್ರೀಯವಾದ ಪ್ರಯತ್ನ ನಡೆದುದು ಶ್ರೀ ಉಮಾಪತಿ ಶಾಸ್ತ್ರೀಯವರಿಂದ. ವಿವೇಕಚಿಂತಾಮಣಿಯಂತಹ ಗ್ರಂಥವನ್ನು ಪಾಂಡಿತ್ಯ ಪ್ರತಿಭೆಗಳಿಂದ ಹೊರತಂದ ಇವರ ದೃಷ್ಟಿ ಸರ್ವಜ್ಞನ ವಚನಗಳ ಮೇಲೆ ಹರಿದುದು ಔಚಿತ್ಯಪೂರ್ಣವೇ ಸರಿ. ೧೯೩೨–೩೩ರ ವೀರಶೈವ ಪತ್ರಿಕೆಗಳಲ್ಲಿ, ೧೯೩೮ರ ಸುಕುಮಾರ ಪತ್ರಿಕೆಯಲ್ಲಿ ತಮಗೆ ದೊರೆತ ಸರ್ವಜ್ಞನ ವಚನಗಳ ಈ ಸಮೂಹವನ್ನು ಮೊದಲು ಪ್ರಕಟಿಸಿದರು. ಅವುಗಳ ಆಳವಾದ ಅಭ್ಯಾಸ. ಚಿಂತನಮಂಥನಗಳ ಫಲವಾಗಿ ೧೩೧ ಪುಟಗಳ ದೀರ್ಘ ಪೀಠಿಕೆಯನ್ನೊಳಗೊಂಡು ಆ ವಚನಗಳು ಈಗ ಗ್ರಂಥರೂಪ ಧರಿಸಿ ಬಂದಿವೆ. ಪೀಠಿಕೆಗಳಲ್ಲಿ ಲೇಖಕರು ಪಟ್ಟಿರುವ ಅಭಿಪ್ರಾಯಗಳು

ಕನ್ನಡ ಸಾಹಿತ್ಯದಲ್ಲಿ ಸರ್ವಜ್ಞನ ಹೊಸ ನೆಲೆ ಬೆಲೆಗಳನ್ನು ಗುರುತಿಸಲು ಸಹಾಯಕ ವಾಗಿವೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು. ಸರ್ವಜ್ಞನ ಹೆಸರು 'ವರರುಚಿ' ಎಂದಿರಬೇಕು(ಪುಟ ೭). ಇವನು ಪುರಾತನ ಶಿವಶರಣ ಕುಂಬಾರ ಗುಂಡಯ್ಯನ ಕುಲದವನಾಗಿರಬೇಕು(ಪುಟ ೯). ೧೪ನೆಯ ಶತಮಾನದ ವೀರಬಸವಂತರಾಯನನ್ನು ಸರ್ವಜ್ಞಮೂರ್ತಿಯು ಸ್ಮರಿಸಿರುವುದರಿಂದ ಇವನ ಕಾಲ ೧೫ನೆಯ ಶತಮಾನ ವಾಗಿರಬೇಕು(ಪುಟ ೩೧). ಸರ್ವಜ್ಞನು ವೀರಶೈವ ಸಾಧಕ; ವಿಶ್ವವ್ಯಾಪಕ ತತ್ತ್ವಾ ಚರಣೆಯ ಪ್ರತೀಕ(ಪುಟ ೫೭). ಈ ಮೊದಲಾದ ಅಭಿಪ್ರಾಯಗಳು ಲೇಖಕರ ಸಂಶೋಧನೆಯ ಫಲಗಳು. ಅಲ್ಲದೆ ಅವರು ತಮ್ಮ ಅನ್ಯಭಾಷೆಗಳ ಪಾಂಡಿತ್ಯದಿಂದ ಸರ್ವಜ್ಞನ ಮೇಲೆ ಆಗಿರುವ ಪ್ರಭಾವವನ್ನು ಗುರುತಿಸಿದ್ದಾರೆ. ಪುಷ್ಪದಂತ, ವರರುಚಿ, ರಟ್ಟಕವಿ ಮೊದಲಾದವರ ಸರ್ವಜ್ಞನ ಋಣಸಂಬಂಧವನ್ನು ಅಭ್ಯಾಸಪೂರ್ಣವಾಗಿ ಅಳೆದು ತೋರಿಸಿದ್ದಾರೆ. ಸರ್ವಜ್ಞನ ಮೂಲತ್ರಿಪದಿಗಳ ನಿಷ್ಕರ್ಷೆಮಾಡುವಾಗ ತೋರಿರುವ ಪಾಂಡಿತ್ಯ, ಪ್ರಕ್ಷೇಪವೆಂದು ಗುರುತಿಸುವಲ್ಲಿ ಹಚ್ಚಿರುವ ಒರೆಗಲ್ಲು ಶ್ರೀ ಶಾಸ್ತ್ರಿಯವರ ತೀಕ್ಷ್ಣದೃಷ್ಟಿಯ ದ್ಯೋತಕವಾಗಿವೆ. ಮೂಲತ್ರಿಪದಿಗಳು ಒಂದು ಸಾವಿರಕ್ಕೂ ಹೆಚ್ಚಿಗೆ ಇರಲಾರವು(ಪುಟ ೧೦೭). ಎಂಬ ಅವರ ನಿರ್ಧಾರ ಸಂಶೋಧನಾ ಕ್ಷೇತ್ರಕ್ಕೆ ಒಂದು ಸವಾಲಾಗಿದೆ. ಆ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕು. ತಮ್ಮ ನಿರ್ಧಾರಗಳಿಗೆ ಪೂರಕವಾಗಿ ಸುಮಾರು ೮೦ ಗ್ರಂಥ, ಪತ್ರಿಕೆಗಳನ್ನು ಬಳಸಿ ಕೊಂಡಿದ್ದಾರೆ. ಇವು ಅವರ ಆಳವಾದ ಅಭ್ಯಾಸ, ಪರಿಶ್ರಮ, ಪ್ರವೃತ್ತಿಗಳಿಗೆ ಸಾಕ್ಷಿಯಾಗಿವೆ.

"ಸಂಪಾದನೆಯ ಸಿದ್ಧವೀರಣ್ಣದೇವರು ಸೇರಿಸಿದ ಆಚರಣೆಯ ಸಂಬಂಧದ ತ್ರಿವಿಧಿ"ಗಳಲ್ಲಿ ಕೆಲವು ಕೃತಕವೆಂಬಂತೆ ಕಂಡುಬರುತ್ತವೆ.

ಉದಾ :

> ಸುರಪ ನಹುಷನು ಶಶಿಯು ಕರಧೀರ ರಾವಣನು
> ನರ ಕೀಚಕಾದಿ ಕಪಿಮುಖ್ಯ ಬಲಯುತರು
> ಪರಸತಿಯರಿಂ ಕೆಡರೆ ಸರ್ವಜ್ಞ (ಪು. ೪)

ಇಲ್ಲಿ ತ್ರಿಪದಿಯ ಸೊಬಗಾಗಲಿ, ಅರ್ಥಸೌಷ್ಠವವಾಗಲಿ ಅಷ್ಟು ಕಂಡುಬರುವುದಿಲ್ಲ. ಅಂತಹ ಇನ್ನೂ ಹಲವು ಪದ್ಯಗಳು ಇಲ್ಲಿವೆ. ಅವೆಲ್ಲ ಸರ್ವಜ್ಞನವೋ ಅನ್ಯಕೃತಗಳೋ ತಿಳಿಯದು. ಏನೇ ಆದರೂ ಸಿದ್ಧವೀರಣ್ಣದೇವರು ಸರ್ವಜ್ಞನ ಕಾಲಕ್ಕೆ ಸಮೀಪ ದವರಾದುದರಿಂದ ಅವರ ಈ ಸಂಪಾದನೆಗೆ ವಿಶೇಷ ಮಹತಿಯುಂಟು. ಅವುಗಳ ಪಾಠಾಂತರಗಳನ್ನು ಗುರುತಿಸುವಾಗ ಇನ್ನೂ ಹೆಚ್ಚಿನ ಪರಿಶುದ್ಧ ಪ್ರತಿಗಳನ್ನು ಉಪಯೋಗಿಸಿದರೆ ಚೆನ್ನು. ಅಲ್ಲದೆ ಇಲ್ಲಿ ಸಂಗ್ರಹಿಸಿರುವ 'ಸರ್ವಜ್ಞಮೂರ್ತಿ ತ್ರಿವಿಧಿ'(ವೀರಗಣ ಸ್ತೋತ್ರ)ಗೆ ಪಾಠಾಂತರಗಳ ಆವಶ್ಯಕತೆ ಇದೆ. ಮುಂದಿನ ಆವೃತ್ತಿಗಳಲ್ಲಿ ಇವುಗಳನ್ನು ಪೂರೈಸಿದರೆ ಈ ಗ್ರಂಥಕ್ಕೆ ಇನ್ನೂ ಹೆಚ್ಚಿನ ಕಳೆ

ಬರುತ್ತದೆ. ಮುನ್ನುಡಿಯಲ್ಲಿ ಡಾ. ಆರ್. ಸಿ. ಹಿರೇಮಠ ಅವರು ಹೇಳಿದ 'ಪ್ರೊ. ಜಿ. ಎಂ. ಉಮಾಪತಿ ಶಾಸ್ತ್ರಿಗಳು ಸಾಹಸಜೀವಿಗಳು ಹಿಡಿವ ಕೆಲಸವನ್ನು ಎಡಬಿಡದೆ ಪೂರೈಸುವ ನಿಷ್ಠೆ ಅವರದು' ಎಂಬ ಮಾತು ಸಾರ್ಥಕವಾಗುತ್ತದೆ.

ಬಿ. ವ್ಹಿ. ಶಿರೂರ

ಶರಣ ಸಾಹಿತ್ಯ ಸಮೀಕ್ಷೆ: ಲೇ: ದೊಡ್ಡಸ್ವಾಮಿ. ಬೆಲೆ: ರೂ. ೩-೫೦. ಪುಟ: x + ೧೭೩. ೧೯೭೭.

ವಚನ ಸಾಹಿತ್ಯದ ನಾನಾ ಮುಖಗಳನ್ನು ಕುರಿತು ಶ್ರದ್ಧೆಯಿಂದ ನಡೆಸಿದ ಅಧ್ಯಯನದ ಫಲ ಈ "ಶರಣ ಸಾಹಿತ್ಯ ಸಮೀಕ್ಷೆ". ಇದರಲ್ಲಿರುವ ಒಂಭತ್ತು ಲೇಖನಗಳು ವಿಷಯದ ಹರಹನ್ನು ತಿಳಿಸುತ್ತವೆ. ಕೆಲವು ಪುನರ್ವಿಮರ್ಶೆಗಳಾದರೆ ಹಲವು ಹೊಸವು.

"ಶಿವಶರಣರ ಆತ್ಮ ಪರಿಶೋಧನೆ" ಎಂಬುದು ಮೊದಲ ಲೇಖನ. ನಮ್ಮ ಪ್ರಾಚೀನ ಕವಿಗಳು ಶರಣರನ್ನು ಅವತಾರಪುರುಷರನ್ನಾಗಿಸಿ ಅವರ ಜೀವನ ಸ್ವರೂಪವನ್ನೇ ಬದಲಿಸಿದ್ದಾರೆ. ಪವಾಡಗಳ ಸಂತೆಯಲ್ಲಿ ನಿಂತಿರುವ ಶರಣರ ಅಂತರಂಗದ ಕೂಗು ಕೇಳಬೇಕಾದರೆ ಅವರನ್ನು ಮಾನವರನ್ನಾಗಿ ಕಾಣುವ ವಾಸ್ತವಿಕತೆಯ ಏಕಾಂತತೆ ಅವಶ್ಯ. ನಿರಂತರ ಪ್ರಯತ್ನದಿಂದ ಮಾನವತ್ವದಿಂದ ದೇವತ್ವದೆಡೆಯನ್ನು ಸೇರಿದ ಶಿವಶರಣ ಆಧ್ಯಾತ್ಮ ಜೀವನದ ಹೋರಾಟ, ಅಂತರಂಗದ ತುಮುಲ ಇವೆಲ್ಲ ಅವರವರ ವಚನಗಳಲ್ಲಿ ಕಂಡುಬರುತ್ತವೆ. ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಮುಂತಾದವರ ಆತ್ಮಪರಿಶೋಧನೆಯ ಚರಿತ್ರೆಯ ರೂಪರೇಷೆಗಳು ಈ ಲೇಖನದ ವಸ್ತು.

"ಶಿವಶರಣರ ಕ್ರಾಂತಿ" ಲೇಖನದ ವಿಶ್ಲೇಷಣೆಯ ಕ್ರಮ ಮೆಚ್ಚುವಂಥದು. ಅವರ ಕ್ರಾಂತಿಯನ್ನು 'ಪ್ರಯತ್ನಪೂರ್ವಕ ಕ್ರಾಂತಿ' ಮತ್ತು 'ಅಪ್ರಯತ್ನ ಪೂರ್ವಕ ಕ್ರಾಂತಿ' ಎಂದು ವಿಂಗಡಿಸಲಾಗಿದೆ. ಜಾತೀಯತೆ, ಸ್ತ್ರೀಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಸಮಾನತೆ, ಇವುಗಳ ವಿರುದ್ಧ ಶರಣರೆಸಗಿದ ಉಗ್ರ ಪ್ರತಿಭಟನೆ, ವ್ಯವಸ್ಥಿತ ರೀತಿಯ ಖಂಡನೆ, ಸಾಮಾಜಿಕ ಸ್ವಾಸ್ಥ್ಯದ ಯೋಜನೆ ಮುಂತಾದವುಗಳನ್ನು ವಚನಗಳ ಮೂಲಕ ನಿರೂಪಿಸಿದ್ದಾರೆ. ಇದು ಪ್ರಯತ್ನಪೂರ್ವಕ ಕ್ರಾಂತಿಯಲ್ಲಿ ಸೇರುವ ವಿಚಾರ. ಮುಂದೆ ಶರಣರು ತಮ್ಮ ಉದ್ದೇಶ ಸಾಫಲ್ಯದ ಮಾಧ್ಯಮಕ್ಕೆ ಬಳಸಿಕೊಂಡು ವಚನಗಳ ಮೂಲಕ ನಮ್ಮ ಸಾಹಿತ್ಯ-ಭಾಷೆಗಳಲ್ಲಿ ಹೇಗೆ ಅಪ್ರಯತ್ನಪೂರ್ವಕ ಬದಲಾವಣೆಯಾಗಿ ಅದೊಂದು ಸಹಜ ಕ್ರಾಂತಿಯಾಯಿತೆಂಬುದನ್ನು ಉದಾಹರಣೆ ಸಹಿತ ವಿವೇಚಿಸಿದ್ದಾರೆ. "ಶಿವಶರಣರ ದೈವಭಕ್ತಿ" ಎಂಬ ಹೆಸರಿನ ಲೇಖನದ ಆರಂಭದಲ್ಲಿ ಭಕ್ತಿ ತತ್ವದ ಬಗ್ಗೆ ಸಂಕ್ಷಿಪ್ತ ವಿವರಣೆಯಿದೆ. ಶಿವಶರಣರ ಭಕ್ತಿ ವೈಶಿಷ್ಟ್ಯವನ್ನು ವಿವರಿ-

ಸುತ್ತ "ಅವರು ಭಗವದ್ಭಕ್ತಿಯೆಂಬ ದಿವ್ಯಾಮೃತವನ್ನು ನಿರಾಕಾರ, ನಿಷ್ಕಳಂಕ ಭಗವ-ದ್ಸ್ವರೂಪವನ್ನು ಕಾಣುವ ಒಂದು ಸಾಧನವನ್ನಾಗಿ ಬಳಸಿಕೊಂಡರು. ಅವರ ಭಕ್ತಿ ಭಾವದಲ್ಲಿ ಯಾವ ವಿಧವಾದ ಲೌಕಿಕ ಫಲಾಪೇಕ್ಷೆಯೂ ಕಂಡುಬರುವದಿಲ್ಲ...... ಅವರ ಭಕ್ತಿಗೆ ಅನುಭಾವವೇ ಆಧಾರವಾಗಿರುವುದು." ಎಂದು ಬರೆದಿದ್ದಾರೆ (ಪು. ೮೧).

"ಭಕ್ತಿ-ಭವಿ" ಲೇಖನದಲ್ಲಿ ವಚನಗಳ ಆಧಾರದಿಂದ ಹೊಸ ಅಂಶ ಗುರುತಿಸುವ ಪ್ರಯತ್ನವಿದೆ. ಭಕ್ತನ ಲಕ್ಷಣ, ಆಚರಣೆಗಳ ಬಗ್ಗೆ ಅಂಥದೇನೂ ತಪ್ಪು ಅಭಿಪ್ರಾಯ ವಿಲ್ಲ. ಆದರೆ 'ಭವಿ' ಶಬ್ದದ ಜೊತೆಗೆ ಅದನ್ನು ಉಪಯೋಗಿಸುವಾಗ ಅದರ ಅರ್ಥ ಸಂಕುಚಿತವಾಗಿ ಭಕ್ತನೆಂದರೆ ವೀರಶೈವ, ಭವಿಯೆಂದರೆ ವೀರಶೈವೇತರ ಎಂಬ ಅರ್ಥ ವನ್ನು ಸಾಮಾನ್ಯರು ಗ್ರಹಿಸುತ್ತಾರೆ. ಲೇಖಕರು ಇದನ್ನು ತರ್ಕಬದ್ಧವಾಗಿ ವಿಮರ್ಶಿಸಿದ್ದಾರೆ. ಲಿಂಗಧಾರಣೆ ಮಾಡಿದಾಕ್ಷಣ ವೀರಶೈವದ ಮುದ್ರೆಪಡೆದು ಯಾವನೂ ಭಕ್ತನಾಗಲಾರ. ಅವನ ಆಚರಣೆ ಶುದ್ಧವಾದಾಗ ಮಾತ್ರ ಅವನು ನಿಜವಾದ ಭಕ್ತ. ಇನ್ನು "ಭವಿಯೆಂದರೆ ಮಧ್ಯಪಾನ, ಮಾಂಸಭಕ್ಷಣ, ಪರಸ್ತ್ರೀಸಂಗ, ಪರಧನ ಚೋರತ್ವ ನಿಜವಸ್ತು ಅಂತರತ್ವವಿದ್ದವನೇ ಭವಿಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನ" ಇದು ಸಿದ್ಧ-ರಾಮನ ಅಭಿಮತ "ಅನಾಚಾರಿಗಳೇ ಭವಿಗಳು ಸದಾಚಾರಿಗಳೆ ಭಕ್ತರೆಂದರಿಯ ಬಹುದು" (ಪು. ೯೭) ಎಂಬುದು ಲೇಖಕರ ಅಂತಿಮ ನಿರ್ಣಯ.

"ಶಿವಶರಣರ ಜೀವನದರ್ಶನ"-ಜೀವನದ ಆತ್ಯಂತಿಕಗುರಿಯಾದ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಸಂಸಾರ ತೊರೆದು ಅರಣ್ಯಕ್ಕೆ ಹೋಗದೆ ಒಳ್ಳೆಯ ಗೃಹಸ್ಥ ಜೀವನದ ಮೂಲಕವೇ ಅದನ್ನು ಗಳಿಸಬೇಕು— ಎಂಬ ಶರಣರ ಜೀವನದರ್ಶನದ ವಿವೇಚನೆ ಈ ಲೇಖನದಲ್ಲಿದೆ. "ಶಿವಶರಣರ ಜೀವನದರ್ಶನದಲ್ಲಿ ಭಾರತೀಯ ಸಂಸ್ಕೃ-ತಿಯು ಕನ್ನಡಿಗರ ಕಂಠದಿಂದ ವಚನ ರೂಪದಲ್ಲಿ ಹೊರಹೊಮ್ಮಿ ಕನ್ನಡ ಸಂಸ್ಕೃತಿ ಯಾಗಿದೆಯೆಂಬ (ಪು. ೧೧೫) ಲೇಖಕನ ತೀರ್ಮಾನ ಕಾವ್ಯಮಯ ಹೇಳಿಕೆಯಂತಿದೆ.

"ವಚನ ಸಾಹಿತ್ಯದ ಉಗಮ : ವಿದ್ವಾಂಸರ ಭಿನ್ನಮತಗಳು" ಲೇಖನದಲ್ಲಿ ಈವರೆಗೆ ಈ ವಿಷಯವಾಗಿ ಬರೆದ ಡಾ. ಡಿ. ಎಲ್. ಎನ್, ಡಾ. ಎಲ್. ಬಸವರಾಜು, ಡಾ. ಎಂ. ಚಿದಾನಂದಮೂರ್ತಿ ಇವರ ಅಭಿಪ್ರಾಯಗಳನ್ನು ಸಂಗ್ರಹವಾಗಿ ಕೊಟ್ಟಿದ್ದಾರೆ. ಕೊನೆಯಲ್ಲಿ "ವಚನ ಸಾಹಿತ್ಯವು ತಮಿಳರ ಹಾಡುಗಳನ್ನು ಅನುಸರಿಸಿತೆನ್ನು ವುದಕ್ಕಿಂತ, ಸಂಸ್ಕೃತದ 'ಛಂದೋಗಂಧಿ' ರಚನೆಯನ್ನು ಮಾದರಿಯಾಗಿ ಇಟ್ಟು ಕೊಂಡಿತೆನ್ನುವುದಕ್ಕಿಂತ ಕನ್ನಡ ದೇಶಿಯ ಛಂದಸ್ಸಾದ ತ್ರಿಪದಿಯಿಂದ ಮೂಡಿಬಂದಿ-ತೆನ್ನುವುದಕ್ಕಿಂತ ಅದು ದೈನಂದಿನ ವ್ಯಾವಹಾರಿಕ ಭಾಷೆಯಿಂದಲೇ ಉಗಮವಾಯಿ ತೆಂದು ಹೇಳುವುದು ಹೆಚ್ಚು ಸಮರ್ಪಕ"(ಪು. ೧೨೩) ಎಂದಿದ್ದಾರೆ. ಈ ಹೇಳಿಕೆಯಲ್ಲಿ ವಿಸಂಗತಿ ತಲೆಹಾಕಿದೆ. ವಚನದ ಛಂದೋಮೂಲವನ್ನು ಕುರಿತು ವಿವೇಚಿಸುತ್ತ ತಮ್ಮ ಸ್ವಂತ ಅಭಿಪ್ರಾಯವನ್ನು ಖಚಿತವಾಗಿ ತಿಳಿಸದೆ ಅದನ್ನು ಅಲ್ಲಿಯೇ ಬಿಟ್ಟು ಕೊನೆಗೆ ಭಾಷೆಯ ಕಡೆಗೆ ಹೊರಳಿದ್ದಾರೆ. ಅಲ್ಲದೆ ಯಾವುದಾದರೊಂದು ಛಂದಸ್ಸಿನ

ಪ್ರೇರಣೆಯ ಮಾತನ್ನು "ಸಾಮಾನ್ಯ ಸಾಹಿತಿಗಳಿಗೆ ಹೇಳಬಹುದೇ ಹೊರತು ಮಹಾನು ಭಾವಿಗಳಿಗೆ ಹೇಳಲು ಸಾಧ್ಯವಿಲ್ಲ" ಎಂಬ ಮಾತು (ಪು. ೧೨೦) ಶರಣರನ್ನು ಅಲೌಕಿಕ ವ್ಯಕ್ತಿಗಳನ್ನಾಗಿಸಿದ್ದರಿಂದ ಸಂಶೋಧನೆ ಹಿಂದೆಬಿದ್ದು ಪೌರಾಣಿಕದೃಷ್ಟಿ ತಲೆದೋರಿ ಹೇಳುತ್ತಿರುವ ಅಭಿಪ್ರಾಯ ನಿಸ್ಸಾರವಾಗಿದೆ.

ಮುಂದಿನ ಲೇಖನ "ಶಿವಶರಣರ ವಚನಗಳಲ್ಲಿ ಸಾಹಿತ್ಯಿಕಾಂಶಗಳು" ಶಾಸ್ತ್ರ ಮತ್ತು ಸಾಹಿತ್ಯ ಎರಡೂ ಆಗಿರುವ ವಚನಗಳಲ್ಲಡಗಿರುವ ಸಾಹಿತ್ಯಿಕ ಮೌಲ್ಯಗಳನ್ನು ಗುರುತಿಸಲು ಮಾಡಿದ ಪ್ರಾಮಾಣಿಕ ಪ್ರಯತ್ನ. ತನ್ನ ಹಿಂದಿನ ಸಾಂಪ್ರದಾಯಿಕ ಸಾಹಿತ್ಯದಿಂದ ತೀರ ಭಿನ್ನವಾಗಿದ್ದರೂ ಇದು ತನ್ನದೇ ಆದ ಗುಣ – ಸ್ವಭಾವಗಳನ್ನು ಪಡೆದುಕೊಂಡು ಹೇಗೆ ಉತ್ತಮ ಸಾಹಿತ್ಯವಾಗಿದೆಯೆಂಬುದನ್ನು ಸಾಕಷ್ಟು ಉದಾಹರಣೆ ಗಳೊಂದಿಗೆ ವಿವೇಚಿಸಿದ್ದಾರೆ. "ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಸ್ಥಾನ" ಹೊಸದೇನನ್ನೂ ಹೇಳದ ಸಾಮಾನ್ಯ ಲೇಖನ. ಕೊನೆಯದಾಗಿರುವ "ಶಿವಶರಣರ ಜಾಣ್ನುಡಿ"ಯಲ್ಲಿ ವಚನಗಳಿಂದಾಯ್ದುಕೊಂಡ ನುಡಿಮುತ್ತುಗಳನ್ನು ಸಂಗ್ರಹಿಸಲಾಗಿದೆ. ಆದರೆ ಇಲ್ಲಿರುವವೆಲ್ಲ ಗಾದೆ ಮಾತುಗಳಲ್ಲ. "ಅವರ ಪ್ರತಿಯೊಂದು ಜಾಣ್ನುಡಿಯು ಆಧ್ಯಾತ್ಮಿಕ ಪ್ರಗತಿಯನ್ನು ಬೋಧಿಸುವ ಮಹಾಮಂತ್ರಗಳಾಗಿ ತೋರುತ್ತವೆ" (ಪು. ೧೫೬) ಎಂಬ ಹೇಳಿಕೆ ಅಸಮಂಜಸವಾದುದು.

ಸಂಶೋಧನೆ ಮತ್ತು ವಿಮರ್ಶೆಯ ಜಾತಿಯ ಪ್ರಬಂಧಗಳ ಈ ಪುಸ್ತಕದಲ್ಲಿ ಒಂದೂ ಅಡಿಟಿಪ್ಪಣಿ ಇಲ್ಲದಿರುವುದು ಅಚ್ಚರಿಯ ವಿಷಯ. ಕೆಲವು ಅಭಿಪ್ರಾಯಗಳಲ್ಲಿ ಖಚಿತತೆ ಇಲ್ಲದ್ದರಿಂದ ಅಲ್ಲಲ್ಲಿ ವಿರೋಧಾಭಾಸ ಒಡೆದುಕಾಣುತ್ತದೆ. ಪುನರುಕ್ತಿ ಹೇರಳವಾಗಿವೆ. ಕೆಲವುಸಲ ವಚನಗಳನ್ನು ಉದಾಹರಿಸುವಾಗ ಪ್ಯಾರಾಗಳಂತೆ ಬರೆದು ಸೇರಿಸಿರುವುದರಿಂದ ಗದ್ಯದಲ್ಲಿ ಅವನ್ನು ಹುಡುಕಿಕೊಳ್ಳುವ ಶ್ರಮ ಓದುಗನಿಗಾಗುತ್ತದೆ. 'ಪೂಜ್ಯ' ಎನ್ನುವ ಶಬ್ದ ಅತಿಬಳಕೆಯಿಂದಾಗಿ ಲೇಖಕರ ಕೈಯಲ್ಲಿ ಸಿಕ್ಕು ಜಿಬ್ಬಿಯಾಗಿದೆ. (ನಿವೇದನೆಯ VI ಮತ್ತು VII ಈ ಎರಡು ಪುಟಗಳಲ್ಲಿ ೧೯ ಸಲ ಉಪಯೋಗಿ ಸಿದ್ದಾರೆ.) ಬಿಗಿಯಾದ ಭಾಷಾಶೈಲಿ, ಪ್ರೌಢನಿರೂಪಣಾಕ್ರಮ, ಅಭಿಪ್ರಾಯ ವಿವರಣೆಯಲ್ಲಿ ಹಿಡಿತಗಳಿದ್ದಿದ್ದರೆ ಇದು ಇನ್ನೂ ಶ್ರೇಷ್ಠ ಪುಸ್ತಕವಾಗುವ ಸಾಧ್ಯತೆ ಯಿತ್ತು. ಏನೇ ಇರಲಿ ವಚನ ಸಾಹಿತ್ಯದ ಅಭ್ಯಾಸಿಗೆ ಪ್ರಸ್ತುತ ಗ್ರಂಥ ಯೋಗ್ಯ ಪ್ರವೇಶಿಕೆಯಂತಿದೆ.

ಬಸವರಾಜ ಮಲಶೆಟ್ಟಿ

ಸಾದರ ಸ್ವೀಕಾರ

೧. **ನೂರು ಶತಕ:**

ಸಂ. ಶಾಂತರಸ. ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು. ಬೆಲೆ: ಎಂಟು ರೂಪಾಯಿ, ಪುಟ: xiv + ೧೩೮.

೨. **ನಾವು ಕಂಡ ಅಮೇರಿಕ:**

ಲೇ. ಪದ್ಮ ಉಮಾಪತಿ. ಪ್ರ: ಸುದರ್ಶನ ಪ್ರಕಾಶನ, ತಿಪಟೂರು. ಬೆಲೆ: ಸಾದಾ-ಪ್ರತಿ: ಐದು ರೂಪಾಯಿ; ಉತ್ತಮ ಪ್ರತಿ: ಹತ್ತು ರೂಪಾಯಿ, ಪುಟ: ೨೦೭.

೩. **ತಿಗಣೆ** (ಕವನ ಸಂಕಲನ):

ಲೇ. ಅ. ಮ. ಸಿ., ಪ್ರ: ಸ್ವಯಂಪ್ರಭಾ ಗ್ರಂಥಮಾಲೆ, ರಾಯಚೂರು. ಬೆಲೆ: ಎರಡು ರೂಪಾಯಿ, ಪುಟ: ೬೨.

೪. **ತೆರೆದಿತ್ತು ಬಾಗ್ಲ** (ಕವನ ಸಂಕಲನ):

ಅ.ಮ.ಸಿ., ಪ್ರ: ಸ್ವಯಂಪ್ರಭಾ ಗ್ರಂಥಮಾಲೆ, ರಾಯಚೂರು. ಬೆಲೆ: ಎರಡು ರೂಪಾಯಿ. ಪುಟ: ೬೦.

೫. **ಶುಕಸಪ್ತತಿ:**

ಸಂ: ಕೆ. ವೆಂಕಟರಾಯಾಚಾರ್ಯ. ಪ್ರ: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ಲು. ಬೆಲೆ: ಮೂರು ರೂಪಾಯಿ. ಪುಟ: xvi + ೯೯.

೬. **ಪಡುಕೋಗಿಲೆ** (ಕವನ ಸಂಕಲನ):

ಸಂ. ಎನ್. ಆರ್. ನಾಯಕ. ಪ್ರ: ಆದರ್ಶ ಪ್ರಕಾಶನ, ಕಾರವಾರ. ಬೆಲೆ: ಐದು ರೂಪಾಯಿ. ಪುಟ: ೧೩೫.

೭. **ಗುಂಡಬ್ರಹ್ಮಯ್ಯಗಳ ಚರಿತ್ರೆ:**

ಸಂ. ಡಾ. ವಿ. ಶಿವಾನಂದ. ಪ್ರ: ಅಖಂಡೇಶ್ವರ ಗ್ರಂಥಮಾಲೆ, ಜೇವರಗಿ. ಬೆಲೆ: ಐದು ರೂಪಾಯಿ. ಪುಟ: ೮೪.

೮. **ಕಾದ್ಹಂಚು ಮೇಲಿನ ನೀರು**(ಕವನ ಸಂಕಲನ):

ಲೇ. ಜಿ. ಕೃಷ್ಣರಾವ್. ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು. ಬೆಲೆ: ಮೂರು ರೂಪಾಯಿ. ಪುಟ: ೪೦.

೯. ಶೂನ್ಯಸಂಪಾದನೆ 'ಪರಾಮರ್ಶೆ'ಯ ವಿಮರ್ಶೆ :

ಸಂ. ಪ್ರೊ. ಎಸ್. ಎಂ. ವೃಷಭೇಂದ್ರಸ್ವಾಮಿ, ಪ್ರೊ. ಚಂದ್ರಶೇಖರ ಕಂಬಾರ. ಪ್ರ: ರಾವೂರು ಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಆದವಾನಿ ಕಲ್ಲುಮಠದ ಅಧಿಪತಿಗಳು. ಬೆಲೆ: ಹನ್ನೆರಡು ರೂಪಾಯಿ. ಪುಟ: ೨೭೬.

೧೦. ಕನ್ನಡ ಗ್ರಂಥಸೂಚಿ (ಸಂಪುಟ ೩) :

ಪ್ರ. ಸಂ. ಪ್ರೊ ದೇ. ಜವರೇಗೌಡ. ಪ್ರ: ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೧೨. ಬೆಲೆ: ಅರವತ್ತು ರೂಪಾಯಿಗಳು. ಪುಟ: ೪೮೭.

೧೧. ೩೬ ಮುಖ ೬೩ ಕವನ :

ಸಂ. ಸೋಮಶೇಖರ ಇಮ್ರಾಪೂರ, ಪ್ರ: ಕಾರ್ಯಾಧ್ಯಕ್ಷರು, ಕರ್ನಾಟಕ ಸಂಘ ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ. ಬೆಲೆ: ಮೂರು ರೂಪಾಯಿ, ಪುಟ: ೧೦೪.

ಸಂಪಾದಕೀಯ

ಈ ಸಂಚಿಕೆಯೊಂದಿಗೆ ಭಾರತಿ ತನ್ನ ಆರು ವರ್ಷಗಳನ್ನು ಪೂರ್ಣಗೊಳಿಸುತ್ತದೆ. ವಿಶ್ವವಿದ್ಯಾಲಯದ ಘನತೆಗೆ ತಕ್ಕಂತೆ, ವಿದ್ವಾಂಸರ ನಿರೀಕ್ಷೆಗೆ ತಕ್ಕಂತೆ ಬೆಳೆದುಬರಲು ಕಾರಣರಾದ ಲೇಖಕ – ವಾಚಕ ವರ್ಗಗಳಿಗೆ ಕೃತಜ್ಞತೆಗಳನ್ನು ಹೇಳಿ ಮುಂದೆಯೂ ಅವರಿಂದ ಈ ಬಗೆಯ ಸಹಕಾರವನ್ನು ಅಪೇಕ್ಷಿಸುತ್ತದೆ.

೧. ಶ್ರೀ ಬೇಂದ್ರೆ ಅವರಿಗೆ 'ಜ್ಞಾನಪೀಠ' ಗೌರವ

'ಜ್ಞಾನಪೀಠ' ಗೌರವ ಸಾಹಿತ್ಯಕ್ಷೇತ್ರದ ಪರಮಸನ್ಮಾನ. ಈ ಗೌರವಕ್ಕೆ ಪಾತ್ರರಾಗುವ ಕವಿಪರಮಾತ್ಮರು ಅಪರೂಪ. ಈ ವರ್ಷ ಇಂಥ ಕವಿಪರಮಾತ್ಮರ ಸಾಲಿನಲ್ಲಿ ಕನ್ನಡದ ವರಕವಿ ಬೇಂದ್ರೆಯವರು ವಿರಾಜಿಸಿದುದು, ಕನ್ನಡಕ್ಕೆ ಸಂದ ಅಪೂರ್ವ ಗೌರವ.

ಬೇಂದ್ರೆಯವರು ಕವಿಗಳು, ಕವಿಗಳಕವಿಗಳು. ಒಂದು ಯುಗದ ಸಾಹಿತ್ಯವನ್ನು ರೂಪಿಸಿದ ಯುಗಪ್ರವರ್ತಕರು. ಇವರಿಗೆ ಸಂದ ಈ ಸನ್ಮಾನದಿಂದ ಹರ್ಷಿತೆಯಾಗಿ ಭಾರತಿ ಅಭಿವಂದನೆಗಳನ್ನು ಅರ್ಪಿಸುತ್ತಾಳೆ.

೨. 'ಸರ್ವಜ್ಞ – ವೇಮನ' ಉಪನ್ಯಾಸ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ೧೦–೩–೭೪ ರಂದು 'ಸರ್ವಜ್ಞ – ವೇಮನ' ಎಂಬ ಉಪನ್ಯಾಸವನ್ನು ಹಮ್ಮಿಕೊಂಡಿದ್ದಿತು. ಕರ್ನಾಟಕ ಮತ್ತು ತೆಲುಗು ದೇಶದ ಸರ್ವಜ್ಞ ಮತ್ತು ವೇಮನರು ನೆಲದ ಸಂವೇದನೆಯುಳ್ಳ ಕವಿಗಳು. ಭಾಷೆ ಬೇರೆ, ದೇಶ ಬೇರೆಯಾದರೂ ಅವರ ದೃಷ್ಟಿ ಒಂದೇ, ಸೃಷ್ಟಿ ಒಂದೇ. ಈ ಉಭಯರ ತೌಲನಿಕ ಅಧ್ಯಯನದ ಆವಶ್ಯಕತೆಯನ್ನು ಅರಿತು ಈ ಉಪನ್ಯಾಸವನ್ನೇರ್ಪಡಿಸಲಾಗಿದ್ದಿತು. ವೇಮನ ಸಾಹಿತ್ಯದ ಅಭ್ಯಾಸಿಗಳೂ ನಮ್ಮ ರಾಜ್ಯದ ಅರಣ್ಯ ಮತ್ತು ಆಹಾರ ಮಂತ್ರಿಗಳೂ ಆದ ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಈ ಸಮ್ಮೇಲನವನ್ನು ಉದ್ಘಾಟಿಸಿದರು. ಮಾನಸಗಂಗೋತ್ರಿಯ ತೆಲುಗು ಪ್ರಾಧ್ಯಾಪಕರಾದ ಪ್ರೊ ಬಾಪಾಲು ರಾಮಯ್ಯನವರು ಈ ವಿಷಯವನ್ನು ಕುರಿತು ಪಾಂಡಿತ್ಯಪೂರ್ಣವಾದ ಮೂರು ಉಪನ್ಯಾಸಗಳನ್ನು ನೀಡಿದರು.

೩. ಎಸ್. ಡಿ. ಇಂಚಲ : ಪುಣ್ಯಸ್ಮರಣೆ

ಕನ್ನಡ ನಾಡು, ನುಡಿ, ಸಾಹಿತ್ಯಗಳ ಉಜ್ವಲ ಅಭಿಮಾನಿಗಳೂ ಕ್ರಿಯಾಶೀಲರೂ ಆದ ಶ್ರೀ ಎಸ್. ಡಿ. ಇಂಚಲ ಅವರು ಲಿಂಗೈಕ್ಯರಾದುದು ಕನ್ನಡಕ್ಕೆ ಇತ್ತೀಚೆ ಸಂಭವಿಸಿದ ಇನ್ನೊಂದು ದೊಡ್ಡ ಹಾನಿ. ಗಡಿನಾಡಿನಲ್ಲಿ ಕನ್ನಡವನ್ನು ಉಳಿಸಿದ, ಬೆಳೆಸಿದ ಕೀರ್ತಿವಂತರಲ್ಲಿ ಶ್ರೀಯುತರು ಮುಖ್ಯರು. ಇವರ ಅಗಲಿಕೆಯಿಂದ ಕನ್ನಡ ಸಾಹಿತ್ಯ, ಗಡಿನಾಡಿನ ಕನ್ನಡ ಕಾರ್ಯಗಳಿಗೆ ಅಪಾರ ನಷ್ಟವಾಗಿದೆ. ಭಾರತಿ ಈ ವೀರಕನ್ನಡಿಗನ ಮರಣ ದುಃಖದಲ್ಲಿ ಪಾಲುಗಾರಳಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ.

ಈ ಸಂಚಿಕೆಯ ಲೇಖಕರು

೧. **ಶ್ರೀಚೆನ್ನ (ಸಿ. ಪಿ. ಹೇಮಗಿರಿಮಠ) :**

ಕನ್ನಡ ಅಧ್ಯಾಪಕರು, ನೆಹರೂ ಆರ್ಟ್ಸ್ ಕಾಲೇಜು, ಹುಬ್ಬಳ್ಳಿ.

೨. **ಶ್ರೀ ಎಂ. ವ್ಹಿ. ಸೀತಾರಾಮಯ್ಯ :**

೫೪, ಅರವಿಂದ, ೩ನೆಯ ಕ್ರಾಸ್, ಗವಿಪುರಂ ಎಕ್ಸಟೆನ್ಶನ್ ಬೆಂಗಳೂರು–೫೬೦೦೧೯.

೩. **ಪ್ರೊ. ಎಂ. ಜಿ. ಈಶ್ವರ್ :**

ಕನ್ನಡ ಅಧ್ಯಾಪಕರು, ಪಿ. ಜೆ. ಬಡಾವಣೆ, ದಾವಣಗೆರೆ-೪.

೪. **ಶ್ರೀ ಕೆಳದಿ ಗುಂಡಾಜೋಯಿಸ್ :**

ಕೆಳದಿ ವಸ್ತುಸಂಗ್ರಹಾಲಯ, ಕೆಳದಿ.

೫. **ಪ್ರೊ. ಧರಣೇಂದ್ರ ಕುರಕುರಿ :**

ಹಿಂದಿ ಪ್ರಾಧ್ಯಾಪಕರು, ಜ್ಯೂನಿಯರ ಕಾಲೇಜ, ಹಾನಗಲ್ಲು.

೬. **ಶ್ರೀ ಶಂ. ಬಾ. ಜೋಶಿ :**

೪೧೫, ೬ ಪ್ರಭಾತ ಸ್ಟೇಶನ್ ಅವೆನ್ಯೂ ರೋಡ ಚೇಂಬೂರ್ ಮುಂಬೈ–೭೧.

೭. **ಪ್ರೊ. ವ್ಹಿ. ಜಿ. ಮರಿಹಾಳ :**

ಅಧ್ಯಾಪಕರು, ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

೮. **ಡಾ. ಎಂ. ಎಸ್. ಸುಂಕಾಪುರ :**

ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ.

೯. **ಪ್ರೊ. ಬಿ. ಕೆ. ಹಿರೇಮಠ :**

ಕನ್ನಡ ಅಧ್ಯಾಪಕರು, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟ.

೧೦. **ಪ್ರೊ. ಎಂ. ಬಿ. ಭೋಯಿ :**

ಕನ್ನಡ ಅಧ್ಯಾಪಕರು, ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ.

೧೧. **ಶ್ರೀರಾಮ ಇಟ್ಟಣ್ಣವರ :**

ಕನ್ನಡ ಅಧ್ಯಾಪಕರು, ಸಿದ್ಧೇಶ್ವರ ಜ್ಯೂನಿಯರ ಕಾಲೇಜು, ಬೀಳಗಿ.

೧೨. **ಶ್ರೀ ಮಹಾಬಲೇಶ್ವರ :**

'ಮೃತ್ಯುಂಜಯ ಕೃಪ' ಜಯನಗರ, ಧಾರವಾಡ-೧.

೧೩. **ಡಾ. ವರದರಾಜ ಉಮರ್ಜಿ :**
ಮಾಳಮಡ್ಡಿ, ಧಾರವಾಡ–೭.

೧೪. **ಪ್ರೊ. ವಿಲ್ಯಂ ಮಾಡ್ತಾ :**
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ.

೧೫. **ಪ್ರೊ. ಕ. ಪು. ಸೀತಾರಾಮ ಕೆದಿಲಾಯ :**
ಪ್ರಾಧ್ಯಾಪಕರು, ಕನ್ನಡ ವಿಭಾಗ, ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ.

೧೬. **ಡಾ. ಎಸ್. ಶೆಟ್ಟರ್ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ.ವಿ.ವಿ. ಧಾರವಾಡ.

೧೭. **ಶ್ರೀ ಎಸ್. ಶಿವಣ್ಣ :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು.

೧೮. **ಡಾ. ಎಂ. ಎಂ. ಕಲಬುರ್ಗಿ :**
ರೀಡರ್, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ.

೧೯. **ಡಾ. ಆರ್. ಎನ್. ಗುರವ :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೨೦. **ಡಾ. ಬಿ. ವ್ಹಿ. ಶಿರೂರ :**
ಕನ್ನಡ ಅಧ್ಯಾಪಕರು, ಅನ್ನದಾನೇಶ್ವರ ಆರ್ಟ್ಸ ಕಾಲೇಜು, ನರೇಗಲ್ಲ.

೨೧. **ಪ್ರೊ. ಬಸವರಾಜ ಮಲಶೆಟ್ಟಿ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ: ಪ್ರತಿಯೊಂದರ ಬೆಲೆ ೨೫ ಪೈಸೆ

ನಮ್ಮ ಅರಣ್ಯಗಳು —ಟಿ. ಎಂ. ಪಂಡಿತ

ಹರಿಜನೋದ್ಧಾರಕಾರ್ಯ —ಎಸ್. ಕೆ. ಕಡೆತೋಟದ

ಬದಲಾಗುತ್ತಿರುವ ಭಾರತೀಯ ಕುಟುಂಬ —ಎಚ್. ವಿ. ನಾಗೇಶ್

ಷಡಕ್ಷರದೇವ ಕವಿಯ ರಾಜಶೇಖರ ವಿಳಾಸ —ಎಂ. ಎಸ್. ವಾಲಿ

ಮಾತು —ಜಿ. ಕೃಷ್ಣರಾವ್

ಇತರ ಪ್ರಕಟನೆಗಳು :

ಶಾಸನ ವ್ಯಾಸಂಗ —ಎಂ. ಎಂ. ಕಲಬುರ್ಗಿ ರೂ. ೭-೦೦

ಕಮಿಶನ್ನಿನವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮಿಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ:

೧೦೦ ಕ್ಕೆ ೧೫ ರಂತೆ

ರೂ. ೨೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:

೧೦೦ ಕ್ಕೆ ೨೦ ರಂತೆ

ಇತರ ಎಲ್ಲ ಪ್ರಕಟನೆಗಳು (ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:

೧೦೦ ಕ್ಕೆ ೨೫ ರಂತೆ

೫,೦೦೦ ರೂ ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ಕ್ಕೆ ೩೩ ⅓ ರಂತೆ

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ೧೦೦ ಕ್ಕೆ ೩೩೩ ದಂತೆ ಕಮೀಶನ್ ಕೊಡಲಾಗುವದು.

* * * * *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ರೂ. ೦-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

(ಹಣವನ್ನು ಮನಿ ಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ ವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩